॥ ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ॥
॥ ವಾದಿರಾಜಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್ ॥

ಪದ್ಮನಾದ

ಸನ್ಮಿತ್ರ ಸಂಗೀತ ಸುಧಾರತ್ನ
ಗಾನಕಲಾಭೂಷಣ
ವಿದ್ವಾನ್ ಡಾ॥ ಆರ್. ಕೆ. ಪದ್ಮನಾಭ
ಅವರ ಜೀವನದ ನಾದರೇಖೆಗಳು

ಲೇಖಕರು
ಬೆಂ ಶ್ರೀ ರವೀಂದ್ರ

ಸಂಪದ ಪಬ್ಲಿಕೇಷನ್ಸ್

PADMANADA A treatise of life & achievements of Karnataka Musical Wizard - Sanmitra Sangeetha Sudharathna Ganakalabhushana Vidwan Dr.R.K.Padmanabha in Kannada by B.S.Ravindra published Sampada Publications for SBI Geleyara Balaga

ಬೆಂ ಶ್ರೀ ರವೀಂದ್ರ
288, ತವರು, 3ನೇ ಮುಖ್ಯ ರಸ್ತೆ,
11ನೇ ಅಡ್ಡ ರಸ್ತೆ, 1ನೇ ಸ್ಟೇಜ್, ವಸಂತ ವಲ್ಲಭನಗರ,
ವಸಂತಪುರ, ಬೆಂಗಳೂರು – 560061
ಮೊಬೈಲ್ ಸಂಖ್ಯೆ : 9448994199
bsrsbi1954@gmail.com

ಸಂಪದ ಪಬ್ಲಿಕೇಷನ್ಸ್
1108 – B, 9th (No.1, .P.Rajarathnam
Road), 7thCross, Hanumanthanagara,
Bangalore – 560019
Ph.No. (080) 26612655, +91 9880593349,
EMail : sampadapublications@gmail.com
Web : www.sampadapublications.com

ಗಾತ್ರ : Demiy 1/8 80 GSM Maplitho
ಪ್ರಥಮ ಮುದ್ರಣ : 2023
ಪುಟಗಳು : 16 + 189
ಬೆಲೆ : Rs.250
ISBN : 978–93–84197–97–1
ಅಕ್ಷರ ಜೋಡಣೆ, ಪುಟ ವಿನ್ಯಾಸ : Guruprasad Halkurike
ಮುಖಪುಟ ವಿನ್ಯಾಸ : ಉದಯ್ ಸಿಂಗನಮಲ್ಲಿ
ಮುದ್ರಣ : ಆದಿತ್ಯ ಪ್ರಿಂಟಿಂಗ್ ಪಬ್ಲಿಷಿಂಗ್ ಹೌಸ್, ಬೆಂಗಳೂರು

:

ಅರ್ಪಣೆ

ಕರ್ನಾಟಕ ಸಂಗೀತದ
ಗಾನಸೂರಿಗಳಿಗೆ

ಮುನ್ನುಡಿ
ಸಕಾರ ಷಡ್ಜದ ಶರಧಿ ತರಂಗಿಣಿ

ಆರ್.ಕೆ.ಪದ್ಮನಾಭ ಅವರದು ಸಂಗೀತ ಕ್ಷೇತ್ರದಲ್ಲಿ ಅದರಲ್ಲಿಯೂ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಬಹು ದೊಡ್ಡ ಹೆಸರು. ಸದಾ ಪ್ರಯೋಗಶೀಲರಾಗಿ, ಬಹುಮುಖಿ ಪ್ರತಿಭಾವಂತರಾಗಿ ಅವರು ಸಾಧಿಸಿದ್ದು ಅಪಾರ. ಕೇಂದ್ರ ಸಂಗೀತ ನಾಟಕ ಅಕಾಡಮಿಯ ಪುರಸ್ಕಾರ ಅವರಿಗೆ ಸಂದ ಸಂದರ್ಭದಲ್ಲಿ ಆರ್.ಕೆ.ಪಿಯವರ ಪ್ರಿಯಮಿತ್ರ ಬೆಂ.ಶ್ರೀ.ರವೀಂದ್ರ ಅವರು ರಚಿಸಿದ ಈ ಜೀವನ ಚಿತ್ರಣ "ಪದ್ಮನಾದ" ರೂಪುಗೊಂಡಿದೆ.

ಇದು ತಾಂತ್ರಿಕ ಅರ್ಥದಲ್ಲಿ ಜೀವನ ಚಿತ್ರಣದ ಸ್ವರೂಪವನ್ನು ಅನುಸರಿಸಿದ ಕೃತಿಯಲ್ಲ. ಇಂತಹ ಕಡೆ ಹುಟ್ಟಿದರು, ಇಲ್ಲಿ ಬೆಳೆದರು, ಇವರ ಸಾಧನೆಗಳು ಇಂತಹವು ಹೀಗೆ ಕ್ರಮಣಿಕೆಯನ್ನು ಇದು ಅನುಸರಿಸಿಲ್ಲ. ಆರ್.ಕೆ.ಪದ್ಮನಾಭ ಅವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಒಟ್ಟಾಗಿ ಕಟ್ಟಿ ಕೊಡುವ ಕೊಲೆಜ್ ಮಾದರಿಯ ರಚನೆ. ಇದನ್ನು ಸಂಕಥನ ಎಂದು ಕಾವ್ಯಮೀಮಾಂಸೆಯ ಪರಿಭಾಷೆಯಲ್ಲಿ ಕರೆಯಲಾಗುತ್ತದೆ. ಸಂಕಥನಕ್ಕೆ ಇರುವ ಸವಾಲುಗಳು ಎರಡು ಮಾದರಿಯವು. ಒಂದು, ಕ್ರಮಗತ ಕಥನವನ್ನು ಅಪೇಕ್ಷಿಸುವ ಓದುಗರಿಗೆ ಇದರಿಂದ ಕಿರಿ ಕಿರಿ ಎನ್ನಿಸಬಹುದು. ಇನ್ನೊಂದು ಘಟನೆಗಳು ಚದುರಿಹೋದ ಚಿತ್ರಣದಿಂದ ಒಟ್ಟು ಸ್ವರೂಪದ ಚಿತ್ರಣ ಓದುಗರಿಗೆ ದೊರಕದೆ ಹೋಗಬಹುದು. ಈ ಸವಾಲನ್ನು ಗಮನಿಸಿಯೇ ರವೀಂದ್ರ ಅವರು ಕೃತಿಯಲ್ಲಿ ವಿಷಯವಾರು ವಿಂಗಡಣೆ ಮಾಡುವ ಮೂಲಕ ಅಪೇಕ್ಷಿಸಿದ ಮಾಹಿತಿಗಳು ಸ್ವಾರಸ್ಯಕರವಾಗಿ ದೊರಕುವಂತೆ ಮಾಡಿದ್ದಾರೆ. ಇವತ್ತಿನ ಗಣಕ ಪರಿಭಾಷೆಯಲ್ಲಿ ಹೈಪರ್ ಲಿಂಕ್ ಮಾದರಿಯಲ್ಲಿರುವ ಕೃತಿ ತನ್ನ ವಿನ್ಯಾಸದ ಕಾರಣದಿಂದ ಗಮನ ಸೆಳೆಯುತ್ತದೆ.

ಕೃತಿಯ ಆರಂಭವೇ ಭೈರಸಂದ್ರ ಕೆರೆಯ ಅಂಚಿನಲ್ಲಿ ಕುಳಿತು ಹಾಡುತ್ತಿರುವ ಯುವಕ ಆರ್.ಕೆ.ಪದ್ಮನಾಭ ಅವರ ಚಿತ್ರಣದೊಂದಿಗೆ. ಇದು ಒಂದು ರೀತಿಯಲ್ಲಿ ರೂಪಕ ಕೂಡ ಹೌದು, ಪದ್ಮನಾಭರು ಸಂತೆಯಲ್ಲಿ ಕುಳಿತ ಸಂತರಂತೆಯೇ ಬಾಳಿದವರು. ತಂದೆ ಕೃಷ್ಣಯ್ಯ ದೀಕ್ಷಿತರು ವೇದ ಪಂಡಿತರು, ಕೃಷಿಕರು. ತಾಯಿ ಶಾರದಮ್ಮ ಸಾಧ್ವಿ, ದಿಟ್ಟೆ. ಅವರು ಒಂದು ರೀತಿಯಲ್ಲಿ ಪದ್ಮನಾಭರಿಗೆ ಸಂಗೀತದ ಬಾಗಿಲನ್ನು ತೆರೆದ ಸರಸ್ವತಿ. ಪದ್ಮನಾಭರಿಗೆ ಸಂಗೀತದತ್ತ ಸೆಳೆತ ಬಾಲ್ಯದಿಂದಲೂ ಬಂದಿದ್ದು, ಅವರು ಪಿಟೀಲು ಚೌಡಯ್ಯನವರನ್ನು ಕಂಡು ಅವರ ಅಭಿಮಾನಕ್ಕೆ ಪಾತ್ರರಾದವರು. ಗಂಡು ಮಕ್ಕಳಿಗೆ ಪ್ರವೇಶವಿಲ್ಲದ ಹೆಣ್ಣು ಮಕ್ಕಳ ಶಾಲೆಯ

ಕಿಟಕಿಯಲ್ಲಿ ಕುಳಿತು "ಹಿಮಾಚಲ ತನಯ ಬ್ರೂ ಚಟುಕೆ" ಕಲಿತವರು. ಅಲ್ಲಿಂದ ಮುಂದೆ ಬೆಂಗಳೂರಿನ ಕಡೆಗೆ ಬಂದರು. ವಿಜಯಾ ಕಾಲೇಜಿನಲ್ಲಿ ಸಂಗೀತದ ಸಹವಾಸವನ್ನು ಮುಂದುವರೆಸಿದರು. ಎಸ್.ಬಿ.ಐ, ಬ್ಯಾಂಕಿನ ಪರೀಕ್ಷೆಯ ಸವಾಲನ್ನು ಎದುರಿಸಿ ಉದ್ಯೋಗವನ್ನೂ ಪಡೆದರು.

ಪದ್ಮನಾಭ ಅವರ ಎಳೆತನದ ದಿನಗಳಲ್ಲಿ "ಕುಂತಿ ಕರ್ಣರ ಭೇಟಿ"ಯ ಕುರಿತು ಆಡಿದ ಸಂಗೀತ ರೂಪಕದ ಪ್ರಸಂಗ ಈ ಕೃತಿಯಲ್ಲಿ ಮಹತ್ವದ ಉಲ್ಲೇಖ. ಪದ್ಮನಾಭರಿಗೆ ರಾಗಗಳ ಓಂನ್ನಾಮವಾಗಿದ್ದೂ ಅಲ್ಲೇ, ಹಾಡಬಲ್ಲೆ ಎಂಬ ನಂಬಿಕೆ ಬಂದಿದ್ದೂ ಕೂಡ ಅಲ್ಲೇ. 1961ರಲ್ಲಿ ರುದ್ರಪಟ್ಟಣಕ್ಕೆ ಆಗಮಿಸಿದ್ದ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರ ಆಶೀರ್ವಾದ ದೊರಕಿದ್ದೂ ಒಂದು ರೀತಿಯಲ್ಲಿ ದೈವ ಸುಕೃತ. ಆದರೆ ಬೀಜರೂಪವಾಗಿದ್ದ ಸಂಗೀತದ ಒಲವು ವೃಕ್ಷವಾಗಿದ್ದು "ವಿಜಯ ಸಂಗೀತ ಶಾಲೆ"ಯ ಮೂಲಕ. ರಾಗಜ್ಞಾನವಿಲ್ಲದೆ ಇಲ್ಲಿ ಪದ್ಮನಾಭರು ಅವಮಾನಗಳನ್ನು ಎದುರಿಸಬೇಕಾಯಿತು. ಎಚ್.ವಿ.ಕೃಷ್ಣಮೂರ್ತಿಗಳು ಕೈ ಹಿಡಿಯದೆ ಹೋಗಿದ್ದರೆ ಸಂಗೀತ ಕ್ಷೇತ್ರಕ್ಕೆ ದೊಡ್ಡ ನಷ್ಟವೇ ಆಗುತ್ತಿತ್ತು. ಆರ್.ಕೆ.ಪಿಯವರ ಆತ್ಮಕಥನ "ನೆನಪಿನಂಗಳ"ದಿಂದ ಉದ್ಧರಿತ ಈ ಭಾಗಗಳು ಕೃತಿಗೆ ಕ್ರಿಯಾಶೀಲತೆಯನ್ನು ನೀಡಿವೆ. ಆರ್.ಕೆ.ಪಿಯವರಿಗೆ ಮಾನಸ ಗುರುವಾಗಿ ದೊರಕಿದವರು ಶೆಮ್ಮನಗುಡಿ ಶ್ರೀನಿವಾಸ ಅಯ್ಯರ್. ಪರೋಕ್ಷವಾಗಿ ಅವರಿಂದ ಸಾಕಷ್ಟು ಕಲಿತರು. ಪ್ರತ್ಯಕ್ಷ ಭೇಟಿ ಮಾಡಿ ಅನುಗ್ರಹವನ್ನೂ ಪಡೆದರು. 1981ರಲ್ಲಿ ಸಂಗೀತ ಶಿಕ್ಷಕರಾದರು. ಶಿಷ್ಯರನ್ನು ಸಿದ್ದಪಡಿಸತೊಡಗಿದರು. ವಾದಿರಾಜರ ಜ್ಞಾನಾಕ್ಷತೆಯೂ ಅವರಿಗೆ ದೊರಕಿತು. ಈ ಕಥನವು ಕೃತಿಯಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ. ಸಂಗೀತ ಸಾಧನೆಯ ಜೊತೆಗೆ ಅವರು ಉದ್ಯೋಗ ನೀಡಿದ ಸ್ಟೇಟ್ ಬ್ಯಾಂಕ್ ನ್ನು ಮರೆಯಲಿಲ್ಲ. ಸಂಬಳಕ್ಕಿಂತಲೂ ಗೆಳತನವನ್ನು ಅವರು ಅಲ್ಲಿ ಸಂಪಾದಿಸಿದ ರೀತಿ ದೊಡ್ಡದು.

ಕೃತಿಯಲ್ಲಿ ವಾದಿರಾಜರು ಇರುವಂತೆಯೇ "ಕುಲ ಕುಲಕುಲವೆಂದು ಹೊಡೆದಾಡದಿರಿ" ಎಂದು ಮನುಜ ಕುಲಕ್ಕೆ ಬದುಕಿನ ಶಾಶ್ವತ ಸತ್ಯವನ್ನು ಕಲಿಸಿದ ಕನಕದಾಸರೂ ಇದ್ದಾರೆ. ಅವರ ಜೊತೆ ಪುರಂದರರೂ ಇದ್ದಾರೆ. ಮೂವರ ಬಾಂಧವ್ಯದ ಕಥನವೂ ಇಲ್ಲಿದೆ. ದೈವತದಲ್ಲಿ ನಿಂತ ಮುತ್ತುಸ್ವಾಮಿ ದೀಕ್ಷಿತರು ಕರ್ನಾಟಕ ಸಂಗೀತದ ಏಳಿಗೆಗೆ ಶ್ರಮಿಸಿದವರು. ಕೃತಿಯಲ್ಲಿ ಅವರ ಉಲ್ಲೇಖವೂ ಆಸಕ್ತಿಕರವಾಗಿದೆ. ಬೊಬ್ಬಿಲಿ ಕೇಶವಯ್ಯ ಎನ್ನುವ ಸಂಗೀತ ದಿಗ್ಗಜರೊಬ್ಬರು ತಂಜಾವೂರಿಗೆ ಬಂದಾಗ ತಾಯಿ ಕಾಮಾಕ್ಷಿ ಒಪ್ಪಿಗೆ ಪಡೆದು ಸಂಸ್ಥಾನದ ಗೌರವ ಉಳಿಸಲು ಶ್ಯಾಮಶಾಸ್ತ್ರಿಗಳು ಹಾಡುತ್ತಾರೆ. ಅವರು ಹಾಡುತ್ತಿರುವಾಗ ಅವರ ತೊಡೆಯ ಮೇಲೆ ತಾಯಿ ಆಡುತ್ತಿದ್ದಳಂತೆ! ಈ ಮಾತನ್ನು ಹೇಳಿದವರು ಶ್ಯಾಮಶಾಸ್ತ್ರಿಗಳಲ್ಲ ಬದಲಾಗಿ ಎದುರಾಳಿ ವಿದ್ವಾಂಸರು, ಇಂತಹ ಕಥನಗಳು ಕೃತಿಗೆ ಶೋಭೆಯನ್ನು ನೀಡಿವೆ.

ರುದ್ರಪಟ್ಟಣದಲ್ಲಿ ಪದ್ಮನಾಭರು ರೂಪಿಸಿದ ಸಂಗೀತ ನಗರದ ಕಥನ ರೋಮಾಂಚನವನ್ನು ಉಂಟುಮಾಡುತ್ತದೆ.

ಬಾಸ್ಟನ್ ನಗರಿಯಲ್ಲಿ ಸಂಗೀತ ಕಛೇರಿ. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಪದ್ಮನಾಭರು ಹಾಡಿದರು. ಅದಕ್ಕೆ ಅರ್ಥ ವಿವರಣೆಯನ್ನೂ ನೀಡಿದರು. "ಬೃಹಸ್ಪತೆ ತಾರಾಪತೆ" ದೀಕ್ಷಿತರ ಸಂಗೀತ ಪ್ರಭುತ್ವದ ಜೊತೆಗೆ ಖಗೋಳ ಶಾಸ್ತ್ರದಲ್ಲಿಯೂ ಅವರಿಗೆ ಇರುವ ಪ್ರವೇಶವನ್ನು ತೋರುವ ಕೃತಿ. ತಂಬಿಮದ್ದನ್ ಮದ್ದಳೆ ವಾದಕ, ಅವನಿಗೆ ಹೊಟ್ಟೆನೋವು. ದೀಕ್ಷಿತರು ನವಗ್ರಹ ಉಪಾಸನೆ ಮಾಡು ಎಂದರು. ಆದರೆ ಜಾತಿ ಪದ್ಧತಿ ಅವನು ಹಾಗೆ ಮಾಡದಂತೆ ತಡೆದಿತ್ತು. ದೀಕ್ಷಿತರು ಈ ಕೃತಿಯನ್ನು ರಚಿಸಿದರು. ಜಾತಿಮತಗಳನ್ನು ಮೀರಿ ನಿಂತ ಸಂಗೀತದ ಅದ್ಭುತವನ್ನು ತೋರಿದರು. ಆರ್.ಕೆ.ಪಿ ಹಾಡುವುದರ ಜೊತೆಗೆ ಕೃತಿಯ ಹಿನ್ನೆಲೆಯನ್ನೂ ಹೇಳುವ ಮೂಲಕ ತಮ್ಮ ಅಸ್ಮಿತೆಯನ್ನು ಮೆರೆದವರು ಎಂದು ಕೃತಿಯಲ್ಲಿನ ಇಂತಹ ಅನೇಕ ಘಟನೆಗಳು ತೋರಿಸುತ್ತವೆ.

ಈ ಕೃತಿಯಲ್ಲಿ ನನಗೆ ಬಹುಪ್ರಿಯವಾದ ಪ್ರಸಂಗಗಳು ಹಲವಿದೆ. ಅದರಲ್ಲಿ ಹೃದಯಂಗಮ ಎನ್ನಿಸಿದ ಘಟನೆಯನ್ನು ಉಲ್ಲೇಖಿಸಲೇಬೇಕು. ಕೈವಾರದಲ್ಲಿ ಸಂಗೀತೋತ್ಸವ. ನಾದಪೂಜೆ ಮುಗಿದ ನಂತರ ಓರ್ವ ಹಿರಿಯ ತಾಯಿ ಬಂದರು. ಎಲೆಯಡಿಕೆ, ಹಳೆಯ ಸೀರೆ, ಹಣೆಯಲ್ಲಿ ಅಗಲ ಕುಂಕುಮ, ಕೈ ತುಂಬಾ ಬಳೆ. "ಬುದ್ಯೋರ ನಿಮ್ಮ ಕಾಲು ಕೊಡಿ" ಎಂದು ಒಂದೊಂದೇ ಬೆರಳನ್ನು ತೀಡಿ ನಮಿಸಿ ಸೊಂಟದ ಬಾಳೆಕಾಯಿ ಗಂಟಿನಿಂದ ಹತ್ತು ರೂಪಾಯಿ ನೋಟನ್ನು ತೆಗೆದು ಕೊಟ್ಟು "ಸ್ವಾಮ್ಯಾರೇ ನೀವು ಸರಸ್ವತಮ್ಮನ ಮಗ, ಚಂದಾಗಿರಿ" ಎಂದು ಕಣ್ಣೊರಿಸಿಕೊಂಡು ಮಾಯವಾದಳು. ಇದು ಆರ್.ಕೆ.ಪದ್ಮನಾಭ ಗಾನಯಾನ ಸಾಧಿಸಿದ ಧನ್ಯತೆ. ಕೃತಿಯುದ್ದಕ್ಕೂ ಇಂತಹ ಅನೇಕ ಪ್ರಸಂಗಗಳಿದ್ದು ಮತ್ತೆ ಮತ್ತೆ ಓದಿ ಆನಂದಿಸುವುದರ ಜೊತೆಗೆ ಆರ್.ಕೆ.ಪದ್ಮನಾಭ ಅವರ ವ್ಯಕ್ತಿತ್ವದ ಹಿರಿಮೆಯೂ ಮನದಟ್ಟಾಗುತ್ತದೆ. ಇಂತಹ ಆತ್ಮೀಯ ನೆಲೆಯ ಕೃತಿಯನ್ನು ರಚಿಸಿದ ರವೀಂದ್ರ ಅವರು ಅಭಿನಂದನಾರ್ಹರು.

ಆರ್.ಕೆ.ಪದ್ಮನಾಭ ಅವರು ನನ್ನ ಹಿರಿಯ ಮಿತ್ರರು. ನನ್ನ ಬಗ್ಗೆ ಸದಾ ವಿಶ್ವಾಸವನ್ನಿಟ್ಟುಕೊಂಡವರು. ನಾನು ಸಂಗೀತದಲ್ಲಿ ಪರಿಣಿತನಲ್ಲ. ನನ್ನ ತಾತ ಮತ್ತು ತಂದೆ ಸಂಗೀತಗಾರರಾಗಿ ಹೆಸರು ಮಾಡಿದ್ದರು. ಸಂಗೀತದಲ್ಲಿ ನನಗೆ ಇರುವುದು ಪ್ರವೇಶ ಮಾತ್ರ. ನನ್ನ ಆಸಕ್ತಿ ಚಿತ್ರಗೀತೆಗಳು. ಅದರಲ್ಲಿನ ರಾಗಗಳ ಬಳಕೆಯ ಬಗ್ಗೆ ನನಗೆ ಕುತೂಹಲ. ಈ ಹುಡುಕಾಟಕ್ಕೆ ನನಗೆ ಮಾರ್ಗದರ್ಶಕರಾದವರು ಆರ್.ಕೆ.ಪದ್ಮನಾಭ. ಶಾಸ್ತ್ರೀಯ ಸಂಗೀತದಲ್ಲಿ ಅಪಾರ ಸಾಧನೆಯನ್ನು ಮಾಡಿ ಚಿತ್ರಗೀತೆಯ ಕುರಿತು ಆಸಕ್ತಿ ಇಟ್ಟುಕೊಂಡ ಅಪರೂಪದ ವಿದ್ವಾಂಸರು. ಹಾಗೆ

ನೋಡಿದರೆ ಅವರಿಗೆ ಇರುವ ಬಹುಮುಖಿ ಆಸಕ್ತಿಯಲ್ಲಿ ಇದೂ ಕೂಡ ಒಂದು. ನಾನು ಕಂಡ ವಿರಳ ವಿದ್ವಾಂಸರ ಸಾಲಿಗೆ ಸೇರುವ ಆರ್.ಕೆ.ಪದ್ಮನಾಭ ಎಲ್ಲರ ಪಾಲಿಗೂ ಸಲ್ಲುವ ಸರಳ ವ್ಯಕ್ತಿತ್ವದವರು. ಅವರ ಕುರಿತು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇದೊಂದು ಸದಾವಕಾಶ. ಆರ್.ಕೆ.ಪದ್ಮನಾಭ ಅವರು ಹೀಗೆ ಮಾರ್ಗದರ್ಶಕರಾಗಿ ನಮ್ಮೊಡನೆ ನೂರು ಕಾಲ ಇರಲಿ ಎನ್ನುವುದು ನನ್ನ ಪ್ರಾರ್ಥನೆ.

ಬೆಂಗಳೂರು
24–01–2023

ಎನ್.ಎಸ್.ಶ್ರೀಧರ ಮೂರ್ತಿ
ನಿರ್ದೇಶಕರು
ಮಾಧ್ಯಮ ಭಾರತಿ,
ಭಾರತೀಯ ವಿದ್ಯಾ ಭವನ
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1

ವಾದಿರಾಜಗುರುವೇ ನಮಃ

ಪದ್ಮನುಡಿ

ನಾನು SBI ಸೇರಿ 29 ವರ್ಷಗಳ ನನ್ನ ವೃತ್ತಿಜೀವನದಲ್ಲಿ ನಾನು ಗಳಿಸಿಕೊಂಡ ಬಹಳ ದೊಡ್ಡ ಆಸ್ತಿ ಎಂದರೆ ನನ್ನ ಬ್ಯಾಂಕ್ ಸಹೋದ್ಯೋಗಿ ಸ್ನೇಹ ಬಳಗ. ಇದು ಎಲ್ಲರಿಗೂ ಸಿಗುವ ಪುಣ್ಯವಲ್ಲ. ಹಾಗಾಗಿ ನಾನು ಪುಣ್ಯವಂತ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಈ ಸ್ನೇಹ ಬಳಗ ಅಥವಾ ಗೆಳೆಯರ ಬಳಗದಲ್ಲಿ ನಾನು ಒಂದು ಚತುಶ್ಚಕ್ರದ ರಥವನ್ನ ಕಂಡುಕೊಂಡೆ. ಇದು ಸಚ್ಚಿಂತನೆ ಹಾಗೂ ಸದ್ಭಾವನೆಗಳ ಪ್ರೀತಿ, ವಿಶ್ವಾಸ, ಗೌರವ ತಾಣದ ಪವಿತ್ರವಾದ ರಥ. ಇದರ ನಾಲ್ಕು ಸಮರ್ಥ ಚಕ್ರಗಳೇ ಪಿವಿಸಿ, ಪ್ರಭು, ರವೀಂದ್ರ ಹಾಗೂ ಗುರುಪ್ರಸಾದ್. ನನ್ನ ಸಾಧನಾ ಪ್ರತೀಕವಾದ ಈ ರಥಕ್ಕೆ ನಾದಾಮೃತರಸಭಾವವನ್ನು ತುಂಬಿ ಬಹಳ ಗೌರವ ಪ್ರೀತ್ಯಾದರಗಳಿಂದ ನನ್ನ ವಿವಿಧ ಪ್ರಕಾರಗಳ ಸೇವಾ ಕೈಂಕರ್ಯವನ್ನು ಗೌರವವೆಂಬ ಕಣ್ಣಿಯಿಂದ ಎಳೆಯುತ್ತಿರುವುದು ನನ್ನ ಸಂಗೀತ ಬದುಕಿನಲ್ಲಿ ಬಹಳ ಮಹತ್ತರವಾದ ಘಟ್ಟ. ನನ್ನ ಸಂಗೀತ ಪಯಣದಲ್ಲಿ ಅನೇಕ ಕುತೂಹಲಕಾರಿ ಘಟನೆಗಳು ನಡೆದಿರುವುದಿದೆ. ಅದು ಪವಾಡವೋ, ಆಕಸ್ಮಿಕವೋ, ಏನೇ ಇರಲಿ, ನಡೆದಿರುವುದು ಸತ್ಯ. ಕೆಲವು ವಿಚಾರಗಳನ್ನ ಸುಮಾರು 13 ವರ್ಷಗಳ ಹಿಂದೆ ಪ್ರಕಟವಾದ ನನ್ನ ಆತ್ಮಕಥೆಯ ಗ್ರಂಥ "ನೆನಪಿನಂಗಳದಲ್ಲಿ" ವಿಸ್ತಾರವಾಗಿಯೇ ದಾಖಲಿಸಿದ್ದೇನೆ. ಆದರೆ ಪ್ರಸ್ತುತದ ಸಂದರ್ಭವೇ ಬೇರೆ. ಕೇಂದ್ರ ಸಂಗೀತ ಅಕಾಡೆಮಿಯ 2020ರ ಪ್ರಶಸ್ತಿಗೆ ಭಾಜನನಾಗಿರುವ ನನಗೆ ಈ ಗೆಳೆಯರ ಬಳಗ ಚತುಶ್ಚಕ್ರಗಳ ನೇತಾರತ್ವದಲ್ಲಿ ಫೆಬ್ರವರಿ 5ರಂದು ನಡೆಸುತ್ತಿರುವ ಆತ್ಮೀಯ ಸಮ್ಮಾನ, ವಿಶೇಷ ಹಾಗೂ ವಿಶಿಷ್ಟ.


ತತ್ಸಂಬಂಧವಾಗಿ ನನ್ನ ಆತ್ಮ ಕಥೆಯನ್ನ ನನ್ನ ಆತ್ಮೀಯ ಗೆಳೆಯ ಮಾನ್ಯ ಬಿಎಸ್ ರವೀಂದ್ರ ಅವರ ಬರವಣಿಗೆಯಲ್ಲಿ ಒಂದು ಗ್ರಂಥವನ್ನು ಲೋಕಾರ್ಪಣೆ ಮಾಡುತ್ತಿರುವುದು ಪ್ರಶಂಸನಾರ್ಹ. ರವೀಂದ್ರ ಪ್ರಬುದ್ಧ ಕನ್ನಡ ಕವಿ, ಸಾಹಿತಿ, ಬರಹಗಾರ, ಚಿಂತಕ, ಹೃದಯವಂತಿಕೆಯವನು. ನನ್ನ ಬಗ್ಗೆ ಬಹಳ ಆದರ. ಸುಮಾರು ಐವತ್ತು ವರ್ಷಕ್ಕೂ ಮೀರಿದ ನೈಜ ಸ್ನೇಹದ ತುಂಬಿದ ಕೊಡದ ಗೆಳೆಯ. ಅವನ ಲೇಖನಿಯಿಂದ ಹೊರಬರುತ್ತಿರುವ ಈ "ಪದ್ಮನಾದ" ಒಂದು ವಿಶಿಷ್ಟಮಯ ಹೊತ್ತಿಗೆ. ಇಲ್ಲಿ ವಸ್ತುನಿಷ್ಠೆಯಿದೆ, ಕಾವ್ಯದ ಸೊಗಸಿದೆ, ಭಾಷೆ ತಿಳಿಯಾಗಿದೆ, ಹೃದಯಸ್ಪರ್ಶಿಯಾಗಿದೆ, ಜ್ಞಾನ ದೀವಟಿಗೆಯಾಗಿದೆ, ಭಾವನಾತ್ಮಕವಾಗಿದೆ. ರವೀಂದ್ರರ ಬರಹ ಬಹಳ ಆಕರ್ಷಣೀಯ. ಕೆಲವು ಸಂದರ್ಭಗಳಲ್ಲಿ ನನ್ನ ಮುಂದೆ, ಅನಕೃ ಕಾಣಿಸುತ್ತಾರೆ. ಮತ್ತೆ ಕೆಲವು ಘಟನೆಗಳ ನಿರೂಪಣೆಯಲ್ಲಿ ತರಾಸು. ಹೀಗೆ ಶ್ರೇಷ್ಠ ಕಾದಂಬರಿಕಾರರ ಸಂಕೀರ್ಣ ಚಿತ್ರಣ ನನ್ನ ಮುಂದೆ ಬರುವುದಾದರೆ ಈ ಬರವಣಿಗೆಯ ಪ್ರಥಮ ಹಾಗೂ ಚಮತ್ಕಾರವನ್ನು ಅರ್ಥೈಸಿಕೊಳ್ಳಬಹುದು. ನಾನು

ಎಷ್ಟೋ ಬರಹಗಳನ್ನು (ಅಂದರೆ ನನ್ನ ಬಗ್ಗೆ ಬರೆದಿರುವ) ನಮ್ಮ ಕ್ಷೇತ್ರದವರೇ ಬರೆದಿರುವುದನ್ನು ಓದಿದ್ದೇನೆ, ನೋಡಿದ್ದೇನೆ. ಆದರೆ ಅವರ ಬರಹದಲ್ಲಿ ಎನೋ ಹಿಡಿತ, ಮನ ಬಿಚ್ಚಿ ವಸ್ತುಸ್ಥಿತಿಯನ್ನು ಬರೆಯುವ ಔದಾರ್ಯತೆಯೋ, ಅಥವಾ ಹೃದಯವಂತಿಕೆಯೋ ಕಾಣಿಸುವುದಿಲ್ಲ. ಆದರೆ, ರವೀಂದ್ರನ ಬರವಣಿಗೆಯಲ್ಲಿ ಎಲ್ಲೂ ಹ್ರಸ್ವವಿಲ್ಲ, ಜಿಗುಟಿಲ್ಲ ಬದಲು ವಸ್ತುವನ್ನು ಬಹಳ ಪ್ರೀತಿಯಿಂದ ಅಲಂಕರಿಸಿ ಓದುಗರನ್ನೂ ಸೆಳೆಯುವ ಮಾಂತ್ರಿಕತೆ ಎದ್ದು ಕಾಣುತ್ತಿದೆ. ಅಲ್ಲಿ ನಿರೂಪಿಸಿರುವ ಅನೇಕ ಘಟನೆಗಳ ಶೈಲಿ ನನ್ನನ್ನ ಭಾವುಕನನ್ನಾಗಿ ಮಾಡಿದೆ. ನನಗೆ ತಿಳಿಯದೆಯೇ ಅಂತರಂಗ ಮಿಡಿದು ಕಣ್ಣಿನಂಚಿನಲ್ಲಿ ಬಿಂದುಗಳು ಕಾಣಿಸಿಕೊಂಡು ಅಂಘ್ರಿಗಳು ಒದ್ದೆಯಾಗಿರುವುದು ಸತ್ಯವೇ. ಬರವಣಿಗೆ ಎಂದರೆ ಹೀಗಿರಬೇಕು.

ಕುಮಾರವ್ಯಾಸ ತನ್ನ ಕಾವ್ಯದಲ್ಲಿ "ಹಲಗೆ ಬಳಪವ ಪಿಡಿಯಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ......" ಎನ್ನುತ್ತಾನೆ. ಇದು ಅಹಂಕಾರದ ಮಾತಲ್ಲ. ಅವನಲ್ಲಿದ್ದ ಅವನ ಆತ್ಮವಿಶ್ವಾಸದ ಪ್ರತಿಬಿಂಬ. ಹಾಗೆ ರವೀಂದ್ರ ಲೇಖನಿ ಹಿಡಿದರೆ ತನ್ನ ಪಾಡಿಗೆ ತಾನೇ ತನ್ನ ಕೆಲಸವನ್ನು ಮಾಡುತ್ತಿರುತ್ತದೆ. ಬಹುತೇಕ ನನ್ನ ನಾದ ಬದುಕಿನ ಎಲ್ಲ ಘಟನೆಗಳು, ಸಂದರ್ಭಗಳು ದಾಖಲಾತಿಯಾಗಿರುವುದು ನನಗೆ ಬಹಳ ಸಮಾಧಾನವನ್ನೂ, ತೃಪ್ತಿಯನ್ನೂ, ಆನಂದವನ್ನೂ ತಂದುಕೊಟ್ಟಿದೆ. ನನ್ನ ಆತ್ಮೀಯ ಬಳಗದವರ ಪ್ರತಿಕ್ರಿಯೆಗಳಂತೂ ಬಹಳ ಸೊಗಸಾಗಿದೆ. ಒಬ್ಬ ಕಲಾವಿದನ ಬಾಳನ್ನ ಇಷ್ಟು ಗಂಭೀರವಾಗಿ ತೆಗೆದುಕೊಂಡು, ಓದಿ, ಪ್ರತಿಕ್ರಿಯೆ ವ್ಯಕ್ತಪಡಿಸಿರುವುದು ನನಗೆ ಅನಿರ್ವಚನೀಯ ಆನಂದವನ್ನು ಕೊಟ್ಟಿದೆ. ಇದಕ್ಕೆಲ್ಲಾ ಕಾರಣ ಈ ಚತುಶ್ಚಕ್ರಗಳು ಹಾಗೂ ಕವಿ, ಸಾಹಿತಿ, ನವನೀತ ಮೊಗದ ಮುಗುಳುನಗೆಯ ಕನ್ನಡ ಕುವರ ರವೀಂದ್ರ. ಈ ನನ್ನ ಸೇವೆಯನ್ನು ಗುರುತಿಸಿ ನನಗೆ ಸನ್ಮಾನ ಮಾಡಬೇಕು ಎಂಬ ಅಭಿಪ್ರಾಯ ಬಂದಿದ್ದು ನನ್ನ ಆತ್ಮೀಯರಾದ ಪಿವಿಸಿ ಹಾಗೂ ಪ್ರಭು ಅವರುಗಳಿಗೆ. ಪಿವಿಸಿ ನನಗೆ ವಿಜಯ ಕಾಲೇಜಿನಲ್ಲಿ ಬಿಎಸ್ಸಿ ಸಹಪಾಠಿ. ಭಾವುಕ, ಪ್ರಾಮಾಣಿಕ ವ್ಯಕ್ತಿ. ನನ್ನ ವಿಚಾರದಲ್ಲಿ ಪಿವಿಸಿ ಹಾಗೂ ಪ್ರಭಾಕರ ಇಬ್ಬರಿಗೂ ವಿಶೇಷ ಗೌರವ. ಪ್ರಭಾಕರ ಅವರ ಮನೆಯಲ್ಲಿ ನನ್ನ ಸಂಗೀತ ಕಛೇರಿ ಏರ್ಪಡಿಸಿ ನನ್ನನ್ನು ಗೌರವಿಸಿದ್ದು ನನಗೆ ಬಹಳ ಸಂತಸವನ್ನೂ ತಂದಿದೆ. ಇನ್ನು ಗುರುಪ್ರಸಾದ್ ಒಬ್ಬ ಆಧ್ಯಾತ್ಮಕ ಚಿಂತಕ ಹಾಗೂ ಕರ್ಮಯೋಗಿ. ಯಾವುದೇ ಸತ್ಕಾರ್ಯಗಳಿಗೆ ಅವರ ಅಭಯ ಹಸ್ತ ಇದ್ದೇ ಇರುತ್ತದೆ. ನಿಗರ್ವಿ ಉತ್ಸಾಹಿ ರವೀಂದ್ರ ಕಾಲೇಜು ದಿನಗಳಿಂದಲೂ (ವಿಜಯ ಕಾಲೇಜು) ಕನ್ನಡದದಾಹವನ್ನು ಇಟ್ಟುಕೊಂಡೆ ಇದ್ದವನು. ಇನ್ನೂ ಈ ಸುಂದರ ಭಾಷಾದಾಹ ಇಂಗಿಲ್ಲ. ಒಂದು ವಿಶೇಷ ಸಮಾಚಾರವೆಂದರೆ 2002ಲ್ಲಿ ಗಾನ ಕಲಾಪರಿಷತ್ತಿನ 33ನೇ ಸಮ್ಮೇಳನಾಧ್ಯಕ್ಷನಾಗಿ ಆಯ್ಕೆಯಾಗಿ 2.10.2002 (ಗಾಂಧಿ ಜಯಂತಿ) ರಂದು ನಡೆದ ವಿದ್ವತ್ ಸಾನಿಧ್ಯದಲ್ಲಿ (ಗಾಯನ ಸಮಾಜದ ಸಭಾಂಗಣ ಸಾಲದೆ ಜನ ರಸ್ತೆಯಲ್ಲಿ ನಿಂತಿದ್ದು ಅಂದು ಟ್ರಾಫಿಕ್ ಜಾಮ್ ಆದದ್ದು ಒಂದು ಚರಿತ್ರೆ). ನನಗೆ "ಗಾನ ಕಲಾಭೂಷಣ" ಬಿರುದನ್ನು ಶ್ರೀ ಶ್ರೀ ಪೇಜಾವರಶ್ರೀಗಳು ನೀಡಿದರು. ಅಂದು

ಅವರು ಮಾತನಾಡುತ್ತಾ "ಇವರು ಪದ್ಮನಾಭನಲ್ಲ, ಪದ್ಮನಾದ" ಎಂದಾಗ ಇಡೀ ಸಭಾಂಗಣ ಚಪ್ಪಾಳೆಯ ಮೂಲಕ ತಮ್ಮ ಪ್ರಶಂಸೆಯನ್ನು ಅಭಿವ್ಯಕ್ತಿಸಿದ್ದು ಮರೆಯಲಾರದ ವಿಷಯ. ಈ ಶೀರ್ಷಿಕೆಯನ್ನು ನಾನೇನೂ ರವೀಂದ್ರನಿಗೆ ಹೇಳಿರಲಿಲ್ಲ. ಆದರೂ ಪೇಜಾವರ ಶ್ರೀಗಳ ಅಂದಿನ ಮಾತು ಈ ರವೀಂದ್ರನಿಗೆ ತಿಳಿಸಿರಬಹುದು ಅನ್ನುವಹಾಗೆ ಈ ನಾಮಕರಣ ನನಗೆ ಬಹಳ ಹಿಡಿಸಿದೆ. ಈ ಹೊತ್ತಿಗೆ / ಗ್ರಂಥ ನನಗೆ, ನನ್ನ ಮನಸ್ಸಿಗೆ ಬಹಳ ಆನಂದದಾಯಕವಾದದ್ದೂ, ಪ್ರೀತ್ಯಾದರ ಗೌರವಗಳ ಸಂಕೇತವೂ ಆಗಿದ್ದು ರವೀಂದ್ರನ ಈ ಕೈಂಕರ್ಯಕ್ಕೆ ನಾನು ಚಿರಋಣಿಯಾಗಿದ್ದೇನೆ. ಚತುಶ್ಚಕ್ರಗಳಿಗೆ ಆಭಾರಿಯಾಗಿದ್ದೇನೆ. ಇಡೀ ಎಸ್ ಬಿ ಐ ಗೆಳೆಯರ ಬಳಗಕ್ಕೆ ನಾನು ಕೃತಜ್ಞನಾಗಿದ್ದೇನೆ. ಹೀಗೆ ಗೆಳೆಯರ ಬಳಗದ ಪ್ರೀತಿ ವಿಶ್ವಾಸಗಳನ್ನು ಎಂದೆಂದೂ ಅಪೇಕ್ಷಿಸುತ್ತೇನೆ. ಈ ಪದ್ಮನಾದ ನಮ್ಮೆಲ್ಲರ ಹೃದಯವಂತರಾಳದಲ್ಲಿ ಪ್ರತಿಷ್ಠಾಪನೆ ಆಗಲಿ. ಹಾಗಾದರೂ ದಿನಕ್ಕೊಮ್ಮೆಯಾದರೂ ನೀವು ನನ್ನನ್ನು ಜ್ಞಾಪಿಸಿಕೊಳ್ಳಬಹುದು. ನೀವು ಜ್ಞಾಪಿಸಿಕೊಂಡರೆ ನನ್ನ ಆಯಸ್ಸು ಒಂದು ದಿವಸ ಮುಂದೆ ಹೋಗುತ್ತದೆ. ಒಂದು ದಿವಸ ಮುಂದೆ ಹೋದರೆ ನಾದೋಪಾಸನೆ ಮಾಡುತ್ತಾ ನಾದದೇವತೆಗೆ ನಾನು ಸಮರ್ಪಿಸಬಹುದು. ಲೌಕಿಕವಾಗಿ ಗಳಿಸಬೇಕಾದ್ದೇನೂ ಕಾಣಿಸುವುದಿಲ್ಲ. ಆಲೌಕಿಕ ಅನುಭವ ಹಾಗೂ ಅನಾಹತ ನಾದದ ಅನುಭವದ ಕಡೆಗೆ ನನ್ನನ್ನ ನೀವೆಲ್ಲಾ ಪ್ರವೇಶ ಮಾಡುವುದಕ್ಕೆ ಅನುವು ಮಾಡಿಕೊಡುತ್ತೀರ ಎಂಬ ಭರವಸೆಯನ್ನು ಅಭಿವ್ಯಕ್ತಿಸುತ್ತೇನೆ. ಈಗಲೂ ಇದನ್ನು ಬರೆಯುತ್ತಿರುವಾಗಲೂ ನನ್ನ ಹೃದಯ ತುಂಬಿ ಬಂದಿದೆ, ಅಶ್ರು ಬಿಂದುಗಳು, ಬಿಂದುಗಳಾಗದೆ ಪ್ರವಾಹದಂತೆ ಬರುತ್ತಿದೆ. ಇದರ ಹಿಂದೆ ನೀವು ನನ್ನ ಮೇಲಿಟ್ಟಿರುವ ವಿಶ್ವಾಸ, ಗೌರವವೇ ಕಾರಣ ಎಂದು ಹೇಳ ಬಯಸುತ್ತೇನೆ. "ಹಾಡಿದರಿರಬೇಕು, ಹಾಡದ ದಿವಸವೇ ಸೇರಬೇಕು ಹರಿಪಾದವ." "ಪದ್ಮನಾದವನ್ನು" ಓದಿದ ಮೇಲೆ ನನ್ನ ಅಂತರಂಗದಲ್ಲಿ ಮಿಡಿದ ಮಾತುಗಳಿವು. ಇದು ಉತ್ಪ್ರೇಕ್ಷೆಯಲ್ಲ. ಅದರ ಅವಶ್ಯಕತೆಯೂ ಇಲ್ಲ. ರವೀಂದ್ರ ! ನೀನೊಬ್ಬ ಅಸಾಮಾನ್ಯ ಕನ್ನಡದ ಕವಿ. ನಿನ್ನ ಈ ಆತ್ಮೀಯ ಬರಹಕ್ಕೆ ಎಂದೆಂದೂ ಚಿರಋಣಿ. ಸದ್ಗುರು ವಾದಿರಾಜರು ನಿನಗೆ ಸನ್ಮಂಗಳವನ್ನುಂಟು ಮಾಡಲಿ. ಪಿವಿಸಿ, ಪ್ರಭು, ಗುರುಪ್ರಸಾದ್, ಕೃತಜ್ಞತೆಗಳು. ನನ್ನ ಆತ್ಮೀಯ ಗೆಳೆಯ ಹಾಗೂ ಸಮರ್ಥ ನಾಯಕ, ಆತ್ಮವಿಶ್ವಾಸದ ಮಹಾ ಪರ್ವತ, ಸಹೃದಯಿ, ಬುದ್ಧಿಶಾಲಿ ಮುತ್ತುಸ್ವಾಮಿಗೆ ಅನಂತ ಕೃತಜ್ಞತೆಗಳು ಮತ್ತು ಸನ್ಮಾನ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ SBI ಗೆಳೆಯರ ಬಳಗಕ್ಕೆ ಮತ್ತೊಮ್ಮೆ ನನ್ನ ಪ್ರೀತಿಯ, ವಿಶ್ವಾಸದ ನಾದನಮನ.

16.1.23 ಇತಿ



ಆರ್. ಕೆ. ಪದ್ಮನಾಭ

SBI ಗೆಳೆಯರ ಬಳಗದ ಹೆಮ್ಮೆ

ಸನ್ಮಿತ್ರ ಸಂಗೀತ ಸುಧಾರತ್ನ ಆರ್ ಕೆ ಪದ್ಮನಾಭ

ಗಾನಕಲಾಭೂಷಣ ವಿದ್ವಾನ್ ಡಾ॥ ಆರ್. ಕೆ. ಪದ್ಮನಾಭ ಅವರಿಗೆ ಕೇಂದ್ರ ಸಾಹಿತ್ಯ ನಾಟಕ ಅಕಾಡಮಿಯ ಪ್ರಶಸ್ತಿ ಪ್ರಾಪ್ತವಾದ ವಿಷಯ ತಿಳಿದು ಹೆಚ್ಚಿನ ಸಂಭ್ರಮ ಪಟ್ಟವರು SBI ಗೆಳೆಯರು. ಕಾರಣ ಸ್ಪಷ್ಟ. ಪದ್ಮನಾಭ ಅವರು SBI ನ ಉದ್ಯೋಗಿಯಾಗಿದ್ದವರು. ನಮ್ಮಲ್ಲಿ ಅನೇಕರಿಗೆ ಅವರು 40 ವರುಷಕ್ಕಿಂತಲೂ ಹಿಂದಿನ ಪರಿಚಯದವರು. ಬಹಳಷ್ಟು ಮಂದಿಗೆ ಹೋಗೋ ಬಾರೋ ಅನ್ನುವಷ್ಟು ಸಮೀಪದ ಗೆಳೆತನ. ಪದ್ಮನಾಭರಿಗಂತೂ 20 – 30 ವರುಷದ ನಂತರ ಭೆಟ್ಟಿಯಾದವರ ಹೆಸರೂ ನೆನಪಿನಲ್ಲಿ ಚಿರ.

ಪ್ರಶಸ್ತಿ ಸಂದ ಕೂಡಲೆ ಪದ್ಮನಾಭರಿಗೆ ಅಭಿನಂದನೆಗಳ, ಸನ್ಮಾನಗಳ ಮಹಾಪೂರವೇ ಹರಿದು ಬರುತ್ತಿರುವುದನ್ನು ಕಂಡಾಗ ಬಂದ ಫಲವೇ ನಾವೂ ನಮ್ಮ RKP ಗೆ ಸೂಕ್ತವಾಗಿ ಅಭಿನಂದಿಸಬೇಕೆಂಬುದು. ನನ್ನ ಕೆಲವು ಹತ್ತಿರದ ಸ್ನೇಹಿತರ ಸಲಹೆ ಕೇಳಿದಾಗ ಅವರೆಲ್ಲರಿಂದ ಮನಃಪೂರ್ವಕ ಉತ್ತೇಜನ. ತತ್ ಕ್ಷಣವೇ ಸಮಾನ ಮನಸ್ಕರ ಒಂದು ವಾಟ್ಸಾಪ್ ಗುಂಪು ಆರಂಭ ಮಾಡಿದೆವು. ಎರಡೇ ದಿನಗಳಲ್ಲಿ ಸುಮಾರು 400 SBI ಸ್ನೇಹಿತರ ಸೇರ್ಪಡೆಯಾದದ್ದಷ್ಟೇ ಅಲ್ಲದೆ ಸನ್ಮಾನ ಸಮಾರಂಭಕ್ಕೆ ದೇಣಿಗೆಗಳೂ ಸ್ವಪ್ರೇರಿತವಾಗಿ ಬರಲಾರಂಬಿಸಿತು.

ಸುಯೋಗಗಳು ಬರಲು ಶುರುವಾದರೆ ಒಂದರ ಹಿಂದೆ ಒಂದು ಬರಲು ಶುರುವಾಗುತ್ತದಂತೆ. ನಮಗೂ ಸುದೈವದಿಂದ ಹಾಗೇ ಆಯಿತು. ನಮ್ಮ ವಾಟ್ಸಪ್ ಗುಂಪಿಗೆ RKP ಅವರ ಸಾಧನೆಗಳನ್ನು ಪರಿಚಯಿಸಲು ಕಂತುಗಳಲ್ಲಿ ಬರೆಯಲು ಶುರುಮಾಡಿದ ಮಿತ್ರ ರವೀಂದ್ರರು ಪದ್ಮನಾಭರ ಜೀವನ ಚರಿತ್ರೆಯನ್ನೇ ಬರೆದರು. ಇದಕ್ಕೆ ಪ್ರೇರಣೆ ಗುಂಪಿನ ಅನೇಕ ಸದಸ್ಯರ ಒತ್ತಾಯ. ಪದ್ಮನಾಭರ ಜೀವನ ವೈವಿಧ್ಯ, ಸಂಗೀತ ಕಲಿಯುವುದರಲ್ಲಿ ಕಲಿಸುವುದರಲ್ಲಿನ ತನ್ಮಯತೆ, ಅವರ ಸಾಧನೆಗಳು, ರವೀಂದ್ರರ ಬರವಣಿಗೆಯ ಶೈಲಿ, ಕತೆಯ ಓಘ, ಇತ್ಯಾದಿಗಳು ಓದುಗರನ್ನು ಮೋಡಿ ಮಾಡಿದ್ದಲ್ಲದೆ ರವೀಂದ್ರರ ಮೇಲೆ ಈ ಕಂತುಗಳನ್ನೇ ಕೂಡಿಸಿ ಒಂದು ಪುಸ್ತಕವನ್ನಾಗಿ ಪ್ರಕಟಿಸಬೇಕೆಂಬ ಬೇಡಿಕೆ ಹೆಚ್ಚಾಯಿತು.

ಬಳಗದ ಬಹು ಜನರ ಬೇಡಿಕೆಯ ಮೇರೆಗೆ ರವೀಂದ್ರ ಈ ಪುಸ್ತಕವನ್ನು ಗೆಳೆಯರ ಸಹಕಾರದಿಂದ. SBI ಗೆಳೆಯರ ಬಳಗದ ಬೆಂಬಲದಿಂದ ಪ್ರಕಟಿಸಿದ್ದಾರೆ. ಅತ್ಯಂತ ಕ್ಷಿಪ್ರ ಸಮಯದಲ್ಲಿ ಈ ಕೃತಿಯನ್ನು ಎಲ್ಲರೂ ಮೆಚ್ಚುವಂತೆ ರಚಿಸಿದ್ದಾರೆ. ಅವರಿಗೆ SBI ಗೆಳೆಯರ ಬಳಗ ಆಭಾರಿಯಾಗಿದೆ.

ವಂದನೆಗಳೊಂದಿಗೆ,

ವೈ.ವಿ. ಪ್ರಭಾಕರ
ಸಂಚಾಲಕ
SBI ಗೆಳೆಯರ ಬಳಗ.

ನನ್ನಿ ನುಡಿ

~ ಅನಿರೀಕ್ಷಿತವಾಗಿ ಅಕ್ಕರದಿ ಅಕ್ಷರದ ಮಳೆಯನ್ನು ಮಡಿಲಿಗೆರೆದು ಪದ್ಮನಾದದ ತೋಮಾಲೆ ಕಟ್ಟಿಸಿದ ಶಾರದೆಗೆ,

~ ಕೃತಿರಚನೆಗೆ ಕಾರಣರಾಗಿ, ಮನೆಗೆ ಹೋದಾಗಲೆಲ್ಲ ಸ್ವಾಗತಿಸಿ, ಕೈವಾಣಿಯಲಿ ಕರೆದಾಗಲೆಲ್ಲ ಮಾತನಾಡಿ, ಪುಸ್ತಕದ ರಾಶಿಯನ್ನು ವಿಶೇಷವಾಗಿ "ನೆನಪಿನಂಗಳದಲ್ಲಿ" ಆತ್ಮಚರಿತವನ್ನು ಕೊಟ್ಟು ಹರಸಿದ ಶ್ರೀ ಆರ್ ಕೆ ಪದ್ಮನಾಭ ಅವರಿಗೆ,

~ ಪದ್ಮನಾಭರಿಗೆ 2020ರ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರವನ್ನು ಘೋಷಿಸಿದೊಡನೆ ಸನ್ಮಾನಿಸಲು ಗೆಳೆಯರ ಬಳಗವನ್ನು ಕಟ್ಟಿದ ವೈವಿ ಪ್ರಭಾಕರ, ಪಿವಿ ಚಂದ್ರಶೇಖರ ಮತ್ತು ಆರ್ ಕೆ ಪಿ ಸನ್ಮಾನ ಸಮಿತಿಯ ಅಧ್ವರ್ಯುಗಳಾದ ಸಹೋದ್ಯೋಗಿ ಮಿತ್ರರುಗಳಿಗೆ,

~ ಉತ್ಸಾಹ ಮತ್ತು ಪ್ರೀತಿಯಿಂದ ಬಳಗದ ಭಾಗವಾಗಿ ಸನ್ಮಾನಕ್ಕೆ ಧನಪೋಷಣೆಯನ್ನು ಮತ್ತು ವಾಟ್ಸಾಪ್ ವೇದಿಕೆಯಲ್ಲಿ ಡಿಸೆಂಬರ್ 12, 2022ರಿಂದ ಜನವರಿ 19, 2023ರವರೆಗೆ, 28 ಧಾರೆಗಳಲ್ಲಿಳಿದ ಪದ್ಮನಾದಕ್ಕೆ ಸುಸ್ಪಂದನೆಗಳ ಮೂಲಕ ಅಕ್ಷರ ಪೋಷಣೆಯನ್ನು ಮಾಡಿದ ಎಸ್ಬಿಐ ಸಹೋದ್ಯೋಗಿ ಸನ್ಮಿತ್ರರಿಗೆ,

~ ಸತತವಾಗಿ ಲೇಖನ ಧಾರೆಯ ಇಪ್ಪತ್ತೆಂಟು ಅಧ್ಯಾಯಗಳಿಗೂ ಪ್ರತಿಸ್ಪಂದಿಸಿ, ಬಾಗುಗಳನ್ನು ತೋರಿ, ಬೆಳಕನ್ನು ಬೀರಿದ ಪ್ರಿಯಮಿತ್ರ ಧೀರೇಂದ್ರರಿಗೆ ಮತ್ತು ಇತರ ಗೆಳೆಯರಿಗೆ,

~ ಅಧ್ಯಾಯಗಳ ಆರಂಭದಲ್ಲೇ ಈ ಲೇಖನಮಾಲೆ ಪುಸ್ತಕರೂಪ ಪಡೆಯಲೆಂದು ಹಾರೈಸಿ ಬಯಸಿದ ಕೋಲಾರ ವಾಸುದೇವರಾವ್ ಅವರಿಗೆ.

~ ಪ್ರಕಟಣೆಗೆ ಅನುವು ಮಾಡಿಕೊಟ್ಟ SBI ಗೆಳೆಯರ ಬಳಗದ ಸದಸ್ಯರು, RKP ಸನ್ಮಾನ ಸಮಿತಿ ಸಂಗಾತಿಗಳಿಗೆ

~ ವಿಶೇಷ ದೇಣಿಗೆಯ ಮೂಲಕ ಪ್ರಕಟಣೆಯನ್ನು ಆರ್ಥಿಕವಾಗಿ ಬೆಂಬಲಿಸಿದ ಸರ್ವಶ್ರೀ ಎಚ್ ಎಲ್ ಗುರುಪ್ರಸಾದ್, ಎಸ್ ಧೀರೇಂದ್ರ, ಜಿ ಎಂ ದಕ್ಷಿಣಾಮೂರ್ತಿ, ಆರ್ ಎಸ್ ಗುರುಪ್ರಸಾದ್, ಶ್ರೀಮತಿ ಜಯಂತಿ ಮನೋಹರ್ ಮತ್ತು ಮತ್ತೊರ್ವ

ಗೆಳೆಯರಿಗೆ

~ ಮುನ್ನುಡಿಯನ್ನು ಮೆಚ್ಚುಗೆಯಿಂದ ಬರೆದು, ಕೃತಿಯ ಬಗ್ಗೆ ಬೆಳಕನ್ನು ಚೆಲ್ಲಿದ ಹಿರಿಯ ಸಾಹಿತಿ, ಸಾಹಿತ್ಯ ಸಂಗೀತ ವತ್ಸಲರಾದ ಶ್ರೀ ಎನ್ ಎಸ್ ಶ್ರೀಧರಮೂರ್ತಿ, ನಿರ್ದೇಶಕರು, ಮಾಧ್ಯಮ ಭಾರತಿ, ಭಾರತೀಯ ವಿದ್ಯಾಭವನ, ಬೆಂಗಳೂರು ಅವರಿಗೆ

~ ನನ್ನ ಎಲ್ಲಾ ಸಾಹಿತ್ಯ ಚಟುವಟಿಕೆಗಳಿಗೆ ಕಾಯಾ ವಾಚಾ ಮನಸಾ ಸತತ ಸ್ಫೂರ್ತಿ ಮತ್ತು ಬೆಂಬಲವನ್ನು ನೀಡುತ್ತಿರುವ ಆಪ್ತಮಿತ್ರರೂ, ಕರೆದಾಗ ನನ್ನೊಡನೆ ಸಂದರ್ಶನಕ್ಕಾಗಿ ಪದ್ಮನಾಭರ ಮನೆಗೆ ಹಲವಾರು ಬಾರಿ ಬಂದು, ಅತ್ಯಂತ ಶ್ರದ್ಧೆಯಿಂದ ಪುಸ್ತಕಕ್ಕೆ ಅಕ್ಷರಜೋಡಣೆಯನ್ನು ಮತ್ತು ಸುಂದರವಾಗಿ ಪುಟವಿನ್ಯಾಸವನ್ನೂ ಮಾಡಿ, ಚಿತ್ರಗಳನ್ನು ಹಿತವಾಗಿ ಕೀಲಿಸಿ, ಸತತವಾಗಿ ಚೈತನ್ಯಧಾರೆಯನ್ನಿತ್ತು, ಕೃತಿಯು ಈ ರೂಪವನ್ನು ಪಡೆಯಲು ಕಾರಣರಾದ ನನ್ನ ಬಹುಕಾಲದ ಪ್ರಿಯ ಮಿತ್ರರಾದ ಎಚ್ ಎಲ್ ಗುರುಪ್ರಸಾದ ಅವರಿಗೆ,

~ ತಾಂತ್ರಿಕ ನೆರವನ್ನಿತ್ತ ಎಚ್ ಆರ್ ಗುರುರಾಜ್, ಕರಡನ್ನು ತಿದ್ದಿಕೊಟ್ಟ ಕನ್ನಡದ ಉತ್ತಮ ಸಣ್ಣಕತೆ, ಪ್ರಬಂಧಗಾರ್ತಿ ಟಿಎಸ್ ಶ್ರವಣಕುಮಾರಿ ಅವರುಗಳಿಗೆ,

~ ಸಾಹಿತ್ಯವೂ ಸೇರಿದಂತೆ ಎಲ್ಲಾ ಕ್ರಿಯಾಶೀಲ ಚಟುವಟಿಕೆಗಳಿಗೆ ನಿರಂತರ ಪ್ರೋತ್ಸಾಹವನ್ನು ನೀಡುತ್ತಿರುವ ನನ್ನ ಬಾಳಸಂಗಾತಿ ಪುಷ್ಪಲತಾ ಅವರಿಗೆ,

~ ಅಕ್ಷರದ ಅಕ್ಕರೆಯನ್ನು ನವಿರಾಗಿ ನೀರೆರೆದು ಪೋಷಿಸಿದ ನನ್ನ ಕುಟುಂಬದ ಸದಸ್ಯರು, ಆತ್ಮೀಯ ಮಿತ್ರರುಗಳು, ಭಾರತೀಯ ಸ್ಟೇಟ್ ಬ್ಯಾಂಕ್‌ನ ಗೆಳೆಯರು ಹಾಗೂ ಸಮನ್ವಯ ಸಮಿತಿ ಕನ್ನಡವೇ ಸತ್ಯ ಗುಂಪಿನ ಸಾಹಿತ್ಯ ಮಿತ್ರರುಗಳಿಗೆ,

~ ಮತ್ತು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರೋತ್ಸಾಹವನ್ನು ನೀಡುತ್ತಿರುವ ಎಲ್ಲಾ ಸುಮನಸುಗಳಿಗೆ ಹೃದಯಪೂರ್ವಕ ಧನ್ಯವಾದಗಳು. ಚಂದದಿಂದ ಸಕಾಲದಲ್ಲಿ ಮುದ್ರಿಸಿಕೊಟ್ಟ ಪ್ರಕಾಶಕರಾದ ಸಂಪದ ಪಬ್ಲಿಕೇಷನ್ಸ್ ಅವರಿಗೆ ವಂದನೆಗಳು.

~ ಪದ್ಮನಾದ ಕೃತಿಯನ್ನು ಕನ್ನಡ ಓದುಗರು ವಿಶ್ವಾಸದಿಂದ ಸ್ವೀಕರಿಸಲೆಂದು ಕೋರುತ್ತೇನೆ.

ವಂದನೆಗಳು

ಬೆಂಶ್ರೀ ರವೀಂದ್ರ

ಬೆಂಗಳೂರು

ನಾದತರಂಗ

1. ಆ ಹುಡುಗ
2. ರುದ್ರಪಟ್ಟಣ
3. ಸಂಕಲ್ಪ ಸಿದ್ಧಿ
4. ಷಡ್ಜಾಂಬೆಯ ಮಗ್ಗುಲುಗಳಲ್ಲಿ
5. ಸತ್ಯಸುನಾದದ ಕದವನು ತೆರೆದು
6. ನಾನು ಹೋದರೆ ಹೋಗಬಹುದು
7. ವಾದಿರಾಜರ ಪವಾಡ
8. ಎಂದುರೋ ಮಹಾನುಭಾವುಲು ಅಂದರಕಿ ವಂದನಮುಲು
9. ಮೀನ ಲೋಚನಿ ಪಾಶ ಮೋಚನಿ ವಾಣಿ ಕದಂಬ ವನವಾಸಿನಿ
10. ಹಿಮಾದ್ರಿ ಸುತೆ ಪಾಹಿಮಾಂ ವರದೆ ಪರದೇವತೆ
11. ಸಾಮಗಾನ ಪ್ರಿಯ ಸಾಂಬ ರೂಪಿಣಿ
12. ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ
13. ಅಭಿನವರ ಆಶೀರ್ವಾದ
14. ಭ್ರಮರದ ಝೇಂಕಾರ ಮುನಿಗಳ ಓಂಕಾರ
15. ಶ್ರೀ ಮಹಾ ಗಣಪತಿಂ ಭಜೇ ಹಂ
16. ಶರೀರಮಾದ್ಯಂ ಖಲು ಧರ್ಮ ಸಾಧನಮ್
17. ಬೀಜರೂಪವಾಗಿದ್ದ ಸರ್ವಮಹತ್ತೂ ಸಂಸ್ಕಾರ ರೂಪವಾಗಿ
18. ನಡೆವರೆಡಹದೆ ಕುಳಿತರೆಡಹುವರೆ
19. ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ
20. ಕೊರಳೊಲು ಮಾಲೆ ಧರಿಸಿದರಿಲ್ಲ
21. ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
22. ನಿನ್ನಪಾದ ಸೇವೆ ಎನಗೀಶ ಸೇವೆ
23. ಎನಕ್ ಉಂಗ್ಯೆ ಮಾದರಿ ಒರು ಪುಳ್ಳೆ ಪೊರುಂದಾ
24. ನಾದ ತನುಮನೀಶಂ ಶಂಕರಂ
25. ಈ ಹಾದಿ ಅನಾದಿ ಹೃದಯ ಸಂವಾದಿ ಸುನಾದಿ ಸರಿಗಮ ಸನಾದಿ
    ವಿಜ್ಞಾನಬೋಧಿ ಸಂಜ್ಞಾನ ಸಂಬೋಧಿ
26. ಓ ಓ ಓ ರಂಗಶಾಯೀ ಎನಿ ಪಿಲಚಿತು ಓ ಎನುಚು ರಾ ರಾದ
27. ತತ್ತ್ವಜ್ಞಃ ಸರ್ವಭೂತಾನಾಂ ಯೋಗಜ್ಞಃ ಸರ್ವಕರ್ಮಾಣಾಂ
28. ಇವರು ಪದ್ಮನಾಭರಲ್ಲ, ಪದ್ಮನಾದ

01
ಆ ಹುಡುಗ

1974–75ರ ಆಸುಪಾಸು. ಬೆಂಗಳೂರಿನ ಭೈರಸಂದ್ರದ ಕೆರೆ ಮೈದಾನ. ಅಲ್ಲೆಲ್ಲೋ ಕಾಣದ ಸ್ಥಳದಿಂದ ನಿಮಗೆ ಸಂಗೀತದ ನಿನಾದ ಕೇಳುತ್ತದೆ. ಅವಸರವಿದ್ದಾಗ ನೀವು ಗಮನಿಸದೆ ಮುನ್ನಡೆಯುತ್ತೀರಿ. ಸ್ವಲ್ಪ ಬಿಡುವಿದ್ದರೆ ಆ ಕಡೆ ಈ ಕಡೆ ತಿರುಗಿ ನಿನಾದ ಬರುತ್ತಿರುವ ಜಾಡನ್ನು ಗಮನಿಸುತ್ತೀರಿ. ಕಂಡರೂ ಕಂಡೀತು. ದೂರದಲೆಲ್ಲೋ ಮರೆಯಲ್ಲಿ ಕುಳಿತ ಯುವಕ. ಅವನ ಕೈನಲ್ಲಿ ಪುಟ್ಟ ಹಾರ್ಮೋನಿಯಂ ಇದೆ. ಗುನುಗುತ್ತಿದ್ದಾನೆ, ಹಾಡುತ್ತಿದ್ದಾನೆ. ಸುತ್ತಲಿನ ಅರಿವು ಅವನಿಗಿಲ್ಲ. ನೀವು ಅವನನ್ನು ಪ್ರತಿದಿನವೂ ನೋಡುತ್ತಿರುವಿರಿ. ಅದೇ ಗೋಪ್ಯಸ್ಥಳ. ಯಾರೂ ಬರುವುದಿಲ್ಲ. ಅವನ ಪಾಡಿಗೆ ಅವನ ಹಾಡಿಗೆ ಅವನು. ಒಂದು ಕ್ಷಣ ನಿಂತು ಹರಸುತ್ತೀರಿ. ಎಷ್ಟು ಚೆನ್ನಾಗಿ ಹಾಡುತ್ತಾನೆ, ಯಾವ ತಾಯಿಯ ಮಗನೋ, ಎಂತಹ ಶ್ರದ್ಧೆ.

ಇಲ್ಲೇಕೆ ಅಭ್ಯಾಸ. ಸಾರ್ವಜನಿಕ ಸ್ಥಳ. ಬರುವವರೂ ಹೋಗುವವರೂ ನೂರಾರು. ಹುಡುಗರ ಆಟ. ಕೇಕೆ.. ಕೂಗು... ಹಾದು ಹೋಗುವ ಬಸ್ಸು ಕಾರುಗಳ ಶಬ್ದ, ಹಾರನ್ನು. ಮಬ್ಬುಗತ್ತಲು ಆವರಿಸುತ್ತಿದ್ದಂತೆ ಅಲ್ಲಿ ತರಹೆವಾರಿ ಜನರು. ಆದರೆ ಈ ಹುಡುಗನಿಗೆ ಇದ್ಯಾವುದರ ಪರಿವೆಯಿಲ್ಲ.

ಅವನಿಗೆ ಮನೆಯಿದೆ. ತಂದೆ ತಾಯಿ ಅಣ್ಣ ತಮ್ಮ ಅಕ್ಕ ತಂಗಿಯರು ಇದ್ದಾರೆ. ಮನೆ ಚಿಕ್ಕದು. ಅಲ್ಲೆ ಅಡಿಗೆ, ಊಟ, ನಿದ್ದೆ, ವರಾಂಡ..... ಎಲ್ಲವೂ. "ಏ.." ಅಂದಾರೆಯೆ ಹೊರತು ಏಕಾಂತಕ್ಕೆ ಸ್ಥಳವಿಲ್ಲ. ಆದರೆ ಇವನಿಗೆ ಸಂಗೀತದ ಘಮಲು ಬಿಡುತ್ತಿಲ್ಲ. ಮನಸ್ಸು ಹೇಳುತ್ತಿದೆ.. ಹಾಡಬೇಕು... ಹಾಡಬೇಕು. ಇವನು ಎಲ್ಲಿ ಅಭ್ಯಾಸ ಮಾಡಬೇಕು? ನಿಸರ್ಗವನ್ನೆ ಆಯ್ದುಕೊಂಡ. ನಿಮಗೆ "ಹಂಸಗೀತೆ"ಯ ಭೈರವಿ ವೆಂಕಟಸುಬ್ಬಯ್ಯ ನೆನಪಾಗುತ್ತಾರಲ್ಲವೆ !

ಆ ಹುಡುಗನ ಊರು ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿದೆ. ಕುಟುಂಬವು ಆಸರೆಯನ್ನರಸಿ ಬೆಂಗಳೂರಿಗೆ ಬಂದಿದೆ. ಒಂದು ವರ್ಷ ಮೈಸೂರಿನಲ್ಲಿದ್ದರು. ಹುಡುಗನ ತಂದೆಗೆ ಬೆಂಗಳೂರಿಗೆ ಬರುವ ತವಕ. ಯಾವುದೋ ದೈವಿಕ ಕರೆಯದು. ಹಾಗೆ ನೋಡಿದರೆ ಈ ಹುಡುಗ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಪಿಯುಸಿ ಓದಿದ್ದು. ಅದೂ ವಿಜ್ಞಾನದಲ್ಲಿ. ಅಲ್ಲಿಂದ ಬೆಂಗಳೂರಿನ ಜಯನಗರಕ್ಕೆ ಬಂದರು. ಸೇರಿದ್ದು, ಪ್ರಸಿದ್ಧವಾದ "ವಿಜಯಾ ಕಾಲೇಜು." ನಿಮಗೆ ಆಶ್ಚರ್ಯವಾಗುತ್ತದೆ. ಸಂಗೀತವನ್ನು ಇಷ್ಟೊಂದು ತೀವ್ರವಾಗಿ ಪ್ರೀತಿಸುವ ಈ ಹುಡುಗ ಓದಿರುವುದು, ವಿಜ್ಞಾನ. ಅದೂ ಆ ವರ್ಷ ತಾನೆ

ಬೆಂಗಳೂರು ವಿಶ್ವವಿದ್ಯಾಲಯವು, ಪ್ರಥಮ ಬಾರಿಗೆ, ಖಾಸಗಿ ಕಾಲೇಜೊಂದಕ್ಕೆ ಬಿಎಸ್ಸಿ (ಆನರ್ಸ್) ತರಗತಿಯನ್ನು ನಡೆಸಲು ಅನುಮತಿಯನ್ನು ನೀಡಿತ್ತು. 1968ರಲ್ಲಿ ಈ ಹುಡುಗ ಬಿಎಸ್ಸಿ (ಆನರ್ಸ್) ಭೌತಶಾಸ್ತ್ರ ತರಗತಿಗೆ ಸೇರಿದ. ಎಲ್ಲಿಯ ಸಂಗೀತ, ಎಲ್ಲಿಯ ಭೌತಶಾಸ್ತ್ರ ಅನ್ನಬಹುದೇ. ಅಂತೂ ವಿಜ್ಞಾನ ಮತ್ತು ಕಲೆಗಳು ಎಲ್ಲಿಯೋ ಮೇಳೈಸುತ್ತದೆ. ಅಂತರ್ಯದಲ್ಲಿ ಹರಿಯುತ್ತಿರುವ ಸಂಗೀತ ಸುಧೆಯು, ಕಾವೇರಿಯ ರೀತಿಯಲ್ಲಿ, ಪಶ್ಚಿಮಘಟ್ಟದ ತಲಕಾವೇರಿಯಲ್ಲಿ ಹುಟ್ಟಿ, ಬ್ರಹ್ಮಗಿರಿಯನ್ನು ಇಳಿದು ಭಾಗಮಂಡಲದಲ್ಲಿ ಪ್ರತ್ಯಕ್ಷವಾಗುವಂತೆ ಯಾವಾಗಲೋ ಹೊರಬರಬಹುದು.

ಆ ಹುಡುಗನ ಊರು ಕಾವೇರಿ ತಟದಲ್ಲಿಯ ರುದ್ರಪಟ್ಟಣ ಅಥವಾ ರುದ್ರಪುರಿ. ರುದ್ರಪಟ್ಟಣದ ಮಣ್ಣನ್ನು "ರುದ್ರ"ನೇ ಹರಸಿರಬೇಕು. ಅವನೇ ಅಕ್ಕ "ಶಾರದೆ" ಯನ್ನು ಅಲ್ಲಿ ನೆಲೆಗೊಳಿಸಿರಬೇಕು. ಕಳೆದ ಶತಮಾನದ ಆದಿಯಲ್ಲಿ ಸುಮಾರು 150–200 ಸಂಗೀತದ ಕುಟುಂಬಗಳು ಅಲ್ಲಿ ನೆಲೆಗೊಂಡಿದ್ದವಂತೆ. ಅಲ್ಲಿಯ ಸಂಗೀತ ಸಾಧಕರು ಹಲವಾರು ಮಂದಿ. ಯಾರಿಗೂ ತಲೆಬಾಗದ, ಯಾರ ಆಸ್ಥಾನಕ್ಕೂ ಹೋಗದ, ಸಂಗೀತದ ಪೂಜೆಯನ್ನು, ಉಪಾಸನೆಯನ್ನು ಮಾತ್ರಾ ಮಾಡುವ ಸಂಗೀತದೇವಿ ಸರಸ್ವತಿಯ ನಿಷ್ಠರು ಅವರು. ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿದ್ದ ವೈಣಿಕ ಶಿಖಾಮಣಿ ವೀಣೆ ಶೇಷಣ್ಣನವರು, (1852 - 1926) "ಮೈಸೂರಿಗೆ ಬನ್ನಿ" ಎಂದು ರುದ್ರಪಟ್ಟಣದ ವಿದ್ವಾಂಸರಿಗೆ ಕರೆದಾಗ, "ಆಗದು, ದಯವಿಟ್ಟು ನೀವೇ ರುದ್ರಪಟ್ಟಣಕ್ಕೆ ಬನ್ನಿ" ಎಂದರಂತೆ. ವೀಣೆ ಶೇಷಣ್ಣನವರು, ರುದ್ರಪಟ್ಟಣಕ್ಕೆ ಬಂದು ಕಛೇರಿಯನ್ನು ನೀಡಿ "ನನ್ನ ಬದುಕು ಸಾರ್ಥಕವಾಯಿತು" ಎಂದರಂತೆ.

ಮೈಸೂರು ವಾಸುದೇವಾಚಾರ್ಯರು (1865 - 1961) ಕರ್ನಾಟಕ ಸಂಗೀತದ ಒಬ್ಬ ಪ್ರಮುಖ ವಾಗ್ಗೇಯಕಾರರು. ತ್ಯಾಗರಾಜರ ಶಿಷ್ಯಪರಂಪರೆಗೆ ಸೇರಿದ್ದಾರೆ. ಕರ್ನಾಟಕ ಸಂಗೀತ ಹಾಡುಗಾರರಾಗಿ "ಸಂಗೀತ ನಾಟಕ ಅಕಾಡೆಮಿ"ಯ ಪುರಸ್ಕಾರವನ್ನು ಪಡೆದಿದ್ದಾರೆ. ಹತ್ತಾರು ಮಂದಿ ಶಿಷ್ಯರಿಗೆ ವಿದ್ಯಾದಾನ ಮಾಡಿದ್ದಾರೆ.

ಇವರು, ಒಮ್ಮೆ ಹೊಳೆನರಸೀಪುರಕ್ಕೆ, ಮದುವೆಯ ಸಮಾರಂಭದಲ್ಲಿ ಕಛೇರಿ ನೀಡಲು ಹೋಗಿದ್ದರು. ನಮ್ಮ ಆ ಹುಡುಗನ ತಂದೆ ಶ್ರೀ ಕೃಷ್ಣ ದೀಕ್ಷಿತರು ಮದುವೆಯ ಪುರೋಹಿತರು. ಸರಿ, ವಾಸುದೇವಾಚಾರ್ಯರ ಕಛೇರಿ ಎಂದೊಡನೆ ರುದ್ರಪಟ್ಟಣದ ವಿದ್ವಾಂಸರೆಲ್ಲಾ ಹೊಳೆನರಸೀಪುರಕ್ಕೆ ಧಾವಿಸಿದರು.

ಮೊದಲ ದಿನದ ಕಛೇರಿಯು ವಾಸುದೇವಾಚಾರ್ಯರಿಗೆ ತೃಪ್ತಿ ನೀಡಲಿಲ್ಲ.

ಎಲ್ಲಿಯೋ ಏನೋ ತಪ್ಪಿದೆ ಅನ್ನಿಸತೊಡಗಿತು. "ನಾಳೆ ಮತ್ತೊಂದು ಅವಕಾಶ ಕೊಡಿ" ಎಂದರಂತೆ. ಮಾರನೆಯ ದಿನ, ಅವರ ಹಾಡುಗಾರಿಕೆಯು ಸರಸ್ವತಿಯನ್ನು ಸಾಕ್ಷಾತ್ಕಾರ ಮಾಡಿಕೊಂಡಂತೆ, ಅದ್ಭುತವಾಗಿ ದೈವೀಕವಾಗಿತ್ತು. ರುದ್ರಪಟ್ಟಣದ ಸಂಗೀತ ಋಷಿಗಳು "ಭಲೆ ಭಲೆ" ಎಂದರು. "ಈ ನಾದ ನನ್ನದಲ್ಲ. ಶಾರದೆಯದು. ಈ ಮಣ್ಣಿನ ಗುಣ, ರುದ್ರಪಟ್ಟಣದ ವಿದ್ವಾಂಸರ ಹಾರೈಕೆ" ಎಂದರು ವಾಸುದೇವಾಚಾರ್ಯರು.

ಹಲವಾರು ವಿದ್ವಾಂಸರು, ಸ್ವಇಚ್ಛೆಯಿಂದ ರುದ್ರಪಟ್ಟಣಕ್ಕೆ ಹಾಡಲು ಬಂದಿದ್ದಾರೆ. ಕೃಷ್ಣಮೂರ್ತಿ ಭಾಗವತರು, ಸಂಧ್ಯಾವಂದನಂ ಶ್ರೀನಿವಾಸರಾಯರು ಮೊದಲಾದ ಪ್ರಮುಖರು ಬಂದಿದ್ದಾರೆ. ರುದ್ರಪಟ್ಟಣದಲ್ಲಿ ಹಾಡಿ ತಣಿದಿದ್ದಾರೆ. ಸಂತೋಷ ಪಟ್ಟಿದ್ದಾರೆ.. 1957–58ರ ಸುಮಾರಿಗೆ ಪಿಟೀಲು ವಿದ್ವಾಂಸರಾಗಿದ್ದ ಸನ್ಮಾನ್ಯ ಪಿಟೀಲು ಚೌಡಯ್ಯನವರು ರುದ್ರಪಟ್ಟಣಕ್ಕೆ ಬಂದಾಗ ಈ ಹುಡುಗ ಮುಂದೆ ನಿಂತು ಆ ಭವ್ಯ ವ್ಯಕ್ತಿತ್ವವನ್ನು ಕಣ್ಣು ತುಂಬಿಕೊಂಡ.

02
ರುದ್ರಪಟ್ಟಣ

ರುದ್ರಪಟ್ಟಣಕ್ಕೆ ಎಂಟು ಕಿಮೀ ದೂರದಲ್ಲಿ ರಾಮನಾಥಪುರವಿದೆ. ರಾವಣನನ್ನು ಸಂಹರಿಸಿದ ನಂತರ ದೋಷ ನಿವಾರಣೆಗಾಗಿ, ಇಲ್ಲಿಯ ಶಿವಲಿಂಗವನ್ನು ಶ್ರೀ ರಾಮಚಂದ್ರ ಪೂಜಿಸಿದ. ಅಲ್ಲದೆ ಹಲವಾರು ಐತಿಹ್ಯಗಳು ರಾಮನಾಥಪುರದ ಕತೆಯನ್ನು ಹೇಳುತ್ತದೆ. ರುದ್ರಪಟ್ಟಣಕ್ಕೆ ಇಂತಹ ಪೌರಾಣಿಕ ಹಿನ್ನೆಲೆ ಇಲ್ಲ. ಆದರೆ ಇತಿಹಾಸವನ್ನು ನಿರ್ಮಿಸಿದ, ನಿರ್ಮಿಸುತ್ತಿರುವ ಶಕ್ತಿ ಇದೆ.

ಅದು ಜನವರಿ. ನಾವು ಅಲ್ಲಿಗೆ ತಲುಪಿದಾಗ, ಬೆಳಗಿನ ಹತ್ತು ಗಂಟೆ ಇರಬಹುದು. ಆತ್ಮೀಯ ಸ್ವಾಗತ. "ತಿಂಡಿ ತಿನ್ನಿ" ಎನ್ನುವ ಆಗ್ರಹ. ಅಪ್ಯಾಯಮಾನವಾದ ಸೂರ್ಯನ ಬಿಸಿಲು. ಊರು ಹಿತವಾದ ಬಿಸಿಲಿನಲ್ಲಿ ಸ್ನಾನ ಮಾಡಿ ಝುಳಝುಳಿಸಿದಂತೆ ಫಳಫಳಿಸುತ್ತಿತ್ತು.

ಊಟದ ಮನೆ, ಅತಿಥಿಗೃಹದ ಪಕ್ಕದಲ್ಲಿ ಹೆಂಚು ಹೊದಿಸಿದ ಮೂಲ ರಾಮಮಂದಿರ. ರುದ್ರಪಟ್ಟಣದ ಹಲವಾರು ಹಿರಿಯ ಸಂಗೀತಗಾರರ ಛಾಯಾಚಿತ್ರಗಳು ಗೋಡೆಗಳನ್ನು ಅಲಂಕರಿಸಿದೆ. ಮರದ ಕಂಬಗಳು. ಮಾಡಿನ ಎತ್ತರ ಅಷ್ಟಿಲ್ಲ. ಮುಂಬದಿಯಲ್ಲಿ, ಸ್ವಲ್ಪ ಎತ್ತರದ ವೇದಿಕೆಯ ಹಿಂಬದಿಯಲ್ಲಿ ಶ್ರೀರಾಮನ ಮತ್ತು ಇತರ ದೇವಾನುದೇವತೆಗಳ ಚಿತ್ರಗಳು. ಸಂಗೀತ ನಿವೇದನೆ

ನಡೆಯುತ್ತಿತ್ತು. ಕಿರಿಯ ಹಿರಿಯ ಸಂಗೀತಗಾರರು. ತ್ಯಾಗರಾಜರ ಪಂಚರತ್ನ ಕೃತಿಗಳನ್ನು ಹಾಡುತ್ತಿದ್ದರು. ಅದೊಂದು ದೈವಿಕ ವಾತಾವರಣ. ಎಲ್ಲರೂ ಏಕಚಿತ್ತರಾಗಿ ಗಾನಲಹರಿಯಲ್ಲಿ ಮುಳುಗಿದ್ದರು. ನಾಧಸುಧೆಯು ರುದ್ರಪಟ್ಟಣದಲ್ಲಿ ತುಂಬಿತುಳುಕುತ್ತಿತ್ತು.

ಅಂದಿನ ಬೆಳಗು, ಪದ್ಮನಾಭದಾಸರು ಕಾವೇರಿ ತೀರದಲ್ಲಿ ತ್ಯಾಗರಾಜರಿಗೆ ಪೂಜೆ ಸಲ್ಲಿಸಿದ್ದರು. ಸಶರೀರದಿಂದ ತ್ಯಾಗರಾಜರು ರುದ್ರಪಟ್ಟಣಕ್ಕೆ ಬಂದಿಲ್ಲದಿರಬಹುದು. ಆದರೆ ಇಂದಂತೂ ರುದ್ರಪಟ್ಟಣದ ಆವರಣದಲ್ಲಿಯೇ ಇದ್ದರು; ಹರಸುತ್ತಿದ್ದರು.

ನಂತರ, ಊರಲ್ಲಿ ಒಂದು ಸುತ್ತು. ಹೊಯ್ಸಳರ ಕಾಲದ ಶ್ರೀ ಲಕ್ಷ್ಮೀ ಚೆನ್ನಕೇಶವ ದೇವಾಲಯ, ಹಾಗೂ ಗ್ರಾಮ ದೇವತೆ, ಶ್ರೀ ಫಲಾಂಜನೇಯ ಸ್ವಾಮಿ, ಪ್ರಸನ್ನ ರಾಮೇಶ್ವರ, ಶ್ರೀ ಕಾಡು ಸಿದ್ಧೇಶ್ವರ, ಶ್ರೀ ಕಂಚಿ ಕಾಮಾಕ್ಷಿ, ಶ್ರೀ ಸಿದ್ಧೇಶ್ವರ ಸ್ವಾಮಿ ಮೊದಲಾದ ದೇವಾಲಯಗಳನ್ನು ದರ್ಶಿಸಿದ್ದಾಯ್ತು. ಒಂದು ಮಸೀದಿ ಮತ್ತು ಚರ್ಚ್ ಸಹ ಊರಲ್ಲಿ ಇದೆ. ಜನಸಂಖ್ಯೆ ಮೂರು ಸಾವಿರ ಇರಬಹುದು.

ಸುಸಜ್ಜಿತವಾದ ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆ, ಪಂಚಾಯತಿಯ ಕಛೇರಿಗಳಿವೆ. ಹಾದಿ ಬೀದಿಗಳು ಸ್ವಚ್ಛ. ವಿಶೇಷವೆಂದರೆ 72 ರಾಗಗಳ ಹೆಸರುಳ್ಳ 72 ಗಿಡಗಳನ್ನು ನೆಟ್ಟು, ಅದರ ಸಮರ್ಪಕ ಪೋಷಣೆಯ "ಸಪ್ತಸ್ವರ ಪಥ" ನಮಗೆ ಆಶ್ಚರ್ಯವನ್ನುಂಟು ಮಾಡಿತು. ಊರ ಪಕ್ಕದಲ್ಲಿ ಕಾವೇರಿ ಹರಿಯುತ್ತಾಳೆ. ಆ ಜುಳುಜುಳು ನಾದವೇ ಈ ಗ್ರಾಮದ ಸಂಗೀತ ಪ್ರೀತಿಗೆ ನೀರೆರೆದಿರಬೇಕು. ಪ್ರಶಾಂತ, ತಂಪು, ಸಂತಸ ತರುವ ವಾತಾವರಣ. ಯಾಕೆ ಈ ಗ್ರಾಮಕ್ಕೆ ರುದ್ರಪಟ್ಟಣವೆಂದು ಕರೆದರೋ !

ವೇದ, ನಾದಗಳು ನೆಲಸಿರುವ ಶ್ರೀಮಂತ ಸಂಗೀತ ಪರಂಪರೆ. ಸುಮಾರು 400 ವರ್ಷಗಳ ಇತಿಹಾಸ. ಈ ಗ್ರಾಮದ ಕೋವಿದರು ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಶೆಂಗೋಟ್ಟೈನಿಂದ ಇಲ್ಲಿಗೆ ಬಂದರಂತೆ. ಕನ್ನಡ, ಕರುನಾಡು, ಕಾವೇರಿ ಅವರುಗಳನ್ನು ಎರಡೂ ಕೈಗಳಿಂದ ಸ್ವಾಗತಿಸಿ, ಆಶ್ರಯ ನೀಡಿದಳು. ಕೃಷಿ ಮತ್ತು ಸಂಗೀತ, ಇವರ ಉಸಿರಾಯಿತು. ಬೆಳೆದರು.. ಹಾಡಿದರು.... ಹಾಡಿದರು... ಬೆಳೆದರು.

ಈ ಊರಿನ ಮಂದಿ ಇತಿಹಾಸ ಕಟ್ಟಿದರು. ಕರ್ನಾಟಕ ಸಂಗೀತದ 60% ದಷ್ಟು ವಿದ್ವಾಂಸರು ಇಲ್ಲಿನವರು ಎಂದರೆ ಆಶ್ಚರ್ಯವಾಗುತ್ತದೆ. ಆರ್ ಎಸ್ ಕೇಶವ ಮೂರ್ತಿ, ಆರ್ ಕೆ ರಾಮನಾಥನ್, ಆರ್ ಕೆ ಶ್ರೀಕಂಠನ್, ಆರ್ ಕೆ ಶ್ರೀನಿವಾಸ ಮೂರ್ತಿ, ಆರ್ ಕೆ ಸೂರ್ಯನಾರಾಯಣ, ಆರ್ ಎನ್ ತ್ಯಾಗರಾಜನ್, ಆರ್ ಕೆ

ರಾಘವನ್, ಬಿ ಎಸ್ ರಮಾಕಾಂತ, ಆರ್ ಎನ್ ಶ್ರೀ ಲತಾ, ರತ್ನಮಾಲಾ ಪ್ರಕಾಶ್, ಆರ್ ಆರ್ ಕೇಶವ ಮೂರ್ತಿ, ಆರ್ ಕೆ ವೆಂಕಟರಾಮ ಶಾಸ್ತ್ರಿ, ಆರ್ ವಿ ಶ್ರೀಕಂಠಯ್ಯ, ಶತಾವಧಾನಿ, ವೀಣೆ ವೆಂಕಟರಮಣಯ್ಯ, ಆರ್ ಎನ್ ದೊರೆಸ್ವಾಮಿ, ಆರ್ ಎನ್ ತಾರಾನಾಥನ್, ಆರ್ ಎಸ್ ರಮಾಕಾಂತ, ವೀಣೆ ಪದ್ಮನಾಭ, ಆರ್ ಕೆ ಪ್ರಕಾಶ್, ವೀಣಾ ವಿದ್ವಾನ್ ಎಸ್ ಶಶಾಂಕ್, ಆರ್ ಕೆ ನಾರಾಯಣ ಸ್ವಾಮಿ........ ಹೀಗೆ ಹಲವಾರು ಸಾಧಕರು.

ಮತ್ತೂ ಇಬ್ಬರಿದ್ದಾರೆ, ಡಾ॥ ಆರ್ ಶಾಮಾಶಾಸ್ತ್ರಿ ಮತ್ತು ಗಾನಕಲಾಭೂಷಣ ವಿದ್ವಾನ್ ಡಾ॥ ಆರ್ ಕೆ ಪದ್ಮನಾಭ. ಮಹತ್ತರವಾದ ವ್ಯಕ್ತಿತ್ವಗಳು.

ಮೊದಲು, ಡಾ॥ ಶಾಮಾಶಾಸ್ತ್ರಿಗಳ (1868–1944) ಬಗ್ಗೆ ತಿಳಿದುಕೊಳ್ಳಲೇ ಬೇಕು. ರುದ್ರಪಟ್ಟಣದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಮೈಸೂರಿನ ಸಂಸ್ಕೃತ ಪಾಠಶಾಲಾದಲ್ಲಿ 1889ರಲ್ಲಿ ವಿದ್ವತ್ತ್, ಮದ್ರಾಸ್ ವಿಶ್ವವಿದ್ಯಾಲಯದಿಂದ 1891ರಲ್ಲಿ ಬಿಎ ಪದವಿಯನ್ನು ಪಡೆದರು. ಮೈಸೂರಿನ ದಿವಾನರಾಗಿದ್ದ ಶ್ರೀ ಶೇಷಾದ್ರಿ ಅಯ್ಯರ್ ಅವರ ಒತ್ತಾಯದ ಮೇರೆಗೆ ಸರ್ಕಾರದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಲೈಬ್ರೇರಿಯನ್ ಆಗಿ ಕೆಲಸಕ್ಕೆ ಸೇರಿದರು. ವೇದ, ವೇದಾಂಗ, ಶಾಸ್ತ್ರಿಯ ಸಂಸ್ಕೃತ, ಪ್ರಾಕೃತ, ಇಂಗ್ಲಿಷ್, ಕನ್ನಡ, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಪ್ರಭುತ್ವ ಸಾಧಿಸಿದರು. ಸಂಶೋಧನಾಲಯದಲ್ಲಿ ಸಹಸ್ರಾರು ತಾಡೋಲೆಗಳನ್ನು ಓದಿ, ಲಿಪ್ಯಂತರಗೊಳಿಸಿ, ಸಂರಕ್ಷಿಸತೊಡಗಿದರು.

1905, ಭಾರತದ ಇತಿಹಾಸದಲ್ಲಿ ಮಹತ್ತರ ತಿರುವು ಪಡೆದ ವರ್ಷ. ಪಾಶ್ಚಿಮಾತ್ಯ ವಿದ್ವಾಂಸರು ಭಾರತದ ಬೌದ್ಧಿಕ ಸಾಮರ್ಥ್ಯವನ್ನು ಹೀಗೆಳೆಯತ್ತಿದ್ದರು. ನಮ್ಮ ಬಗ್ಗೆ ಅವರಿಗೆ ಕೀಳು ಭಾವನೆ. ನಮಗೂ ಕೀಳರಿಮೆಯ ಕಾಟ. ಶಾಸ್ತ್ರಿಗಳ ಸಂಶೋಧನೆ, ಚರಿತ್ರೆಯ ಗತಿಯನ್ನು ಬದಲಿಸಿತು. ಹಲವಾರು ಪುರಾತನ ಕೃತಿಗಳು ಬೆಳಕು ಕಾಣತೊಡಗಿದವು. ಅವುಗಳು ಕೇವಲ ಸಾಹಿತ್ಯ ಕೃತಿಗಳು ಆಗಿರಲಿಲ್ಲ. ಖಗೋಳ , ಗಣಿತ, ಅರ್ಥ....ಮೊದಲಾದ ಶಾಸ್ತ್ರ ಸಾಹಿತ್ಯದ ಕೃತಿಗಳಾಗಿದ್ದವು .

1905ಕ್ಕಿಂತ ಮುಂಚೆ, ನಾವು ಕೌಟಿಲ್ಯನ ಅರ್ಥಶಾಸ್ತ್ರದ ಬಗ್ಗೆ ಕೇಳಿದ್ದೆವು. ದಂಡಿ, ಬಾಣ, ವಿಷ್ಣುಶರ್ಮ, ಮಲ್ಲಿನಾಥ ಸೂರಿ, ಮೆಗಸ್ತಾನೀಸ್.... ಮಂತಾದವರು ಈ ಬಗ್ಗೆ ಹೇಳಿದ್ದರು. ಆದರೆ ಶಾಸ್ತ್ರಿಗಳು 1905ರಲ್ಲಿ, ಪ್ರಥಮಬಾರಿಗೆ ಕೌಟಿಲ್ಯನ ಅರ್ಥಶಾಸ್ತ್ರದ ಓಲೆಗಳನ್ನು ಹುಡುಕಿ, ಓದಿ ಲಿಪ್ಯಂತರ ಮಾಡಿದರು. 1909ರಲ್ಲಿ ಸಂಸ್ಕೃತ ಆವೃತ್ತಿಯನ್ನು, 1919ರಲ್ಲಿ ಇಂಗ್ಲಿಷ್ ಅನುವಾದವನ್ನು ಪ್ರಕಾಶಪಡಿಸಿದರು. ಜಗತ್ತು ಶಾಮಾಶಾಸ್ತ್ರಿ ಅವರನ್ನು ಗುರುತಿಸಿತು. ಭಾರತದ ಬೌದ್ಧಿಕ ಸಾಮರ್ಥ್ಯವನ್ನು ಮೆಚ್ಚತೊಡಗಿತು.

ಶಾಮಾಶಾಸ್ತ್ರಿಗಳ ಸಾಧನೆ ಅಪಾರ. (ಈ ಲೇಖನದ ಮಿತಿಯಲ್ಲಿ ಎಲ್ಲವನ್ನೂ ಗುರುತಿಸಲು ಆಗುವುದಿಲ್ಲ.) ಹಾಗೆಯೇ ಗೌರವಗಳೂ ಬರತೊಡಗಿತು. 1919ರಲ್ಲಿ, ವಾಷಿಂಗ್ಟನ್ ಓರಿಯೆಂಟಲ್ ವಿಶ್ವವಿದ್ಯಾಲಯ, ಅದೇ ವರ್ಷ ಕಲ್ಕತ್ತಾ ವಿಶ್ವವಿದ್ಯಾಲಯಗಳು ಶಾಮಾಶಾಸ್ತ್ರಿಗಳಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿಕೊಂಡವು.

ಒಂದು ಘಟನೆಯನ್ನು ಹೇಳಿ ಮುಂದುವರೆಯುತ್ತೇನೆ.
ನಾಲ್ವಡಿ ಕೃಷ್ಣರಾಜ ಒಡೆಯರು ಜರ್ಮನಿಗೆ ಭೇಟಿಕೊಟ್ಟಿದ್ದಾಗ, ಅಲ್ಲಿನವರಿಗೆ, ಇವರು ಯಾವ ದೇಶದ ದೊರೆಯೆಂದು ಗೊತ್ತಾಗಲಿಲ್ಲವಂತೆ. ಕೊನೆಗೆ ಜರ್ಮನರೇ ನಾಲ್ವಡಿಯವರನ್ನು ಕೇಳಿದರಂತೆ "ನೀವು ಶಾಮಾಶಾಸ್ತ್ರಿಗಳ ಊರಿನವರಾ?" ಅಂತ. ಮೈಸೂರಿಗೆ ಮರಳಿದ ನಂತರ, ಮಹಾರಾಜರು ಶಾಮಾಶಾಸ್ತ್ರಿಗಳನ್ನು ಕರೆಸಿ, ಸನ್ಮಾನ ಮಾಡಿ, ಹೀಗೆಂದರು, "ಮೈಸೂರಿನಲ್ಲಿ ನಾವು ರಾಜರು, ನೀವು ಪ್ರಜೆಗಳು. ಆದರೆ ಜರ್ಮನಿಯಲ್ಲಿ ನೀವು ಘನವಂತರು, ಪ್ರಖ್ಯಾತರು. ನಿಮ್ಮ ಹೆಸರು ಮತ್ತು ಕೀರ್ತಿ ಅಪಾರ. ನಮಗೆ ಮತ್ತು ಮೈಸೂರಿಗೆ ನೀವು ಗೌರವ ತಂದಿರಿ," ಎಂದರಂತೆ.
ಶಂಕರರು ಹೇಳಿಲ್ಲವೇ ಪಂಡಿತರು "ಸ್ವದೇಶೇಷು ಧನ್ಯ ವಿದೇಶೇಷು ಮಾನ್ಯ" ಅಂತ.

ಇನ್ನು, ಇನ್ನೊಬ್ಬ ವ್ಯಕ್ತಿಯ ಬಗ್ಗೆ ಹೇಳಬೇಕು.
ಅಂದ ಹಾಗೆ, ಅರ್ಥವಾಯಿತು, ನಿಮ್ಮ ಪ್ರಶ್ನೆ... ಆ ಹುಡುಗ. ಏನಾದ !

03
ಸಂಕಲ್ಪ ಸಿದ್ಧಿ

ನಮಗೆಲ್ಲಾ ಕಣ್ಣು ತುಂಬಿಬಂದಿತ್ತು. ತ್ಯಾಗರಾಜರ ಆರಾಧನೆಯನ್ನು ಪದ್ಮನಾಭದಾಸರು ಅಪೂರ್ವವಾದ ರೀತಿಯಲ್ಲಿ ಮಾಡುತ್ತಿದ್ದರು. ಕಾವೇರಿಯ ತೀರದಲ್ಲಿ ಶ್ರಾದ್ಧ, ಶಾಸ್ತ್ರಬದ್ಧವಾಗಿ. ರಾಮ ಮಂದಿರದಲ್ಲಿ, ಸಂಗೀತ ನಿವೇದನೆಯಲ್ಲಿ. ತಾವೂ ಹಾಡಿದರು, ಜೊತೆಗೆ ಅವರು ತಯಾರು ಮಾಡಿರುವ ಸಂಗೀತ ಸಂಪನ್ನ ಶಿಷ್ಯವೃಂದ.

ಕೆಲವರು ಬದುಕಲ್ಲಿ ಅದ್ಭುತ ಸಾಧನೆಯನ್ನು ಮಾಡುತ್ತಾರೆ. ಆದರೆ ಅವರೊಬ್ಬರೆ "ಗೌರಿಶಂಕರ" ತಲುಪುತ್ತಾರೆ. ಅಂತಹವರನ್ನು ನಾವು ಗೌರವಿಸುತ್ತೇವೆ. ಆದರೆ ಇನ್ನು ಕೆಲವರು ತಮ್ಮ ಸಾಧನೆಯ ಜೊತೆಜೊತೆಗೆ ಇನ್ನೂ ಹಲವರನ್ನು, ಆಸಕ್ತರನ್ನು ಕೈ ಹಿಡಿದು ಕರೆದೊಯ್ಯುತ್ತಾರೆ. ತಾವು ಹಿಡಿದ ಪಂಜಿನ ಬೆಳಕಲ್ಲಿ

ದಾರಿ ತೋರುತ್ತಾರೆ, ಮಾತ್ರವಲ್ಲ ಇತರರ ಪಂಜನ್ನೂ ಬೆಳಗಿಸುತ್ತಾರೆ. ಹೀಗೆ ಪಂಜಿನಿಂದ ಪಂಜಿಗೆ ಪಂಜುಗಳ ಬೆಳಕು ಹತ್ತಿಕೂಳ್ಳುತ್ತಾ ಹರಡುತ್ತಾ ವಿಸ್ತರಿಸುತ್ತಾ ಹೋಗುತ್ತದೆ. ಗೌರಿಶಂಕರ ಎಲ್ಲರಿಗೂ ಹತ್ತಿರವಾಗುತ್ತದೆ. ನಮ್ಮ ಪದ್ಮನಾಭದಾಸರು ಇಂತಹ ಪರಂಪರೆಗೆ ಸೇರಿದವರು. ಶಿಷ್ಯ ವತ್ಸಲರು. "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ" ಎಂದು ಸಾರಿ, ಅನುಸರಿಸಿದ ಸಹಸ್ರಮಾನದ ಸಂತ ಸ್ವಾಮಿ ವಿವೇಕಾನಂದರ ನುಡಿಯನ್ನು ಅಕ್ಷರಶಃ ಪಾಲಿಸುತ್ತಿರುವ ಸಂಗೀತ ದೀವಟಿಗೆಯ ಸಂತ.

ಸಂಗೀತ ಸಮಾರಾಧನೆಯಾಯಿತು. ಋತ್ವಿಕರಿಗೆ ಭೂರಿಭೋಜನ, ಭಾರಿ ದಕ್ಷಿಣೆ. ಅದೇನು ಭಕ್ತಿ, ಅದೇನು ವಿನಮ್ರತೆ ನಿಷ್ಠೆ. ವ್ಯಕ್ತಿತ್ವಗಳು ಅರಳುವುದು ಸುಭಾಷಿತಗಳಿಂದಲ್ಲ, ಆ ಸುಭಾಷಿತಗಳನ್ನು ಅರಗಿಸಿಕೊಂಡು, ಅರ್ಥೈಸುವುದರಲ್ಲಿ. ಅವರನ್ನು ನೋಡಿ ಕಲಿಯುವುದು ಮಾಡಿ ನಲಿಯುವುದು ನಮ್ಮ ಭಾಗ್ಯವಾಗಬೇಕು.

ನಂತರ, ಸಾರ್ವಜನಿಕ ಭೋಜನ. ಅಗಲವಾಗಿ ಹರಡಿದ ಹಸಿರು ಬಾಳೆಎಲೆ. ಬಡಿಸುವ ಸ್ವಯಂಸೇವಕರ ಸಾಲುಸಾಲು. ನಾಲ್ಕಾರು ಪಲ್ಯಗಳು, ಕೂಟು, ಗೊಜ್ಜು, ಉಪ್ಪಿನಕಾಯಿ, ಕೋಸಂಬರಿಗಳು, ಹಪ್ಪಳ, ಸಂಡಿಗೆಗಳು, ಬಗೆಬಗೆಯ ಅನ್ನಗಳು, ಹಬೆಯಾಡುವ ಬಿಸಿಬಿಸಿ ಘಂ ಅನ್ನುವ ಅನ್ನ, ಮಿಳ್ಳೆ ಮಿಳ್ಳೆ ತುಪ್ಪ, ತೊವ್ವೆ, ತಿಳಿಸಾರು, ಹುಳಿ, ಮೊಸರು ಬಜ್ಜಿ, ಮಜ್ಜಿಗೆ, ಮೊಸರು, ಹಣ್ಣುಗಳು. ನನಗೆ ಖಾದ್ಯಗಳು ಎಷ್ಟೋ ಮರೆತು ಹೋಗಿದೆ. ಭಕ್ಷಗಳಂತೂ ಲೆಕ್ಕಕ್ಕೆ ಸಿಗದು. ಲಾಡು, ಮೈಸೂರುಪಾಕು, ತರತರದ ಉಂಡೆಗಳು, ಎರಡು ರೀತಿಯ ಪಾಯಸ, ಭರ್ಜರಿ ಹೋಳಿಗೆ. ಆ ರುಚಿಗೆ, ಪ್ರೀತಿಯಿಂದ ಬಡಿಸುವ ಪರಿಗೆ ನಾವು ಮನಸೋತು ಚೆನ್ನಾಗಿಯೇ ಉಂಡೆವು.

ಆ ವೇಳೆಗೆ ಪದ್ಮನಾಭ ದಾಸರು ಪ್ರತ್ಯಕ್ಷ. ಪ್ರತಿಯೊಬ್ಬರ ಹೆಸರನ್ನು ಕರೆದು, ಎದುರಿಗೆ ನಿಂತು "ಇವರಿಗೆ ಭಕ್ಷ್ಯ ಬಡಿಸಿ, ಆ! ಇವರಿಗೆ ಮತ್ತೊಂದು ಹೋಳಿಗೆ ಮತ್ತಷ್ಟು ತುಪ್ಪ... ಎಂತಹ ಉಪಚಾರವದು! ಪಂಕ್ತಿ ಭೇದವಿಲ್ಲದೆ, ಜಾತಿ ಭೇದವೆಣಿಸದೆ, ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸರ್ವಸಮಾನರು ಎಂಬ ತತ್ತ್ವವನ್ನು ಕಣ್ಣಾರೆ ತೋರಿಸಿದ ಸಂದರ್ಭವದು. ಊಟದಲ್ಲಿ ಮಗ್ನರಾಗಿದ್ದವರು ಅಕ್ಕಪಕ್ಕದವರೊಂದಿಗೆ ಹೇಳುತ್ತಿದ್ದರು, "ಪದ್ಮನಾಭರು ಎಲ್ಲಾ ಭಾರವನ್ನು ದೇವರ ಕರುಣೆಯ ಮೇಲೆ ಹಾಕುತ್ತಾರೆ. ತಾವು ನಿರ್ಭೀತವಾಗಿ, ನಿಸ್ಸಂಕೋಚವಾಗಿ, ನಿಸ್ಸಂದಿಗ್ಧವಾಗಿ ನಿಸ್ವಾರ್ಥವಾಗಿ ದುಡಿಯುತ್ತಾರೆ. ಅವರ ಎಲ್ಲಾ ಚಟುವಟಿಕೆಯೂ ಸಂಗೀತದ ಪೂಜೆಯಾಗಿದೆ."

ಊಟ, ವೀಳಯ, ತಾಂಬೂಲ. ನಂತರ ಪದ್ಮನಾಭರು ನಮ್ಮ ಜೊತೆಗೇ ಬಂದರು. ರಾಮ ಮಂದಿರದಿಂದ ಎರಡು ಹೆಜ್ಜೆಗೆ ತಂಬೂರಿಯಾಕಾರದ ಗೋಪುರ ಕಾಣುತ್ತಿದೆ. ಹಲವಾರು ಆಲಂಕಾರಿಕ ಗಿಡಗಳು ಹೂವಿನ ಗಿಡಗಳು ಇಲ್ಲಿದೆ. ಹೂವಿನ ಮಕರಂದವನ್ನು ಹೀರುವ ಜೇನ್ನೊಣಗಳು ಸಾಲು ಸಾಲುಗೂಡುಕಟ್ಟಿವೆ. ಹೂವಿನ ಸಂಗಡ ಸಂಗೀತದ ಮಕರಂದವೂ ಇಲ್ಲಿನ ಜೇನಿನಲ್ಲಿ ಸೇರಿದೆ ಎಂದರೆ ಆಶ್ಚರ್ಯವಲ್ಲ.

ನಮ್ಮದು ನೂರಾರು ಪ್ರಶ್ನೆಗಳು, ಕೆಲವನ್ನು ಕೇಳಿದೆವು, ಕೆಲವು ಮನಸ್ಸಿನಲ್ಲಿ ಉಳಿಯಿತು. ಆದರೆ ಎಲ್ಲಾ ಪ್ರಶ್ನೆಗಳನ್ನು ಅರಿತು ಪದ್ಮನಾಭರು ಉತ್ತರಿಸಿದರು.

ಹಾಸನವು ಬಹಳ ವಿಶಿಷ್ಠವಾದ ಜಿಲ್ಲೆ. "ಸಳ" ದಿಂದ "ಹೊಯ್" ಎಂದೆಸೆದು ಹುಲಿಯನ್ನು ಕೊಂದು ತನ್ನ ಗುರು "ಸುದತ್ತ"ರನ್ನು ಬದುಕಿಸಿಕೊಂಡ ಅಚ್ಚ ಕನ್ನಡದ ಉಚ್ಚರಾಜಕುಲ "ಹೊಯ್ಸಳ"ರು ಈ ಜಿಲ್ಲೆಯ ಭಾಗಭಾಗಗಳಲ್ಲಿ ಕಲೆಯನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಬೇಲೂರು, ಹಳೇಬೀಡು ಮತ್ತಿತರ ಅತ್ಯುನ್ನತ ಕಲಾಕೃತಿಗಳು ಇಲ್ಲಿದೆ. ವಿನಯಾದಿತ್ಯ, ವಿಷ್ಣುವರ್ಧನ, ವೀರಬಲ್ಲಾಳರಂತಹ ಮಹಾರಾಜರನ್ನೂ ಶಾಂತಳಾದೇವಿಯಂತಹ ನಾಟ್ಯರಾಣಿಯನ್ನೂ ಈ ಜಿಲ್ಲೆ ನೀಡಿದೆ. ಅಲ್ಲಾವುದ್ದೀನ್‌ನ ಸೇನಾಪತಿ ಮಲ್ಲಿಕಾಫರನಿಂದ ಹಳೆಬೀಡು ನಾಶವಾಯಿತು. ನಮ್ಮ ಜನ ಬೇಲೂರು ಉಳಿಸಿಕೊಂಡರು. 10 ರಿಂದ 14ನೆಯ ಶತಮಾನದವರೆಗೆ ಬಾಳಿದ ಹೊಯ್ಸಳ ರಾಜ್ಯವು ಮುಂದೆ ವಿಜಯನಗರ ಸಾಮ್ರಾಜ್ಯದ ಭಾಗವಾಗಿ ಸಂಗೀತ, ಸಾಹಿತ್ಯ ಕಲೆಗಳನ್ನು ಪೋಷಿಸಿತು. ಈ ಜಿಲ್ಲೆಯಲ್ಲಿ ಯಾವ ದಿಕ್ಕಿಗೆ ತಿರುಗಿದರೂ ಅಲ್ಲೊಂದು ಚೆನ್ನಕೇಶವನ ಮಂದಿರವು ಕಾಣುತ್ತದೆ. ಲಕ್ಷ್ಮೀ ಚೆನ್ನಕೇಶವನ ಮಂದಿರ ರುದ್ರಪಟ್ಟಣದಲ್ಲಿಯೂ ಇದೆ. ಆದರೆ ನಾನು ಇದುವರೆಗೂ ನಿಮಗೆ ಹೇಳದ ವಿಶಿಷ್ಟವಾದ ಮತ್ತೊಂದು ದೇವಸ್ಥಾನವು ಇಲ್ಲಿದೆ. ಅದುವೆ "ಸಪ್ತಸ್ವರ ದೇವತಾ ಧ್ಯಾನಮಂದಿರ".

ಅದು ಪದ್ಮನಾಭರ ಕನಸು. ರುದ್ರಪಟ್ಟಣದಲ್ಲಿ ಏನಾದರೂ ವಿಶೇಷವಾದ ಶಾಶ್ವತವಾದ ಕಾರ್ಯಮಾಡಬೇಕು ಎಂದು ಅವರಿಗೆ ಅನಿಸಿದ್ದು 2007ರಲ್ಲಿ. ಅವರು "ರುದ್ರಪಟ್ಟಣ ಸಂಗೀತೋತ್ಸವ ಟ್ರಸ್ಟ್"ನ ಅಧ್ಯಕ್ಷರು. ಸಂಗೀತದ ಮೂಲಕವೇ ತಮ್ಮ ಕನಸಿಗೆ ಅಭಿವ್ಯಕ್ತಿಯನ್ನು ಕೊಡಬೇಕೆಂಬ ಮನಸ್ಸು. ಹಗಲು ರಾತ್ರಿಯ ಚಿಂತನ ಮಂಥನದಲ್ಲಿ ಮೂಡಿದ್ದು "ಸಪ್ತಸ್ವರ ದೇವತಾ ಧ್ಯಾನ ಮಂದಿರ". ಎಲ್ಲೂ ಇರದ, ಎಲ್ಲದರಂತಿರದ ಸ್ಥಳ.

ಶಿಲ್ಪಕಲೆಯಲ್ಲಿ ಉತ್ತುಂಗಕ್ಕೇರಿದ ಹಾಸನದಲ್ಲಿ ದೇವಸ್ಥಾನ ಕಟ್ಟಿ ವೈಶಿಷ್ಟ್ಯವನ್ನು

ಮರೆಯುವುದು ಅಷ್ಟು ಸುಲಭವಲ್ಲ. ಆದರೆ ಈ ವೈಶಿಷ್ಟ್ಯ ತೋರುವುದು ಪದ್ಮನಾಭರ ಇಚ್ಛೆ. ಮನಷ್ಯನ ಸಾಧನೆಗೆ ಮುಖ್ಯವಾಗಿ ಬೇಕಾಗಿರುವುದು ಗುರಿ. ಅದನ್ನು ಸಾಕಾರಗೊಳಿಸುವ ಸಂಕಲ್ಪ. ಮತ್ತು ಗುರಿಯೆಡೆಗೆ ಸಾಗುವ ತುಡಿತ.

ಪದ್ಮನಾಭರಿಗೆ ಈ ಎಲ್ಲವೂ ಇತ್ತು, ಜೊತೆಗೆ ಗುರು ವಾದಿರಾಜರಲ್ಲಿ ಅನನ್ಯ ಭಕ್ತಿ, ನಂಬಿಕೆ. "ಎಲ್ಲಾ ಜವಾಬ್ದಾರಿ ಅವರದು, ನಾನೊಂದು ಮಾಧ್ಯಮ" ಎಂಬ ಸಮರ್ಪಣಾ ಭಾವ. ಕುವೆಂಪು ಹೇಳಿದರಲ್ಲಾ "ಕನ್ನಡಕ್ಕಾಗಿ ಕೈ ಎತ್ತು ಅದು ಅಕ್ಷಯವಾಗುತ್ತದೆ". ಸರಿ, ನಡೆಯೋಣ ಮುಂದೆ ಎಂದು.. ಕೈ ಎತ್ತಿ ಸಾಗಿದರು. ಜಯವಾಯಿತು.

ಮೇ ತಿಂಗಳ ಹದಿನೇಳು, ಎರಡು ಸಾವಿರದ ಎಂಟರಲ್ಲಿ ಪದ್ಮನಾಭದಾಸರ ಕನಸು ನನಸಾಯಿತು, ಸಂಕಲ್ಪ ಸಿದ್ಧಿಯಾಯಿತು.
"ಸಪ್ತಸ್ವರ ದೇವತಾ ಧ್ಯಾನ ಮಂದಿರ" ರುದ್ರಪಟ್ಟಣದಲ್ಲಿ ತಲೆ ಎತ್ತಿತ್ತು. ಇಡೀ ವಿಶ್ವದಲ್ಲಿಯೇ ಸಂಗೀತಕ್ಕಾಗಿ ಮೀಸಲಾದ, ವಿಶಿಷ್ಟವಾದ ಪೂಜಾ ಕೈಂಕರ್ಯದ ದೇವಾಲಯ.

ಅಂದಹಾಗೆ ಈ ಸಪ್ತಸ್ವರ ದೇವತಾ ಧ್ಯಾನ ಮಂದಿರದ ವೈಶಿಷ್ಟ್ಯ ಏನು?.
ಪದ್ಮನಾಭದಾಸರು ವಿವರಿಸಲು ತೊಡಗಿದರು.......

04
ಷಡ್ಜಾಂಬೆಯ ಮಗ್ಗುಲುಗಳಲ್ಲಿ

2001, ರುದ್ರಪಟ್ಟಣದ ಗೆಳೆಯರೆಲ್ಲ ಪ್ರತಿವರ್ಷ ಊರಲ್ಲಿ ಸೇರಿ, ಸಂಗೀತ ಕಾರ್ಯಕ್ರಮ ಮಾಡಬೇಕು ಅನ್ನಿಸಿ "ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್" ಸ್ಥಾಪಿಸಿದರು. ಪದ್ಮನಾಭರೇ ವಿಶ್ವಸ್ಥರು. 2005ರ ಮೇ ನಲ್ಲಿ ಐದು ದಿನಗಳ ಸಂಗೀತೋತ್ಸವ. ಒಂದು ದಿವಸ, ಬೆಳಗು 07.00 ಗಂಟೆಯಿಂದ 24 ಗಂಟೆಯ ಸತತ ಸಂಗೀತ ಪೂಜೆ. ಕೊನೆಯ ಕಾರ್ಯಕ್ರಮ ಪದ್ಮನಾಭರದು. ಸಭಾಂಗಣದಲ್ಲಿ ತುಂಬಿ ತುಳುಕುವ ಜನಸಂದಣಿ. ಇಂತಹ ಕುಗ್ರಾಮದಲ್ಲಿ ಸಂಗೀತ ಕೇಳಲು ಇಷ್ಟೊಂದು ಜನರು. ಆನಂದಕರ, ಸಮಾಧಾನಕರ ಅಪೂರ್ವ ಸಂದರ್ಭ. ಮನಸ್ಸಿನಲ್ಲಿ ಏನೋ ಅಂಕುರ. ಇಲ್ಲೇನೋ.. ಇದೆ !

2006 ರಲ್ಲಿ, ಸಂಗೀತ ಮಂದಿರದ ಸ್ಥಾಪನೆಯ ಇಂಗಿತ. 2006 ರಲ್ಲಿ ಸಂಕಲ್ಪ, ಶಿಷ್ಯರು, ಅಭಿಮಾನಿಗಳು ಕೈಜೋಡಿಸಿದರು. ರಾಮ ಲಂಕೆಗೆ ಸೇತುವೆ ಕಟ್ಟಿದಂತೆ.

ಅಲ್ಲಿ ಸೀತೆಗಾಗಿ ರಾಮಸೇತು, ಇಲ್ಲಿ ಸಂಗೀತ ಸರಸ್ವತಿ ಆರಾಧನೆಗೆ ಸಂಗೀತಸೇತು. ಶಾಸ್ತ್ರ, ವಾಸ್ತುಬದ್ಧವಾದ ರಚನೆ. 2008ರಲ್ಲಿ ಸಾಕಾರ.

ತಂಬೂರಿಯಾಕಾರ, ಗೋಪುರ 60 ಅಡಿ, ಒಟ್ಟು ಎಪ್ಪತ್ತು ಅಡಿ ಎತ್ತರ. ಗೋಪುರದ ಎರಡು ಭಾಗಗಳಲ್ಲಿ ಏಳು ಅಂಕಣಗಳಿವೆ. ಅಂದರೆ ಒಟ್ಟು ಹದಿನಾಲ್ಕು ಅಂಕಣಗಳು. ಒಂದೊಂದು ಅಂಕಣದಲ್ಲಿಯೂ ಕರ್ನಾಟಕ ಶಾಸ್ತ್ರೀಯ ಸಂಗೀತದ ವಾದ್ಯಗಳಿವೆ. ವಾದ್ಯಗಳನ್ನು ನುಡಿಸುವ ವಿನ್ಯಾಸವಿದೆ. ಎರಡು ಭಾಗಗಳಲ್ಲಿ 36+36=72 ನಕ್ಷತ್ರಗಳಿವೆ. ಅವು ಕರ್ನಾಟಕ ಸಂಗೀತದ 72 ಮೇಳಕರ್ತ ರಾಗಗಳನ್ನು ಸೂಚಿಸುತ್ತವೆ. ತಂಬೂರಿಯ ದಂಡಿ, ಹಲಗೆ, ನಾಲ್ಕು ತಂತಿಗಳು, ಬಿರಡೆಗಳು, ಕುದುರೆ. ಜೀವಾಳ, ಮಣಿಗಳು, ಬುರುಡೆ ಹೀಗೆ ತಂಬೂರಿಯ ಸರ್ವಾಂಗೀಣ ಲಕ್ಷಣಗಳನ್ನು ಹೊಂದಿದೆ. ಏಳು ಕೋನಗಳು, ಏಳು ಮೆಟ್ಟಿಲುಗಳು. ಏಳು ದೇವತೆಗಳು, ಏಳೇಳು ಅಂಕಣಗಳು, ಎಲ್ಲವೂ ಏಳು ಸಂಖ್ಯೆಯ ಮೇಲೆಯೇ ನಿರ್ಮಿತವಾಗಿರುವುದು ಇಲ್ಲಿನ ವಿಶೇಷ. ಗೋಪುರದಲ್ಲಿ ವಿವಿಧ ಪಕ್ಕವಾದ್ಯಗಳು, ಶ್ರೀ ಚಕ್ರದ ಆಕಾರ, ವಿಶಾಲವಾದ ಪ್ರಾಂಗಣ. ಹಲವು ಬಗೆಯ ಸಸ್ಯೋದ್ಯಾನ.

ದೇವಸ್ಥಾನವೇ ವಿಶಿಷ್ಟ. ಸಂಗೀತವೇ ಆದ್ಯತೆ. ಕಂಸದ ಆಕಾರದಲ್ಲಿ ದೇವಪೀಠಗಳು. ನಾದ ದೇವತೆ ಷಡ್ಜಾಂಬೆ ಸರಸ್ವತಿ ಮಧ್ಯದಲ್ಲಿ. ಎಡದಲ್ಲಿ, ಪುರಂದರರು, ವಾದಿರಾಜ ಸ್ವಾಮಿಗಳು, ಕನಕರು, ಬಲದಲ್ಲಿ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು. ಕರ್ನಾಟಕ ಸಂಗೀತ ಪರಂಪರೆಯನ್ನು ಕಟ್ಟಿದ ಮಹನೀಯರು, ಆದ್ಯರು, ಪ್ರಾಜ್ಞರು. ಗುರುಗಳು, ತ್ರಿಮೂರ್ತಿ ಸ್ವರೂಪರು.

ಪ್ರಶ್ನೆ ಎದುರಾಗಿತ್ತು. ಇವರುಗಳನ್ನೆ ಯಾಕೆ ಆರಿಸಿದಿರಿ?

ಪದ್ಮನಾಭರು, ಒಂದು ಕ್ಷಣ ಮೌನ; ಧ್ಯಾನ್ಯಮಗ್ನ. ನಂತರ ನಕ್ಕು ಹೇಳಿದರು. ಇಂದಿಗೆ ಕರ್ನಾಟಕ ಸಂಗೀತ ಉಳಿದಿದೆ, ಬೆಳೆದಿದೆ ಎಂದರೆ, ಈ ಮಹನೀಯರದೇ ದೊಡ್ಡ ಕಾಣಿಕೆ, ಅವರ ತಪಸ್ಸು, ನಮಗೆ ಸಂಗೀತ ಸುಖ ಸಿಕ್ಕಿದೆ.

ಮಧ್ಯದಲ್ಲಿ, ಸರಸ್ವತಿ ಇದ್ದಾಳೆ. ಸಂಗೀತ ಸಾಹಿತ್ಯ, ... ಇತ್ಯಾದಿ ಸಮಸ್ತ ಬೌದ್ಧಿಕ ಶಕ್ತಿಗಳ ಮೂಲ. "ಸ" ..ಷಡ್ಜದಲ್ಲಿ.

ಎಡ ಪಕ್ಕದಲ್ಲಿ, ಪುರಂದರರು. "ರಿ" ರಿಶಭದಲ್ಲಿ. ಮನಶ್ಶುದ್ಧಿಯೇ ಅವರ ಮಂತ್ರ. ಜಾತಿ, ಮತ, ಮೇಲು ಕೀಳುಭಾವಗಳನ್ನು ದಾಟಿದ ಮಹಾನುಭಾವ. ಕರ್ನಾಟಕ

ಸಂಗೀತಕ್ಕೆ ಮಾರ್ಗವನ್ನು ತೋರಿದ ದಾರ್ಶನಿಕ. ಹಾಡುವುದು ಹೇಗೆ ಎಂದು ಹಾಡಿ, ಭಕ್ತಿಯ ನರ್ತನವೆಂತಹುದೆಂದು ನರ್ತಿಸಿ ತೋರಿಸಿದವರು. ಸುಮಾರು 475000 ಕೀರ್ತನೆಗಳು. ಲಕ್ಷಾಂತರ ಕೀರ್ತನೆಗಳು ಸಿಕ್ಕಲೇ ಇಲ್ಲ. ಅವರು ಹಾಡುತ್ತಲೇ ಹೋದರು. ಬರೆಯಲಿಲ್ಲ. ಅವರ ಅಂಕಿತ ಅವರದಾಗಿರಲಿಲ್ಲ. ವಿಠಲನದೇ ಆಗಿತ್ತು. ಭಕ್ತಿ–ಭಾವಗಳು ಏಕೀಭವಿಸಿದ ಅನುಭಾವಿ ಅವರು. ಬಹುಶಃ ವಿಜಯದಾಸರು ಹುಟ್ಟದೆ ಇದ್ದರೆ ಪುರಂದರರು ಯಾರು ಎಂದು ಜಗತ್ತಿಗೆ ತಿಳಿಯುತ್ತಿರಲಿಲ್ಲ. (ಪುರಂದರರ ಮಕ್ಕಳೂ ದಾಸತ್ವವನ್ನು ಸ್ವೀಕರಿಸಿ ಪುರಂದರರ ಕೀರ್ತನೆಗಳನ್ನು ಸಂಗ್ರಹಿಸಿದ್ದಾರೆ)

ಸಂಗೀತಕ್ಕೆ ಸಮೃದ್ಧ ಸಾಹಿತ್ಯವನ್ನು ಜೋಡಿಸಿ, ವಾದ್ಯಗಳನ್ನು ಬಳಸಿದರು, ಪ್ರಯೋಗಗಳನ್ನು ಮಾಡಿದರು. ನೂರಾರು ರಾಗಗಳು.

ಹರಿದಾಸ ಪಂಥದ ಪ್ರಧಾನ ಉದ್ದೇಶ ಭಕ್ತಿಯ ಪ್ರಚಾರ. ಅದರೊಡನೆ ಸಮಾಜದ ಓರೆಕೋರೆಗಳನ್ನು ತಿದ್ದುವುದೂ ಪುರಂದರರಿಗೆ ಮುಖ್ಯವಾಯಿತು. ಅವರು ಪ್ರಯತ್ನಿಸಿದರು, ಜಟಿಲ ಸಮಾಜದ ಕಂದಾಚಾರಗಳನ್ನು ನಿರ್ಭಿಡೆಯಿಂದ ಖಂಡಿಸಿದರು. ಕಳೆದು ಹೋಗುತ್ತಿದ್ದ 2000 ವರ್ಷಕ್ಕೂ ಪ್ರಾಚೀನವಾದ ಕರ್ನಾಟಕ ಸಂಗೀತವನ್ನು ಪುನರುಜ್ಜೀವನಗೊಳಿಸಿದರು. ಮುಂದಿನ ಜನಾಂಗಕ್ಕಾಗಿ ಸಂಗೀತಪಠ್ಯವನ್ನು ಪುರಂದರರು ರೂಪಿಸಿದರು. ಮಕ್ಕಳಿಗೆ ಸಂಗೀತ ಪಾಠವನ್ನು ಕಲಿಸುವುದನ್ನು ಸುಲಲಿತಗೊಳಿಸಿದ ಪುರಂದರರ ಬಗ್ಗೆ ಶ್ರೀ ಆರ್ ಕೆ ಪಿ ಅವರು "ಪುರಂದರದಾಸರು ಕರ್ನಾಟಕ ಸಂಗೀತದ ಪಿತಾಮಹರೆ? ರೇ." ಎಂಬ ಪ್ರೌಢ ಕೃತಿಯಲ್ಲಿ ಹೀಗೆ ಹೇಳುತ್ತಾರೆ. "....ಈ ಪ್ರಕಾರವಾಗಿ ಖರಹರಪ್ರಿಯಕ್ಕಿಂತ ಮಾಳವಗೌಳ ಅಭ್ಯಾಸಗಾನ ಅಥವಾ ಬಾಲಪಾಠಕ್ಕೆ ಸೂಕ್ತವಾದ ರಾಗ ಎಂಬುದನ್ನು ಪುರಂದರ ಸಂಶೋಧನೆ ಖಚಿತಪಡಿಸುತ್ತದೆ. ಹಾಗೆಂದಾಕ್ಷಣ ಖರಹರಪ್ರಿಯ ರಾಗಕ್ಕೆ ಮನ್ನಣೆ ಇಲ್ಲ ಎಂದಲ್ಲ. ಇದರ ನಿರೂಪಣೆಗೆ, ಗ್ರಹಿಕೆಗೆ, ಸ್ವಲ್ಪವಾದರೂ ಪ್ರೌಢತ್ವ ಬೇಕಾಗುತ್ತದೆ. ಇದರ ಜೊತೆಗೆ ಮಾಳವಗೌಳದ ಸಪ್ತಸ್ವರಗಳು ಸಂಪೂರ್ಣ ಸಾತ್ವಿಕ ಭಾವವನ್ನು ಸೃಷ್ಟಿಸುತ್ತದೆ. ಹಾಗಾಗಿ ಮಕ್ಕಳ ಮೆದುಳಿನ ಮೇಲೆ ಯಾವುದೇ ಒತ್ತಡವಿದ್ದರೂ, ಅದು ಸಡಿಲಗೊಂಡು, ಸ್ವರದ ಆತ್ಮೀಯಭಾವವನ್ನು ಮಕ್ಕಳ ಮೆದುಳು ಅಹ್ವಾನಿಸುತ್ತದೆ. ವಿದ್ಯೆ ಮನದಟ್ಟಾಗಬೇಕಾದರೆ ನಾವು ಬುದ್ಧಿ ಮನಸ್ಸನ್ನು ಈ ಸ್ಥಿತಿಗೆ ತೆಗೆದುಕೊಂಡು ಹೋಗಬೇಕು. ಈ ಮಹತ್ಕಾರ್ಯವನ್ನು ಪುರಂದರರು ಮಾಡಿದ್ದು. ಪುರಂದರರ ಈ ಪರಿಕಲ್ಪನೆ (concept) ಸಾಮಾನ್ಯವಾದುದಲ್ಲ. ಇಡೀ ಶಿಕ್ಷಣ ಕ್ಷೇತ್ರವನ್ನು ಬೆರಗುಗೊಳಿಸುವಂತಹ ವಿಚಾರ."

"ಈ ಪ್ರಶ್ನೆ ನನ್ನನ್ನೂ ಕಾಡುತ್ತಿದೆ. ಪುರಂದರರು ನಿಜವಾಗಿಯೂ ಕರ್ನಾಟಕ

ಸಂಗೀತ ಪಿತಾಮಹರೇ?" ಯಾರದೋ ಮುಗ್ಧ ಪ್ರಶ್ನೆ.
ಪದ್ಮನಾಭರೆಂದರು "ಅದರಲ್ಲೇನು ಅನುಮಾನ. ಪುರಂದರರು ಹಾಕಿಕೊಟ್ಟ ಪಠ್ಯಕ್ರಮಗಳು ನೂರಾರು ವರ್ಷ ಕಳೆದರೂ ಬದಲಾಗಿಲ್ಲ. ತ್ಯಾಗರಾಜರೂ ಸೇರಿದಂತೆ, ಪುರಂದರರ ನಂತರದ ದಾಸವರೇಣ್ಯರೆಲ್ಲರೂ ಪುರಂದರರಿಗೆ ಪಿತಾಮಹನ ಗೌರವ ಕೊಟ್ಟಿದ್ದಾರೆ. ಅವರ ಹಾದಿಯಲ್ಲಿ ನಡೆದಿದ್ದಾರೆ. ಈ ವಿಚಾರವನ್ನು ಸತ್ಯದ ನಿಕಷಕ್ಕೆ ಒಡ್ಡಿ ನಾನು ಈಗಾಗಲೇ ಹೇಳಿದ ಕೃತಿಯಲ್ಲಿ ಬರೆದಿದ್ದೇನೆ. ಅವಕಾಶ ಮಾಡಿಕೊಂಡು ಓದಿ." ನಗು ಅನುರಣಿಸಿತು.

ಮುಂದುವರೆದು ಪದ್ಮನಾಭರೆಂದರು "ಪುರಂದರರು 40 ವರ್ಷ ಸೀನಪ್ಪ ನಾಯಕನಾಗಿ, ವರ್ತಕನಾಗಿ ಬದುಕಿದರು. ಸಂಸಾರಿಗರಾಗಿದ್ದರು. ಸಂಗೀತವನ್ನೂ ಕಲಿತು ಅಭ್ಯಸಿಸುತ್ತಿದ್ದರು. ನಾಣ್ಯಕ್ಕೆ ನಾಣ್ಯ ಕೂಡಿಸಿ "ನವಕೋಟಿ ನಾರಾಯಣ" ಆದರು. ಆದರೆ ಯಾವಾಗ ಗುರುವಿನ ಕೃಪೆ ಆಯಿತೋ ಆ ಘಳಿಗೆಯೇ ಜೋಳಿಗೆಯನ್ನು ಹಿಡಿದು ಮಾಳಿಗೆಯನ್ನು ತೊರೆದರು. ಪುರಂದರ ವಿಠಲನನ್ನು ಸಾಮಾನ್ಯರಲ್ಲಿ ಕಂಡರು.

ವ್ಯಾಸತೀರ್ಥರು ತಮ್ಮ ನಂತರ ಮಠದ ಪೀಠವನ್ನು ವಹಿಸಿಕೊಳ್ಳಲು ಕೇಳಿದಾಗ ಪುರಂದರರು ವಿನಮ್ರತೆಯಿಂದ ಬೇಡವೆಂದರು. ಅವರಿಗೆ "ರಂಗನನಾಮ"ವೊಂದೇ ಸಾಕಾಗಿತ್ತು. ವ್ಯಾಸಕೂಟವಲ್ಲ ಅವರದು ದಾಸಕೂಟ. ಸರ್ವತಂತ್ರ ಸ್ವತಂತ್ರರು ಅವರು.

ಅವರ ಊರು ಪುರಂದರಗಢವಲ್ಲ. ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ "ಆಗರ". ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪದ್ಮನಾಭರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಪುರಂದರರ ಊರು ಯಾವುದು ಎಂದು ಗುರುತಿಸಲು ಹೇಳಿತ್ತು. ಅದರ ಫಲ "ಆಗರ"ದ ಸಂಶೋಧನೆ.

"ಅಂದಹಾಗೆ ಪದ್ಮನಾಭರೆ, ನೀವು ಪುರಂದರರ ನಾಟಕವನ್ನು ಮಾಡಿರುವಿರಲ್ಲ."
"ಹೌದು. ಅದೊಂದು ಮಹತ್ತರ ಸನ್ನಿವೇಶ. ಹಲವು ಸಂಗೀತ ದಿಗ್ಗಜರ ಬಗೆಗಿನ ನಾಟಕಗಳಲ್ಲಿ ನಾನು ಪಾತ್ರಮಾಡಿರುವೆ. ಮುಂದೊಮ್ಮೆ ವಿವರವಾಗಿ ಮಾತನಾಡುವೆ" ಎಂದರು.

05
ಸತ್ಯಸುನಾದದ ಕದವನು ತೆರೆದು....

॥ ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ॥
॥ ವಾದಿರಾಜಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್॥

ಪದ್ಮನಾಭದಾಸರ ಕಂಚಿನ ಸುಶ್ರಾವ್ಯ ಕಂಠದಿಂದ ವಾದಿರಾಜ ಶ್ಲೋಕ ಹರಿದು ಬಂತು. ಕಣ್ಣಾಲಿಗಳು ತುಂಬಿದ್ದವು. ಬಹಳ ಭಾವುಕರಾಗಿದ್ದರು. "ನಾನಿಲ್ಲಿ ಇವತ್ತು ಇದೀನಿ ಅಂದ್ರೆ, ಅದಕ್ಕೆ ವಾದಿರಾಜರ ಆಶೀರ್ವಾದವೇ ಕಾರಣ. ಕ್ಷಣಕ್ಷಣದಲ್ಲೂ ನನ್ನ ಕಣಕಣದಲ್ಲಿ ವಾದಿರಾಜರೆ ತುಂಬಿದ್ದಾರೆ. ನನ್ನ ಬದುಕಿಗೆ ಒಂದು ಮಹತ್ವದ ತಿರುವನ್ನು ನೀಡಿ, ಈಗ ಪ್ರತಿ ಹಂತವನ್ನು ನಿರ್ದೇಶಿಸುತ್ತಿದ್ದಾರೆ. ಅವರು ನನ್ನ ಮಾನಸಿಕ ಗುರುಗಳು." ಕಣ್ಣಾಲಿಗಳಲ್ಲಿ ತುಳುಕಿ ನಿಧಾನವಾಗಿ ಕಂಬನಿ ಕಪೋಲಗಳಲ್ಲಿ ಜಾರತೊಡಗಿತ್ತು.

ದಾಸರು ಮುಂದುವರೆಸಿದರು .. "ಒಮ್ಮೆ ಜಯನಗರದ ವಿಜಯಾ ಕಾಲೇಜಿಗೆ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. 1987 ಇರಬಹುದು." "ವಾದಿರಾಜರ ಕೃತಿಗಳು" ಎಂಬ ಪುಸ್ತಕವನ್ನು ನೆನಪಿನ ಕಾಣಿಕೆಯಾಗಿ ನೀಡಿದ್ದರು. ಒಂದು ರೀತಿಯಲ್ಲಿ ನೆನಪಿನ ಕಾಣಿಕೆಯೇ ಆಯಿತು. ನನ್ನ ಸಂಗೀತಪಥವನ್ನು ಈ ಪುಸ್ತಕ ನೆನಪಿಸಿತು. ತನ್ಮೂಲಕ ಸಮಾಜ "ಋಣ" ದ ಕಾಣಿಕೆಯನ್ನು ತೀರಿಸುವಂತಾಯ್ತು". ನಮಗೆ ಕುತೂಹಲ. ಪುಸ್ತಕಗಳು ಬದುಕನ್ನು ಬದಲಿಸುತ್ತವೆ ಎಂದು ಕೇಳಿದ್ದೇವೆ. ಇಲ್ಲೊಬ್ಬ ಸುವಿಖ್ಯಾತ ವ್ಯಕ್ತಿ, "ಅಂತಹ ಘಟನೆಗೆ ನಾನೇ ಸಾಕ್ಷಿ" ಅನ್ನುತ್ತಿದ್ದಾರೆ.

"ಪುಸ್ತಕವನ್ನು ಕಪಾಟಿನಲ್ಲಿಟ್ಟಿದ್ದೆ. 1989 ರ ಒಂದು ಸಂಜೆ. "ವಾದಿರಾಜರ ಕೃತಿಗಳು" ಕಾಣಿಸಿತು. ಆ ಪುಸ್ತಕ ನನ್ನನ್ನು ತಕ್ಷಣವೇ ಆಕರ್ಷಿಸಿತಲ್ಲದೆ "ಇಷ್ಟು ವರ್ಷಗಳು ಸಂಗೀತ ಪ್ರಪಂಚದಲ್ಲಿದ್ದೀಯೇ, ನಾನಾರೆಂದೇ ನಿನಗೆ ತಿಳಿದಿಲ್ಲವಲ್ಲ"ವೆಂದು ಅಣಕಿಸಿದಂತಾಯಿತು. ಆ ಗ್ರಂಥವನ್ನು ಕೈಗೆ ತೆಗೆದುಕೊಂಡೆ. ತಕ್ಷಣವೇ ನನ್ನ ಇಡೀ ದೇಹದಲ್ಲಿ ಏನೋ ಒಂದು ಅಗೋಚರ ಚೈತನ್ಯ ಪ್ರವೇಶಿಸಿದ ಅನುಭವವಾಯ್ತು. ಅದು ಶಕ್ತಿಯೋ, ಭಾವನೆಯೋ, ಭ್ರಮೆಯೋ, ಅಂತೂ ಅನಿರ್ವಚನೀಯ. ಅಲ್ಲಿ ಭಾವನೆಗಳ ಅಭಿವ್ಯಕ್ತತೆಗೆ ಅವಕಾಶವೇ ಇರಲಿಲ್ಲ. ಒಂದು ನಿಮಿಷ ನಾನು ನಾನಾಗಿರಲಿಲ್ಲ. ನಂತರ ಆ ಗ್ರಂಥದ ಪುಟಗಳನ್ನು ನೋಡುತ್ತಾ ಹೋದಾಗ ಒಂದು ಕಡೆ ನನ್ನ ಕೈ ನಿಂತುಹೋಯಿತು. ಆ ಪುಟದಲ್ಲಿ "ನಾರಾಯಣ ಎನ್ನಿರೋ ಸಜ್ಜನರೆಲ್ಲ" ಎಂಬ ವಾದಿರಾಜ ಸ್ವಾಮಿಗಳ ದೇವರನಾಮದ ದರ್ಶನವಾಯಿತು. ತಕ್ಷಣವೇ ರೋಮಾಂಚನವಾಯಿತು. ಕಾಣಲಸಾಧ್ಯವಾದದ್ದು ಸಾಧ್ಯವಾಯಿತು. ಅಂದಿನ ತನಕ ನನಗೆ ವಾದಿರಾಜ

ಸ್ವಾಮಿಗಳ ಒಂದು ದೇವರನಾಮವೂ ಬರುತ್ತಿರಲಿಲ್ಲ. ಅಂದು ನನಗೆ ಅದ್ಭುತ ಅನುಭವ. ಆ ದೇವರನಾಮವನ್ನು ನೋಡಿದಾಕ್ಷಣ ಕೈಯಲ್ಲಿದ್ದ ಲೇಖನಿ ಬರವಣಿಗೆಗಾಗಿ ಚಡಪಡಿಸಿದಂತಿತ್ತು. ಕೂಡಲೇ ಹಂಸಧ್ವನಿ ರಾಗದಲ್ಲಿ ಈ ಕೃತಿ ಮೂಡಿಬಂತು. ಅದಕ್ಕೆ ವರ್ಣಮಟ್ಟನ್ನು ಸಿದ್ಧಪಡಿಸಿದೆ. "ಹಯವದನ" ಎಂಬ ಅಂಕಿತದ ಶಕ್ತಿ ದೇಹ ಮತ್ತು ಮನಸ್ಸನ್ನು ಆವರಿಸಿ, ನನ್ನನ್ನು ಯಾವುದೋ ಒಂದು ಭಾವನಾ ಪ್ರಪಂಚಕ್ಕೆ ಎಳೆದುಕೊಂಡು ಹೋಯಿತು. ಅಲ್ಲಿಂದ ಹೊರಬರಲು ಸ್ವಲ್ಪ ಗಂಟೆಗಳೇ ಬೇಕಾಯಿತು. ಇದು ಕನಸಾಗಿರಲಿಲ್ಲ, ನನಸಾಗಿತ್ತು. ವಾದಿರಾಜ ಸ್ವಾಮಿಗಳ ದರ್ಶನ ನನಗೆ ಅವರ ಕೃತಿಯಿಂದ ಆದದ್ದು ನನಗೆ ಆಶ್ಚರ್ಯವೂ, ಆನಂದವೂ ಆಯಿತು. ಆ ದಿವ್ಯ ಚೈತನ್ಯಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ಎಲ್ಲೋ ದೂರದಲ್ಲಿ ಬಹಳ ಆತ್ಮೀಯವಾದ ದನಿ "ಏಳು ಭಕ್ತ, ಇಂದಿನಿಂದ ನಿನ್ನ ಬದುಕಿನ ಹೊಸ ಅಧ್ಯಾಯ ಪ್ರಾರಂಭಿಸಿದೆ, ನಿನಗೆ ಮಂಗಳವಾಗಲಿ" ಎಂದು ಹೇಳಿದಂತಹ ಭಾವನೆ ನನ್ನ ಮನಸ್ಸಿನಲ್ಲಾಯಿತು. ಗುರುಗಳ ಆಶೀರ್ವಾದದ ಅನುಗ್ರಹದ, ಅಕ್ಷತೆ ಸಿಕ್ಕಿದ ಮೇಲೆ ನನಗೇತರ ಭಯ. ರಾತ್ರಿ ನನಗೆ ನಿದ್ರೆ ಬರಲಿಲ್ಲ. ಊಟ ಬೇಕಿಲ್ಲ. ಮಾತು ಬೇಕಿಲ್ಲ. ಗುರುಗಳ ಚಿತ್ರಣವನ್ನು, ಅವರ ವ್ಯಕ್ತಿತ್ವವನ್ನು ನಾನೇ ಚಿತ್ರಿಸಿಕೊಂಡೆ. ಕಣ್ಣುಬಿಟ್ಟರೂ ಅದೇ ದಿವ್ಯರೂಪ, ಮುಚ್ಚಿದರೂ ಅದೇ ದಿವ್ಯರೂಪ. ಇಡೀ ದೇಹವೇ ವಾದಿರಾಜಮಯವಾಗಿತ್ತು. ಅಷ್ಟರಮಟ್ಟಿಗೆ ಗುರುಗಳು ನನ್ನ ಮೇಲೆ ಪ್ರಭಾವವನ್ನು ಬೀರಿದ್ದರು. ಕೇವಲ ಒಂದೆರಡು ಸೆಕೆಂಡುಗಳಲ್ಲಿ ಎಂತಹ ಅದ್ಭುತ ಬದಲಾವಣೆ ! ನಂಬಲಾಗದ್ದು, ಆದರೂ ನಂಬಬೇಕು. ಏಕೆಂದರೆ ಇದು ನನ್ನದೇ ಆದ ಅನುಭವ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅದರ ಅವಶ್ಯಕತೆಯೂ ಇಲ್ಲ." (ಆರ್ ಕೆ ಪದ್ಮನಾಭ ಅವರ "ನೆನಪಿನಂಗಳದಲ್ಲಿ" ಕೃತಿಯಿಂದ ಉದ್ಧೃತ)

"ಸಪ್ತಸ್ವರ ದೇವತಾ ಧ್ಯಾನ ಮಂದಿರದಲ್ಲಿ, ವಾದಿರಾಜರು ಪುರಂದರರ ಪಕ್ಕದಲ್ಲಿಇದ್ದಾರೆ. ಗ ಸ್ವರ "ಗಾಂಧಾರ" ಅವರ ಸ್ಥಾನ. 1480 ರಲ್ಲಿ ಜನಿಸಿದರು. ಎಂಟನೆಯ ವಯಸ್ಸಿನಲ್ಲಿ ಸನ್ಯಾಸ ಸ್ವೀಕರಿಸಿದರು. ಮರಣ 1600 ರಲ್ಲಿ. 120 ವರ್ಷದ ಬದುಕಲ್ಲಿ 112 ವರ್ಷ ಸನ್ಯಾಸ. ಬಹುತೇಕ ದಾಖಲೆ ಇರಬೇಕು. ಸರಳ ಕನ್ನಡದಲ್ಲಿ ಕೃತಿಗಳನ್ನು ರಚಿಸಿ ಕರ್ನಾಟಕ ಸಂಗೀತಕ್ಕೆ ಭದ್ರ ಬುನಾದಿಯನ್ನು ಹಾಕಿದರು. ತುಳು ಪಾಡ್ದನಗಳನ್ನು ರಚಿಸಿದರು. ಅವರೊಬ್ಬ ಕ್ರಾಂತಿಕಾರಿ ಸಂಗೀತ ಯೋಗಿ. "ಕುಡುಮ"ಕ್ಷೇತ್ರಕ್ಕೆ "ಧರ್ಮಸ್ಥಳ"ವೆಂದು ಹೆಸರಿತ್ತವರು ಅವರೇ. ಉಡುಪಿಯ ಈಗಿನ ಪರ್ಯಾಯವನ್ನು ರೂಪಿಸಿದವರು ವಾದಿರಾಜರೆ. ಮುಂದೆ ವಾದಿರಾಜರ ಪವಾಡಗಳು ನನ್ನ ಬದುಕಿನಲ್ಲಿ ಬಹಳಷ್ಟು ಆಯಿತು. ಸಂದರ್ಭ ಬಂದಾಗ ಹೇಳುತ್ತೇನೆ. ಅವರು ನನ್ನಿಂದ ಮಹತ್ತರ ಕೆಲಸಗಳನ್ನು ಮಾಡಿಸಿದ್ದಾರೆ." ಎಲ್ಲರೂ ಮೂಕವಾಗಿ ಧ್ಯಾನಸ್ಥರಾಗಿ ಕೇಳುತ್ತಿದ್ದೆವು. ಪದ್ಮನಾಭರು ಹೇಳಿದರು. ವಾದಿರಾಜರ ಪಕ್ಕದಲ್ಲಿ ಇರುವವರೆ "ಕನಕದಾಸರು."

06
ನಾನು ಹೋದರೆ ಹೋಗಬಹುದು

"ವಾದಿರಾಜರ ಪಕ್ಕದಲ್ಲಿ ಇರುವವರೆ ಕನಕದಾಸರು", ಎಲ್ಲಿಯ ವಾದಿರಾಜ, ಎಲ್ಲಿಯ ಕನಕ ಎಂದು ಅನ್ನಿಸುವುದಿಲ್ಲವೆ.

112 ವರ್ಷಗಳು ಸರ್ವಸಂಗ ಪರಿತ್ಯಾಗಿಯಾಗಿ "ಹಯವದನ"ನನ್ನು ಆರಾಧಿಸಿದ, ಸ್ವತಃ ವಿಷ್ಣು, ಹಯರೂಪಿಯಾಗಿ ಬಂದು, ವಾದಿರಾಜರು ಶಿರದಲ್ಲಿಟ್ಟು ಅರ್ಪಿಸಿದ ನೈವೇದ್ಯವನ್ನು ಸ್ವೀಕರಿಸುತ್ತಿದ್ದ. ಅಂತಹ ಮಹಾನುಭಾವರ ಪಕ್ಕ ಕನಕನೇ ಅನ್ನಬೇಡಿ. "ಆತನೊಲಿದ ಮೇಲೆ ಇನ್ಯಾತರ ಕುಲವಯ್ಯ" ಎಂದು ಸಾರಿದ ಅನುಭಾವಿ. ಉಡುಪಿಯ ಕೃಷ್ಣ, ಪವಾಡ ಸದೃಶ್ಯವಾಗಿ ಹಿಂದು ಮುಂದಾಗಿ ತಿರುಗಿ ಕಿಂಡಿಯಲ್ಲಿ ದರ್ಶನವಿತ್ತನಂತೆ, ಈ ಭಕ್ತಿಪಂಥದ ಹರಿದಾಸ, ಕೀರ್ತನ ಶಿರೋಮಣಿ, ಸಂಗೀತಕಾರ, ವಾಗ್ಗೇಯಕಾರ, ತತ್ತ್ವಜ್ಞಾನಿ, ಸಂಘಟಕ, ಸಮಾಜಪರ ಚಿಂತಕ, ಅಸಮಾನತೆಯ ವಿರುದ್ದ ಸಿಡಿದೆದ್ದ ಸಂತ, ಕವಿ, ಆತ್ಮಜ್ಞಾನಿ ಕನಕದಾಸರಲ್ಲದೆ ಇನ್ಯಾರು ಅಲ್ಲಿರಲು ಸಾಧ್ಯ.

ಒಂದು ಕ್ಷಣ ಸಾವಧಾನಿಸಿ ಪದ್ಮನಾಭರು ಮುಂದುವರೆಸಿದರು, "ಕನಕರು 1509 ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ನೂರು ವರ್ಷ ಬಾಳಿದರು. ಅವರ ತಂದೆ ಬೀರಪ್ಪ ಡಣ್ಣಾಯಕ. ತಿರುಪತಿ ತಿಮಪ್ಪನ ಪರಮ ಭಕ್ತ. ಹರಕೆಗೆ ಉತ್ತರವಾಗಿ ಹುಟ್ಟಿದ ಮಗನಿಗೆ ತಿಮ್ಮಪ್ಪ ನಾಯಕ ಎಂದು ಹೆಸರಿಟ್ಟರು.

ಯುದ್ಧವಿದ್ಯೆಯ ಜೊತೆಗೆ ತಿಮ್ಮಪ್ಪ ಕಲಿತಿದ್ದು ವ್ಯಾಕರಣ, ತರ್ಕ, ಮಿಮಾಂಸೆ, ಸಾಹಿತ್ಯ. ದಾಸರಾಗುವ ಮುನ್ನವೇ ಕೃಷ್ಣಚರಿತೆಯಾದ "ಮೋಹನತರಂಗಿಣಿ"ಯನ್ನು ರಚಿಸಿದ ಕವಿ. ತಂದೆಯ ನಂತರ ಡಣ್ಣಾಯಕನಾದ ತಿಮ್ಮಪ್ಪನಿಗೆ, ಬಾವಿ ಅಗೆಯುವಾಗ ಚಿನ್ನ ಸಿಕ್ಕಿತಂತೆ. ಆದ್ದರಿಂದಲೇ ಕನಕನಾಯಕನಂತೆ, ನಂತರ ಕನಕದಾಸರಾದರಂತೆ. ಯುದ್ಧವೊಂದರಲ್ಲಿ ಗಾಯಗೊಂಡು ಬದುಕಿದ್ದೇ ಹೆಚ್ಚಾಯಿತು. ಕಾಗಿನೆಲೆ ಆದಿಕೇಶವನ ಕೃಪೆಯಿಂದಲೇ ಬದುಕಿದ್ದು ಎಂದು ಭಾವಿಸಿ ವೈರಾಗ್ಯಹೊಂದಿ, ವ್ಯಾಸರಾಯರ ಶಿಷ್ಯರಾದರು.

ವ್ಯಾಸರಾಯರು ಎಂತಹ ಮಹಾನುಭಾವರು. ಕೃಷ್ಣದೇವರಾಯರ ಗುರುಗಳು. ಪುರಂದರ, ಕನಕ, ವಾದಿರಾಜರಂತಹ ಶಿಷ್ಯರನ್ನು ಹೊಂದಿದ್ದವರು. ವ್ಯಾಸಕೂಟದಲ್ಲಿದ್ದು ದಾಸಕೂಟದ ಬೆನ್ನೆಲುಬಾದವರು.

"ಕನಕ"ರು, ದಾಸರಾದರೂ ಜಾತಿಯ ತಾರತಮ್ಯವನ್ನು ಅನುಭವಿಸಬೇಕಾಯಿತು. ಕನಕರ ಜ್ಞಾನಶಕ್ತಿ ಮತ್ತು ಭಕ್ತಿಯನ್ನು ಜಗತ್ತಿಗೆ ಸಾರಲು ವ್ಯಾಸರಾಯರು ಒಮ್ಮೆ ಶಿಷ್ಯರನ್ನು ಕೇಳಿದರು. "ನಿಮ್ಮಲ್ಲಿ ಯಾರು ವೈಕುಂಠಕ್ಕೆ ಹೋಗುವಿರಿ" . ಪ್ರತಿಯೊಬ್ಬರೂ ತಾವೇ ಬೃಹಸ್ಪತಿ ಎಂಬಂತೆ ತರ್ಕ, ವ್ಯಾಕರಣ, ಶಾಸ್ತ್ರ, ಗ್ರಂಥ, ಮೀಮಾಂಸಾದಿಗಳನ್ನು ಉದ್ಧರಿಸಿ ಉತ್ತರ ಕೊಟ್ಟರು. ಕನಕರು ಕೊನೆಯಲ್ಲಿ, "ನಾನು ಹೋದರೆ ಹೋಗಬಹುದು" ಎಂದರು. ಎಷ್ಟೊಂದು ಅರ್ಥಪೂರ್ಣ.

ಕನಕರ ಸಾಹಿತ್ಯ, ಸಂಗೀತದ ಕೊಡುಗೆಯಂತೆಯೇ ಸಾಮಾಜಿಕ ಕೊಡುಗೆಯೂ ಮುಖ್ಯವಾದದು. "ದಾಸದಾಸರ ಮನೆಯ ದಾಸಿಯಮಗ ಮಂಕುದಾಸ ಮರುಳುದಾಸ ನರಜನ್ಮ ಹುಳು ಪರಮಪಾಪಿ."

"ನಾವು ಕುರುಬರು ನಮ್ಮ ದೇವರು ಬೀರಯ್ಯ ಕಾವ ನಮ್ಮಜ್ಜ ನರಕುರಿ ಹಿಂಡುಗಳ" ಎಂದು ನಾರಾಯಣನಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿದ ಕನಕದಾಸರು "ಆವ ಕುಲವಾದರೇನು ಆತ್ಮಭಾವವರಿತ ಮೇಲೆ" ಎಂದು ಹಾಡಿ ಮನುಷ್ಯತ್ವದ, ಭಕ್ತಿಯ ಪಾರಮ್ಯವನ್ನು ಸಾರಿದವರು.

ಎಲ್ಲರೂ ಕೇಳುತ್ತಿದ್ದರು. ಚರಿತ್ರೆಯ ಪುಟಗಳಲ್ಲಿ ಸಂಚರಿಸುತ್ತಿದ್ದರು. ಪದ್ಮನಾಭರೆಂದರು "ನೋಡಿ ನಮ್ಮ ಸಪ್ತಸ್ವರ ದೇವತಾ ಧ್ಯಾನ ಮಂದಿರ"ದಲ್ಲಿ ಎಲ್ಲರೂ ಸಮಾನರು. ಜಾತಿ, ಕುಲ, ಮತ, ಭಾಷೆ, ಲಿಂಗ, ಧರ್ಮಗಳ ಭೇದವಿಲ್ಲ. ಸಂಗಿತ ಶಾರದೆಯ ಮಡಿಲಲ್ಲಿ ಎಲ್ಲರೂ ಮಕ್ಕಳೇ. ಅವಳು ಭೇದ ಮಾಡುವುದಿಲ್ಲವೆನ್ನಲು ಕನಕರೇ ಸಾಕ್ಷಿ. ನಮ್ಮ ಮಂದಿರದಲ್ಲಿ ಯಾರು ಬೇಕಾದರೂ ನೇರವಾಗಿ ದೇವರಿಗೆ ಪೂಜೆ, ನೈವೇದ್ಯ, ಆರತಿಗಳನ್ನು ಮಾಡಬಹುದು. ಇಲ್ಲಿಯ ಪೂಜೆಯಲ್ಲಿ ಸಂಸ್ಕೃತವಿಲ್ಲ, ಸಂಗೀತವೇ ಎಲ್ಲ. ಷೋಡಶೋಪಚಾರದ ಎಲ್ಲ ಪೂಜೆಯೂ ಸಂಗೀತದಲ್ಲಿಯೇ ಆಗುತ್ತದೆ. ಯಾರಿಗೂ ಕೀಳರಿಮೆ ಕಾಡದು. ಉದಾಹರಣೆಗೆ ನಮ್ಮ ಅಷ್ಟೋತ್ತರಗಳು ಹೀಗಿದೆ. ಪುರಂದರ ದಾಸರೆ ನಿಮಗೆ ನಮನ/ ಸೀನಪ್ಪ ನಾಯಕರೆ ನಿಮಗೆ ನಮನ/... ಹೀಗೆ ವೈಶಿಷ್ಟ್ಯ ಪೂರ್ಣ. ಸಂಪ್ರದಾಯ ಬಿಟ್ಟಿಲ್ಲ ಆದರೆ ಕರ್ಮಠತೆ ಇಲ್ಲಿಲ್ಲ.

ಎಲ್ಲರ ಕಣ್ಣಿಗೆ ಕನಕರು ಕಂಡರು. ವೈಷಮ್ಯಗಳನ್ನು ಮೀರಿದ ವೈವಿಧ್ಯ ಸಪ್ತಸ್ವರ ದೇವತಾ ಧ್ಯಾನ ಮಂದಿರ ಎದುರಿಗಿತ್ತು.

"ಸರಿ, ಈ ಕಡೆಗೆ ಬನ್ನಿ" ಎಂದು ಪದ್ಮನಾಭದಾಸರು ಷಡ್ಜಾಂಬೆಯ ಬಲದಲ್ಲಿದ್ದ ತ್ಯಾಗರಾಜರನ್ನು ಆರಾಧನಾ ಭಾವದಿಂದ ನೋಡತೊಡಗಿದರು.

07
ವಾದಿರಾಜರ ಪವಾಡ

ನಮ್ಮಲ್ಲಿ ಅನೇಕರು ಪದ್ಮನಾಭರ ಸಹೋದ್ಯೋಗಿಗಳು. ನನ್ನಂತಹ ಕೆಲವರು ಪದ್ಮನಾಭರನ್ನು ವಿಜಯಾ ಕಾಲೇಜಿನಲ್ಲಿ 1960 ದಶಕದ ಕೊನೆಯಿಂದ ನೋಡಿದವರು. ಸಮೀಪದ ಗೆಳೆತನ. ಸಲುಗೆಯೂ ಸಾಧ್ಯ. ಅವರೆಷ್ಟು ಬದಲಾಗಿದ್ದಾರೆ, ಯಾವ ಎತ್ತರದಿಂದ ಯಾವ ಎತ್ತರವನ್ನು ಕ್ರಮಿಸಿದ್ದಾರೆ. ಆ ಸುದೀರ್ಘ ಪಯಣದಲ್ಲಿ ಎಷ್ಟೊಂದು ಏರುಗಳು, ಇಳಿತಗಳು. ಅವೆಲ್ಲವನ್ನೂ ತಾಳ್ಮೆಯಿಂದ ಎದುರಿಸಿ, ಗ್ರಹಿಸಿ, ವಿಶ್ಲೇಷಣೆ ಮಾಡಿ, ಗುರಿ ಬಿಡದೆ, ಛಲ ಹಿಡಿದು ಉತ್ತುಂಗದತ್ತ ನಡೆಯುತ್ತಿರುವುದನ್ನು ಗಮನಿಸುತ್ತಿರುವವರು.

ನಾನು ಹಲವಾರು ಬಾರಿ ಯೋಚಿಸಿರುವೆ. ನಮ್ಮಲ್ಲಿ, ನಮ್ಮ ಸಹೋದ್ಯೋಗಿಗಳಲ್ಲಿ ಹಲವಾರು ಸಾಧಕರು ಇದ್ದಾರೆ. ಆರ್.ಕೆ.ಪಿಗೆ ಇಂತಹ ಸನ್ಮಾನ ಗೌರವಗಳು ಗೆಳೆಯರಿಂದ ದೊರೆಯುತ್ತಿದೆ. ಬೇರೆಯವರಿಗೆ ಯಾಕಿಲ್ಲ?

ಅವರುಗಳು ಬಹುಶಃ ಇಂತಹ ಪ್ರೀತಿ, ವಿಶ್ವಾಸವನ್ನು ಗಳಿಸಲು ಯಶಸ್ವಿಯಾಗಲಿಲ್ಲವೇನೋ. ತಿಳಿಯದು. ಕಾರಣಗಳನ್ನು ಸಂಬಂಧಿಸಿದವರೇ ಅವಲೋಕಿಸಬೇಕು !

ಪದ್ಮನಾಭರದು, ತೆರೆದ ಪ್ರೇಮಮಯಿ ಹೃದಯ, ಎಲ್ಲರನ್ನೂ ಗೆಳೆತನದಲ್ಲಿ ಅಭಿಮಾನದ ಎಳೆಯಲ್ಲಿ, ವಿಶ್ವಾಸದಿಂದ ಬೆಸೆಯುತ್ತಾರೆ. ಹಿತ, ಮೃದು, ಮಧುರ ತರಂಗಗಳಿಂದ ಕೂಡಿದ ಅವರ ಕಂಚಿನಕಂಠದಲ್ಲಿ ಸ್ನೇಹವಿದೆ. ಮಾತಿನಲ್ಲಿ ಸಹಜತೆಯಿದೆ. ವಿನಮ್ರತೆಯಿದೆ. ಎಲ್ಲರನ್ನೂ ಅಪ್ಪಿಕೊಳ್ಳುವ ಚಾಚಿದ ತೋಳುಗಳು ಅವರದು. ಭೇದಭಾವವಿಲ್ಲ. ನಾನು ನೀನು ಬೇರೆ ಬೇರೆ ಅನ್ನಿಸುವುದಿಲ್ಲ. ಎಲ್ಲರನ್ನೂ ಒಳಗೊಳ್ಳುವ ನಡೆ. ತೋರುಗಾಣಿಕೆಯಂತೆ ಅನ್ನಿಸುವುದಿಲ್ಲ. 24 ಕ್ಯಾರೆಟ್ ಚಿನ್ನ.

ಈ ಸಂಸ್ಕಾರ ಕೇವಲ ಜನ್ಮಜಾತವಾದುದಲ್ಲ, ಸಾಹಿತ್ಯ ಓದಿ ಸಂಗೀತವನ್ನು ಹಾಡಿ ತೋರಿಕೆಗಾಗಿ, ಹಮ್ಮಿಗಾಗಿ ಬಳಸದೆ, ಅವುಗಳ ಸತ್ವವನ್ನು ಜೀರ್ಣಿಸಿಕೊಂಡು ರೂಪಿತವಾದ ಸ್ವತಂತ್ರ ಸಂಸ್ಕಾರಯುತ ವ್ಯಕ್ತಿತ್ವ. ಸಜ್ಜನ, ಸಾಧಕರ ಸತ್ಸಂಗದಿಂದ ಗಳಿಸಿಕೊಂಡು ಬೆಳೆದ ಬದುಕು. ಹಾಸ್ಯ ಚಟಾಕಿಗಳಿಂದ, ನಗೆಮೊಗದ ನಲಿವಿನಿಂದ ಜನರ ಮನಸ್ಸು ಗೆದ್ದು ಎಲ್ಲರನ್ನೂ ತಮ್ಮವರನ್ನಾಗಿಸಿಕೊಂಡಿದ್ದಾರೆ. ತಾವೂ ಜನರಲ್ಲಿ ಒಂದಾಗಿದ್ದಾರೆ.

ಹೀಗೆ ಆಗದಿದ್ದರೆ, ಕರ್ನಾಟಕದ ಒಂದು ಸಣ್ಣಗ್ರಾಮದಿಂದ ಬಂದ ಹುಡುಗ, ಬೆಂಗಳೂರೆಂಬ ಬೃಹತ್ ಮಾಯಾನಗರಿಯಲ್ಲಿ ನೆಲೆನಿಂತು, ಕರ್ನಾಟಕ ಸಂಗೀತದ ಹಿರಿಯ ಪ್ರಬುದ್ಧ ಗಾಯಕ, ವಾಗ್ಗೇಯಕಾರ, ರುದ್ರಪಟ್ಟಣದಲ್ಲಿ ಸಪ್ತಸ್ವರ ದೇವತಾ ಮಂಟಪ, ದ್ವಾದಶ ಸ್ವರ ಸ್ತಂಭ ಮಂಟಪ, ಬೆಂಗಳೂರಲ್ಲಿ ವಾದಿರಾಜ ಭವನ, ಶಾರದಾ ಕಲಾಕೇಂದ್ರ ಮುಂತಾದ ಸಂಸ್ಥೆಗಳನ್ನು ಕಟ್ಟಿ, ಗಾನಕಲಾಪರಿಷತ್ತಿನಂತಹ ಸಂಸ್ಥೆಯ ಅಧ್ಯಕ್ಷನಾಗಿ, ಹಲವಾರು ಸಂಗೀತ ಗ್ರಂಥಗಳ ರಚಕನಾಗಿ, ಪ್ರಕಾಶಕನಾಗಿ, ನಾಟಕಕಾರನಾಗಿ, ನಟನಾಗಿ ನೂರಾರು ಬಿರುದು ಸನ್ಮಾನಗಳನ್ನು ಪಡೆದು ಕಂಗೊಳಿಸುತ್ತಿರಲಿಲ್ಲ.

ಇದೆಲ್ಲಕ್ಕಿಂತ ಮಿಗಿಲಾದುದು, ಪದ್ಮನಾಭರು ಕಟ್ಟಿರುವ ಅಪಾರ ಶಿಷ್ಯಪಡೆ. 1980 ರಿಂದ ಅವರು ಸಂಗೀತ ಹೇಳಿಕೊಡಲು ಆರಂಭಿಸಿದರು. ಅವರು ಪಾಠ ಹೇಳುವ ರೀತಿಯೇ ಬೇರೆ. ಈಗಿನ ದಿನಗಳು ಹಿಂದಿನಂತಿಲ್ಲ. ಹಿಂದಿನ ಕಾಲದ ಗುರು ಶಿಷ್ಯ ಬಾಂಧವ್ಯದ ಎಲ್ಲಾ ಅಂತಃಸತ್ವಗಳನ್ನು ಉಳಿಸಿಕೊಂಡು, ಇಂದಿನ ಕಾಲ ಪ್ರಭಾವದ ಪರಿಣಾಮಗಳೊಂದಿಗೆ ಸಮೀಕರಿಸಿಕೊಂಡು ಪಾಠ ಹೇಳಿಕೊಡಬೇಕು. ಶಿಷ್ಯರು ಬಹಳ ಜಾಗರೂಕರಾಗಿದ್ದಾರೆ.

ಅಂದು "ಕುದುರೆ, ಕುದುರೆ ಅಲ್ಲ ಕತ್ತೆ" ಎಂದು ಗುರು ಹೇಳಿದರೆ, ಕೇಳುತ್ತಿದ್ದರು ಶಿಷ್ಯರು. ಬೆಳಗಿನಿಂದ ಬೈಗಿನವರೆಗೆ ಸಾಪಾಸ... ಹೇಳಿಕೊಟ್ಟರೆ ಸಾಲದು. ಎಷ್ಟೋ ಗುರುಗಳು, ಶಿಷ್ಯರನ್ನು ಬಯ್ದು ಕುಗ್ಗಿಸಿಬಿಟ್ಟಿದ್ದಾರೆ. ಗುರುಗಳಿಗೇನೋ ಪಾಠ ಹೇಳಿ ಶಿಷ್ಯರನ್ನು ತಯಾರು ಮಾಡುವ ಹುಮ್ಮಸ್ಸು. ಆದರೆ ಸರಿಯಾದ ಪಾಠಕ್ರಮ/ ವಿಧಾನವಿಲ್ಲದೆ ಚಿಗುರುಗಳು ಬಾಡಿಹೋಗಿವೆ.

ಇಂದು, ಸಮೂಹ ಮಾಧ್ಯಮಗಳು ಶಿಕ್ಷಣಕ್ಕೆ ಹಲವಾರು ಬಾಗಿಲುಗಳನ್ನು ತೆರೆದಿದೆ. ಸಂಗೀತ ಕ್ಷೇತ್ರಕ್ಕೂ ಈ ಮಾತು ಅನ್ವಯ. ಮಾಹಿತಿಗಳ ಮಹಾಪೂರ. ಕೆಲವು ಸರಿ ಇರಬಹುದು. ಆದರೆ ಕೆಲವೆಡೆ ಅವುಗಳ ಪ್ರವೇಶ ಆತಂಕಕಾರಿ. ತಪ್ಪುತಪ್ಪು ಪಾಠಗಳು. ಅರೆಬೆಂದ ಪಾಠಗಳು ಹಲವು. ಆದರೆ ಗುರುಮುಖೇನ ಪಾಠವಾದರೆ, ಸಂವಹನವು ಸಂವಾದ, ಸಂಗ, ಸಂಚಲನಗಳ ಮೂಲಕ ನಡೆಯುತ್ತದೆ. ಗುರು ಶಿಷ್ಯರು ಒಂದಾಗುತ್ತಾರೆ. ಬುದ್ಧಿ ಬೆಳೆಯುತ್ತದೆ. ವಿದ್ಯೆ ವಿಜೃಂಭಿಸುತ್ತದೆ.

ಇಂದು, ಪದ್ಮನಾಭರ ಲಕ್ಷಾಂತರ ಶಿಷ್ಯರು ಗೋಳದಾದ್ಯಂತ ಹಬ್ಬಿದ್ದಾರೆ. ಹೊಸಕುಡಿಗಳು ಚಿಗುರುತ್ತಿವೆ. ಆರ್ಕೆಪಿ ಅವರ ಕೀರ್ತಿಯೂ ಹರಡುತ್ತಿದೆ. ಪುರಸ್ಕಾರಗಳು ದೊರೆಯುತ್ತಿವೆ. ಇದು ಹೇಗೆ ಸಾಧ್ಯವಾಯಿತು ಎನ್ನುವುದು ಕುತೂಹಲಕಾರಿ.

ಪದ್ಮನಾಭರು ಹೇಳುತ್ತಾರೆ "ಗುರುಗಳಲ್ಲಿ ಶಿಷ್ಯರ ವಿಶ್ವಾಸ ಬೆಳೆಯಬೇಕು. ಗುರುಗಳಿಗೆ ಶಿಷ್ಯರಲ್ಲಿ ವಿಶ್ವಾಸ ಇದ್ದರೆ ಸಾಲದು."

"ನಾನು ಎಲ್ಲಾ ಕಛೇರಿಗೂ ಮಕ್ಕಳನ್ನು (ಶಿಷ್ಯರೆಂದು ಓದಿಕೊಳ್ಳಿ) ಕರೆದುಕೊಂಡು ಹೋಗುತ್ತೇನೆ. ಅವರು ಶ್ರದ್ಧೆಯಿಂದ ಕೇಳಬೇಕು, ಟಿಪ್ಪಣಿ ಮಾಡಿಕೊಳ್ಳಬೇಕು. ಮಾರನೆಯ ದಿನ ಹಾಡಿದ ಕೃತಿಗಳ ವಿಶ್ಲೇಷಣೆ ಮಾಡಬೇಕು. ಕೆಲವೊಮ್ಮೆ ನಾವು ತ್ಯಾಗರಾಜರ ಕೃತಿಗಳನ್ನು ಮಾತ್ರಾ ಹಾಡುತ್ತೇವೆ. ಕೆಲವು ಕಡೆ ಪುರಂದರರು, ಹಾಗೆಯೆ ಕನಕರು, ಮುತ್ತುಸ್ವಾಮಿ ದೀಕ್ಷಿತರು, ಮುತ್ತಯ್ಯ ಭಾಗವತರು, ಮೈಸೂರು ವಾಸುದೇವಾಚಾರ್ಯರು, ವಾದಿರಾಜರು...ಹೀಗೆ. ಅಲ್ಲಿಗೆಲ್ಲಾ ಶಿಷ್ಯವೃಂದವೂ ಬರುತ್ತದೆ.

ಕೆಲವೊಮ್ಮೆ "ಗಾನ ಸಂಚಾರ" ಹೋಗುತ್ತೇವೆ. ಮನೆ ಮನೆಯಲ್ಲಿ ಗಾಯನ ಗಂಗೆ. ಕೆಲವೊಮ್ಮೆ ಪರವೂರ ಪ್ರವಾಸ. ಚೆನ್ನಾಗಿ ಅಡಿಗೆ ಮಾಡಿಸಿ, ಊಟಮಾಡಿ, ಖುಷಿಯಿಂದ ಹಾಡುತ್ತೇವೆ. ಕೆಲವು ಸಂಜೆಗಳು ಹೋಟೆಲ್ಲಿಗೆ ಹೋಗಿ ಸುಮ್ಮನೆ ಖುಷಿಯಿಂದ ಮಾತನಾಡಿ ಬರುತ್ತೇವೆ. ಆಗ ಸಂಗೀತವಿಲ್ಲ. ಕೇವಲ ವಿರಾಮ, ಮನೋಲ್ಲಾಸ." ಹಲವಾರು ಸಂದರ್ಭಗಳಲ್ಲಿ ನನ್ನ ಶಿಷ್ಯರ ವೈಯಕ್ತಿಕ, ಕೌಟುಂಬಿಕ ಸಮಸ್ಯೆಗಳನ್ನು ಕೂಡಾ ಬಗೆಹರಿಸಿದ್ದೇನೆ.

ಶಿಷ್ಯರು ಬೆಳೆಯಲು ಯಾವಾಗಲೂ ಆರ್.ಕೆ.ಪಿ ಅವಕಾಶ ಮಾಡಿಕೊಡುತ್ತಾರೆ. ಅವರು ಹೆಮ್ಮೆಯಿಂದ ಹೇಳುತ್ತಾರೆ "ನನ್ನ ಶಿಷ್ಯರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಸಂಗೀತ ಪಾಠ ಮಾಡುವಾಗ ವೇದಾಂತ, ಸಾಹಿತ್ಯ, ಕ್ರೀಡೆ, ಬದುಕಿನ ಪಾಠವೂ ಇರುತ್ತದೆ. ಜೊತೆ ಹಾಸ್ಯವೂ ಅನಿವಾರ್ಯ. ಕೇವಲ ಎರಡು ವರ್ಷದ ಪಾಠದ ನಂತರ ಶಿಷ್ಯರು ಕಛೇರಿ ಮಾಡುವಷ್ಟು ಸಮರ್ಥರಾಗುತ್ತಾರೆ. ಶ್ರದ್ಧೆ,ಅಭ್ಯಾಸ ಸಾಧನೆಗಳು ಖಂಡಿತಾ ಬೇಕು. ನನ್ನ ಹಲವಾರು ಶಿಷ್ಯರು ಇಂದು ಸಮಾಜದಲ್ಲಿ ಹೆಸರಾಂತ ಸಂಗೀತಗಾರರಾಗಿದ್ದಾರೆ. ನಾನು ಅವರ ಗುರು ಮಾತ್ರವಲ್ಲ, ಗೆಳೆಯ, ಪೋಷಕ, ಸಂಗಾತಿ, ಹಿತಚಿಂತಕ, ವಕೀಲ, ವೈದ್ಯ ... ಹೀಗೆ ಎಲ್ಲವೂ ಆಗಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಸಂಗೀತವನ್ನು ಮಾರಾಟದ ಸರಕಾಗಿಸಿಲ್ಲ. ಆತ್ಮ ಸಂಬಂಧದ ಬೆಳಕಾಗಿಸಿದ್ದೇನೆ."

"ವಿಶ್ವಾಸ ಎಂತಹ ಮಟ್ಟದ್ದು ಎಂದು ನೆನೆಸಿಕೊಂಡರೆ, ನನಗೇ ಕಣ್ಣೀರು ಬರುತ್ತದೆ. 1998ರಲ್ಲಿ ವಾದಿರಾಜ ಭವನವನ್ನು ಕಟ್ಟಿದಾಗ, ಅದಕ್ಕೆ ಕಾಣಿಕೆಯನ್ನು ಕೊಟ್ಟವರು ಸಾಮಾನ್ಯರು. ಒಂದು, ಎರಡು, ಐದು, ಹತ್ತು ಸಾವಿರಗಳ ಪುಟ್ಟಗಂಟುಗಳು. ಕೆಲವರು ಹೊರಗೆ ಸಾಲ ಮಾಡಿ ಕಾಣಿಕೆ ಕೊಟ್ಟಿದ್ದಾರೆ."

ಪದ್ಮನಾಭರು ಇಂತಹ ವಿಚಾರಗಳನ್ನು ಹೇಳುವಾಗ ಸ್ವಲ್ಪ ಭಾವುಕರಾಗುತ್ತಾರೆ. ಒಮ್ಮೆ ರಾಮೋತ್ಸವ ಮಾಡಲು ಹಣ ಸಂಗ್ರಹಿಸುತ್ತಿದ್ದರು. ಮೂವರು ಮಹಿಳಾ ಶಿಷ್ಯರು, ಆರ್.ಕೆ.ಪಿ ಅವರ ಬಳಿಗೆ ಬಂದು ಹೇಳಿದರು, "ಗುರುಗಳೇ, ಈಗ ನಮ್ಮಲ್ಲಿ ಹಣವಿಲ್ಲ. ಅದರ ಬದಲು ಈ ಕಾಣಿಕೆಯನ್ನು ಸ್ವೀಕರಿಸಿ". ಪದ್ಮನಾಭರಿಗೆ "ಶಾಕ್" ಆಯಿತು, ಆಶ್ಚರ್ಯವಾಯಿತು. ಆ ಮಹಿಳೆಯರು ತಮ್ಮ ಉಂಗುರ, ಮೂಗುತಿ ಮತ್ತು ಬೆಂಡೋಲೆಗಳನ್ನು ಕೊಟ್ಟರು. "ಸಾರ್ ನಮ್ಮ ಮನೆಯವರಿಗೆ ಗೊತ್ತಿದೆ. ನೀವು ಚಿಂತಿಸಬೇಡಿ" ಎಂದರು. ಎಂತಹ ವಿಶ್ವಾಸ. ಮಹಿಳೆಯರು ಮೂಗುತಿ, ಬೆಂಡೋಲೆ, ಉಂಗುರಗಳ ಕಾಣಿಕೆ ಕೊಡುವುದು ಸಾಮಾನ್ಯವೇ! ತಾವಿತ್ತ ಕಾಣಿಕೆಯು ಸದ್ವಿನಿಯೋಗವಾಗುತ್ತದೆ ಎಂಬ ನಂಬಿಕೆಯು ಎಷ್ಟು ಆಳವಾಗಿದೆ. ನನಗೆ ಅನ್ನಿಸುತ್ತದೆ "ಇದುವೇ ಟ್ರಸ್ಟ್, ವಿಶ್ವಾಸಗಳಿಕೆ, ನ್ಯಾಸಧಾರಿತ್ವ, ಪದ್ಮನಾಭರ ಜೀವನದ ಅನನ್ಯ ಸಾಧನೆ."

ಪದ್ಮನಾಭರು, ಒಮ್ಮೆ ಓರ್ವ ವಯಲಿನ್ ವಾದಕರನ್ನು, ವಾದಿರಾಜ ಭವನದಲ್ಲಿ ಸನ್ಮಾನಿಸಿದರು. ಆ ವಿದ್ವಾಂಸರು, ಜ್ಞಾನಿಗಳು, ಸಾಧಕರು. ಆದರೆ ಬಹಳ ಅಹಂಕಾರಿಗಳು. ನಮಸ್ಕಾರ ಹೇಳಿದವರಿಗೆ ಪ್ರತಿನಮಸ್ಕಾರ ಹೇಳುತ್ತಿರಲಿಲ್ಲ. ಬೇರೆಯವರೊಡನೆ ಮಾತೂ ಆಡರು. ಬಹುಶಃ ಮೇಲಿರಿಮೆಯ ಕಾಟವಿರಬಹುದು. ಗೌರವಸಮರ್ಪಣೆಯ ನಂತರ ಪದ್ಮನಾಭರು ಅವರನ್ನು ಧ್ಯಾನಮಂದಿರಕ್ಕೆ ಕರೆದು ತರುತ್ತಾರೆ. ಕೂರಿಸಿ ಹೊರಗೆ ಹೋಗುತ್ತಿರುವಾಗ, ಇದಕ್ಕಿದ್ದಂತೆ ಆ ವಿದ್ವಾಂಸರು ಪದ್ಮನಾಭರ ಬಳಿಗೆ ಓಡಿ ಬಂದು "ಪಾದಗಳಿಗೆ ನಮಸ್ಕಾರ" ಮಾಡಿಬಿಟ್ಟರು. "ಸ್ವಾಮಿ, ನೀವು ಮನುಷ್ಯರಲ್ಲ, ದೇವರು" ಅಂದು ಬಿಟ್ಟರು. ಪದ್ಮನಾಭರ ಸುತ್ತಲೂ ಬಹಳ ಜನರಿದ್ದಾರೆ. ಆದರೆ, ವಿದ್ವಾಂಸರು ಯಾವುದನ್ನೂ ತಲೆಗೆ ಹಚ್ಚಿಕೊಳ್ಳಲಿಲ್ಲ. ಪದ್ಮನಾಭರು ಬೆವತು ಹೋದರು. ಅವರ ಕಣ್ಣಿಂದಲೂ ನೀರಧಾರೆ. "ಯಾರಿಗೂ ಯಾವತ್ತೂ ನಮಸ್ಕರಿಸಿದವರು, ಇಂದು ಹೀಗೇಕೆ ಮಾಡಿದರು. ಎಂದು ನೊಂದುಕೊಂಡರು." ನಂತರದ ದಿನಗಳಲ್ಲಿ ಈ ವಿದ್ವಾಂಸರು ಪದ್ಮನಾಭರ ಆತ್ಮೀಯರಲ್ಲಿ ಒಬ್ಬರಾಗಿದ್ದಾರೆ. ಇಲ್ಲಿ ಗೆದ್ದಿದ್ದು ವಿನಯ ಮತ್ತು ಸೌಜನ್ಯ, ಮಿಗಿಲಾಗಿ ಪಾಂಡಿತ್ಯಕ್ಕೆ, ಸರಸ್ವತಿಗೆ ಪರಸ್ಪರರ ಗೌರವ.

ನಿನ್ನೆ ರಾತ್ರಿ, ಈ ಲೇಖನಮಾಲೆಯನ್ನು ಓದುತ್ತಿರುವ ಮಿತ್ರರೊಬ್ಬರು ಕರೆಮಾಡಿದ್ದರು. "ರವೀಂದ್ರ, ನಿಮಗೆ ಒಂದು ವಿಷಯ ಹೇಳ್ತೀನಿ. ನನ್ನ ಸಂಬಂಧಿಕರು ಒಬ್ಬರು rationalist ಇದ್ದಾರೆ. ಯಾರಿಗೂ ಯಾವತ್ತೂ ನಮಸ್ಕಾರ ಮಾಡಿದವರಲ್ಲ. ದೇವರು ದಿಂಡರು ನಂಬಿಕೆಯಿಲ್ಲ. ಸಂಗೀತದ ಒಲವು ಅಷ್ಟಕಷ್ಟೆ. ಅವರನ್ನು, ಒಮ್ಮೆ ಬಲವಂತವಾಗಿ ಆರ್.ಕೆ.ಪಿ ಅವರ ಕಛೇರಿಗೆ ಕರೆದುಕೊಂಡು ಹೋಗಿದ್ದೆ. ಎಂದಿನಂತೆ ಕಛೇರಿಯ ನಂತರ ಭರ್ಜರಿ ಭಕ್ಷ್ಯ ಸಮೇತ ಭೂರಿಭೋಜನ. ಎಲೆ ಅಡಿಕೆ. ಹೊರಗೆ ಬರುತ್ತಿರುವಂತೆ ಆರ್.ಕೆ.ಪಿ ಕಂಡರು. ಈ

ಮನುಷ್ಯ ಸರ್‍ರನೆ ಹೋಗಿ ಅವರ ಪಾದಗಳಿಗೆ ನಮಸ್ಕರಿಸಿಬಿಟ್ಟರು. ಎಲ್ಲರಿಗೂ ಆಶ್ಚರ್ಯ. "ಓ ಏಕೆ ಹೀಗೆ ಅಂತ." ಆದರೆ ಆ ವ್ಯಕ್ತಿ ಬಹಳ "ಕೂಲಾಗಿ" ಹೇಳಿದರು. "ಪದ್ಮನಾಭರು, ಎಷ್ಟೊಂದು ಅಕ್ಕರೆಯಿಂದ ಊಟದ ಸಮಯದಲ್ಲಿ ನಡೆದುಕೊಂಡರು. ಪ್ರೀತಿಯಿಂದ ಬಡಿಸಿದರು. ಆತ್ಮೀಯತೆಯಿಂದ ಹೊಸಬರು ಹಳಬರು ಎನ್ನದೆ, ಸಮಾನಗೌರವದಿಂದ ನಡೆಸಿಕೊಂಡರು. ಅವರ ವಿದ್ವತ್ತಿಗೆ ಈ ನಡತೆ ಶೋಭೆಯಾಗಿದೆ. ಇದು ನನ್ನನ್ನು ಸಮ್ಮೋಹಗೊಳಿಸಿತು." ಇಂತಹ ಹಲವಾರು ಘಟನೆಗಳಾಗಿದೆ. ಪದ್ಮನಾಭರು ಹೇಳುತ್ತಾರೆ "ಇವೆಲ್ಲವೂ ವಾದಿರಾಜರ ಪವಾಡ."

08
ಎಂದುರೋ ಮಹಾನುಭಾವುಲು..ಅಂದರಕಿ ವಂದನಮುಲು..

ಓದುಗ, ನಿನ್ನ ಪ್ರಶ್ನೆ ಅರ್ಥವಾಗುತ್ತದೆ. ಆ ಹುಡುಗನನ್ನು ಚೌಡಯ್ಯನವರ ಮುಂದೆ ಬಿಟ್ಟೆ. ಪದ್ಮನಾಭದಾಸರನ್ನು ತ್ಯಾಗರಾಜದಾಸರ ಮುಂದೆ ನಿಲ್ಲಿಸಿ, ಈಗ ಪದ್ಮನಾಭರ ಶಿಕ್ಷಣ ಮಾದರಿಯ ಬಗ್ಗೆ ಹೇಳುತ್ತಿರುವೆ. ಹೀಗಾದರೆ ಕಥೆ ಹೇಗೆ ಮುಂದುವರೆಯುತ್ತದೆ !

"ಸಾವರಿಸು ಓದುಗ. ನಿನಗೆ ಹಿತವಾಗುವಂತೆ ಕಥೆ ಹೇಳುತ್ತಿರುವೆ. ಎಂದೋ ನಡೆದು ಹೋದ ಕಥೆಯಲ್ಲವಿದು. ನಾಯಕ ನಿನ್ನೊಡನೆಯೇ ಇದ್ದಾನೆ. ನೀನೂ ಕಥೆಯ ಭಾಗವಾಗಿರುವೆ. ನಿನ್ನ ಅನುಭವವನ್ನು ನಾನು ಸಾಕ್ಷಿಪ್ರಜ್ಞೆಯಾಗಿ ನೋಡುತ್ತಿರುವೆನಷ್ಟೆ," ಇರಲಿ.

.

ಪದ್ಮನಾಭದಾಸರು, ತ್ಯಾಗರಾಜರನ್ನು ತದೇಕ ದೃಷ್ಟಿಯಿಂದ ನೋಡುತ್ತಿರುವಾಗ ಪ್ರಶ್ನೆಯೊಂದು ಹಾರಿ ಬಂತು.

"ದಾಸರೇ, ಉಡುಪಿಯ ಕನಕನ ಕಿಂಡಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಕನಕರು ನಿಜವಾಗಿಯೂ ತಾರತಮ್ಯಕ್ಕೆ ಒಳಗಾದರೇ?"

"ಹ್ಞಾಂ.. ರಮೇಶ, ನೀನಿನ್ನೂ ಕನಕರ ಬಳಿಯೆ ಇರುವೆಯಾ? ನಾನಾಗಲೇ ತ್ಯಾಗರಾಜರ ಬಳಿಗೆ ಬಂದಿದ್ದೆ. ಇರಲಿ, ಸೂಕ್ಷ್ಮವಾದ ಪ್ರಶ್ನೆಯನ್ನೇ ಕೇಳಿರುವೆ."

"ನಿನಗೆ ಗೊತ್ತಿರಬಹುದು, ನಾನು ಹರಿದಾಸರುಗಳ ಬಗ್ಗೆ ನಾನು ನಾಲ್ಕು ನಾಟಕಗಳನ್ನು ರಚಿಸಿರುವೆ. ವಾದಿರಾಜ ದರ್ಶನ, ಪುರಂದರ ಮಹಿಮ, ನಾದ

ಮತ್ತು ನಾದಯೋಗಿ ತ್ಯಾಗಯ್ಯ. ನೀನು ಕೇಳಿದ ಪ್ರಶ್ನೆಗೆ ಉತ್ತರರೂಪವಾಗಿ "ಪುರಂದರ ಮಹಿಮ" ನಾಟಕದಲ್ಲಿ ಬರುವ ಒಂದು ಪ್ರಸಂಗವನ್ನು ಹೇಳುತ್ತೇನೆ.

ವಿಜಯನಗರದ ಶ್ರೀ ಕೃಷ್ಣದೇವರಾಯರ ಕಾಲ. ಅದೊಂದು ದಿನ, ರಾತ್ರಿಯ ಸಮಯ. ವ್ಯಾಸರಾಜರ ಶಿಷ್ಯರಾದ ವಾದಿರಾಜರು, ಪುರಂದರ ದಾಸರು ಮತ್ತು ಕನಕದಾಸರು ತುಂಗಾನದಿಯ ತಟದಲ್ಲಿ ಕುಳಿತಿದ್ದಾರೆ. ಚಂದ್ರ ಭವ್ಯವಾಗಿ ತುಂಗೆಯಲ್ಲಿ ಪ್ರತಿಫಲಿಸುತ್ತಿದ್ದಾನೆ. ತಂಗಾಳಿ ಬೀಸುತ್ತಿದೆ. ಅತ್ಯಂತ ಮುದಕೊಡುವ ವಾತಾವರಣ. ಆದರೆ ಈ ಮೂವರು ಮಹಾನುಭಾವರ ಮನಸ್ಸಿನಲ್ಲಿ ಏನೋ ತುಮುಲ; ಮೌನವಾಗಿದ್ದಾರೆ. ಕಾರಣವಿಷ್ಟೆ, ವ್ಯಾಸರಾಜರ ಬಳಿ ಅವರುಗಳ ವಿದ್ಯಾಭ್ಯಾಸ ಮುಗಿದಿದೆ. ನಾಳೆ ತಮ್ಮತಮ್ಮ ದಾರಿಯನ್ನು ಹುಡುಕಿಕೊಂಡು ಹೋಗಬೇಕಿದೆ.

ವಾದಿರಾಜರ ಕಣ್ಣಲ್ಲಿ ನೀರು, ಕನಕರೂ ಭಾವುಕರಾಗಿದ್ದಾರೆ.

"ಏನಿದು ಯತಿಶ್ರೇಷ್ಠರಾಗಿ ವಾದಿರಾಜರ ಕಣ್ಣಲ್ಲಿ ನೀರು. ಸರ್ವಸಂಗ ಪರಿತ್ಯಾಗಿಗಳಿಗೆ ಹೀಗಿರಬಾರದಲ್ಲ" ಅಂತ ಕನಕರ ಮನಸ್ಸು ನೋಯುತ್ತಿದೆ.

"ನಾನು ಯತಿಯಿರಬಹುದು, ಆದರೆ ಮನುಷ್ಯನಲ್ಲವೆ" ಅನ್ನುತಿದೆ ವಾದಿರಾಜರ ಮನಸ್ಸು.

ಕೊನೆಗೆ ಮೌನ ಮುರಿದವರು ಪುರಂದರರೆ.
"ಯಾಕೆ ಇಬ್ಬರೂ ಹೀಗೆ ಕುಳಿತಿರುವಿರಿ. ಏನು ವಾದಿರಾಜರೆ ಅಶ್ರುಬಿಂದುಗಳು?"

ವಾದಿರಾಜರೆಂದರು,
"ನಾಳೆಯಿಂದ, ನಾವು ಮೂವರೂ ಮೂರುದಿಕ್ಕು. ನೀವಾದರೋ ಸ್ವೇಚ್ಛಾಮಯಿಗಳು. ಮನಸ್ಸು ಬಂದ ಕಡೆಗೆ ಹೋಗುವಿರಿ, ಹಾಡುವಿರಿ, ಕುಣಿಯುವಿರಿ. ಹರಿಯ ಕರೆಯುವಿರಿ. ನಾನು ಹಾಗಲ್ಲ. ಮಠದ ಕಟ್ಟುಪಾಡುಗಳಿವೆ. ನಾನು ಯತಿ ಹೌದು. ಆದರೆ ನಿಮ್ಮಂಥ ಮಹಾನುಭಾವರ ಸ್ನೇಹದ ಸವಿಯನ್ನು ಬಿಡಲಾರೆ. ನೀವು ಬೇಕಾದಾಗ ನನ್ನನ್ನು ನೋಡಬಹುದು, ಆದರೆ ನನಗೆ ಅಸಾಧ್ಯ. ನಿಮ್ಮಿಚ್ಛೆಯಂತೆ ನೀವು ಬದುಕಬಲ್ಲಿರಿ. ಆದರೆ ನನಗೆ ಮಿತಿಗಳಿವೆ"
ಪುರಂದರರು ಹೇಳುತ್ತಾರೆ "ವಾದಿರಾಜರೆ, ನೀವು ಯತಿಶ್ರೇಷ್ಠರು. ನಮ್ಮದು ಮಧುಕರ ವೃತ್ತಿ. ನಿಮ್ಮ ಜವಾಬ್ದಾರಿಗಳೇ ಬೇರೆ."
ವಾದಿರಾಜರು "ಕನಕ, ಪುರಂದರರೆ ನಿಮ್ಮ ಸ್ನೇಹಕ್ಕಾಗಿ ಯತ್ಯಾಶ್ರಮವನ್ನು

ಬಿಡುತ್ತೇನೆ" ಅಂದುಬಿಟ್ಟರು.

ಕನಕ, ಪುರಂದರರಿಗೆ ಆಘಾತವಾಯಿತು. ತಲ್ಲಣವಾಯಿತು. ಒಬ್ಬರನ್ನು ಒಬ್ಬರು, ಮೂವರು ಬಾಚಿ ತಬ್ಬಿಕೊಂಡರು. ಅದೊಂದು ಅಪೂರ್ವ ಸಂದರ್ಭ. ಬಿಡಲಾಗದ ಗೆಳೆತನ, ಜಗತ್ತಿನ ಸೆಳೆತಗಳನ್ನು ಗೆದ್ದ ವೈರಾಗ್ಯನಿಧಿಗಳನ್ನು ಕಾಡುತ್ತಿತ್ತು. ಮೂವರ ಕಣ್ಣಿನಿಂದ ಹರಿಯುತ್ತಿದ್ದ ಅಶ್ರುಧಾರೆ ನಿಧಾನವಾಗಿ ತುಂಗೆಯನ್ನು ಸೇರುತ್ತಿತ್ತು. ಆಕಾಶದ ತುಣುಕು ಮೋಡಗಳು, ನಕ್ಷತ್ರಗಳು, ಚಂದ್ರನೂ, ಮುಂದೇನು ಎಂದು ಕಾತರದಿಂದ ಕಾಯುತ್ತಿದ್ದರು.

ಗಾಬರಿಗೊಂಡು, ಎಚ್ಚೆತ್ತ ಕನಕ ಪುರಂದರರು, ಒಟ್ಟಿಗೆ ಹೇಳುತ್ತಾರೆ,
"ಎಲ್ಲಾದರೂ ಉಂಟೆ, ನೀವು ದೈವ ಸ್ವರೂಪಿಗಳು. ನಿಮ್ಮಿಂದ ಧರ್ಮಕ್ಕೆ, ಸಮಾಜಕ್ಕೆ, ಸಂಗೀತಕ್ಕೆ ಸಾಹಿತ್ಯಕ್ಕೆ ಅಪಾರ ಸೇವೆಯಾಗಬೇಕಾಗಿದೆ. ಶ್ರೀ ಕೃಷ್ಣನು ಅದಕ್ಕಾಗಿ ನಿಮಗೆ ಅವತಾರ ನೀಡಿದ್ದಾನೆ. ದೇವರ ಕಾರ್ಯ ನೀವು ಮಾಡಿ. ಗುರುಗಳ ನುಡಿಗಳನ್ನು ಪಾಲಿಸಬೇಕಾದ್ದು ನಮ್ಮ ಕರ್ತವ್ಯ. ನೀವು ಕರೆದಾಗ ನಾವು ಬರುತ್ತೇವೆ. ನಮಗೆ ಬೇಕೆನಿಸಿದಾಗಲೂ ಬರುತ್ತೇವೆ."

ಒಬ್ಬರನ್ನೊಬ್ಬರು ಮತ್ತೆ ಬಾಚಿ ತಬ್ಬಿಕೊಳ್ಳುತ್ತಾರೆ. ಈ ಘಟನೆ ನಾಟಕದಲ್ಲಿ ಕಲ್ಪನೆಯಾಗಿ ಮೂಡಿದರೂ ಈ ಮೂರೂ ಮಹಾನುಭಾವರ ಗೆಳೆತನಕ್ಕೆ ಸಾಕ್ಷಿಯಾಗಿದೆ.

ಕನಕದಾಸರು ಕೃಷ್ಣನ ಭಕ್ತರು. ಅವರು ಕರೆದಾಗ ಕೃಷ್ಣ ಬರುತ್ತಿದ್ದ. ಅವರು ಉಡುಪಿಗೆ ಭೇಟಿಕೊಟ್ಟ ಸಂದರ್ಭದಲ್ಲಿ ವಾದಿರಾಜರು ಅಲ್ಲಿಯೇ ಇದ್ದು ಗೆಳೆಯನನ್ನು ಕೃಷ್ಣ ದರ್ಶನಕ್ಕೆ ಕೂಡಿಯೇ ಕರೆದುಕೊಂಡು ಹೋಗಿರುತ್ತಾರೆ. ಅಷ್ಟಕ್ಕೂ ಕನಕರನ್ನು ತಡೆಯುವ ಶಕ್ತಿ ಯಾರಿಗಿತ್ತು? ಒಟ್ಟಿನಲ್ಲಿ ಇವೆಲ್ಲಾ ಪ್ರತೀತಿಗಳು. ಕಾಲಕ್ಕೆ ತಕ್ಕಂತೆ, ಸಂದರ್ಭಕ್ಕೆ ತಕ್ಕಂತೆ, ಅವರವರ ಅನುಕೂಲಕ್ಕೆ ತಕ್ಕಂತೆ ರೂಪುಗೊಂಡಿವೆ."

ನಾವೆಲ್ಲ, ವಿಜಯನಗರ, ಪುರಂದರ ಮಂಟಪ, ತುಂಗಭದ್ರೆ, ತಟದಲ್ಲಿದ್ದ ಮೂವರು ದಾಸವರೇಣ್ಯರ ಗುಂಗಿನಲ್ಲಿದ್ದೆವು. ಪದ್ಮನಾಭದಾಸರು ನಮ್ಮನ್ನು ಭೂಮಿಗೆ ಕರೆತಂದರು.

"ರಮೇಶ, ಇನ್ನು ತ್ಯಾಗರಾಜರ ಬಳಿಗೆ ಹೋಗೋಣವೆ?"

"ಪುರಂದರರು, ಕಾಲವಾದ 200 ವರ್ಷಗಳ ನಂತರ, ತ್ಯಾಗರಾಜರ ಜನನ

(1767–1847). ತಂಜಾವೂರು, ತಿರುವಾರೂರಿನಲ್ಲಿ. ಬಾಲ್ಯದಿಂದಲೆ ಅಸಾಧಾರಣ ಪ್ರತಿಭೆ. ತಾಯಿ, ಸೀತಮ್ಮನವರು ಪುರಂದರರ ಕೀರ್ತನೆಗಳನ್ನು ಹಾಡುತ್ತಿದ್ದರು. ಕೇಳುತ್ತಿದ್ದಂತೆ ಆ ಕೀರ್ತನೆಗಳು, ತಾಯಿ ಮತ್ತು ತಂದೆಯ ಭಕ್ತಿಯು ತ್ಯಾಗರಾಜರಲ್ಲಿ ಮನೆಮಾಡತೊಡಗಿದ್ದವು. ತಂದೆಯೂ ತಂಜಾವೂರು ಸಂಸ್ಥಾನದಲ್ಲಿ ಆಸ್ಥಾನ ವಿದ್ವಾಂಸರು.
ಹದಿಮೂರನೆಯ ವಯಸ್ಸಿನಲ್ಲಿಯೆ, ತ್ಯಾಗರಾಜರು, ಕೃತಿ ರಚನೆ ಮಾಡುತ್ತಾರೆ . ಅವರ "ಪ್ರಹ್ಲಾದ ಭಕ್ತಿ ವಿಜಯ" ಕೃತಿಯ ಮಂಗಳ ಶ್ಲೋಕದಲ್ಲಿ, ತ್ಯಾಗರಾಜರು, ಪುರಂದರರನ್ನು ಸ್ಮರಿಸಿದ್ದಾರೆ.

ತ್ಯಾಗರಾಜರಿಗೆ, ತಂಜಾವೂರು ಸಂಸ್ಥಾನದಿಂದ, ಆಸ್ಥಾನ ವಿದ್ವಾಂಸರಾಗುವ ಆಹ್ವಾನ. ಹೆಸರಿಗೆ ತಕ್ಕಂತೆ ಅವರು ತ್ಯಾಗರಾಜರು. "ಬೇಡ, ರಾಮನ ಮುಂದೆ, ಯಾವ ರಾಜರೂ ಇಲ್ಲ"ವೆನ್ನುತ್ತಾರೆ. ಊರಿಂದ ಊರಿಗೆ, ದೇವಸ್ಥಾನಗಳಿಂದ ದೇವಸ್ಥಾನಗಳಿಗೆ ಅವರ ಭಕ್ತಿಗಾನ ಪಯಣ ಆರಂಭ. ನೂರಾರು ಕೃತಿಗಳು. 24000ವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. 700ಕ್ಕೂ ಹೆಚ್ಚು ಕೀರ್ತನೆಗಳು ಸಿಕ್ಕಿವೆ. ತ್ಯಾಗರಾಜರು, ಕರ್ನಾಟಕ ಸಂಗೀತಗಾನ ಶೈಲಿಗೆ ಹೊಸತನವನ್ನು ತಂದರು. ಹಾಡುವ ಪ್ರಕ್ರಿಯೆಗಳನ್ನು ಸ್ಪಷ್ಟವಾಗಿ ನಿಗದಿಪಡಿಸಿದರು. 212 ರಾಗಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. 66 ಹೊಸರಾಗಗಳನ್ನು ಸೃಷ್ಟಿಸಿದ್ದಾರೆ.

"ನಿಮಗೆ ತ್ಯಾಗರಾಜರು ಸ್ಫೂರ್ತಿಯಲ್ಲವೇ?"

"ಹೌದು, ಅವರು ಮೇಳಕರ್ತ ರಾಗಗಳನ್ನು ಪ್ರಸಿದ್ಧಿಗೆ ತಂದವರು. ದೇವತಾ ಸಂಕೀರ್ತನೆಗಳನ್ನು ಜನಪ್ರಿಯಗೊಳಿಸಿದರು. ಸಂಗೀತವನ್ನು ಮತ್ತೆ ಶ್ರೀಸಾಮಾನ್ಯನ ಬಳಿಗೆ ತೆಗೆದುಕೊಂಡು ಹೋದವರು."

"ನಾನು ಕಾಲೇಜಿನಲ್ಲಿದ್ದಾಗ, ಹಾಡುಗಳನ್ನು ಹಾಡುತ್ತಿದ್ದೆ. ಆದರೆ ಪದ್ಧತಿಯ ಪ್ರಕಾರ ನನಗೆ ಸಂಗೀತ ಪಾಠವಾಗಿರಲಿಲ್ಲ. ಆಗೀಗ ಸಂಗೀತ ಬಲ್ಲ ಗೆಳೆಯರು ತಿರುವಯ್ಯಾರ್ ಬಗ್ಗೆ ಹೇಳುತ್ತಿದ್ದರು. ತ್ಯಾಗರಾಜರ ಸಮಾಧಿ, ಆರಾಧನೆ ಬಹಳ ಚೆನ್ನಾಗಿ ಭವ್ಯವಾಗಿ ನಡೆಯುತ್ತದೆ" ಇತ್ಯಾದಿ. ಕೆಲಸಕ್ಕೆ ಸೇರಿದ ಮೇಲೆ ಹಲವಾರು ಮಹಿಳಾ ಸಹೋದ್ಯೋಗಿಗಳು, ತಿರುವಯ್ಯಾರಿಗೆ ಹೋಗಿ ಹಾಡಿದೆ ಅಂತ ಹೆಮ್ಮೆ ಪಡುತ್ತಿದ್ದರು. ಹೆಮ್ಮೆಪಡುವ ವಿಚಾರವೇ ಅದು. ಹಿರಿ ಕಿರಿ ಸಂಗೀತಗಾರರು, ತಿರುವಯ್ಯಾರಿನಲ್ಲಿ ಹಾಡಿದರೆ ಜನ್ಮಸಾರ್ಥಕವೆಂದು ಭಾವಿಸುತಿದ್ದರು.

ನಾವು "ರುದ್ರಪಟ್ಟಣ ಸಂಗೀತೋತ್ಸವ ಸಮಿತಿ ಟ್ರಸ್ಟ್" ಆರಂಭಿಸಿದ ಮೇಲೆ,

ಕರ್ನಾಟಕದಲ್ಲಿಯೂ ಸಂಗೀತಗ್ರಾಮದ ಪರಿಕಲ್ಪನೆಯನ್ನು ಹುಟ್ಟುಹಾಕಬೇಕು ಎಂದು ತೀರ್ಮಾನಿಸಿದೆವು. ಅದರ ಪರಿಣಾಮವೇ ಈ ಸಂಗೀತ ಮಂದಿರ. ಪ್ರತಿವರ್ಷದ ತ್ಯಾಗರಾಜ ಆರಾಧನೆ ಮತ್ತು ಮೇ ತಿಂಗಳಲ್ಲಿ "ಸಂಗೀತೋತ್ಸವ" ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ.

.

ತ್ಯಾಗರಾಜರ "ಪಂಚರತ್ನ" ಕೃತಿಗಳನ್ನು ಹಾಡದೆ ಇದ್ದರೆ ಸಂಗೀತ ಸಾರ್ಥಕವಾಗುವುದಿಲ್ಲ. "ಮೇಳಕರ್ತ" ರಾಗಗಳು, ಸಂಪೂರ್ಣ ರಾಗಗಳು. ಸಪ್ತಸ್ವರಗಳು, ಆರೋಹಣ, ಅವರೋಹಣದಲ್ಲಿ ವಿಜೃಂಭಿಸುತ್ತವೆ. ನಾನು, ಸ್ವಂತ ರಚನೆಯ 72 ರಾಗಗಳ ಮೇಳಮಾಲ ಕೃತಿಯನ್ನು ರಚಿಸಿರುವೆ. ಜೊತೆಗೆ "ಪುರಂದರ ಮೇಳಮಾಲ"ದಲ್ಲಿ ಪುರಂದರರ 72 ರಚನೆಗಳನ್ನು ನೀಡಿರುವೆ, ಹಾಡಿರುವೆ, ಅಂದರು ಆರ್.ಕೆ.ಪಿ. ನಮಗೋ ಹೆಮ್ಮೆಯೋ ಹೆಮ್ಮೆ.

ತ್ಯಾಗರಾಜರು, 1847ರಲ್ಲಿ ತಿರುವೈಯ್ಯಾರಿನಲ್ಲಿ ಸಮಾಧಿಸ್ಥರಾದರು. ಅವರ ಸಮಾಧಿ ಅಲ್ಲಿದೆ, ಅದರ ಪುನರುಜ್ಜೀವನವಾಗಬೇಕು ಎಂದು, ಬಿಡಾರಂ ಕೃಷ್ಣಪ್ಪನವರು, ಪ್ರಸಿದ್ಧ ಸಂಗೀತಗಾರ್ತಿ ಬೆಂಗಳೂರು ನಾಗರತ್ನಮ್ಮನವರಿಗೆ ತಿಳಿಸಿದ್ದರು. ಅಂತೆಯೇ ನಾಗರತ್ನ ಅವರು ತಮ್ಮ ಸಮಸ್ತ ಆಸ್ತಿಯನ್ನು ವಿನಿಯೋಗಿಸಿ ತ್ಯಾಗರಾಜರ ಸಮಾಧಿ ಸ್ಥಳವನ್ನು ಗುರುತಿಸಿ, ಪುನರ್ನಿರ್ಮಾಣ ಮಾಡಿದರು. ವಾರ್ಷಿಕ ಆರಾಧನೆಗಳನ್ನು ಆರಂಭಿಸಿದರು. ಅವರದು ದೊಡ್ಡ ಕಥೆ, ಇನ್ಯಾವಾಗಲಾದರೂ ಮಾತನಾಡೋಣ. ಮುಖ್ಯವಾದ ವಿಷಯವೆಂದರೆ ನಾಗರತ್ನಮ್ಮನವರ ಸಮಾಧಿಯೂ ತಿರುವೈಯ್ಯಾರಿನಲ್ಲಿದೆ.

ರುದ್ರಪಟ್ಟಣದಲ್ಲಿ, "ನಾದಲೋಕ" ಎಂಬ ಬಡಾವಣೆಯಿದೆ. ಪ್ರತಿ ನಿವೇಶನಕ್ಕೂ ರಾಗಗಳ ಹೆಸರು. ಮುಖ್ಯರಸ್ತೆಯಲ್ಲಿ "ಮೇಳ ಮಾಲ" ವೃತ್ತವಿದೆ. 72 ಮೇಳಕರ್ತ ರಾಗಗಳ, 12 ರಾಗಗುಚ್ಛಗಳ ಚಕ್ರವನ್ನು ಒಳಗೊಂಡ "ಮೇಳಮಾಲ ವೃತ್ತ"ವನ್ನು ರಚಿಸಲಾಗಿದೆ. ಹೋಗುವಮುನ್ನ ಮರೆಯದೆ ನೋಡಿ.

ಈ ದೇವಸ್ಥಾನದಲ್ಲಿ ತ್ಯಾಗರಾಜರು, "ಪ" ಪಂಚಮಸ್ವರ ಸ್ಥಾನದಲ್ಲಿ ಇದ್ದಾರೆ. ಅದು ಏರಿಳಿತಗಳಿಲ್ಲದ ಸ್ಥಿರವಾದ ಸ್ಥಾನ. ಪದ್ಮನಾಭದಾಸರು, ತ್ಯಾಗರಾಜರಿಗೆ ನಮಸ್ಕರಿಸಿ "ಎಂದುರೋ ಮಹಾನುಭಾವುಲು..." ಹಾಡತೊಡಗಿದರು.

09
'ಮೀನಲೋಚನಿ ಪಾಶಮೋಚನಿ ವಾಣಿ ಕಂದಂಬ ವನವಾಸಿನಿ'

ದಾಸರ ಧ್ವನಿ ಅನುರಣಿಸುತ್ತಿತ್ತು. ಇಡೀ ವಾತಾವರಣ ದೈವಿಕ. ನಾದ ಸಮುದ್ರದ ಅಲೆಗಳು ಮೃದುವಾಗಿ ನಮ್ಮನ್ನು ಸ್ಪರ್ಶಿಸುತ್ತಿದ್ದವು. ಕೆಲವೊಮ್ಮೆ ಮನಸ್ಸನ್ನು ಒದ್ದೆ ಮಾಡುತ್ತಿದ್ದವು. ಕಣ್ಮುಚ್ಚಿ ಪದ್ಮನಾಭರು ಹಾಡುತ್ತಿದ್ದಾರೆ. ಷಡ್ಜಾಂಬೆಯೂ ಸೇರಿದಂತೆ ಆ ದೇವಸ್ಥಾನದಲ್ಲಿ ಪ್ರತಿಷ್ಠಿತರಾದ ಎಲ್ಲಾ ನಾದಮೂರ್ತಿಗಳು ಸಶರೀರಗಳಾಗಿ ನಮ್ಮೊಡನೆ ತಾವೂ ಕೂತು ಕೇಳುತ್ತಿದ್ದಾರೆನೋ ಅನ್ನಿಸತೊಡಗಿದೆ. ದಾಸರು ನಾದದೊಂದಿಗೆ ಒಂದಾಗಿದ್ದಾರೆ, ನಿರ್ವಿಕಲ್ಪವೇ ಅಲ್ಲವೇ, ಗಾಯಕನೋರ್ವ ಹಾಡುತ್ತ... ಹಾಡುತ್ತಾ... ನಾದವೇ ಆಗುವುದು, ಶರೀರ ಶಾರೀರಗಳು ಅವಿಭಕ್ತವಾಗುವುದು. ಕೇಳುಗರಿಗೆ ಅಂತಹ ಅನುಭವ ಆಗುವುದೊ ಇಲ್ಲವೊ... ಆದರೆ ಗಾಯಕರ ತನ್ಮಯತೆಯ ಭಾವ ನಮಗೆ ಹಾಗೆನ್ನಿಸಿತ್ತು.

ತ್ಯಾಗರಾಜರ ರಚನೆಗಳು ಅತ್ಯಂತ ಭಾವಪೂರ್ಣ. ನವರಸಗಳನ್ನೂ ಕೃತಿಯಲ್ಲಿ ತರುತ್ತಾರೆ. ರಾಮನನ್ನು ಪ್ರೀತಿಸುತ್ತಾರೆ, ಛೇಡಿಸುತ್ತಾರೆ, ಅವನಿಗಾಗಿ ಅಳುತ್ತಾರೆ... ಹೀಗೆ. ಪಾಂಡಿತ್ಯಕ್ಕಿಂತ ಅಲ್ಲಿ ನಾದ ಭಾವ ಭಕ್ತಿಗಳ ಸಮ ಸಮ ನರ್ತನ ವಿಲಾಸ. ತ್ಯಾಗಯ್ಯನವರ ಮನದಲ್ಲಿ, ಹಾಡಿನಲ್ಲಿ ಹೊಕ್ಕು ಗಾನದಲ್ಲಿ ಹದವಾಗಿ ಬೆಂದ ಭಕ್ತಿಯ ತಿನಿಸುಗಳನ್ನು ಪದ್ಮನಾಭರು ನಮಗೆ ಆ ಘಳಿಗೆ ಉಣಬಡಿಸಿದರು.

"ತ್ಯಾಗರಾಜರ ಬಲಕ್ಕೆ ಇರುವವರೆ, ಮುತ್ತುಸ್ವಾಮಿ ದೀಕ್ಷಿತರು. ಸ್ವರಗಳಲ್ಲಿ "ಧ" (ಧೈವತ) ಇವರ ಸ್ಥಾನವಾಗಿದೆ" ಎಂದರು ಪದ್ಮನಾಭರು. ದೀಕ್ಷಿತರ ಕೃತಿಗಳು ವ್ಯಾಕರಣಬದ್ಧ, ಸಾಹಿತ್ಯ ನಿಷ್ಠ. ಕೃತಿಗಳಿಗೆ ಪಲ್ಲವಿ ಅನುಪಲ್ಲವಿ ಚರಣಗಳ ಸ್ವರೂಪವನ್ನಿತ್ತವರು. ವಿಶಿಷ್ಠವೆಂದರೆ ಎಲ್ಲಾ ಕೃತಿಯಲ್ಲಿ ಕಾಣಿಸುವ "ರಾಗಮುದ್ರೆ" ಶತಮಾನಗಳಾದರೂ ಬದಲಿಸಲು ಆಗದ ಛಾಪು. "ಗುರುಗುಹ"ವೆಂಬುದು ದೀಕ್ಷಿತರ ಅಂಕಿತನಾಮ.

"ಪದ್ಮನಾಭರೆ, ನೀವು ಅಭಿನಯಿಸಿರುವ "ಮುತ್ತುಸ್ವಾಮಿ ದೀಕ್ಷಿತರು" ನಾಟಕವನ್ನು ನಾನು ನೋಡಿದ್ದೇನೆ." ಗುಂಪಿನಿಂದ ಧ್ವನಿಯೊಂದು ಕೇಳಿಸಿತು.

"ಅದರ ಬಗ್ಗೆ ಹೇಳಿ" ಮತ್ತೊಂದು.
ದಾಸರು, ನಕ್ಕರು. "ಅದೊಂದು ದೊಡ್ಡ ಕಥೆ. ನನ್ನ ಆತ್ಮ ಚರಿತ್ರೆ, "ನೆನಪಿನಂಗಳ" ಕೃತಿಯಲ್ಲಿ ಎಲ್ಲವನ್ನೂ ವಿವರವಾಗಿ ಬರೆದಿರುವೆ."

"ಓದಿದ್ದೇವೆ, ಓದುತ್ತೇವೆ" ಎಂಬ ಮಾತುಗಳು. ಕೊನೆಗೊಬ್ಬರು ಕೇಳಿದರು.

"ಈಗ ಆ ಬಗ್ಗೆ ಎರಡು ಮಾತು ಹೇಳಿ."
ಪದ್ಮನಾಭರು "ನೀವು ಬಿಡುವವರಲ್ಲ" ಅನ್ನುತ್ತಾ ನೆನಪುಗಳನ್ನು ಮೆಲಕು ಹಾಕತೊಡಗಿದರು.

"ಅದು 1994ರ ಸಮಯ. ನನ್ನ ಸಂಗೀತದ ಮೇಷ್ಟ್ರು ಶ್ರೀ ಎಚ್ ವಿ ಕೃಷ್ಣಮೂರ್ತಿ ಅವರು. ನನ್ನಿಂದ, ದೀಕ್ಷಿತರ ಬಗ್ಗೆ ನಾಟಕ ಮಾಡಿಸಬೇಕೆಂದು ಬಯಸುತ್ತಿದ್ದರು. ನಾನು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದೆ."

"ಯಾಕೆ? ಅನುಭವವಿರಲಿಲ್ಲವೇ?'

"ಹಾಗೇನಿಲ್ಲ. ಆ ವೇಳೆಗೆ ನನ್ನ ಸಂಗೀತ ಶಾಲೆ "ವಿಜಯ ಕಾಲೇಜ್ ಆಫ್ ಮ್ಯೂಸಿಕ್"ನಲ್ಲಿ ಎರಡು ನಾಟಕ ಮಾಡಿದ್ದೆ.

"ಊರಿನಲ್ಲಿ, ಸ್ಕೂಲಿನ ಅನುಭವವೇನು?"

"ಹ್ಞಾ.. ನಾನಾಗ ರುದ್ರಪಟ್ಣದಲ್ಲಿ ಇದ್ದೆ. 1962, ಮಿಡ್ಲ್ ಸ್ಕೂಲ್ ಮುಗಿಸಿ, ಬಸವಾಪಟ್ಣದ "ಮಲ್ಲಪ್ಪಶೆಟ್ಟಿ ಜಿಲ್ಲಾ ಬೋರ್ಡ್ ಪ್ರೌಢಶಾಲೆ"ಯನ್ನು ಸೇರಿದ್ದೆ. ಜನವರಿ ತಿಂಗಳು. ಸ್ಕೂಲ್ ಡೇ. ಹೆಡ್ಮಾಸ್ಟರ್ "ಕುಂತಿ ಕರ್ಣರ ಭೇಟಿ" ಗಮಕ ನಾಟಕವನ್ನು ಆಡಿಸಬೇಕೆಂದು ತೀರ್ಮಾನಿಸಿ, ಅಮ್ಮಾಮಿಗೆ ಹೇಳಿದ್ದರು."

"ಅಮ್ಮಾಮಿ ಯಾರು?"

"ಖ್ಯಾತ ಗಮಕ ವಿದ್ವಾಂಸ ಬಿ.ಎಸ್.ಎಸ್.ಕೌಶಿಕ್ ಮಗಳು, ರುದ್ರಪಟ್ಟಣದವರು, ವಸಂತಲಕ್ಷ್ಮಿ ಅಮ್ಮಾಮಿಯವರು. ನನಗೆ ಗಮಕದ ಪಾಠ ಮಾಡಿದ್ದರು. ನಾನು ಆಗ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿತಿಲ್ಲದಿದ್ದರೂ ಸಂಸ್ಕಾರದ ಬಲದ ಮೇಲೆ ಹಾಡುತ್ತಿದ್ದೆ. ಅಮ್ಮಾಮಿ ತುಂಬಾ ನಿಯತ್ತಿನ ಮಹಿಳೆ. ಕಲೆಯಲ್ಲಿ ಮಹಾ ಶ್ರದ್ಧೆ, ಕತ್ತಿಮಣೆ ಮೇಲೆ ಕೂತ್ಕೊಂಡು ಅಡಿಕೆ ಸುಲಿಯುವಾಗ್ಲೂ ಹಾಡ್ತಾನೆ ಇರೋರು. ಸಾಹಿತ್ಯಭಾಗ ಚೆನ್ನಾಗಿ ತಿಳ್ಕೊಂಡಿದ್ರು. ಯಾವ ಪದ್ಯಕ್ಕೆ ಬೇಕಾದ್ರೂ ಪ್ರತಿಪದಾರ್ಥ ಹೇಳ್ತಾ ಇದ್ರು. ಅಂದ್ರೆ, ಶ್ರದ್ಧೆ, ಛಲ ಇದ್ರೆ ಏನ್ ಬೇಕಾದ್ರೂ ಸಾಧಿಸಬಹುದು ಅನ್ನೋ ಪಾಠಾನ ನಾನು ಕಲಿತಿದ್ದು ಅಮ್ಮಾಮಿಯವರಿಂದಲೇ.

ಹಾಡೋಕೆ ಶ್ರುತಿ ಇರಬೇಕು, ಶಾರೀರಕ್ಕೂ ಶ್ರುತಿಗೂ ಅಂತಹ ಅದ್ಭುತವಾದ ಸಂಬಂಧ ಇದೆ ಅನ್ನುವ ಅಭಿಪ್ರಾಯದ ಬೀಜಾಂಕುರವಾಗಿದ್ದು ಅಲ್ಲೇ, ರಾಗಗಳ ಓಂನ್ನಾಮವಾದದ್ದೂ ಅಲ್ಲೇ. ನಾನೂ ಹಾಡಬಲ್ಲೆ ಎಂಬ ನಂಬಿಕೆ ಬಂದುದೂ

ಅಲ್ಲೇ. ಸಾಹಿತ್ಯಕ್ಕೆ ಅನುಗುಣವಾಗಿ ರಾಗಭಾವ ಕೊಡಬೇಕು ಎಂಬ ಕಿಂಚಿತ್ ತಿಳುವಳಿಕೆ ಬಂದದ್ದೂ ಅಲ್ಲೇ. ಅಂದರೆ ನನಗೆ ಗೊತ್ತಿಲ್ಲದೆಯೇ ನನ್ನ ಸಂಗೀತ ಪ್ರಪಂಚದ ಹೆಬ್ಬಾಗಿಲು ತೆರೆದದ್ದು ಆ ಸಂದರ್ಭದಲ್ಲೇ. ಅಂತೂ ವಸಂತಲಕ್ಷ್ಮಿ ಅಮ್ಮಾಮಿಯವರು ನನ್ನ ಸಂಗೀತದ ಬದುಕಿಗೆ ಬಾಲ್ಯದಲ್ಲೇ ವರ್ಚಸ್ಸು ಮತ್ತು ಅವಕಾಶವನ್ನು ಕೊಟ್ಟವರು. ಅವರಿಗೆ ನನ್ನ ಭಾವಪೂರ್ಣವಾದ ನಮನಗಳು ಸಲ್ಲಬೇಕು.

ಈ ಸಂದರ್ಭದಲ್ಲಿ ನಮ್ಮ ಮರಿಯಪ್ಪ ಮಾವಯ್ಯನವರು ನನ್ನನ್ನು ಕರೆದು ಮೂಲ ದೇವರನಾಮಗಳನ್ನು ಹೇಳಿಕೊಟ್ಟಿದ್ರು. ದಯಮಾಡೋ ರಂಗ, ನೋಡುವುದೇ ಕಣ್ಣು, ಶಿವದರುಶನ ನನಗಾಯ್ತು. ಒಳ್ಳೆಯ ಬರವಣಿಗೆ.... ಇತ್ಯಾದಿ. ತುಂಬಾ ಪ್ರೀತಿ ವಾತ್ಸಲ್ಯದಿಂದ ಹೇಳಿಕೊಟ್ರು. ನಾನು ಅದನ್ನೇ ಹತ್ತಾರು ಕಡೆ ಬ್ರಹ್ಮಾಸ್ತ್ರವನ್ನಾಗಿ ಉಪಯೋಗಿಸಿಕೊಂಡಿದ್ದೆ. ಏನೇ ಆಗಲಿ ನನ್ನ ಸಂಗೀತ ಬದುಕಿಗೆ ಈ ಮಹನೀಯರು "ಪೈರಿಗೆ ನೀರೆರೆದು ಬೆಳೆಸುವಂತೆ" ನನ್ನನ್ನ ಬೆಳೆಸಿದ್ದಾರೆ. ಮಾಮ ಮರಿಯಪ್ಪ ಮಾವನವರಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ."

"ಅಮ್ಮಾಮಿ ಬಹಳ ಸಂತೋಷಪಟ್ಟು ಒಪ್ಪಿಗೆಯನ್ನು ನೀಡಿ, ಅಭ್ಯಾಸದ ತರಗತಿಗಳನ್ನು ಪ್ರಾರಂಭಿಸಿಯೇ ಬಿಟ್ರು. ನನಗೂ ಬಣ್ಣ ಹಾಕ್ಕೊಳೋಕೆ ಇಷ್ಟ. ನನ್ನಿಷ್ಟದ ಹಾಗೆ ನನಗೆ ಕರ್ಣನ ಪಾತ್ರ. ಸುಮಾರು ನಲವತ್ತು ಪದ್ಯಗಳಿದ್ದವು. ಕುಮಾರವ್ಯಾಸ ಭಾರತದಿಂದ ಆಯ್ದ ಪದ್ಯಗಳೇ. ಗಮಕ ವಿದ್ವಾನ್ ಬಿ.ಎಸ್.ಎಸ್. ಕೌಶಿಕ್ ಅವರು ಬಹಳ ಸೃಜನಾತ್ಮಕವಾದ ಕೆಲಸ ಮಾಡಿದ್ರು. ಸಂಭಾಷಣೆ ಇರಲಿಲ್ಲ. ಬರೀ ಪದ್ಯಗಳನ್ನು ವಾಚನ ಮಾಡಬೇಕು. ನಾಟಕಕ್ಕೆ ಬೇಕಾದ ಭಾವಾಭಿನಯಗಳನ್ನು ನೀಡಬೇಕು. ಅಷ್ಟು ಪದ್ಯಗಳನ್ನು ಕಂಠಪಾಠ ಮಾಡಬೇಕು. ನನಗೆ ಆಗ ಹದಿಮೂರು ವರ್ಷದ ಪ್ರಾಯ. ಶಾರೀರ ಒಡೆದಿತ್ತೋ ಇಲ್ಲವೋ, ಅದು ಜ್ಞಾಪಕವಿಲ್ಲ. ಬಹುಶಃ ಐದು ಮನೆ ಶ್ರುತಿಯಲ್ಲೇ ಹಾಡ್ತಾ ಇದ್ವಿ ಅಂತ ಕಾಣಿಸುತ್ತೆ. ಅಷ್ಟೂ ಪದ್ಯಗಳನ್ನು ಚೆನ್ನಾಗಿ ಕಂಠಪಾಠ ಮಾಡಿದೆ. ಅದ್ಭುತವಾದ ಪದ್ಯಗಳು. ಅಮ್ಮಾಮಿಯವರು ಬಹಳ ಶ್ರದ್ಧೆಯಿಂದ, ಪ್ರೀತಿ ವಿಶ್ವಾಸಗಳಿಂದ ಹೇಳ್ಕೊಡ್ತಾ ಇದ್ರು. ರಾಗ ಚೌಕಟ್ಟಿನ ಸಂಸ್ಕಾರವೇ ಇಲ್ಲದ ನಾನು ಅದು ಹೇಗೋ ಎಲ್ಲ ಪದ್ಯಗಳನ್ನೂ ಆಯಾಯಾ ರಾಗಗಳಲ್ಲಿ ಮೈಗೂಡಿಸಿಕೊಂಡೆ. ನನಗೂ ಉತ್ಸಾಹ. ಅಂತೂ ಇಂತು ಸ್ಕೂಲ್ ಡೇ' ಬಂದೇ ಬಿಡ್ತು. ನಾವೆಲ್ಲ ಸನ್ನದ್ಧರಾಗಿದ್ವಿ. ಸ್ಕೂಲ್ ಮುಂದೆ ಚಪ್ಪರ ಹಾಕಿದ್ರು, ಸ್ಟೇಜ್ ಹಾಕಿದ್ರು. ಆರ್.ಎಸ್. ರಂಗನಾಥ್, ಕೃಷ್ಣನ ಪಾತ್ರ. ಒಳ್ಳೆಯ ಶಾರೀರ, ಚೆನ್ನಾಗಿ ಹಾಡೋನು. ನಾನು "ಸರಿಸಿಜನಾಭ ಸೋದರಿ" ಹಾಡಿದ್ರೆ, ಅವನು "ಪಾಲಿಸು ಪನ್ನಗವೇಣಿ" ಹಾಡ್ತಾ ಇದ್ದ. ಹಾಡಿಕೆಯಲ್ಲಿ ಭಾವವಿತ್ತು. ಗಮಕದಲ್ಲಿ ನನಗಿಂತ ಇನ್ನೂ ಹೆಚ್ಚಿನ ಪಾಠವಾಗಿತ್ತು ಅವನಿಗೆ. ನನ್ನದು ಈ ನಾಟಕಕ್ಕೆ ಎಷ್ಟು ಬೇಕೋ ಅಷ್ಟೆ.

ನಾಟಕ ಪ್ರಾರಂಭ ಆಗಬೇಕು. ಅಮ್ಮಾಮಿಗೆ ಟೆನ್ಶನ್ ಅಂದ್ರೆ ಟೆನ್ಶನ್ನು 'ಸರಿಯಾಗಿ ಹಾಡ್ರಪ್ಪ, ಇಲ್ಲದೇ ಹೋದ್ರೆ ನನಗೂ ಮರ್ಯಾದೆ ಹೋಗುತ್ತೆ, ನಮ್ಮ ತಂದೆಗೂ ಮರ್ಯಾದೆ ಹೋಗುತ್ತೆ" ಅಂತ ಅಳೋಕೆ ಶುರುಮಾಡಿಬಿಟ್ರು.

ನಾನು ಮೊದಲೇ ಬಹಳ ಕ್ಯಾಶುಯಲ್. ಅವರು ಅಳ್ತಾ ಇದ್ರೆ ನಾನು ನಗ್ತಾ ಇದ್ದೆ. ನಾಟಕ ಪ್ರಾರಂಭವಾಯ್ತು. ಮೊದಲನೇ ದೃಶ್ಯವೇ "ಕರ್ಣ" "ಧ್ಯೇಯಸ್ಸದಾ ಸವಿತೃಮಂಡಲ ಮಧ್ಯವರ್ತಿ" ಅನ್ನೋ ಶ್ಲೋಕ. ನಾನು ಬಹಳ ಭಾವಪೂರ್ಣವಾಗಿ (ಬಿಲಹರಿ ರಾಗ ಅಂತ ನೆನಪು) ಆ ಶ್ಲೋಕವನ್ನು ಹಾಡಿ, "ಭಗವಾನ್ ಭಾಸ್ಕರ" ಎಂಬ ಮತ್ತೊಂದು ಶ್ಲೋಕವನ್ನೂ ಹಾಡಿ ಸೂರ್ಯನಿಗೆ ದೀರ್ಘದಂಡ ನಮಸ್ಕಾರ ಮಾಡುತ್ತಿರುವಾಗಲೇ ಸಭಿಕರಿಂದ ಕರತಾಡನ. ನನಗೆ ಏನು ಮಾಡೋಕೂ ಗೊತ್ತಾಗಲಿಲ್ಲ. ಬಹಳ ಖುಷಿಯಾಯಿತು. ತಕ್ಷಣವೇ ಕೃಷ್ಣನ ಪ್ರವೇಶ. ರಂಗು, ಕೃಷ್ಣನ ವೇಷದಲ್ಲಿ ಬಹಳ ಚೆನ್ನಾಗಿ ಹಾಡ್ತಾ ಇದ್ದ. ನನಗೊ, ಒಳ್ಳೆಯ ಜರತಾರಿ ಸೀರೆಯಲ್ಲಿ ಕಚ್ಚೆಪಂಚೆ ಉಡಿಸಿದ್ದರು. ತಲೆಯಲ್ಲಿ ನಾವೇ ಮಾಡಿದ ಕಿರೀಟ. ಕೈಯಲ್ಲಿ ಕಲರ್ ಪೇಪರ್ ಅಂಟಿಸಿದ ಕತ್ತಿ. ಬಿಳಿ ಜುಬ್ಬ ಇರಬೇಕು. ಕರ್ಣನಿಗೂ, ಕೃಷ್ಣನಿಗೂ ನಡೆಯುವ ಸಂಭಾಷಣೆ ಅತ್ಯದ್ಭುತವಾದದ್ದು. ನನಗಿಂತ ಚೆನ್ನಾಗಿ ಹಾಡ್ಬೇಕು ಅಂತ ರಂಗು. ಅವನಿಗಿಂತ ಚೆನ್ನಾಗಿ ಹಾಡ್ಬೇಕು ಅಂತ ನಾನು. ಅಂತೂ ಅದ್ಭುತ ಅನುಭವ. "ಮರುಳು–ಮಾಧವ ಮಹಿಯ ರಾಜ್ಯದ ಸಿರಿಗೆ ಸೋಲುವನಲ್ಲ" ಮೋಹನದಲ್ಲಿ ಹೇಳಿಕೊಟ್ಟಿದ್ರು. ನನಗೂ ಆವತ್ತು ಶಾರೀರ ಚೆನ್ನಾಗಿ ಇತ್ತು. "ಮರುಳು ಮಾಧವ" ಅನ್ನುವ ಆ ಸಾಹಿತ್ಯವನ್ನು ಬಹಳ ಜೋರಾಗಿಯೇ ತಾರಸ್ಥಾಯಿ ಗಾಂಧಾರದಲ್ಲಿ ಪ್ರಾರಂಭಿಸಿ ತಾರಪಂಚಮ ಮುಟ್ಟಿ ಪದ್ಯವನ್ನು ಮುಗಿಸಿದಾಗ ಸಭೆಯಲ್ಲೆಲ್ಲಾ ಕೋಲಾಹಲ. ಚಪ್ಪಾಳೆಯ ಸುರಿಮಳೆ, ಬಹುಶಃ ಆ ಅನುಭವವನ್ನು ಮರೆಯೋದಕ್ಕೆ ಸಾಧ್ಯವಿಲ್ಲ.

"ನಂತರ ಮತ್ತೊಂದು ರೋಚಕ ದೃಶ್ಯ. ಕುಂತಿ, ಕರ್ಣರ ಸಂವಾದ. ಈ ಸಂದರ್ಭ ನಮ್ಮಿಬ್ಬರನ್ನು ಭಾವಸಾಗರದಲ್ಲಿ ಮುಳುಗಿಸುತ್ತಾ ಇತ್ತು. "ನಿನ್ನ ವೀರರೈವರ ನೋಯಿಸೆನು ರಾಜೀವ ಸಖನಾಣೆ" ಅಂದಾಗ ನನ್ನ ಕಣ್ಣಿನಲ್ಲಿ ಧಾರಾಕಾರವಾಗಿ ನೀರು; ರಂಗೂನೂ (ರಂಗೂಗೆ ಕೃಷ್ಣ ಮತ್ತು ಕುಂತಿಯ ಪಾತ್ರ) ಸಹ ತಾಯಿಯಲ್ಲಿ ಇರಬೇಕಾದ ಎಲ್ಲ ಭಾವಗಳನ್ನೂ ಅಭಿವ್ಯಕ್ತಿಸುತ್ತಾ ಮಗನನ್ನು ಅಪ್ಪಿಕೊಳ್ಳುತ್ತಿದ್ದ ಸಂದರ್ಭ ರೋಮಾಂಚಕ. ಇಡೀ ಸಭೆ "ಪಿನ್ ಡ್ರಾಪ್ ಸೈಲೆನ್ಸ್", ಎಲ್ಲರಲ್ಲೂ ಭಾವಪರವಶವಾದ ಕಣ್ಣೀರನ್ನು ಕಾಣಬಹುದಾಗಿತ್ತು. ಸುಮಾರೂ ಒಂದೂವರೆ ಗಂಟೆ ಈ ನಾಟಕ ಅಂದಿನ ಸಭಿಕರ ಮನಸ್ಸನ್ನು ಗೆದ್ದಿತ್ತು. ಅಮ್ಮಾಮಿ ನನ್ನನ್ನ ಅಪ್ಪಿಕೊಂಡು ಆನಂದಭಾಷ್ಪವನ್ನು ಸುರಿಸಿದ್ದು ನನಗೆ ಆಶೀರ್ವಾದದ ನಾಂದಿಯಾಯಿತು. ಎಲ್ಲರೂ ಸಂತೋಷಪಟ್ಟರು.

ಚಿಕ್ಕಣ್ಣಶೆಟ್ಟಿ ವ್ಯಾಪಾರಿಗಳು ಬಹಳ ಆನಂದಪಟ್ಟು ನನಗೆ ಒಂದು ನೋಟ್‌ಬುಕ್ ಪ್ರೆಸೆಂಟ್ ಮಾಡಿದ್ರು. ಅದೇ ನನಗೆ ರಾಷ್ಟ್ರಪ್ರಶಸ್ತಿ ತಗೊಂಡಷ್ಟು ಖುಷಿ, ನಮ್ಮ ಉಪಾಧ್ಯಾಯರೆಲ್ಲಾ ತುಂಬಾ ಸಂತೋಷಪಟ್ರು. ಹೀಗೆ ನನ್ನ ಸ್ಕೂಲಿನ ಬದುಕೂ ಸಹ ಸಂಗೀತಮಯವಾಗೇ ಇತ್ತು. ಶಾಲೆಯ ಒಳಗಿನ ಚಟುವಟಿಕೆಗಿಂತ ನನಗೆ ಹೊರಗಿನ ಚಟುವಟಿಕೆಗಳಲ್ಲೇ ತುಂಬಾ ಆಸಕ್ತಿ. ಆದರೂ ನನಗರಿವಿಲ್ಲದಂತೆಯೇ ಸ್ಕೂಲಿನಲ್ಲಿ ನಾನು ಕಲಿತದ್ದು ಇಂದು ನನ್ನ ಜ್ಞಾನವಿಕಾಸಕ್ಕೆ ಸಹಕಾರಿಯಾಗಿದೆ."
("ನೆನಪಿನಂಗಳದಲ್ಲಿ" ಕೃತಿಯಿಂದ)

ಶ್ರೀ ಎಚ್ ವಿ ಕೃಷ್ಣಮೂರ್ತಿಯವರು, ದೀಕ್ಷಿತರ ಬದುಕು ಮತ್ತು ಪವಾಡಗಳ ಬಗ್ಗೆ ಸವಿಸ್ತಾರವಾದ ಲೇಖನವನ್ನು ಸಿದ್ಧಪಡಿಸಿ, ಆಗ ಜಯನಗರ ನ್ಯಾಷನಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಶ್ರೀಮತಿ ಗೀತಾ ರಾಮಾನುಜಂ ಅವರಿಗೆ ಕೊಟ್ಟಿದ್ದರು. ಗೀತಾ ಅವರು ನಾಟಕವನ್ನು ಸಿದ್ಧಪಡಿಸಿದ್ದರು. ಆರ್.ಕೆ.ಪಿ ಅವರೇ ಎಲ್ಲಾ ಹಾಡುಗಳನ್ನು ಹಾಡಿ ರೆಕಾರ್ಡ್ ಮಾಡಿದರು.

ಪದ್ಮನಾಭರೆಂದರು "ಅದೇ ಒಂದು ಅನಿರ್ವಚನೀಯವಾದ ಅನುಭವ." ಶ್ರೀನಾಥಾದಿ ಗುರುಗುಹೋ, ಮಾನಸ ಗುರುಗುಹ, ಬೃಹಸ್ಪತೇ ಹಿರಣ್ಮಯೀಂ ಲಕ್ಷ್ಮೀಂ, ಆನಂದಾಮೃತಕರ್ಷಿಣಿ, ಅದ್ಭುತವಾದ ಕೃತಿಗಳು, ಹಾಡೋಕೆ ಆನಂದ. "ಮಾನಸ ಗುರುಗುಹ"ದ ಆನಂದಭೈರವಿ ರಾಗ ಸಂಚಾರಗಳು ಊಹೆಗೂ ಮೀರಿದ್ದು. ಸಂಚಾರಗಳು ನವ್ಯನೂತನ. "ಗಮಗಮಪಾ ಸಗಗಮ, ಗಮಗಗ, ಮಪಮಮ" ಹೀಗೆ ಅದ್ಭುತವಾದ ಪ್ರಯೋಗಗಳು."

ನಾಟಕದ ಅಭ್ಯಾಸ ಬಹಳ ಚಂದವಾಗಿ ನಡೆಯಿತು. ಹೆಚ್ಚು ಕಲಿತಂತಾಯಿತು. ಸಂಗೀತದ ಬಗ್ಗೆ ಆದರ ಅಭಿಮಾನಗಳು ಹೆಚ್ಚಾಯಿತು. ಹೆಚ್ ಎನ್ ಕಲಾಕ್ಷೇತ್ರದಲ್ಲಿ ನಾಟಕ ಅದ್ಭುತ ಯಶಸ್ಸು. ಎಲ್ಲರಿಗೂ ಆಶ್ಚರ್ಯ.

ಈ ನಾಟಕ ಹಲವಾರು ಪ್ರದರ್ಶನಗಳನ್ನು ಕಂಡಿತು. ಶಿವಮೊಗ್ಗಾದಲ್ಲಿ ನಡೆದ ಪ್ರದರ್ಶನದಲ್ಲಿ, ಮುತ್ತುಸ್ವಾಮಿ ದೀಕ್ಷಿತರ ತಂದೆಯ ಪಾತ್ರವಹಿಸುತ್ತಿದ್ದ ಉಪಾಸನೆ ಸೀತಾರಾಂ ಅವರಿಗೆ ಹೃದಯದ ಬೇನೆಯಿಂದ ಬರಲು ಆಗಲಿಲ್ಲ. ಕೊನೆಗಳಿಗೆಯಲ್ಲಿ, ದೀಕ್ಷಿತರ ಹಾಗೂ ಅವರ ತಂದೆ ರಾಮಸ್ವಾಮಿ ದೀಕ್ಷಿತರ, ಎರಡೂ ಪಾತ್ರವನ್ನು ಆರ್.ಕೆ.ಪಿ ಅವರೇ ಮಾಡಬೇಕಾಯಿತು, ಅಭಿಜಾತ ಕಲಾವಿದರು ಇವರು, ಏನೂ ತೊಂದರೆಯಾಗಲಿಲ್ಲ. ನಾಟಕ ಯಶಸ್ವಿಯಾಯಿತು.

ನಾಟಕದ ಎರಡನೆ ಪ್ರಯೋಗವು, ಪದ್ಮನಾಭರ "ಶಾರದಾ ಕಲಾ ಕೇಂದ್ರ"ದ ವತಿಯಿಂದಲೇ ನಡೆಯಿತು. ನಾಟಕಕ್ಕೆ ಧನಸಹಾಯ ಮಾಡಿದವರನ್ನು ಪದ್ಮನಾಭರು

ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಮುಂದೆ "ದಾಸ ಪುರಂದರ, ತ್ಯಾಗರಾಜರು ಹಾಗೂ ಶ್ಯಾಮಾಶಾಸ್ತ್ರಿ"ಗಳ ಬದುಕಿನ ಬಗ್ಗೆ ಶ್ರೀಮತಿ ಗೀತಾ ರಾಮಾನುಜಂ ಅವರು ರಚಿಸಿದ ನಾಟಕಗಳಲ್ಲಿ, ಪುರಂದರ, ತ್ಯಾಗರಾಜ, ಶ್ಯಾಮಾಶಾಸ್ತ್ರಿ ಅವರ ಪಾತ್ರಗಳನ್ನು ವಹಿಸಿದ್ದೇ ಅಲ್ಲದೆ, ಸಂಗೀತ ನಿರ್ದೇಶನ ಮಾಡಿ, ಸ್ವತಃ ಹಾಡಿದ್ದು, ಪದ್ಮನಾಭರಿಗೆ, ತೃಪ್ತಿ ಕೊಟ್ಟ ವಿಷಯ.

"ನನ್ನ ನಾಟಕದ ಕಥೆಯಾಯಿತು. ಸ್ವಲ್ಪ ಮುತ್ತುಸ್ವಾಮಿ ದೀಕ್ಷಿತರ ಬಗ್ಗೆ ತಿಳಿಯೋಣವೇ" ಅಂದರು ಪದ್ಮನಾಭರು. ಎಲ್ಲರ ಗಮನವು ದೀಕ್ಷಿತರ ಮೂರ್ತಿಯ ಕಡೆಗೆ ಹರಿಯಿತು

ಮುತ್ತುಸ್ವಾಮಿ ದೀಕ್ಷಿತರ ಕಾಲ 1775– 1835. ಇವರನ್ನು ಮುದ್ದುಸ್ವಾಮಿ ದೀಕ್ಷಿತರು ಎಂದೂ ಗುರುತಿಸುತ್ತಾರೆ. ಜನನ ತಿರುವಾರೂರಿನಲ್ಲಿ, ತಂಜಾವೂರು ಸಂಸ್ಥಾನ. ತಂದೆ ರಾಮಸ್ವಾಮಿ ದೀಕ್ಷಿತರು. ಪ್ರಸಿದ್ಧ ಲಾಕ್ಷಣಿಕ "ವೆಂಕಟಮಖಿ" (ಕರ್ನಾಟಕ ಮೂಲದವರು, "ಚತುರ್ದಂಡಿ ಪ್ರಕಾಶಿಕೆ" ಎಂಬ ಸಂಗೀತಶಾಸ್ತ್ರ ಗ್ರಂಥವನ್ನು ರಚಿಸಿದವರು) ಅವರು "ಅಸಂಪೂರ್ಣಮೇಳ ಪದ್ಧತಿ"ಯ ಸಂಗೀತ ಸಂಪ್ರದಾಯವನ್ನು ಪಾಲಿಸುತ್ತಿದ್ದರು.

16ನೆಯ ವಯಸ್ಸಿಗೆ, ದೀಕ್ಷಿತರು ಸಂಸ್ಕೃತ, ವೇದಗಳು, ಕಾವ್ಯ, ಜ್ಯೋತಿಷ್ಯ, ವೈದ್ಯ, ಖಗೋಳ ಶಾಸ್ತ್ರಗಳು ಮತ್ತು ಸಂಗೀತದಲ್ಲಿ ಪರಿಣತಿಯನ್ನು ಗಳಿಸಿದರು. ಕೆಲವು ಕಾರಣಗಳಿಂದ, ದೀಕ್ಷಿತರ ಕುಟುಂಬದವರು ಚೆನ್ನೈ ಸಮೀಪದ ಮನಾಲಿಗೆ ವಲಸೆ ಹೋದರು. ಇವರ ಆಶ್ರಯದಾತರಾಗಿದ್ದ ವೆಂಕಟಸ್ವಾಮಿ ಮೊದಲಿಯಾರರು, ಮದ್ರಾಸಿನ ಸೆಂಟ್ ಜಾರ್ಜಗೆ ಕರೆದೊಯ್ದು, ಪಾಶ್ಚಿಮಾತ್ಯ ಸಂಗೀತದ ಪರಿಚಯವನ್ನು ಮಾಡಿಸಿದರು. ವಯಲಿನ್ ವಾದ್ಯದ ಪರಿಚಯವಾಯಿತು.

ಒಮ್ಮೆ, ಉತ್ತರ ಭಾರತದಿಂದ ಬಂದಿದ್ದ "ಚಿದಂಬರ ಯೋಗಿ"ಗಳೆಂಬುವರು, ದೀಕ್ಷಿತರ ಮನೆಯಲ್ಲಿ, ಚಾತುರ್ಮಾಸಕ್ಕೆ ಕುಳಿತರು. ಬಾಲಕ ಮುತ್ತುಸ್ವಾಮಿಯ ಪ್ರೌಢಿಮೆ, ಪ್ರತಿಭೆ, ಓದಿನಲ್ಲಿ, ಅಧ್ಯಾತ್ಮದಲ್ಲಿ ಇರುವ ಅಪಾರ ಆಸಕ್ತಿಯನ್ನು ಗಮನಿಸಿ, ತಮ್ಮೊಡನೆ ಉತ್ತರ ಭಾರತಕ್ಕೆ ಕರೆದೊಯ್ದರು. ಬನಾರಸ್ ನಲ್ಲಿ ದೀಕ್ಷಿತರು ಐದು ವರ್ಷಕಾಲವಿದ್ದರು. ಆ ಸಂದರ್ಭದಲ್ಲಿ ಸಂಸ್ಕೃತ ಸಾಹಿತ್ಯವೇ ಅಲ್ಲದೆ ತತ್ತ್ವಶಾಸ್ತ್ರ, ಶ್ರೀವಿದ್ಯಾ ಉಪಾಸನೆ, ಸಂಗೀತ ವಿಶೇಷವಾಗಿ, ಹಿಂದೂಸ್ತಾನಿ ದ್ರುಪದ್ ಶೈಲಿಯನ್ನು ಅಭ್ಯಸಿಸಿದರು. ಚಿದಂಬರನಾಥ ಯೋಗಿಯವರ ನಿರ್ವಾಣದ ನಂತರ ತಿರುವಾರೂರಿಗೆ ಮರಳಿದರು.

ಭರತಖಂಡದ ಉದ್ದಗಲಕ್ಕೂ ಓಡಾಡಿ (ಬದರಿನಾಥದಿಂದ ರಾಮೇಶ್ವರದವರೆಗೆ

ಅನ್ನುತ್ತಾರೆ), ಎಲ್ಲಾ ದೇವಾನುದೇವತೆಗಳ ಬಗ್ಗೆ ಕೀರ್ತನೆಗಳನ್ನು ದೀಕ್ಷಿತರು ರಚಿಸಿದ್ದಾರೆ. ತ್ಯಾಗರಾಜರಂತೆ ಭಾವಸಮುದ್ರದಲ್ಲಿ ತೇಲದೆ ಭಗವಂತನೊಂದಿಗೆ ಪ್ರೌಢ ಸಂಬಂಧವನ್ನು ಸ್ಥಾಪಿಸಿಕೊಂಡವರು ದೀಕ್ಷಿತರು. ಅವರ ಕೃತಿಗಳಲ್ಲಿ "ಅದ್ವೈತಸಾರಾಮೃತ"ವೇ ತುಂಬಿದೆ.

ಐನೂರಕ್ಕೂ ಮಿಗಿಲಾದ ಕೀರ್ತನೆಗಳು, ಅದರಲ್ಲಿ ಸುಮಾರು ನಲವತ್ತು ಕೀರ್ತನೆಗಳನ್ನು ಪಾಶ್ಚಿಮಾತ್ಯ ಶೈಲಿಯಲ್ಲಿ ರಚಿಸಿ, ಕರ್ನಾಟಕ ಸಂಗೀತಕ್ಕೆ ಮಹದುಪಕಾರವನ್ನು ಮಾಡಿದ್ದಾರೆ. ಸೇಂಟ್ ಜಾರ್ಜ್‌ನಲ್ಲಿ ಕಲಿತ ವಯಲಿನ್ ಅನ್ನು ಕರ್ನಾಟಕ ಸಂಗೀತಕ್ಕೆ ಜೋಡಿಸಿದರು. ಬಹು ಪ್ರಸಿದ್ಧರಾದ ಅವರ ಶಿಷ್ಯರುಗಳು ವಯಲಿನ್ ಅನ್ನು ಕರ್ನಾಟಕ ಸಂಗೀತದ ಭಾಗವನ್ನಾಗಿಸಿದ್ದಾರೆ.

ಇವರ ಬಗ್ಗೆ ಸಾಕಷ್ಟು ಪ್ರತೀತಿಗಳೂ ಹರಡಿದೆ. ಕಾಶಿಯಲ್ಲಿದ್ದಾಗ, ಗಂಗೆಯಲ್ಲಿ ಸ್ನಾನ ಮಾಡಿ, ಮುಳುಗಿ ಎದ್ದಾಗ, ಕೈಗೆ ವೀಣೆ ಬಂದಿತಂತೆ. ಹಾಗಾಗಿ, ದೀಕ್ಷಿತರೇ ತಮ್ಮನ್ನು ವೈಣಿಕ ಗಾಯಕರೆಂದು ಕರೆಂದುಕೊಂಡಿದ್ದಾರೆ. ತಿರುತ್ತಣಿಯಲ್ಲಿ, ಮುರುಗನು ದೀಕ್ಷಿತರ ಬಾಯಿಗೆ, ಕಲ್ಲು ಸಕ್ಕರೆಯನ್ನು ಹಾಕಿದನಂತೆ. ಆಗ ಅವರಿಗೆ ಅವರ್ಣನೀಯವಾದ ಆಧ್ಯಾತ್ಮಿಕ ಅನುಭವವಾಯಿತು. ಆಗ ಅವರು "ಗುರುಗುಹ" ದಾಸರಾಗಿ, ತಮ್ಮ ಮೊದಲ ಕೃತಿ "ಶ್ರೀನಾಥಾದಿ ಗುರುಗುಹೋ ಜಯತಿ ಜಯತಿ" ರಚಿಸಿದರಂತೆ.

ಹಲವಾರು ಹಳೆಯ ರಾಗಗಳನ್ನು ಪುನರುಜ್ಜೀವನಗೊಳಿಸಿ, 72 ಮೇಳಕರ್ತರಾಗಗಳಲ್ಲಿ ಹಾಗೂ "ಸಮಷ್ಟಿಚರಣ"ಗಳಲ್ಲಿ ಕೃತಿಗಳನ್ನು ರಚಿಸಿ, ಕರ್ನಾಟಕ ಸಂಗೀತದ ಮೇಲ್ಮೆಗೆ ಮುತ್ತುಸ್ವಾಮಿ ದೀಕ್ಷಿತರು ಕಾರಣರಾಗಿದ್ದಾರೆ.

ತಮ್ಮ ಅಂತ್ಯ ಸಮಯದಲ್ಲಿ "ತಮ್ಮ ಆರಾಧ್ಯ ದೇವತೆ ಮೀನಾಕ್ಷಿಯನ್ನು ನೆನಸುತ್ತಾ ಮೀನಲೋಚನಿ ಪಾಶಮೋಚನಿ.. ಕೃತಿಯನ್ನು ಹಾಡುತ್ತಾ ಎಟಿಯಾಂಪುರಂನಲ್ಲಿ ತಾಯಿಯ ಪಾದಸೇರಿದರು. ಅದು ಅತ್ಯಂತ ಭಾವನಾತ್ಮಕ ಸಂದರ್ಭ. ಅಂತಹ ಮಹಾತ್ಮ ಮುತ್ತಸ್ವಾಮಿ ದೀಕ್ಷಿತರ ಚರಣಗಳಿಗೆ ಪ್ರಣಾಮಗಳು" ಎಂದರು ಪದ್ಮನಾಭದಾಸರು.

ನಮಗೆ, ಯಾವುದೋ ಕಾಲದಿಂದ ಹೊರಬಂದಂಥ ಅನುಭವ. ನಮ್ಮೊಡನೆ ಇದ್ದ ಕೃಷ್ಣ ಕೇಳಿದರು,

"ನೀವೂ ದೀಕ್ಷಿತರಲ್ಲವೇ?"

"ನಾನು ಈ ರೀತಿ ಎಲ್ಲಿಯೂ ಹೇಳಿಲ್ಲ. ಆದರೆ ನೀವು, ಝೀ ಟಿವಿಯಲ್ಲಿ ಈ ಮಾತು ಹೇಳಿಸಿದಿರಿ."
"ಹೌದು, ನನ್ನ ತಂದೆ ಕೃಷ್ಣಯ್ಯ ದೀಕ್ಷಿತರು. ವೇದ ಶಾಸ್ತ್ರ ಪಾರಂಗತರು. ಕೃಷಿ ನಮ್ಮ ಮುಖ್ಯ ಉದ್ಯೋಗ. ಕೆಲವೊಮ್ಮೆ ಪೌರೋಹಿತ್ಯವನ್ನೂ ಮಾಡುತ್ತಿದ್ದರು"..

10
ಹಿಮಾದ್ರಿ ಸುತೆ ಪಾಹಿಮಾಂ...ವರದೆ ಪರದೇವತೆ

ನೀವು ಬೃಹದೇಶ್ವರ ದೇವಾಲಯವನ್ನು ನೋಡಿದ್ದೀರಿ. ತಂಜಾವೂರಿನಲ್ಲಿ. 18 ಅಡಿ ಪೀಠದ ಮೇಲೆ, 12 ಅಡಿ ಎತ್ತರದ, ಏಕಶಿಲಾ ಲಿಂಗ, ಅದನ್ನು ಆವರಿಸಿ ಎದ್ದಿರುವ 16 ಅಂತಸ್ತುಗಳ 216 ಅಡಿಗಳ ಎತ್ತರದ ಬೃಹತ್ ಗೋಪುರ. 80 ಟನ್ ತೂಕದ ಗ್ರಾನೈಟ್ ಕಲ್ಲಿನ ಮೇಲೆ 25 ಟನ್ ತೂಕದ ಗುಮ್ಮಟವು ಸಾವಿರ ವರ್ಷಗಳಿಂದ, ತನ್ನ ಸುತ್ತಲಿನ ಆಗುಹೋಗುಗಳಿಗೆ ಸಾಕ್ಷಿಯಾಗಿ ಕುಳಿತಿದೆ.

ಒಂದು ಕಿ.ಮೀ ಅಂತರದಲ್ಲಿ, ಪಶ್ಚಿಮದಲ್ಲಿ "ಮೇಳ ರಾಜವೀಧಿ" ಇದೆ. ಅಲ್ಲಿ ಒಂದು ಪುಟ್ಟದೇವಸ್ಥಾನ, ಆಕರ್ಷಣೀಯ, ಅಚ್ಚುಕಟ್ಟು. ಗರ್ಭಗೃಹದಲ್ಲಿ, ಬಲದ ಹೆಗಲಿನ ಮೇಲೆ ಗಿಳಿಯನ್ನು ಕೂರಿಸಿಕೊಂಡಿರುವ, ಅತ್ಯಂತ ಮುದ್ದಾದ, ಅತಿ ಸುಂದರವೂ, ಮನೋಹರವೂ ಆದ "ಬಂಗಾರು ಕಾಮಾಕ್ಷಿ"ಯ ಪುಟ್ಟಮೂರ್ತಿ. ನಿಜವಾಗಿಯೂ ಬಂಗಾರದ ಮೂರ್ತಿಯೆ. ಆ ದೇವಸ್ಥಾನಕ್ಕೆ ಅಂಟಿದಂತೆ ನವನೀತ ಕೃಷ್ಣನ ದೇವಾಲಯ. ಹಿಂಬಾಗಿಲಲ್ಲಿ ಅರ್ಚಕರ ಮನೆ.

19ನೆಯ ಶತಮಾನದ ಆರಂಭಿಕ ದಶಕದ ದಿನಗಳು. "ಮೇಳ ರಾಜಬೀದಿ" ಯನ್ನು ದಾಟಿಕೊಂಡು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ತ್ಯಾಗರಾಜರು ಬರುತ್ತಿದ್ದಾರೆ. ಅದೇ ಸಮಯಕ್ಕೆ ಮತ್ತೊಂದು ಪಕ್ಕದಿಂದ ಇನ್ನೋರ್ವ ತ್ರಿಮೂರ್ತಿ, ಮುತ್ತುಸ್ವಾಮಿ ದೀಕ್ಷಿತರು ಬಂದರು. ಇಬ್ಬರೂ ದೇವಸ್ಥಾನವನ್ನು ಪ್ರವೇಶಿಸುತ್ತಿರುವುದನ್ನು ಕಂಡ, ಅಲ್ಲಿನ ಅರ್ಚಕರೂ, ತ್ರಿಮೂರ್ತಿಗಳಲ್ಲಿ ಮತ್ತೊಬ್ಬರೂ ಆದ ಶ್ಯಾಮಾ ಶಾಸ್ತ್ರಿಗಳು ಗರ್ಭಗುಡಿಯಿಂದ ಇವರನ್ನು ಸ್ವಾಗತಿಸಲು ಹೊರಬಂದರು. ದೇವರಿಗೆ ನಮಸ್ಕರಿಸಿದ ತ್ಯಾಗರಾಜರು ಮತ್ತು ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳಿಗೆ ನಮಸ್ಕರಿಸುತ್ತಾರೆ.

ಒಂದು ಕ್ಷಣ ಹಿಂದೆ ಸರಿದ ಶಾಸ್ತ್ರಿಗಳು,
"ಎಲ್ಲಾದರೂ ಉಂಟೆ, ಸರಸ್ವತಿಯ ವರಪುತ್ರರಾದ ತಾವುಗಳು ನನಗೆ ನಮಸ್ಕರಿಸುವುದುಂಟೆ."

ತ್ಯಾಗರಾಜರು ಮೆಲು ನಗುತ್ತಾ
"ನೀವೂ ಸರಸ್ವತಿಯ ಪುತ್ರರೆ. ಕಾಮಾಕ್ಷಿಯ ಚರಣಕಮಲಗಳನ್ನು ಸದಾ ಸ್ಪರ್ಶಿಸುತ್ತಾ ಪೂಜಿಸುವವರು ನೀವು."
ದೀಕ್ಷಿತರೆಂದರು, "ಮಿಗಿಲಾಗಿ, ನಮ್ಮಿಬ್ಬರಿಗಿಂತ ಹಿರಿಯರು. ಹೆಚ್ಚು ತಿಳಿದವರು. "ಶ್ಯಾಮಕೃಷ್ಣ" ಸೋದರಿಯ ಮಾನಸ ಪುತ್ರರು."

ಮೂವರೂ ನಕ್ಕರು. ಶಾಸ್ತ್ರಿಗಳು ಇಬ್ಬರನ್ನೂ ಕರೆದು, ದೇವಿಯನ್ನು ಪೂಜಿಸುತ್ತಾರೆ. ತೀರ್ಥ ಪ್ರಸಾದಗಳಾಗುತ್ತವೆ. ದೇವಿಯ ಮುಂದೆ ಕುಳಿತು "ಸಂಗೀತ ಪೂಜೆ" ಯನ್ನು ಸಲ್ಲಿಸತೊಡಗಿದರು. ಎಂತಹ ಅದ್ಭುತವಾದ, ಅಪೂರ್ವವಾದ, ಆಧ್ಯಾತ್ಮಿಕ ಸನ್ನಿವೇಶ. ಆ ದೃಶ್ಯವನ್ನು ಕಂಡವರು ಸುಕೃತರು. ಅಂದಿನ ದೈವಿಗಾನವನ್ನು ಕೇಳಿದವರ ಬದುಕು ಸೌಭಾಗ್ಯಸಂಪದವಾಯಿತು. ಅಲ್ಲಿದ್ದ ಭಕ್ತರೆಲ್ಲಾ ದೇವರ ಜೊತೆಗೆ, ಈ ಮೂವರಿಗೂ ಶಿರಸಾಷ್ಟಾಂಗ ಅಭಿವಾದನೆಯನ್ನು ಮಾಡಿದರು. ಸಂಗೀತ ಸೇವೆಯಾಯಿತು.

ತ್ಯಾಗರಾಜರು, "ಅಂತೂ ಕಾಮಾಕ್ಷಿ ಸುಭದ್ರವಾದ, ದೈವಿಕ ಸ್ಥಳಕ್ಕೆ ಬಂದಳು. ನಿಮ್ಮ ಪೂರ್ವಜರ ಶ್ರಮ ಸಾರ್ಥಕವಾಯಿತು."

ದೀಕ್ಷಿತರು ನುಡಿದರು, "ಉತ್ತರ ಭಾರತ ಮತ್ತು ಇತರ ಕಡೆ ನಾನು ನೋಡಿದ್ದೇನೆ. ಸನಾತನ ಧರ್ಮದ ಮೇಲೆ, ನಮ್ಮ ನಂಬಿಕೆಗಳ ಮೇಲೆ ಗದಾಪ್ರಹಾರವಾಗುತ್ತಿದೆ. ನಮ್ಮ ದೇವಾಲಯಗಳನ್ನು, ಮೂರ್ತಿಗಳನ್ನು ಅನ್ಯಮತೀಯರು ಭಂಜನೆ ಮಾಡುತ್ತಿದ್ದಾರೆ. ಅಂತಹುದರಲ್ಲಿ, ತಾಯಿ ಕಾಮಾಕ್ಷಿಯ ಈ ಸುಂದರ ವಿಗ್ರಹವನ್ನು ತಂದು, ಇಷ್ಟು ಸುಂದರವಾದ ದೇವಾಲಯವನ್ನು ಕಟ್ಟಿಸಿರುವುದು ಬಹು ದೊಡ್ಡಕೆಲಸ. ನಿಮ್ಮ ಪೂರ್ವಜರು, ನಮ್ಮ ಸಂಸ್ಕೃತಿ, ಕಲೆಗಳನ್ನು ಕಾಪಾಡಿದರು".

ಶ್ಯಾಮಾಶಾಸ್ತ್ರಿಗಳು ಮೌನವಾಗಿ, ಏನನ್ನೋ ಯೋಚಿಸುತ್ತಿದ್ದರು. ಅಲ್ಲಿದ್ದ ಭಕ್ತನೊಬ್ಬ ಶಾಸ್ತ್ರಿಗಳನ್ನು ಕೇಳಿದ, "ಪೂಜ್ಯರೇ, ಈ ವಿಷಯವನ್ನು ಸ್ವಲ್ಪ ಹೇಳಿ,"
ಶಾಸ್ತ್ರಿಗಳು, ತ್ಯಾಗಯ್ಯ ಮತ್ತು ದೀಕ್ಷಿತರ ಕಡೆ ನೋಡಿದರು. ಇಬ್ಬರೂ ಸಮ್ಮತಿ ಸೂಚಕವಾಗಿ ತಲೆಯಾಡಿಸಿದರು.

ಶಾಸ್ತ್ರಿಗಳು ಮೌನ ಮುರಿದರು.
"ದೇವಿಯು, ಮೊದಲು ಕಾಶಿಯ ಕಂಚಿಕಾಮಾಕ್ಷಿ ಮಂದಿರದಲ್ಲಿ ಪ್ರತಿಷ್ಠಾಪಿತಳಾಗಿದ್ದಳು. ಅಲ್ಲಿನ ಸನಾತನ ದೇವಸ್ಥಾನಗಳನ್ನು ಮಹಮ್ಮದೀಯ ದಾಳಿಕೋರರು ನಾಶ ಮಾಡತೊಡಗಿದಾಗ, ಕಂಚಿಯ ಮಠಕ್ಕೆ ತರಲಾಯಿತು. ಮೇನೆಯಲ್ಲಿ ವಿಗ್ರಹವನ್ನು ಮುಚ್ಚಿಟ್ಟುಕೊಂಡು, "ಸಿಡುಬಿನಿಂದ ತೊಂದರೆ

ಪಡುತ್ತಿರುವ ಹುಡುಗಿ" ಎಂದು ಹೇಳುತ್ತಾ ಇಷ್ಟು ದೂರ ತಂದರಂತೆ.

ಕೆಲವು ಸಮಯದ ನಂತರ ಕಂಚಿಯ ಪ್ರದೇಶದಲ್ಲಿಯೂ ಬ್ರಿಟಿಶರ, ಫ್ರೆಂಚರ ಮತ್ತು ಟಿಪ್ಪುಸುಲ್ತಾನನ "ಕರ್ನಾಟಕ ಯುದ್ಧ"ಗಳು ಪ್ರಾರಂಭವಾದವು. ಆ ಸಂದರ್ಭದಲ್ಲಿ, ನಮ್ಮ ಹಿರಿಯರು, ದೇವಿಯನ್ನು ತಿರುವಾರೂರಿನಲ್ಲಿ ತಂದಿಟ್ಟುಕೊಂಡು ಪೂಜೆ ಪುನಸ್ಕಾರಗಳನ್ನು ನಡೆಸತೊಡಗಿದರು. ಆನಂತರ ತಂಜಾವೂರಿನ ರಾಜ ಪ್ರತಾಪಸಿಂಹ ಭೋನ್ಸಲೆಯು, ತಾಯಿಯನ್ನು ತಂಜಾವೂರಿಗೆ ಕರೆಸಿ, ಪುಟ್ಟದಾದರೂ, ಭವ್ಯವಾದ ಈ ದೇವಸ್ಥಾನವನ್ನು ಕಟ್ಟಿಸಿದರು. ತಾಯಿಯ ಪೂಜೆಯನ್ನು ನನ್ನ ಹಿಂದಿನ ತಲೆಮಾರಿನವರು ನಡೆಸುತ್ತಿದ್ದರು. ಈಗ ಈ ಸೌಭಾಗ್ಯ ನನ್ನದಾಗಿದೆ."

ಶ್ಯಾಮಾಶಾಸ್ತ್ರಿಗಳು ಜನಿಸಿದ್ದು 1762ರಲ್ಲಿ. ತಂದೆ ವಿಶ್ವನಾಥ ಐಯ್ಯರ್. ಮನೆಯವರಿಟ್ಟ ಹೆಸರು, ವೆಂಕಟಕೃಷ್ಣ. ಬಾಲ್ಯದಲ್ಲಿ ಸಂಗೀತ ಪಾಠ ಹೇಳಿದವರು ಸ್ವತಃ ತಂದೆ ಮತ್ತು ಸೋದರ ಮಾವ.

ಇವರ ಮನೆಗೆ ಉತ್ತರಭಾರತದಿಂದ, ಚಾತುರ್ಮಾಸಕ್ಕೆ ಬಂದ "ಸಂಗೀತ ಸ್ವಾಮಿ" ಗಳೆಂಬ ಸನ್ಯಾಸಿಗಳು ಬಾಲಕನ ಬೌದ್ಧಿಕ ಸಾಮರ್ಥ್ಯ ಹಾಗೂ ಗ್ರಹಣ ಶಕ್ತಿಗಳನ್ನು ಗಮನಿಸಿ, ಸಂಕೀರ್ಣವಾದ ಸ್ವರ, ರಾಗ, ತಾಳಗಳನ್ನು ಹೇಳಿಕೊಟ್ಟರು. ನಂತರ ತಂಜಾವೂರು ಸಂಸ್ಥಾನದಲ್ಲಿ ಆಸ್ಥಾನ ವಿದ್ವಾನರಾಗಿದ್ದ "ಪಚ್ಚಮಿರಿ ಆದಿ ಅಪ್ಪಯ್ಯ" ನವರಲ್ಲಿ ಶ್ಯಾಮಾಶಾಸ್ತ್ರಿಗಳು ಸಂಗೀತಾಭ್ಯಾಸವನ್ನು ಮುಂದುವರೆಸಿದರು. ಆದಿ ಅಪ್ಪಯ್ಯನವರು ಮಹಾನ್ ವಿದ್ವಾಂಸರು. ತಂದೆಯ ನಂತರ, ಬಂಗಾರು ಕಾಮಾಕ್ಷಿ ದೇವಾಲಯದ ಅರ್ಚಕ ಜವಾಬ್ದಾರಿಯನ್ನು ಶ್ಯಾಮಾಶಾಸ್ತ್ರಿಗಳು ವಹಿಸಿಕೊಂಡರು.

ಶ್ಯಾಮಾಶಾಸ್ತ್ರಿಗಳು, ಹೆಚ್ಚಿಗೆ ಸಂಚಾರ ಮಾಡಿದವರಲ್ಲ. ಹಲವು ರಸಗಳಲ್ಲಿ ಅಭಿವ್ಯಕ್ತಿ ಮಾಡಲಿಲ್ಲ. ಪಾಂಡಿತ್ಯ ಪ್ರದರ್ಶನ ಮಾಡಲಿಲ್ಲ. ಕಾಮಾಕ್ಷಿಯಲ್ಲಿ ಅತೀವ ಭಕ್ತಿ ಮತ್ತು ಶ್ರದ್ಧೆಯನ್ನು ಉಳ್ಳವರಾಗಿ ಶರಣಾಗತಿಯನ್ನು ಕರುಣೆಯನ್ನು ತಮ್ಮ ಸಂಗೀತದ ಮೂಲಕ ಬೇಡಿದವರು. ಸುಮಾರು 300 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 80 ಕೃತಿಗಳು ಸಿಕ್ಕಿವೆ ಎನ್ನಲಾಗಿದೆ. "ಶ್ಯಾಮಕೃಷ್ಣ" ಅವರ ಅಂಕಿತ ನಾಮ. ಮೀನಾಕ್ಷಿ ನವರತ್ನ ಮಾಲಿಕಾ ಕೀರ್ತನೆಗಳಲ್ಲಿ ಗಾನ ಮಾಧುರ್ಯವು ತುಳುಕುತ್ತಿದೆ. ರಕ್ತಿ ರಾಗಗಳ ವಿಜೃಂಭಣೆ, ಅವರ ಕೀರ್ತನೆಗಳಲ್ಲಿ. ಆನಂದಭೈರವಿ ರಾಗ ಮತ್ತು ಮಿಶ್ರಛಾಪು ತಾಳಗಳು ಅವರಿಗೆ ಪ್ರಿಯವಾಗಿತ್ತು ಎನ್ನಲಾಗಿದೆ. "ಸ್ವರಜತಿ"ಗಳನ್ನು ಸಾಮಾನ್ಯವಾಗಿ ನೃತ್ಯದಲ್ಲಿ ಬಳಸಲಾಗುತ್ತಿತ್ತು. ಶ್ಯಾಮಾಶಾಸ್ತ್ರಿಗಳು ಅವುಗಳನ್ನು ಸಂಗೀತ ಹಾಡಿಕೆಯಲ್ಲಿ ಬಳಸಲು ಸಿದ್ಧಪಡಿಸಿದರು. ಸಂಗೀತಾಭ್ಯಾಸಕ್ಕೆ

ಬಹಳ ಅನುಕೂಲವಾಯಿತು.

ಒಮ್ಮೆ, ಬೊಬ್ಬಿಲಿ ಕೇಶವಯ್ಯ ಎಂಬ ಸಂಗೀತ ದಿಗ್ಗಜರೊಬ್ಬರು ತಂಜಾವೂರಿಗೆ ಬಂದರು. ಕೇಶವಯ್ಯನವರು ಮನ್ನಣೆಯಾಗಿ ಪಡೆದ ಬಿರುದು, ಖಿಲ್ಲತ್ತು, ತೋಡಾಗಳು, ಫಲಕಗಳು, ಪದಕಗಳನ್ನು ಗಾಡಿಯಲ್ಲಿ ತುಂಬಿಸಿಕೊಂಡು ಬರುತ್ತಿದ್ದರಂತೆ. ಆಸ್ಥಾನ ವಿದ್ವಾಂಸರಿಗೆ ಸಂಗೀತದಲ್ಲಿ ಸವಾಲು ಹಾಕಿದರು. ಯಾರಿಗೂ ಆಗಲಿಲ್ಲ. ಎಲ್ಲರೂ ತಲೆ ತಗ್ಗಿಸಿದರು.

ಆಗ ರಾಜರು ಅರಮನೆಯಿಂದ ಬಂಗಾರು ಕಾಮಾಕ್ಷಿಯ ದೇವಾಲಯಕ್ಕೆ ಬಂದರು. ಆತ್ಮಾಭಿಮಾನದ ಪ್ರಶ್ನೆ. ಪೂಜಾ ನಿರತರಾಗಿದ್ದ ಶ್ಯಾಮಾಶಾಸ್ತ್ರಿಗಳ ಕೈಹಿಡಿದು ಬೊಬ್ಬಿಲಿ ಕೇಶವಯ್ಯನವರ ಸವಾಲು ಸ್ವೀಕರಿಸಿ "ಸಂಸ್ಥಾನದ ಮರ್ಯಾದೆ ಕಾಪಾಡಬೇಕು" ಎಂದು ಬೇಡಿಕೊಂಡರು. ದೇವಿಯನ್ನೊಮ್ಮೆ ನೋಡಿದ ಶಾಸ್ತ್ರಿಗಳು "ಆಗಲಿ" ಎಂದುಬಿಟ್ಟರು. ರಾಜರು ಸಂತಸದಿಂದ ಹಿಂತಿರುಗಿದರು.

ಶಾಸ್ತ್ರಿಗಳು ಒಪ್ಪಿದರೂ, ಬಹಳ ಬೇಸರಕ್ಕೆ ಒಳಗಾದರು. "ಎಂಥಾ ಕೆಲಸ ಮಾಡಿಬಿಟ್ಟೆ ನಾನು. ಸಂಗೀತವನ್ನು ಸ್ಪರ್ಧೆಗೆ ಒಡ್ಡಿಬಿಟ್ಟೆನಲ್ಲಾ" "ಅಪಚಾರವಾಯಿತೇ ತಾಯೀ" ಎಂಬ ತಳಮಳ. ಮತ್ತೊಂದೆಡೆ, ಸಂಸ್ಥಾನದ ಗೌರವದ ಪ್ರಶ್ನೆ. ಅದನ್ನು ಕಾಪಾಡಬೇಕಾದ ಮಹತ್ತರ ಜವಾಬ್ದಾರಿ.

ರಾತ್ರಿಯೆಲ್ಲಾ ಕಾಮಾಕ್ಷಿ ದೇವತೆಯ ಸಾನಿಧ್ಯದಲ್ಲಿ, ಗರ್ಭಗುಡಿಯಲ್ಲಿಯೇ ಕುಳಿತರು. ಒಂದೇ ಸಮನೆ ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ನೋವು ಕಡಲಾಗಿತ್ತು. ತಾಯಿಯ ಪಾದಗಳನ್ನು ಹಿಡಿದು ಅಳುತ್ತಾ ಹಾಡುತ್ತಾರೆ "ದೇವಿ ಬ್ರೋವ ಸಮಯಮಿದೆ, ಅತಿವೇಗಮೇ ದೇವಿ..ಬ್ರೋವ ಸಮಯಮಿದೆ.....ಲೋಕಜನನಿ ನಾ ಪೈ ದಯಲೇದ.." ಎಂದು ಕರುಣರಸವು ಉಕ್ಕಿ ಹರಿಯುವಂತೆ ಹಾಡಿದರು.

ಕಾಮಾಕ್ಷಿ ಸ್ವತಃ ಮಾತನಾಡಿದಳು "ವಿಜಯೀಭವ". ಸಂತಸದಿಂದ ಸಿದ್ಧವಾದರು. ಶಾಸ್ತ್ರಿಗಳು ತಾವೇ ಸೃಷ್ಟಿಸಿದ್ದ ಚಿಂತಾಮಣಿ ರಾಗದಲ್ಲಿ ಈ ಅಮರ ಕೃತಿಯನ್ನು ಸೃಷ್ಟಿಸಿದರು.

ಮಾರನೆಯ ದಿನ, ಆಸ್ಥಾನ ಸೇರಿದೆ. ಬೊಬ್ಬಿಲಿ ಕೇಶವಯ್ಯನವರು, ಅಹಂಕಾರವೇ ಮೂರ್ತಿವೆತ್ತಂತೆ ಕುಳಿತಿದ್ದಾರೆ. ಆಸ್ಥಾನ ವಿದ್ವಾಂಸರುಗಳು ಅವನತ ಮುಖಿಗಳಾಗಿದ್ದಾರೆ. ಅವರ ಮನದಲ್ಲಿ ತುಮುಲ. ರಾಜನು ಗಂಭೀರವದನ.

ಸಂಸ್ಥಾನದ ಮರ್ಯಾದೆಯ ಪ್ರಶ್ನೆ ಕಾಡುತ್ತಿದೆ. "ಕಾಪಾಡು ಕಾಮಾಕ್ಷಿಯೇ" ಎಂಬುದು ಅವನ ಪ್ರಾರ್ಥನೆಯಾಗಿದೆ.
ಸ್ಪರ್ಧೆ ಆರಂಭ. ಕೇಶವಯ್ಯನವರು "ಸಿಂಹನಂದನ ತಾಳದಲ್ಲಿ" ಪಲ್ಲವಿ ಹಾಡಿದರು.
ಶ್ಯಾಮಾ ಶಾಸ್ತ್ರಿಗಳು, ಬಲು ಸುಲಭದಲ್ಲಿ ಅದನ್ನು ಮರು ಹಾಡಿಬಿಟ್ಟರು. ಎಲ್ಲರಿಗೂ ಆಶ್ಚರ್ಯ. ರಾಜನಿಗೆ ಸ್ವಲ್ಪ ಶಕ್ತಿ ಬಂದಂತಾಗಿತ್ತು.
"ಸರಿ, ಕೇಶವಯ್ಯನವರೆ, ಈಗ ಈ ಪಲ್ಲವಿಯನ್ನು ಹಾಡಿ" ಅನ್ನುತ್ತಾ ಶಾಸ್ತ್ರಿಗಳು "ಶರಭನಂದನ ತಾಳ"ದಲ್ಲಿ ಹಾಡಿದರು. ಇಡೀ ಆಸ್ಥಾನವೇ ಸರಸಿಜ ವಾಣಿಯಲ್ಲಿ ಮುಳುಗಿಬಿಟ್ಟಿತು. ಗಾನಪ್ರವಾಹವು ತಂಜಾವೂರನ್ನು ತೇಲಾಡಿಸುವಂತೆ ಮಾಡಿತು. ಕೇಶವಯ್ಯನವರು, ಆ ಆನಂದದಲ್ಲಿ ತೇಲಿದರು. ಸಂಗೀತ ಸುಖವನ್ನು ಅವರೂ ಅನುಭವಿಸುತ್ತಿದ್ದರು. ಗಾನ ಮುಗಿಯುತ್ತಿದ್ದಂತೆ, ಆಸನವನ್ನು ಬಿಟ್ಟು ಎದ್ದುಬಂದು, ಶ್ಯಾಮಾಶಾಸ್ತ್ರಿಗಳಿಗೆ ಉದ್ದಂಡ ಪ್ರಣಾಮ ಮಾಡಿಬಿಟ್ಟರು.

"ನೀವು ಹಿರಿಯರು. ನಾನು ಸೋತೆ. ತಪ್ಪು ಮಾಡಿದೆ. ಇನ್ನು ಮುಂದೆ ಅಹಂಕಾರ ಪಡುವುದಿಲ್ಲ. ದಯವಿಟ್ಟು ನನ್ನ ಬಿರುದು, ಖಿಲ್ಲತ್ತು, ತೋಡಾಗಳು, ಫಲಕಗಳು, ಪದಕಗಳೆಲ್ಲವನ್ನೂ ಒಪ್ಪಿಸಿಕೊಳ್ಳಿ."

ಶಾಸ್ತ್ರಿಗಳೆಂದರು,

"ದೇವಿಯ ಅರ್ಚಕನಿಗೆ ಇವೆಲ್ಲ ಬೇಡ. ನಿಮ್ಮ ಬಳಿಯೇ ಇರಲಿ. ಇನ್ನು ಮುಂದೆ ಅಹಂಕಾರಪಡದೆ ಸಂಗೀತ ಸೇವೆ ಮಾಡಿರಿ. ಬೇಸರ ಪಡಬೇಡಿ."

ಕೇಶವಯ್ಯನವರು ಹೇಳಿದರು,

"ಸ್ವಾಮಿ, ಸೋಲಿನಲ್ಲಿ ನನಗೆ ಸ್ವಲ್ಪವೂ ಬೇಸರವಿಲ್ಲ. ಒಂದು ರೀತಿಯಲ್ಲಿ ನಾನು ಅದೃಷ್ಟವಂತ. ನೀವು ಹಾಡುತ್ತಿದ್ದಾಗ ನಾನು ತಾಯಿಯನ್ನು ನೋಡಿದೆ. ಆಕೆ ನಿಮ್ಮ ತೊಡೆಯ ಮೇಲೆ ಆಡುತ್ತಿದ್ದಳು, ವಿವರಿಸಲಾಗದ ಘಟನೆಗಳು. ನಮೋನಮಃ."

ಇನ್ನೊಂದು ಸಂದರ್ಭದಲ್ಲಿ, ಶಾಸ್ತ್ರಿಗಳ ಗುರುಗಳಾದ ಪಚ್ಚಮರಿ ಆದಿ ಅಪ್ಪಯ್ಯನವರು, ಶಾಸ್ತ್ರಿಗಳ ಮನೆಗೆ ಬಂದರು. ಶಾಸ್ತ್ರಿಗಳಿಗೆ, ಎಲೆ ಅಡಿಕೆ ಹಾಕುವ ಅಭ್ಯಾಸವಿತ್ತು. ಅವರ ಬಳಿ ಡಬ್ಬಿಯಲ್ಲಿ ಇವುಗಳು ಸದಾ ಸಿದ್ಧ. ಅಂತೆಯೇ ಬಾಯಲ್ಲೂ ಎಲೆ ಅಡಿಕೆ. ಮಾತನಾಡುತ್ತ ಇದ್ದಾಗ, ಅಕಸ್ಮಾತ್, ಶಾಸ್ತ್ರಿಗಳ ಬಾಯಿಂದ ತಾಂಬೂಲ ಹಾರಿ ಅಪ್ಪಯ್ಯನವರ ಉತ್ತರೀಯದ ಮೇಲೆ ಬಿತ್ತು. ಶಾಸ್ತ್ರಿಗಳು ನಡುಗಿಬಿಟ್ಟರು. "ಎಂತಹ ಅಪಚಾರವಾಯ್ತು." ಗುರುಗಳಿಗೆ ನಮಿಸಿ,

ಕ್ಷಮೆ ಬೇಡಿದರು. ಗುರುಗಳೂ ಉದಾತ್ತರೆ. "ತೊಂದರೆ ಇಲ್ಲ. ಏಳು" ಅಂದರು.

ಕೆಲವು ದಿನಗಳ ನಂತರ ಶಾಸ್ತ್ರಿಗಳು, ಅಪ್ಪಯ್ಯನವರ ಮನೆಗೆ ಹೋಗುತ್ತಾರೆ. ಮಾತನಾಡುತ್ತಾ ಅಪ್ಪಯ್ಯನವರು, ಶಾಸ್ತ್ರಿಗಳನ್ನು ದೇವರಕೋಣೆಗೆ ಕರೆದುಕೊಂಡು ಹೋಗುತ್ತಾರೆ. ತೋರಿಸುತ್ತಾರೆ. "ನೋಡು ಅಲ್ಲೇನಿದೆ?" ಶಾಸ್ತ್ರಿಗಳಿಗೆ ಏಕಕಾಲಕ್ಕೆ ತಲ್ಲಣ ಮತ್ತು ಆಶ್ಚರ್ಯ. ಅಂದು, ಅನಿರೀಕ್ಷಿತವಾಗಿ ಶಾಸ್ತ್ರಿಗಳ ಮನೆಯಲ್ಲಿ ತಾಂಬೂಲವು ಹಾರಿ ಅಪ್ಪಯ್ಯನವರ ಉತ್ತರೀಯದ ಮೇಲೆ ಬಿದ್ದಿತ್ತಲ್ಲಾ. ಆ ಉತ್ತರೀಯ ದೇವರ ಕೋಣೆಯಲ್ಲಿ. ಅಪ್ಪಯ್ಯನವರೆಂದರು, "ಶಾಸ್ತ್ರಿ ನೀನು ಅಲ್ಲಿರುವೆ. ದಿನವೂ ನಾನು ಆ ಉತ್ತರೀಯವನ್ನು ಪೂಜೆ ಮಾಡುವೆ" ಶಾಸ್ತ್ರಿಗಳು ಅವಾಕ್ಕಾದರು.

ಶ್ಯಾಮಾಶಾಸ್ತ್ರಿಗಳು ಜ್ಯೋತಿಷ್ಯವನ್ನು ಅರಿತವರು. ಅವರು ನುಡಿದಂತೆ, ಮಡದಿ ಸತ್ತ ಐದನೆಯ ದಿನ ಶಾಸ್ತ್ರಿಗಳೂ ಅಸ್ತಂಗತರಾದರು. 1827. "ಮಹಾನ್ ವ್ಯಕ್ತಿಗಳು. ಅದಕ್ಕೆ ಅವರು ಈ ದೇವತಾ ಮಂದಿರದಲ್ಲಿ ಇದ್ದಾರೆ."

ಪದ್ಮನಾಭರೆಂದರು : "ಸಪ್ತಸ್ವರ ದೇವತಾ ಧ್ಯಾನ ಮಂದಿರ"ದಲ್ಲಿ "ನಿ"(ನಿಶಾದ) ಸ್ವರ ಸ್ಥಾನದಲ್ಲಿ ಶಾಸ್ತ್ರಿಗಳು ಇರುತ್ತಾರೆ. ಅದು ಕೋಮಲವಾದ, ವಿನಯಪೂರ್ವಕವಾದ ಸ್ವರ, ದೇವಿಯ ಬಳಿ ದೈನ್ಯವನ್ನು ತೋರಿಸುತ್ತದೆ. ಕಾಮಾಕ್ಷಿ ಮತ್ತು ಶ್ಯಾಮಾಶಾಸ್ತ್ರಿಗಳದು ತಾಯಿ ಮಗುವಿನ ಸಂಬಂಧ.

ಮುಂದುವರೆದು, ಪದ್ಮನಾಭರು "ಪ್ರತಿ ದೇವರಿಗೆ ನಮಸ್ಕರಿಸಿದಾಗ, ಆ ಸಂಗೀತಜ್ಞರ ಬಗ್ಗೆ ವಿವರಗಳು ದೊರೆಯುವಂತೆ ಮಾಡಿದ್ದೇವೆ. ಯಾವಾಗಲೂ ನಾನು ಇಲ್ಲಿರಲು ಆಗುವುದಿಲ್ಲ" ಎಂದರು.

"ನಡೆಯಿರಿ, ಈಗ "ದ್ವಾದಶ ಸ್ವರ ಸ್ತಂಭ ಮಂಟಪ"ದ ಬಳಿ ಹೋಗೋಣ."

ನಾವು ನಿಧಾನವಾಗಿ, ದಾಸರು ಹೇಳಿದ ಅಲೌಕಿಕ ಘಟನೆಗಳನ್ನು ಅರಗಿಸಿಕೊಳ್ಳುತ್ತಾ ಮಂಟಪದ ಬಳಿ ಬಂದೆವು.

****

11
ಸಾಮಗಾನ ಪ್ರಿಯ ಸಾಂಬ ರೂಪಿಣಿ

ಸಾಮಗಾನ ಪ್ರಿಯ ಸಾಂಬ ರೂಪಿಣಿ...
ಸಂಗೀತಸುಧೆಯ ಚೈತನ್ಯಧಾರೆ......

"ನಡೀರಿ, ಹೋಗೋಣ" ಅಂದ ಧೀರೇಂದ್ರ. "ಅಂದಹಾಗೆ... " ಮತ್ತೆ ರಮೇಶನ ಮಧ್ಯಪ್ರವೇಶ.
ಪದ್ಮನಾಭರು, "ಏನು", ಎಂಬಂತೆ ತಲೆಯೆತ್ತಿ ನೋಡಿದರು.

"ಏನೂ ಇಲ್ಲ, ಸಪ್ತ ಸ್ವರ ದೇವತಾ ಮಂದಿರ" ವನ್ನು ಯಾರು ಉದ್ಘಾಟಿಸಿದರು. ಏನೇನು ಕಾರ್ಯಕ್ರಮಗಳು ನಡೆದವು?"

"ಸರಿಯಾದ ಪ್ರಶ್ನೆ. ಪ್ರಶ್ನೆ ಕೇಳದೆ ಏನನ್ನೂ ಒಪ್ಪಿಕೊಳ್ಳಬೇಡಿ" ಅಂತ ನಮ್ಮ ಎಚ್ಎನ್ ಹೇಳಿದ್ದಾರೆ, ಧೀರೇಂದ್ರನ ನುಡಿ.

"ದೇವಸ್ಥಾನ, 17–05–2008 ರಲ್ಲಿ, ಮೈಸೂರಿನ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಅಮೃತ ಹಸ್ತದಿಂದ ಉದ್ಘಾಟನೆಯಾಯಿತು. ಏಳು ದಿನ ಸತತ ಸಂಗೀತ ಯಜ್ಞ. ನನ್ನ ಹಲವಾರು ಶಿಷ್ಯರು ಹಾಡಿದರು. ನೃತ್ಯವೂ ಇತ್ತು. ನಾನೂ ಹಾಡಿದೆ. ಸಮಾಜದ ಎಲ್ಲಾ ಕ್ಷೇತ್ರದ ಎಲ್ಲಾ ಗಣ್ಯರು ಬಂದಿದ್ದರು. ಪ್ರತಿದಿನ ಹಗಲು ರಾತ್ರಿ 15 ರಿಂದ 20 ಸಾವಿರ ಜನರು ಊಟಕ್ಕೆ. ಎಲ್ಲವೂ ಪಕ್ಕಾ ವ್ಯವಸ್ಥೆ. ಬಾಣಸಿಗರ ದೊಡ್ಡಗುಂಪೇ ಬಂದಿತ್ತು. ಲವಾಜಮೆಯೆಲ್ಲಾ ಬೆಂಗಳೂರಿನಿಂದ. ಬೇರೆಬೇರೆ ಊರಿಂದ ಬಂದವರಿಗೆ ಉಳಿದುಕೊಳ್ಳಲು ಊರಿನಲ್ಲೇ ವ್ಯವಸ್ಥೆ.

ಅಷ್ಟು ಜನರಿಗೆ, ರುದ್ರಪಟ್ಟಣದಂತಹ ಕುಗ್ರಾಮದಲ್ಲಿ, ನಿಮಗೆ ಆಶ್ಚರ್ಯವೆನಿಸಬಹುದು. ನಮ್ಮೂರ ಪ್ರತಿಮನೆಯೂ ಅತಿಥಿಗೃಹವಾಯಿತು. ಪಾಪ, ನಮ್ಮಜನರು, ಅತಿಥಿಗಳು, ಆತಿಥೇಯರು ಅಪಾರ ಹೊಂದಾವಣಿಕೆ ಮಾಡಿಕೊಂಡರು, ಸಹಕಾರ ಕೊಟ್ಟರು. ಒಂದು ಮನೆಯಲ್ಲೂ ಪಾಶ್ಚಿಮಾತ್ಯ ರೀತಿಯ ಕಮೋಡ್ ಇರಲಿಲ್ಲ. ಹಾಕಿಸಬೇಕಾಯಿತು. ಬಚ್ಚಲು ಮನೆಗಳನ್ನು ರಿಪೇರಿ ಮಾಡಿಸಬೇಕಾಯಿತು. ಕೆಲವು ಮನೆಗಳು ಎಷ್ಟೋ ವರ್ಷಗಳ ನಂತರ ಸುಣ್ಣಬಣ್ಣ ಕಂಡವು. ಒಬ್ಬರೂ ಗೊಣಗಲಿಲ್ಲ. ಒಂದು ತುತ್ತೂ ಕಡಿಮೆಯಾಗಲಿಲ್ಲ. ಈ ಸಣ್ಣ ಕುಗ್ರಾಮಕ್ಕೆ ಅಂತಹ ಅತಿಥಿಗಳನ್ನು, ಸಮಾರಂಭವನ್ನು ಭರಿಸುವ ಶಕ್ತಿ ಹೇಗೆ ಬಂತು! ಒಂದಂತೂ ನಿಜ. ವಾದಿರಾಜರ ಕೃಪೆ. ಆದರೆ ಆ ಕೃಪೆಯು ಶಿಷ್ಯರ, ಅಭಿಮಾನಿಗಳ ಮೂಲಕ ಬಂದಿತು. ಅವರನ್ನು ನಾನು, ನನ್ನ ಶಿಷ್ಯರು,

ಅಭಿಮಾನಿಗಳು ಎಂದೂ ಕರೆಯುವುದಿಲ್ಲ. ಅವೆರೆಲ್ಲಾ ಸಂಗೀತ ಶಾರದೆಯ ಶಿಷ್ಯರು. ರುದ್ರಪಟ್ಟಣದ ಜನರು ಈ ಕಾರ್ಯಕ್ರಮ ತಮ್ಮ ಮನೆಯದು ಅಂದುಕೊಂಡು ನಡೆಸಿಕೊಟ್ಟರು. ಈಗಲೂ ಮುಂದೆಯೂ ಅಂತಹುದೇ ಬಾಂಧವ್ಯ. ರಮೇಶನ ಇನ್ನೊಂದು ಪ್ರಶ್ನೆ ಇದೆ. ಆದರೆ ಅವನು ಕೇಳಿಲ್ಲ. ಅದಕ್ಕೂ ಉತ್ತರಿಸುತ್ತೇನೆ. ದೇವಸ್ಥಾನದ ಸಂಪೂರ್ಣ ಖರ್ಚು, ಶಿಷ್ಯರು ಮತ್ತು ಸಂಗೀತ ಪ್ರೇಮಿಗಳದು. ಸಂಕಲ್ಪ ಮಾಡಿಸಿದ್ದು ವಾದಿರಾಜರು. ಅವರೇ ಜೋಳಿಗೆಯನ್ನು ಕೊಟ್ಟರು. ತುಂಬಿತು, ಮಂದಿರ ಎದ್ದಿತು. ಎಲ್ಲಾ ಕಾರ್ಯಕ್ರಮಗಳೂ ಅಷ್ಟೆ. ವಾದಿರಾಜರಿತ್ತ ಜೋಳಿಗೆ ತುಂಬುತ್ತದೆ ಮತ್ತು ಖಾಲಿಯಾಗುತ್ತದೆ ಮತ್ತೆ ತುಂಬುತ್ತದೆ." ಪದ್ಮನಾಭರು ನಕ್ಕರು.

2008 ರಿಂದ ನಾವು, "ನಾಚಾರಮ್ಮ ಪ್ರಶಸ್ತಿ"ಯನ್ನು ಕೊಡುತ್ತಾ ಬಂದಿದ್ದೇವೆ. ಜೊತೆಗೆ "ಸ್ಪರ್ಶಮಣಿ" ಪ್ರಶಸ್ತಿಗಳು. ಈಗಲೂ ಶಿಸ್ತಿನಿಂದ ನಡೆಯುತ್ತಿದೆ.

ದ್ವಾದಶ ಸ್ವರಸ್ತಂಭ ಮಂಟಪ

ದ್ವಾದಶ ಸ್ವರಸ್ತಂಭ ಮಂಟಪ ನನ್ನ ಕನಸಿನಕೂಸು. ಏನೋ ವಿಶೇಷವಾಗಿ ನಮ್ಮೂರಲ್ಲಿ ಇರಬೇಕು. ಅಲ್ಲದೆ ರುದ್ರಪಟ್ಟಣವು ದೇಶದ ಮೂಲೆಮೂಲೆಗಳಿಂದ, ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸಬೇಕು. ಸಂಗೀತದ ಪ್ರಾಮುಖ್ಯತೆಯೂ ಎದ್ದು ಕಾಣಬೇಕು ಎಂದು ಬಯಕೆ. ಬಹಳ ಚಿಂತಿಸಿ, ಪ್ರೌಢಶಿಲ್ಪಿಗಳೊಂದಿಗೆ ಚರ್ಚಿಸಿ ಯೋಜನೆಯನ್ನು ಸಿದ್ಧಪಡಿಸಿದೆವು. ಸ್ವರಸ್ತಂಭವು ಜನರನ್ನು ಕರೆತರುವಂತಹ ಶಕ್ತಿ ಇರಬೇಕು. ಸಂಗೀತದ ಪ್ರಾಮುಖ್ಯತೆಯೂ ಎದ್ದು ಕಾಣಬೇಕು. ಸ್ವರಸ್ತಂಭವು ಸಾಕಾರವಾಗಲಿತ್ತು.

17–03–2019ರಲ್ಲಿ ಶಿಲಾನ್ಯಾಸವಾಯಿತು. 16–05–2019ರಲ್ಲಿ ಉದ್ಘಾಟನೆಯಾಯ್ತು. ಅಂದರೆ ಸರಿಯಾಗಿ 60 ದಿನಗಳು. ಅಬ್ಬಾ! ಸಂಕಲ್ಪವು ಎಂಥಾ ಸಾಧನೆಯನ್ನಾದರೂ ಮಾಡಿಸುತ್ತದೆ.

"ಈ ಸ್ವರ ಸ್ಥಾನಗಳ ಮಹತ್ವವೇನು?" ಮತ್ತೆ ರಮೇಶನ ಪ್ರಶ್ನೆ.

ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಪ್ರಧಾನವಾಗಿ 12 ಸ್ವರಸ್ಥಾನಗಳವೆ.
ರಿಷಭದಲ್ಲಿ 2 ಸ್ಥಾನಗಳು; ಶುದ್ಧ ರಿಷಭ – ಚತುಶ್ರುತಿ ರಿಷಭ
ಗಾಂಧಾರದಲ್ಲಿ 2 ಸ್ಥಾನಗಳು; ಸಾಧಾರಣ ಗಾಂಧಾರ – ಅಂತರ ಗಾಂಧಾರ
ಮಧ್ಯಮದಲ್ಲಿ 2 ಸ್ಥಾನಗಳು ; ಶುದ್ಧ ಮಧ್ಯಮ, ಪ್ರತಿ ಮಧ್ಯಮ
ಧೈವತದಲ್ಲಿ 2 ಸ್ಥಾನಗಳು; ಶುದ್ಧ ಧೈವತ ಚತುಶ್ರುತಿ ಧೈವತ

ನಿಶಾದದ 2 ಸ್ಥಾನಗಳು; ಕೈಶಿಕಿ ನಿಶಾದ, ಕಾಕಲೀ ನಿಶಾದ
ಜೊತೆಗೆ ಷಡ್ಜ ಮತ್ತು ಪಂಚಮ.

ಇಡೀ "ಶಾಸ್ತ್ರೀಯ ಸಂಗೀತ" ಈ 12 ಸ್ವರಗಳ ಮೇಲೆಯೇ ನಿಂತಿದೆ. ಇಷ್ಟೂ ಸ್ವರಗಳನ್ನು ಒಂದೊಂದು ಸ್ವರ ಸ್ಥಾನಕ್ಕೆ ಒಂದು ಶಿಲೆಯ ಸ್ತಂಭದಂತೆ. 12 ಸ್ತಂಭಗಳಲ್ಲಿ 12 ಸ್ವರಗಳು ಬರುವಂತೆ ಮಾಡಿ (ಮರದ ಸುತ್ತಿಗೆಯಲ್ಲಿ ಆಯಾಯಾ ಸ್ತಂಭಕ್ಕೆ ಹೊಡೆದರೆ, ಆಯಾಯ ಸ್ವರಗಳು ಬರುತ್ತವೆ) ಅರ್ಧ ವರ್ತುಲಾಕಾರದಲ್ಲಿ ಜೋಡಿಸಿ, ಮಂಟಪವನ್ನು ಕಟ್ಟಿ, ಸಪ್ತಸ್ವರ ಮಂದಿರ ಆವರಣದಲ್ಲಿ ಸ್ಥಾಪಿಸಿದ್ದೇವೆ.

"ಗಾನಕಲೆ ಭಗವಂತ ದಯಪಾಲಿಸಿರುವ ಅಪೂರ್ವಕಲೆ. ವಿಶ್ವ ಪರಂಪರೆಯಲ್ಲಿ, ಕಲಾ ಪ್ರಪಂಚದಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತವು ಪ್ರಾಚೀನವಾಗಿದ್ದು, ಗೌರವಸ್ಥಾನವನ್ನೂ ಪಡೆದಿದೆ. ಅದರಲ್ಲಿ ಎರಡು ಪದ್ಧತಿಗಳು, ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತಗಳು.

ಕರ್ನಾಟಕ ಸಂಗೀತ ಬಹಳ ಪ್ರಾಚೀನ ಪದ್ಧತಿ. ವೇದಗಳ ಉಗಮದ ಕಾಲದಿಂದಲೇ ಆರಂಭ. ಈ ಸಂಗೀತ ಪದ್ಧತಿಯು ಸಾಂಪ್ರದಾಯಿಕವಾಗಿ, ವೇದ ಮಂತ್ರಗಳನ್ನು, ಉದಾತ್ತ, ಅನುದಾತ್ತ ಕ್ರಮದಲ್ಲಿ (ಅಂದರೆ ಏರಿಳಿತಗಳು) ಕರ್ಣರಂಜಿತವಾಗಿ ನಿರೂಪಿಸಲ್ಪಡುತ್ತಿದ್ದರೂ, ಒಂದು ಸಂಗೀತ ಪದ್ಧತಿ ಎನ್ನಿಸಿಕೊಂಡಿರಲಿಲ್ಲ. ಆದರೆ ಸ್ವರ ಏರಿಳಿತಗಳು ವೇದಪಠನಗಳಿಂದಲೇ ಪ್ರಾರಂಭವಾಗಿತ್ತು. ಇನ್ನೂ ಸ್ವಲ್ಪ ಮುಂದೆ ಹೋದರೆ ಋಕ್, ಯಜುರ್ ಶಾಖೆಗಳಿಗಿಂತ ಭಿನ್ನವಾದ ಪಠನವನ್ನು ಸಾಮವೇದದಲ್ಲಿ ಕಾಣುತ್ತೇವೆ. ಈ ಎರಡು ಶಾಖೆಗಳಲ್ಲಿ ಕೇವಲ ಮೂರು ಅಥವಾ ನಾಲ್ಕು ಸ್ವರಗಳ ಅಥವಾ ಕಂಪನಗಳಲ್ಲೇ ಪಠನವಾದರೆ, ಸಾಮವೇದದಲ್ಲಿ ಐದು, ಆರು ಸ್ವರಗಳಲ್ಲಿ ಪಠನವಾಗುತ್ತದೆ. ಅಂದು ಅವುಗಳನ್ನು ಸ್ವರವೆಂದಾಗಲೀ, ಸಂಗೀತವೆಂದಾಗಲೀ ಪರಿಗಣಿಸದಿದ್ದರೂ ಪರೋಕ್ಷವಾಗಿ ಕರ್ಣರಂಜಿತ ಸಂಗೀತವೇ.

ಸಂಗೀತದ ಬಹಳ ಪ್ರಬುದ್ಧ ಶಾಸ್ತ್ರೀಯ ಸಂಗೀತ ಲಕ್ಷಣಕಾರರೆಂದರೆ ಭರತ – ನಾಟ್ಯಶಾಸ್ತ್ರ (1ನೇ ಶತಮಾನ), ಮತಂಗ ಬೃಹದ್ದೇಶಿ (2ನೇ ಶತಮಾನ) ಸಂಗೀತ ಮಕರಂದ – ನಾರದ 11ನೇ ಶತಮಾನ, ಸಂಗೀತ ಸುಧಾಕರ ಹರಿಪಾಲ 12ನೇ ಶತಮಾನ, ಹೀಗೆ ಸಮಯಸಾರ – 12ನೇ ಶತಮಾನ, ಸಂಗೀತಸಾರ – ವಿದ್ಯಾರಣ್ಯ – 14ನೇ ಶತಮಾನ, 13ನೆಯ ಶತಮಾನದಲ್ಲಿ "ಸಂಗೀತ ರತ್ನಾಕರ" ಶಾಙ್ಗದೇವನದು. ಇನ್ನೂ ಅನೇಕ ಲಕ್ಷಣಕಾರರು ಶಾಸ್ತ್ರೀಯ ಸಂಗೀತದ ಪಾರಿಭಾಷಿಕ ಶಬ್ದಗಳ ಅಂದರೆ, ನಾದ, ಸ್ವರ, ಶ್ರುತಿ, ರಾಗ, ಲಯ, ತಾಳ ಇತ್ಯಾದಿ ವಿಚಾರಗಳ ಬಗ್ಗೆ ಬಹಳ ವಿಸ್ತಾರ ವಿವರಣೆಯನ್ನು ನೀಡಿದ್ದಲ್ಲದೆ, ಮಾರ್ಗ –

ದೇಶೀ ಸಂಗೀತಗಳ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ.

8ನೇ ಶತಮಾನದಲ್ಲಿನ ಶ್ರೀಮದ್ ಶಂಕರ ಭಗವತ್ಪಾದರು ತಮ್ಮ ಸೌಂದರ್ಯಲಹರಿಯ 69ನೇ ಶ್ಲೋಕದಲ್ಲಿ ಹೀಗೆ ಪ್ರಸ್ತಾಪಿಸುತ್ತಾರೆ:

ಗಲೇ ರೇಖಾಸ್ತಿಸ್ರೋ
(ಕಂಠದ ವಲಿತ್ರಯ ವರ್ಣನೆ)
ಗಲೇ ರೇಖಾಸ್ತಿಸ್ರೋ ಗತಿಗಮಕಗೀತೈಕ ನಿಪುಣೇ
ವಿವಾಹವ್ಯಾನದ ಪ್ರಗುಣ ಗುಣಸಂಖ್ಯಾ ಪ್ರತಿಭುವಃ ।
ವಿರಾಜಂತೇ ನಾನಾವಿಧ ಮಧುರ ರಾಗಾಕರಭುವಾಂ
ತ್ರಯಾಣಾಂ ಗ್ರಾಮಾಣಾಂ ಸ್ಥಿತಿನಿಯಮಸೀಮಾನ ಇವ ತೇ ॥ 69॥

ಪ್ರತಿಪದಾರ್ಥ

ಗತಿಗಮಕ ಗೀತೈಕ ನಿಪುಣೇ = ಸಂಗೀತದ ಗತಿ ಲಯ ಸ್ವರ ಕಂಪನಾದಿಗಳನ್ನು ಬಲ್ಲ ಹೇ ಚತುರೇ! ತೇ = ಇರುವ; ವಿವಾಹ – ವ್ಯಾನದ ಪ್ರಗುಣ ಗುಣ ಗುಣಸಂಖ್ಯಾ ಪ್ರತಿಭುವಃ ನಿನ್ನ; ಗಲೇ = ಕಂಠದಲ್ಲಿ = ವಿವಾಹ ಕಾಲದಲ್ಲಿ ಕಟ್ಟಲ್ಪಟ್ಟ ಸೌಭಾಗ್ಯ ಸೂತ್ರಗಳನ್ನು ನೆನಪಿಸುವ; ತಿಸ್ತ = ಮೂರು; ರೇಖಾಃ = ಭಾಗ್ಯ ರೇಖೆಗಳು; ನಾನಾ ವಿಧ ಮದುರ ರಾಗಾಕರಭುವಾಂ ನಾನಾ ರೀತಿಯ ಮಧುರ ರಾಗಗಳಿಗೆ ಆಶ್ರಯವಾದ; ತ್ರಯಾಣಾಂ ಗ್ರಾಮಾಣಾಂ = ಷಡ್ಜ, ಮಧ್ಯಮ, ಗಾಂಧಾರಗಳೆಂಬ ಮೂರು ಗ್ರಾಮಗಳ; ಸ್ಥಿತಿ ನಿಯಮಸೀಮಾನಃ ಇವ = ಪರಸ್ಪರ ಸೇರ್ಪಡೆಯನ್ನು ತಡೆಯುವ ಗಡಿರೇಖೆಗಳಂತೆ; ವಿರಾಜಂತೇ ಶೋಭಿಸುತ್ತವೆ.

ತಾತ್ಪರ್ಯ

ಸಂಗೀತದ ಲಯ–ಗತಿ–ತಾಳ–ಸ್ವರ ಕಂಪನಾದಿಗಳನ್ನು ಬಲ್ಲ ಹೇ ನಿಪುಣೇ! ನಿನ್ನ ಕೊರಳಿನಲ್ಲಿ ಕಂಡು ಬರುವ ಮೂರುರೇಖೆಗಳು ನಿನ್ನ ವಿವಾಹ ಕಾಲದಲ್ಲಿ ಪರಮೇಶ್ವರನು ಕಟ್ಟಿರುವ ಅನೇಕ ಎಳೆಗಳುಳ್ಳ ಮಾಂಗಲ್ಯಸೂತ್ರವನ್ನು ನೆನಪಿಸುತ್ತವೆ. ಮತ್ತು ಈ ರೇಖೆಗಳು ನಾನಾ ವಿಧವಾದ ಮಧುರ ರಾಗಗಳಿಗೆ ಆಶ್ರಯವಾಗಿರುವ ಷಡ್ಜ, ಮಧ್ಯಮ, ಗಾಂಧಾರಗಳೆಂಬ ಮೂರು ಗ್ರಾಮಗಳ (ಸಮೂಹ) ಪರಸ್ಪರ ಸಾಂಕರ್ಯವನ್ನು ತಡೆಯುವುದಕ್ಕಾಗಿ ಇರುವ ಸೀಮಾರೇಖೆಯಂತೆ ವಿರಾಜಿಸುತ್ತವೆ.

ಭಗವತಿಯ ಕಂಠದಲ್ಲಿರುವ ಮೂರು ರೇಖೆಗಳನ್ನ ಮೂರು ಗ್ರಾಮ (ಷಡ್ಜ,

ಗಾಂಧಾರ, ಮಧ್ಯಮ)ಗಳಿಗೆ ಹೋಲಿಸುತ್ತಾರೆ. ಮತ್ತೆ ಗತಿ(ಲಯ) ಗಮಕ (ಕಂಪನ) – ಗೀತ(ಹಾಡು)ಗಳಲ್ಲಿ ನಿಪುಣೆ ಮಹಾತಾಯಿ ಎನ್ನುತ್ತಾರೆ. ಹಾಗೆಯೇ ಮಧುರ, ರಾಗ ಎಂಬ ಎರಡು ಪದಪ್ರಯೋಗ ಮಾಡುತ್ತಾರೆ. ರಾಗ ಎಂದರೇ ಮಧುರವಾಗಿರಬೇಕು. ಮಧುರ ರಾಗವೆಂದರೆ ಇನ್ನು ಹೇಗಿರಬೇಕು ಅಂದರೆ ಭಗವತ್ಪಾದರ ಸಂಗೀತದ ಮಟ್ಟ ಎಷ್ಟಿರಬಹುದು ಎಂದು ಊಹಿಸಿಕೊಳ್ಳಿ. ನಮ್ಮ ಶಾಸ್ತ್ರೀಯ ಸಂಗೀತ, ಶಾಸ್ತ್ರಬದ್ಧವಾಗಿ, ವ್ಯಾಕರಣಬದ್ಧವಾಗಿ ಎಷ್ಟರ ಮಟ್ಟಿಗೆ ಬೆಳೆದಿತ್ತು ಎಂಬುದು ಆಶ್ಚರ್ಯ ಸಂಗತಿ.

ಹೀಗೆ ಸಂಗೀತ ಪದ್ಧತಿ ಬೆಳೆಯುತ್ತಾ ಬಂದಂತೆ, 13–14ನೆ ಶತಮಾನದಲ್ಲಿ ಭಾರತೀಯ ಸಂಗೀತದಲ್ಲಿ ಮತ್ತೊಂದು ಶಾಸ್ತ್ರೀಯ ಪದ್ಧತಿಯ ಉಗಮವಾಯಿತು. ಅದೇ ಹಿಂದೂಸ್ಥಾನಿ. ಈ ಪದ್ಧತಿಯ ರೂಪುರೇಷೆಗಳೂ ಕರ್ನಾಟಕ ಸಂಗೀತ (ಇಂದಿನ ಹೆಸರು) ಪದ್ಧತಿಯ ಶಾಸ್ತ್ರದ ಆಧಾರದ ಮೇಲೇ ರೂಪುಗೊಂಡರೂ ಕ್ರಮ ಬೇರೆಯಾಯಿತು. ಸಾಹಿತ್ಯದ ಬಳಕೆ ಕಡಿಮೆ, ದೇವತಾ ಪ್ರಾರ್ಥನಾ ಗೀತೆಗಳೂ ಕಡಿಮೆಯೇ. ಪ್ರಕೃತಿಯನ್ನೊಳಗೊಂಡ ರಚನೆಗಳು ಬಂದವು, ಅವುಗಳನ್ನು "ಬಂದೀಶ್" ಎಂದು ಕರೆದರು. ನಮ್ಮ ಕೃತಿಗಳೇ ಅಲ್ಲಿಯ ಬಂದೀಶ್‌ಗಳು. ಅಂತೂ ಅದೊಂದು ಅದ್ಭುತ ಬೆಳವಣಿಗೆ.
(ಉದ್ಧರಿತ : ಆರ್.ಕೆ.ಪಿ ಅವರ ಬರಹಗಳಿಂದ).

ನಮಗೆ, ಒಂದಿಷ್ಟು ಹೊಸ ವಿಷಯಗಳು ತಿಳಿದಂತೆ ಆಯಿತು. ಪದ್ಮನಾಭರು ಮರದ ಸುತ್ತಿಗೆಯಲ್ಲಿ ಸ್ವರಸ್ತಂಭಗಳನ್ನು ನುಡಿಸಿ ತೋರಿಸಿದರು. ಎಲ್ಲರೂ ಖುಷಿಯಿಂದ ತಾವೂ ನುಡಿಸಿದರು.

"ರಮೇಶ, ಅಷ್ಟು ಜೋರಾಗಿ ಹೊಡಿಯಬೇಡವೋ" ನಾನೆಂದೆ. ಎಲ್ಲ ಗೆಳೆಯರು ಜೋರಾಗಿ ನಕ್ಕರು.

"ಇಲ್ಲಪ್ಪ" ಎನ್ನುತ್ತಾ ರಮೇಶ, ಮತ್ತೊಂದು ಪ್ರಶ್ನೆಯನ್ನು ಆರ್.ಕೆ.ಪಿ ಅವರತ್ತ ಎಸೆದ.

"ಭಾರತದಲ್ಲಿ ಇದೇ ಪ್ರಥಮ ಸ್ವರ ಸ್ತಂಭವೇ?"

ಪದ್ಮನಾಭರು ಹೇಳಿದರು, "ಹಾಗೇನಿಲ್ಲ. ನೀವು ಹಂಪೆಯನ್ನು ನೋಡಿರುತ್ತೀರಿ. ಅಲ್ಲಿನ ವಿಜಯವಿಠಲ ಮಂದಿರದಲ್ಲಿ, ಸಂಗೀತ ಸ್ತಂಭಗಳಿವೆ. ಕೃಷ್ಣದೇವರಾಯನ ಕಾಲದಲ್ಲಿ ಆರಂಭವಾಗಿ ಸದಾಶಿವರಾಯರ ಕಾಲದಲ್ಲಿ ನಿರ್ಮಾಣವು, ಅನ್ಯಮತೀಯರ ಧಾಳಿಯಿಂದಾಗಿ ನಿಂತುಹೋಯಿತು. ಈಗ ಆ ಸ್ವರಸ್ತಂಭಗಳನ್ನು ನುಡಿಸುವ ಅವಕಾಶವಿಲ್ಲ. ನಮ್ಮ ಜನರು ತಟ್ಟೀತಟ್ಟಿ ಹಾಳು ಮಾಡಿದರು." ನೋವಿನ

ನುಡಿಬಂತು.

ತಮಿಳುನಾಡಿನ ತಿರುನಲ್ವೇಲಿಯಲ್ಲಿರುವ ನೆಲ್ಲಿಯಪ್ಪಾರ್ ದೇವಾಲಯದಲ್ಲಿ, ಗಂಟಾನಾದವನ್ನು ಉಂಟು ಮಾಡುವ ಸ್ತಂಭಗಳಿವೆ. ಒಂದು ಕೇಂದ್ರಸ್ತಂಭದ ಸುತ್ತಲೂ 48 ಕಲ್ಲಿನ ಸ್ತಂಭಗಳಿವೆ. ಆಶ್ಚರ್ಯವೆಂದರೆ, ಎಲ್ಲಾ ಕಂಬಗಳನ್ನೂ ಒಂದೇ ಕಲ್ಲಿನಿಂದ ನಿರ್ಮಿಸಲಾಗಿದೆ. ಸುಮಾರು ಏಳನೆಯ ಶತಮಾನದ ರಚನೆಯೆನ್ನಲಾಗಿದೆ. ಅಂತೆಯೇ, 17ನೆಯ ಶತಮಾನದಲ್ಲಿ ಕೇರಳದ ಸುಚೀಂದ್ರಂನ ತನುಮಲಯನ್ ದೇಸ್ಥಾನದಲ್ಲಿ ಸಂಗೀತ ಸ್ತಂಭಗಳನ್ನು ಕಾಣುತ್ತೇವೆ. ಮಧುರೈ ಮೀನಾಕ್ಷಿ ದೇವಾಲಯದಲ್ಲಿಯೂ ಕಾಣಬಹುದು. ಇವುಗಳೆಲ್ಲ ಸುಮಾರು 400 ವರ್ಷಗಳ ಹಿಂದೆ ತಜ್ಞ ಶಿಲ್ಪಿಗಳಿಂದ ಸಿದ್ಧಗೊಂಡಿದ್ದು. ನಮ್ಮದು 21ನೆಯ ಶತಮಾನದ್ದು. ವೈಜ್ಞಾನಿಕವಾಗಿ ಸಿದ್ಧಗೊಳಿಸಿದ್ದೇವೆ. 12 ಸ್ವರಗಳನ್ನೂ ನೀವಿಲ್ಲಿ ನುಡಿಸಬಹುದು. ಹಿಂದಿನ ಆಚಾರ್ಯರ ಬೆಳಕಿನಲ್ಲಿಯೇ ನಾವೀಗ ನಡೆಯುತ್ತಿರುವುದು.

ದ್ವಾದಶ ಸ್ವರಸ್ತಂಭವನ್ನು ಆದಿಚುಂಚನಗಿರಿ ಮಠಾಧ್ಯಕ್ಷರಾದ ಶ್ರೀ ನಿರ್ಮಲಾನಾಥನಂದ ಸ್ವಾಮಿಯವರು ಉದ್ಘಾಟಿಸಿದರು. ಆಗ ಸಂಗೀತೋತ್ಸವ ನಡೆಯುತಿತ್ತು. ನಾಲ್ಕು ದಿನದ ಕಾರ್ಯಕ್ರಮ.

ತಮ್ಮ ಆತ್ಮೀಯ ಗೆಳೆಯನ ಸಾಧನೆಯ ಬಗ್ಗೆ ಎಲ್ಲರಿಗೂ ಹೆಮ್ಮೆಯಾಗಿತ್ತು. ನಾವು ಅತಿಥಿ ಗೃಹ, ಶಾರದಾ ಮಂದಿರದ ಕಡೆಗೆ ನಡೆದೆವು. ಹಬೆಯಾಡುವ ಬಿಸಿಬಿಸಿ ಕಾಫಿ ಸಿದ್ಧವಾಗಿತ್ತು. ವೆಂಕಿಗೆ ಖುಷಿಯೋ ಖುಷಿ. ಎಲ್ಲರ ಮೂಗಿನ ಹೊರಳೆಗಳು ಅರಳತೊಡಗಿದವು.

12
ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ

ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯಚ

"ಬೇಡ ಬೇಡ, ಈಗ್ಯಾಕೆ. ಈಗ ತಾನೆ ಭರ್ಜರಿ ಊಟ ಆಯಿತಲ್ಲ" ಅಂದ ಪ್ರಭು.
"ಇರಲಿ, ಎರಡೆರಡೆ ತೆಗೆದುಕೊಳ್ಳಿ",

"ಸರಿ, ನಿಮ್ಮ ಮಾತು ತೆಗೆದು ಹಾಕಲು ಸಾಧ್ಯವೇ" ಅನ್ನುತ್ತಾ ಎಲ್ಲರೂ ಆಲೂಬೋಂಡ, ಮೆಣಸಿನಕಾಯಿ ಬಜ್ಜಿತಿಂದು ಕಾಫಿಕುಡಿದೆವು, ಊಟ

ಮಾಡಿದ್ದನ್ನು ಮರೆತೆವು ಎಂಬಂತೆ !

ರಮೇಶ ಹೇಳಿದ, "ದಾಸರೆ, ನೀವು 2019 ರ ಸೆಪ್ಟೆಂಬರ್ ನಲ್ಲಿ ಬಿಡುಗಡೆ ಮಾಡಿದ "ಸೌಂದರ್ಯ ಲಹರಿ" ಪುಸ್ತಕ ಮತ್ತು ಕ್ಯಾಸೆಟ್‌ಗಳು, ನನ್ನ ಬಳಿ ಇದೆ. ಅದ್ಭುತ ಸಾಧನೆ ನಿಮ್ಮದು. ಸೌಂದರ್ಯ ಲಹರಿಯ ನೂರೂ ಶ್ಲೋಕಗಳನ್ನು ನೂರು ರಾಗಗಳಲ್ಲಿ ಹಾಡಿರುವಿರಿ. ಶಂಕರರ ಸಂಗೀತ ಸಾಮರ್ಥ್ಯವನ್ನು ಗುರುತಿಸಿದಿರಿ. ಖಂಡಿತವಾಗಿ ಇದೊಂದು ಮೇರು ಸಾಧನೆ." ಈಗ ಎಲ್ಲರ ಗಮನ ದಾಸರ ಕಡೆಗೆ.

"ಹೌದು, ರಮೇಶ್, ಶಂಕರರನ್ನು ಅದ್ವೈತ ವೇದಾಂತಕ್ಕೆ ಸೀಮಿತ ಅನ್ನಬಾರದು. ಅವರ ಸಂಗೀತ ಪ್ರೌಢಿಮೆಯೂ ಮಹತ್ವದ್ದು. ಆ ಕೃತಿಯ "ನನ್ನುಡಿ" ಯಲ್ಲಿ ಹೀಗೆ ಹೇಳಿದ್ದೇನೆ.

"ಹಿಂದೂಧರ್ಮ, ಸಂಸ್ಕೃತಿಯನ್ನು ಪುನಃಶ್ಚೇತನಗೊಳಿಸಿದ ಅಪ್ರತಿಮ ಯತಿಶ್ರೇಷ್ಠರು, ಶ್ರೀ ಶ್ರೀ ಶಂಕರ ಭಗವತ್ಪಾದರು. ಭಕ್ತಿ ಮತ್ತು ಜ್ಞಾನಮಾರ್ಗದ ಸತ್ಪಥವನ್ನು ತೋರಿದ ದಾರ್ಶನಿಕರು. ಜಾತಿ ತಾರತಮ್ಯಕ್ಕೆ ವಿರುದ್ಧವಾಗಿದ್ದಂತಹ ಸಮಾಜ ಸುಧಾರಕರು. ವೇದೋಪನಿಷತ್ತುಗಳ ಸಾರವನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ತಿಳಿಸಿದ ಭಾಷ್ಯಕಾರರು. ಸರ್ವವಿದ್ಯೆಯಲ್ಲೂ ಹಿಮಾಲಯ ಪರ್ವತದಷ್ಟು ಜ್ಞಾನ ಸಂಪಾದನೆ ಮಾಡಿದ ಶ್ರೇಷ್ಠ ಸಿದ್ಧಿಪುರುಷರು. ಇಂತಹ ಮಹಾತ್ಮರು ರಚಿಸಿರುವಂತಹ, "ಸೌಂದರ್ಯ ಲಹರಿ" ಶ್ಲೋಕಗಳನ್ನು ಕಾವ್ಯವೆನ್ನುವುದೋ, ಭಕ್ತಿಗೀತೆಗಳು ಎನ್ನುವುದೋ? ಎಲ್ಲಾ ಪ್ರಕಾರಕ್ಕೂ ಹೊಂದಿಕೊಳ್ಳುವಂತಹ ಮಹತ್ವಪೂರ್ಣ ರಚನೆ "ಸೌಂದರ್ಯ ಲಹರಿ". ಈಗಂತೂ ಇದರ ವ್ಯಾಪ್ತಿ ಮತ್ತು ಶಕ್ತಿ ಸಮಾಜದಲ್ಲಿ ಬಹಳಷ್ಟು ಪ್ರಚಾರವಾಗಿದೆ.

ನನ್ನಮಟ್ಟಿಗೆ ಶ್ರೀ ಶ್ರೀ ಶಂಕರ ಭಗವತ್ಪಾದರು ಸಂಗೀತಶಾಸ್ತ್ರದಲ್ಲೂ ಅನನ್ಯ, ಅಖಂಡ ಜ್ಞಾನಶ್ರೇಷ್ಠರು. ಅವರ ಅನೇಕ ಶ್ಲೋಕಗಳಲ್ಲಿ ಶಾಸ್ತ್ರೀಯ ಸಂಗೀತದ ಪಾರಿಭಾಷಿಕ ಶಬ್ದಗಳ ಪ್ರಯೋಗ ಮಾಡಿರುವುದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು. ಮಧುರರಾಗ, ಗ್ರಾಮ, ಗತಿ, ಗಮಕ, ಗೀತ ಹೀಗೆ ಅನೇಕಾನೇಕ ಪದಪ್ರಯೋಗವಿದೆ ಆಚಾರ್ಯರ ರಚನೆಗಳಲ್ಲಿ. ಈಗಾಗಲೇ ಲಕ್ಷಾಂತರ ಭಗವದ್ಭಕ್ತರು ಸೌಂದರ್ಯಲಹರೀ ಪಾರಾಯಣ ಮಾಡುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ. ಆದರೂ ಇದು ಶಾಸ್ತ್ರೀಯ ಸಂಗೀತ ಆವರಣಕ್ಕೆ ಬಂದಾಗ ಅದಕ್ಕೆ ಇನ್ನೂ ತೂಕವೂ, ಗಾಂಭೀರ್ಯವೂ ಬರುತ್ತದೆ ಎಂಬುದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ ಒಂದೊಂದು ಶ್ಲೋಕವನ್ನೂ ಒಂದೊಂದು ರಾಗದಲ್ಲಿ ಕೃತಿರೂಪದಲ್ಲಿ ರಚನೆ ಮಾಡಿದ್ದೇನೆ. ಹೀಗಾಗಿ ಸೌಂದರ್ಯಲಹರೀ ಶ್ಲೋಕಗಳಿಂದಲೇ ಘನವಾದ ಕರ್ನಾಟಕ ಸಂಗೀತ ಕಛೇರಿ ನಡೆಸುವಂತಹ ಸೌಲಭ್ಯ ದೊರಕುತ್ತದೆ. ಆದರೆ

ಸಾಹಿತ್ಯಕವಾಗಿ ಅಲ್ಪಸ್ವಲ್ಪ ಹ್ರಸ್ವ, ದೀರ್ಘಗಳ ಪ್ರಯೋಗವಿರಬಹುದು. ಇದಕ್ಕೆ ರಿಯಾಯಿತಿ ಕೊಡಲೇ ಬೇಕಾಗುತ್ತದೆ. ಒಟ್ಟು ಭಗವತ್ಪಾದರ 100 ಕೃತಿಗಳು, 100 ರಾಗಗಳಲ್ಲಿ ಲಭ್ಯವಾದರೆ, ಸಂಗೀತ ಕಲಿಕೆಯವರಿಗೂ ಉಪಯುಕ್ತತೆ ಇರುತ್ತದೆ. ಕೇಳುಗರಿಗೂ ಆನಂದವಾಗುತ್ತದೆ. ಎಲ್ಲಾ ಕೃತಿಗಳಿಗೂ ಶ್ಲೋಕದ ಶುದ್ಧಸಾಹಿತ್ಯ, ಪ್ರತಿಪದಾರ್ಥ, ಭಾವಾರ್ಥಗಳನ್ನು ವೇದಾಂತ ಭಾರತಿ, ಯಡತೊರೆ, ಪ್ರಕಟಿಸಿರುವ ಪುಸ್ತಕದ ವಸ್ತುವನ್ನೇ ಅಳವಡಿಸಿಕೊಳ್ಳಲಾಗಿದೆ. ಒಂದೊಂದು ಕೃತಿಗೂ ವರ್ಣಮಟ್ಟುಗಳನ್ನು ಕೊಡಲಾಗಿದೆ. ಇದರ ಜೊತೆಗೆ 100 ಶ್ಲೋಕಗಳನ್ನು ನಾನೇ ಹಾಡಿದ್ದೇನೆ. ಹೀಗೆ ಶಾಸ್ತ್ರೀಯ ಸಂಗೀತ ಮತ್ತಷ್ಟು ಶ್ರೀಮಂತವಾಗಿದೆ ಎಂಬುದು ನನ್ನ ಅಭಿಪ್ರಾಯ. ಅಂತೂ ನನ್ನ ಬದುಕಿನಲ್ಲಿ ಇದೊಂದು ಮೈಲಿಗಲ್ಲು. ಇದಕ್ಕಾಗಿ ನಾನು ಭಗವತ್ಪಾದರ ಪಾದಪದ್ಮಗಳಿಗೆ ಭಕ್ತಿ ಪೂರ್ವಕವಾಗಿ ನಮಿಸುತ್ತೇನೆ." ಎಲ್ಲರಿಗೂ ಧನ್ಯತಾಭಾವ ಮೂಡಿತು.

ಆ ವೇಳೆಗೆ ಊರಿನ ಓರ್ವ ಗಣ್ಯರು ಆಗಮಿಸಿದರು. ಪದ್ಮನಾಭರು, ಅವರ ಪರಿಚಯ ಮಾಡಿ ಕೊಡುತ್ತಾ, "ಇವರು ಪರಮೇಶ್. ನಮ್ಮ ಊರಿನ ಶಾಲೆಯ ಉಪಾಧ್ಯಾಯರು. "ಸಂಗೀತ ಗ್ರಾಮ ಕೌಸ್ತುಭ, ಶ್ರೀ ಗುರು ಪದ್ಮನಾಭ" ಎಂಬ ಕೃತಿಯನ್ನು ರಚಿಸಿದ್ದಾರೆ. ಒಳ್ಳೆಯ ಸಾಹಿತಿಗಳು."

ಪರಮೇಶರೆಂದರು :
"ನಿಮ್ಮೆಲ್ಲರನ್ನೂ ಕಂಡು ಸಂತೋಷವಾಯಿತು. ಬನ್ನಿ ನಮ್ಮ ರುದ್ರಪಟ್ಟಣವನ್ನು ತೋರಿಸುತ್ತೇನೆ. ಕೆಲವು ವಿಷಯಗಳನ್ನು ನೀವು ಈಗಾಗಲೆ ಬಲ್ಲಿರಿ. ನಾಡಿನ ಪ್ರಖ್ಯಾತ ಸಂಗೀತ ಅಧ್ವರ್ಯುಗಳಾಗಿ ಪದ್ಮನಾಭರು ಪ್ರಸಿದ್ಧರಾಗಿದ್ದಾರೆ. ನಾನು ಮುಖ್ಯವಾಗಿ, ಪದ್ಮನಾಭರು, ನಮ್ಮೂರಿಗೆ ಎಷ್ಟೊಂದು ಮಹತ್ತರ ಕಾಣಿಕೆಯನ್ನು ನೀಡಿದ್ದಾರೆ ಎಂಬುದನ್ನು ತಿಳಿಸುತ್ತೇನೆ, ತೋರಿಸುತ್ತೇನೆ."

"ಇದು, ನಮ್ಮ ಪದ್ಮನಾಭ ಗುರುಗಳು 1961–62ರ ತನಕ ಓದಿದ ಪ್ರಾಥಮಿಕ ಶಾಲೆ. ಡಾ ಶ್ಯಾಮಾಶಾಸ್ತ್ರಿಗಳೂ ಇಲ್ಲೆ ಓದಿದ್ದು. ಒಂದುಕಾಲದಲ್ಲಿ ಏನೇನೂ ಸೌಲಭ್ಯವಿಲ್ಲದೆ ಕೊರಗುತ್ತಿತ್ತು. ಸರ್ಕಾರದ ಶಾಲೆಯೆಂದರೆ ಎಲ್ಲರೂ ಹೀಗೆಳೆಯುತ್ತಾರೆ. ಮಕ್ಕಳು ಬರುವುದೇ ಇಲ್ಲ. ಆದರೆ, ನಮ್ಮ ಶಾಲೆಯಲ್ಲಿ ಹಾಜರಾತಿಯು ಕಡಿಮೆಯಾಗಿಲ್ಲ. ಇದಕ್ಕೆ ಕಾರಣ ಗುರುಗಳು."

"ಹೇಗೆ?" ಎಂದಿನಂತೆ ಹಾರಿಬಂದ ಪ್ರಶ್ನೆ.

ಗುರುಗಳ ಚೈತನ್ಯಶೀಲ ವ್ಯಕ್ತಿತ್ವ. ನಿರಂತರ ಪ್ರೋತ್ಸಾಹ.

ಉತ್ತಮವಾದ ಬಯಲು ರಂಗ ಮಂದಿರವನ್ನು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಗುರುಗಳು ಕಟ್ಟಿಸಿದ್ದಾರೆ. ಶಾಲೆಗೆ ಬೇಕಾದ ಕಂಪ್ಯೂಟರ್ ಝೆರಾಕ್ಸ್ ಗಳು, ಪ್ರಿಂಟರ್ಗಳು ಮುಂತಾದ ವಸ್ತುಗಳನ್ನು ನಾವು ಕೇಳಿದಾಗಲೆಲ್ಲಾ ನೀಡುತ್ತಾ ಬರುತ್ತಿದ್ದಾರೆ. ಶಾಲಾ ಮೈದಾನಕ್ಕೆ ಸುಭದ್ರವಾದ ಕಬ್ಬಿಣದ ಗೇಟನ್ನು ಅಳವಡಿಸಲಾಗಿದೆ. 2016–17ರಲ್ಲಿ ಶಾಲೆಯ ಒಳ ಹೊರಗೋಡೆಗಳಿಗೆ, ಆವರಣದ ಗೋಡೆಗಳಿಗೆ ಅವರ ಮೂಲಕ ಸುಣ್ಣಬಣ್ಣವಾಯಿತು. ಶಾಲೆಯ ವಾರ್ಷಿಕೋತ್ಸವ ಮತ್ತು ವಿಶೇಷ ಸಂದರ್ಭಗಳಲ್ಲಿ, ಎಷ್ಟೇ ಕೆಲಸವಿದ್ದರೂ, ತಾವೇ ಬಂದು ನಮ್ಮನ್ನೂ, ಮಕ್ಕಳನ್ನೂ ಹುರಿದುಂಬಿಸುತ್ತಾರೆ. ಮಕ್ಕಳ ಪ್ರತಿಭೆಯನ್ನು ಪೋಷಿಸಲು, ಕಳೆದ ಆರು ವರ್ಷಗಳಿಂದ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗೆ, ಪ್ರಶಸ್ತಿ, ಫಲಕ ಮತ್ತು ನಗದು ಬಹುಮಾನವನ್ನು ಒಳಗೊಂಡ " ಪದ್ಮನಾಭ" ಪ್ರಶಸ್ತಿಯನ್ನು ನೀಡುತ್ತಿದ್ದಾರೆ. ಅಲ್ಲದೆ, ವಿದ್ಯಾರ್ಥಿಗಳು ನಮ್ಮ ಊರಿನ ವಿದ್ಯಾಶಂಕರ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿದರೆ, ಅದರ ಸಂಪೂರ್ಣವೆಚ್ಚವನ್ನು ಗುರುಗಳು ಭರಿಸುತ್ತಾರೆ. ವಿದ್ಯಾಶಂಕರ ಪ್ರೌಢಶಾಲೆಯಲ್ಲಿ, ಹೆಣ್ಣು ಮತ್ತು ಗಂಡುಮಕ್ಕಳಿಗಾಗಿ, ಹೈಟೆಕ್ ಶೌಚಾಲಯವನ್ನು ಅಪಾರ ವೆಚ್ಚದಲ್ಲಿ ಕಟ್ಟಿಸಿದ್ದಾರೆ. ಮಕ್ಕಳ ಆರೋಗ್ಯ ಮತ್ತು ಪರಿಸರ ಎರಡೂ ಗುರುಗಳ ಆದ್ಯತೆಯಾಗಿದೆ.

ತಾವೇ ಪೊರಕೆ ಹಿಡಿದು "ಗ್ರಾಮ ಸ್ವಚ್ಛತಾ ಆಂದೋಲನ"ದಲ್ಲಿ ತೊಡಗಿಕೊಂಡವರು ನಮ್ಮ ಗುರುಗಳು. ಸಾಮಾಜಿಕ ಚಳುವಳಿಯಲ್ಲೂ ಮುಂಚೂಣಿಯಲ್ಲಿದ್ದಾರೆ.

"ಸಾರ್ವಜನಿಕ ಆಸ್ತಿಗಳು ಪ್ರತಿಯೊಬ್ಬರಿಗೂ ಸೇರಿದ್ದು, ಸ್ವಂತ ಆಸ್ತಿಯಂತೆ ಕಾಪಾಡಿರಿ" ಎಂದು ರುದ್ರಪಟ್ಟಣದ ಬೀದಿಬೀದಿಯಲ್ಲಿ ತಿರುಗಿ ಜಾಗೃತಿ ಮೂಡಿಸಿದರು. ಜಾತಿ, ಮತ, ಧರ್ಮಗಳ ಭೇದವಿಲ್ಲದೆ ಒಂದಾಗಿ ಬದುಕೋಣವೆಂಬುದು ಅವರ ಸಂದೇಶದ ಸಾರ.

2016, ಅಕ್ಟೊಬರ್ ನಲ್ಲಿ, ಕೊಯಮತ್ತೂರಿನ "ಅರವಿಂದ ಕಣ್ಣಾಸ್ಪತ್ರೆ"ಯ ಸಹಕಾರದೊಂದಿಗೆ ಊರಿನಲ್ಲಿ "ಉಚಿತ ನೇತ್ರ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ" ನಡೆಸಿ, 200 ಜನರನ್ನು ಗುರುತಿಸಿ, "ಕಣ್ಣುಪೊರೆ" ಚಿಕಿತ್ಸೆಯನ್ನು ಗುರುಗಳು ಮಾಡಿಸಿದರು. ಒಂದು ಕಾರ್ಪೊರೇಟ್ ಸಂಸ್ಥೆ ಇಂತಹ ಕೆಲಸ ಮಾಡುವುದು ಆಶ್ಚರ್ಯವಲ್ಲ. ಅವರಿಗೆ "ಸಿಎಸ್ಸಾರ್" ಖಾತೆಯ ಹಣವನ್ನು ಕಡ್ಡಾಯವಾಗಿ ಸಮಾಜಸೇವಾ ಕಾರ್ಯಗಳಿಗೆ ಖರ್ಚು ಮಾಡುವ ಕಾನೂನಿನ ಆದೇಶವಿದೆ. ಆದರೆ, ಓರ್ವ ಸಂಗೀತಗಾರ ಜನನೀಡಿದ ಹಣವನ್ನು, ಕಛೇರಿಯ ಗೌರವ ಸಂಭಾವನೆಗಳನ್ನು ಜನರಿಗೇ ಧಾರೆಯೆರೆಯುತ್ತಾನೆ ಎಂಬುದು ಅಪರೂಪದ

ವಿಷಯ."

ಪರಮೇಶರೆಂದರು – "ಇತ್ತೀಚಿಗೆ ಮೈಸೂರಿನಲ್ಲಿ ಪದ್ಮನಾಭ ಗುರುಗಳಿಗೆ "ಪುಟ್ಟರಾಜ ಗವಾಯಿ ಸನ್ಮಾನ ಪ್ರಶಸ್ತಿ" ಬಂತು. ಅಲ್ಲಿ ನೀಡಿದ ಒಂದು ಲಕ್ಷ ರೂಪಾಯಿಯ ಚೆಕ್ಕನ್ನು ವೇದಿಕೆಯಲ್ಲಿಯೇ ಗುರುಗಳು" ಶ್ರೀ ವಿದ್ಯಾಶಂಕರ ಪ್ರೌಢಶಾಲೆ"ಯ ಅಭಿವೃದ್ಧಿಗಾಗಿ ನೀಡಿದರು.

ಗುರುಗಳು ಸಂಗೀತವನ್ನು ಮರೆಯಲು ಸಾಧ್ಯವೇ. ಊರಿಗೆ ಬಂದಾಗ ಶಾಲೆಗೆ ಹೋಗುತ್ತಾರೆ. ಚೆನ್ನಾಗಿ ಹಾಡುವ ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ. ಅವರಿಗೆ ಸಂಗೀತ ಕಲಿಸುವ ವ್ಯವಸ್ಥೆ ಮಾಡುತ್ತಾರೆ. ಶ್ರುತಿ ಪೆಟ್ಟಿಗೆಗಳನ್ನು ನೀಡಿದ್ದಾರೆ. ಇತ್ತೀಚಿಗೆ "ಬೆಂಗಳೂರಿನ ವಾದಿರಾಜ ಭವನ"ಕ್ಕೆ ನಮ್ಮ ಮಕ್ಕಳನ್ನು ಕರೆದುಕೊಂಡು ಹೋಗಿ ಹಾಡಿಸಿದ್ದಾರೆ. ಯಾವಾಗಲೂ ಅವರ ಕಣ್ಣು ಎಳೆಯ ಪ್ರತಿಭೆಗಳ ಮೇಲೆ. ಅವಕಾಶಗಳನ್ನು ಕಲ್ಪಿಸುತ್ತಾರೆ; ನಾವು ಉಪಯೋಗಿಸಿಕೊಳ್ಳಬೇಕಷ್ಟೆ.

ನಾವು ಊರಿನ ತಿರುವು ರಸ್ತೆಗಳಲ್ಲಿ ಹೋಗುತ್ತಿದ್ದೆವು. ಮುಂದೆ, ಪರಮೇಶರು. ಎದುರಲ್ಲಿ ಒಂದು ಖಾಲಿ ಚಕ್ಕಡಿ ಬಂಡಿ ಬಂತು. ಎತ್ತರವಾದ ಎತ್ತು. ನೋಡಲು ಬಹಳ ಆಕರ್ಷಣೀಯ. ಏನು ಉತ್ಸಾಹ ಬಂತೋ..,ಪದ್ಮಾ..,ಸುಜಾತ, ಪುಷ್ಪ ಎಲ್ಲರೂ ಬಂಡಿ ಏರಿದರು. ನೊಗ ಹಿಡಿದರು. ಮೂಗುದಾರ ಎಳೆದು ಗಾಡಿ ಓಡಿಸಿದರು.

ನಾನೆಂದೆ, "ಓಹ್! ಎಷ್ಟು ಚೆನ್ನಾಗಿ ಓಡಿಸ್ತೀರಿ. ಭೇಷ್" ತಕ್ಷಣ ಬಂತು ಮಾರುತ್ತರ. "ಇದೇನು, ಮಹಾ. ಸಂಸಾರ ರಥ ಓಡಿಸೋಲ್ವೆ" ಎಲ್ಲರೂ ನಕ್ಕರು. ಕೆಲವರು, ಪೆಚ್ಚುಮೋರೆ ಹಾಕಿದ್ದೂ ಸತ್ಯ.

ಪರಮೇಶರೆಂದರು,

"ಮಾದಣ್ಣ, ಮೂಗುದಾರ ಅವ್ರ ಕೈಗೆ ಕೊಡಬ್ಯಾಡ. ಎತ್ತೇತ್ಲೋ ಎಳೆದು ಬಿಟ್ಟಾತು." ತಲೆಎತ್ತಿ ನೋಡಿದೆ. ಗಾಡಿ ಓಡಿಸುತ್ತಿದ್ದವರು ಪೆಚ್ಚಾದಂತೆ ಕಾಣಿಸಿತು !

"ನಮ್ಮ ಗುರುಗಳು, ಊರಿನಲ್ಲಿ ಪ್ರತಿಯೊಂದು ಕೆಲಸದಲ್ಲಿಯೂ ಮುಂದು, ಊರಿನ ಹಬ್ಬಗಳಲ್ಲಿ ಸಕ್ರಿಯರು. ರಾಮೋತ್ಸವವಂತೂ ಅವರೇ ಮುಂದೆ ನಿಂತು ಮಾಡ್ತಾರೆ. ಇನ್ನು ಗಣೇಶನ ಹಬ್ಬ, ಶಿವರಾತ್ರಿ, ವಿವಿಧ ದೇವಸ್ಥಾನಗಳ ರಥೋತ್ಸವಗಳು. ಎಲ್ಲದರಲ್ಲಿ ಅಗ್ರ ಜವಾಬ್ದಾರಿ ಅವರದೇ.

"ದೊಡ್ಡಮ್ಮದೇವಿ" ದೇವಸ್ಥಾನದ ಜೀರ್ಣೋದ್ಧಾರ, ಕಾವೇರಿ ತೀರದ ರಾಮಲಿಂಗೇಶ್ವರ ದೇವಸ್ಥಾನದ ಪುನರುದ್ಧಾರ, ಹೀಗೆ ದೊಡ್ಡಪಟ್ಟಿಯೇ ಇದೆ. "ಕಂಚಿ ಕಾಮಾಕ್ಷಿ"ಯ ಹೊಸ ದೇವಾಲಯವನ್ನು ಕಟ್ಟಿಸಿದರು.

ಮುಖ್ಯವಾಗಿ, ಹಳೆಯ ರಾಮಮಂದಿರದ ಪುನರ್ನವೀಕರಣವಾಯಿತು. ಈಗ ಅಲ್ಲಿ ಸತತ ಕಾರ್ಯಕ್ರಮಗಳು. ಪಕ್ಕದಲ್ಲಿ "ಶಾರದಾ ಮಂದಿರ"ವನ್ನು ಕಟ್ಟಿಸಿದ್ದೂ ಪದ್ಮನಾಭ ಗುರುಗಳೇ. ಶಾರದಮ್ಮನವರು ಗುರುಗಳ ತಾಯಿ; ನಾನು ನೋಡಿಲ್ಲ. ಕೇಳಿದ್ದೇನೆ. ಊರಿಗೆ ಬರುವ ಅತಿಥಿಗಳಿಗೆ, ಉಳಿದುಕೊಳ್ಳಲು ಸೂಕ್ತ ಸ್ಥಳವಿರಲಿಲ್ಲ. ಶಾರದಾ ಮಂದಿರವು ಸುಸಜ್ಜಿತವಾಗಿದೆ. ವಿಶಾಲವಾದ ಕೋಣೆಗಳು. ಕಮೋಡ್, ಬಿಸಿನೀರು, ಊಟದ ವ್ಯವಸ್ಥೆ ಎಲ್ಲಾ ಇದೆ. ಇದರ ಜೊತೆಗೆ ಗುರುಗಳು ಸರ್ಕಾರದೊಂದಿಗೆ ವ್ಯವಹರಿಸಿ, ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಯಾತ್ರಿ ನಿವಾಸ ಕಟ್ಟಿಸಿದ್ದಾರೆ. ಅವರ ನೇತೃತ್ವದಲ್ಲಿ ಇಲ್ಲಿ "ನಾದಲೋಕ" ಎಂಬ ಬಡಾವಣೆ ತಲೆಎತ್ತಿದೆ. ಸಂಗೀತ ಪಾಠ ಮತ್ತು ಸಾಧನೆಗೆ "ನಾದಾಲಯ"ವಿದೆ.

ನಮಗೆಲ್ಲ, ಪದ್ಮನಾಭರು ಗೊತ್ತಿತ್ತು. ಬೆಂಗಳೂರಿನಲ್ಲಿ ಅವರು ನಡೆಸುವ ಚಟುವಟಿಕೆಗಳು ಗೊತ್ತಿತ್ತು. ಆದರೆ ತಮ್ಮ ಸ್ವಂತ ಊರಿನ ಅಭಿಮಾನದಿಂದ ಇಲ್ಲಿ ಮಾಡಿರುವ, ಮಾಡುತ್ತಿರುವ ಕೆಲಸದ ಅಗಾಧತೆಯ ಅರಿವು ಈಗ ಆಗತೊಡಗಿತು.

ಮೇಷ್ಟ್ರು ಮುಂದುವರೆಸಿದರು, "ನಾನು ಹೇಳುತ್ತಿರುವುದು, ನೀವು ನೋಡುತ್ತಿರುವುದು, 'Tip on the ice burg' ಅಂತಾರಲ್ಲ ಹಾಗೆ. ನಮಗೆ ತಿಳಿಯದಂತೆ ಎಷ್ಟೋ ಉಪಯುಕ್ತವಾದ ಕೆಲಸಗಳನ್ನು ಮಾಡಿದ್ದಾರೆ.. ಅರಕಲಗೂಡಿನಲ್ಲಿ "ಆರ್.ಕೆ.ಪಿ ಅಭಿಮಾನ ಬಳಗ" ಇದೆ. ಅದರ ಮೂಲಕ ಹಲವಾರು ಸಾಮಾಜಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಇತ್ತೀಚಿಗೆ ಮಲ್ಲಿಪಟ್ಟಣ ಹೋಬಳಿಯ ದಾಸನಪುರ ಸಮೀಪದಲ್ಲಿ ಹಾಗೂ ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆ ಹೋಬಳಿಯ ಮಾದಿಹಳ್ಳಿಯಲ್ಲಿಯೂ ಕಲ್ಯಾಣಿ ಸ್ವಚ್ಛತೆಯಲ್ಲಿ ಸ್ವತಃ ಶ್ರಮದಾನ ಮಾಡಿದರು.

2012ಓ 13ಓ ಇರಬೇಕು. ಒಂದು ವಿಶೇಷ ಘಟನೆ ನಡೆಯಿತು. ಅರಕಲಗೂಡಿನಿಂದ ನಮ್ಮೂರಿಗೆ ಬರುವ ರಸ್ತೆ ಹದಗೆಟ್ಟಿತ್ತು. ಗುಂಡಿಯೋ ಗುಂಡಿ. ಏನು ಮಾಡುವುದು? ಯಾರೂ ಕೇಳಿಸಿಕೊಳ್ಳುವವರಿಲ್ಲ. ಸರಿ, ಊರಿನವರೆಲ್ಲ ಸೇರಿ ಪದ್ಮನಾಭ ಗುರುಗಳಿಗೆ ಹೇಳಿದರು. ಪಾಪ, ಅವರು ತಾನೆ ಏನುಮಾಡಲು ಸಾಧ್ಯ? ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಮಾಡಬೇಕಾದ ಕೆಲಸ.

"ಸರಿ" ಏನಾದರೂ ಮಾಡೋಣ" ಅಂತ ಗುರುಗಳು ಯೋಚನೆಗೆ ಬಿದ್ದರು.

ಆಮೇಲೆ ಹೇಳಿದರು, "ನಡೆಯಿರಿ ಅರಕಲಗೂಡಿಗೆ. ತಾಲ್ಲೂಕಿನ ಕೇಂದ್ರವಲ್ಲವೇ ಸರ್ಕಾರದ ಗಮನ ಸೆಳೆಯೋಣ". "ಆರ್.ಕೆ.ಪಿ ಅಭಿಮಾನಿಗಳ ಬಳಗ", ಊರಿನ ಜನರು ಮತ್ತು ಶಿಷ್ಯವೃಂದ, ಅರಕಲಗೂಡಿಗೆ ಹಾಜರ್. ಪೆಂಡಾಲ್ ಹಾಕಿ. ವೇದಿಕೆಯನ್ನು ಕಟ್ಟಿ. ಮೈಕ್ ಏರಿಸಿ. ಆರಂಭಿಸಿಯೇ ಬಿಟ್ಟರು "ಗಾನ ಪ್ರತಿಭಟನೆ".

ಪುರಂದರರ ಕೃತಿಗಳು, ತ್ಯಾಗರಾಜರ ಪಂಚರತ್ನ ಕೃತಿಗಳು. ಕನಕರು, ದಾಸರು, ಕವಿಗಳು ಎಲ್ಲರೂ ಬಂದರು ವೇದಿಕೆಗೆ. ಸುದ್ದಿಕಾಳ್ಗಿಚ್ಚಿನಂತೆ ಹಬ್ಬಿತು. ಅರಕಲಗೂಡು ನಾಗರಿಕರು. ಪತ್ರಕರ್ತರು, ರಾಜಕಾರಣಿಗಳು ಎಲ್ಲರೂ ದೌಡು ಬಂದರು. ಬಹುಶಃ ಇಂತಹ ವಿನೂತನ "ಗಾನ ಪ್ರತಿಭಟನೆ" ಅದರಲ್ಲೂ ಸಾರ್ವಜನಿಕ ರಸ್ತೆಗಾಗಿ ಆದದ್ದು ಇತಿಹಾಸದಲ್ಲಿಯೇ ಪ್ರಥಮ ಇರಬೇಕು. ಪದ್ಮನಾಭರು, ಭಾಷಣ ಮಾಡಿ ಸ್ಪಷ್ಟವಾಗಿ ಹೇಳಿದರು. "ಈ ಗಾನ ಚಳುವಳಿ ಯಾರ ವಿರುದ್ಧವೂ ಅಲ್ಲ. ಜನಹಿತಕ್ಕಾಗಿ, ಒಂದು ಪುಟ್ಟರಸ್ತೆಗಾಗಿ." ಒಂದು ವಾರದಲ್ಲಿ ರಸ್ತೆ ರಿಪೇರಿಯಾಯಿತು. ಅದು ಸಂಗೀತದ, ಸಂಘಟನೆಯ ಶಕ್ತಿ. ರಮೇಶನೆಂದ, "ಇದು ಕನಕ ಪುರಂದರರ ಮಾರ್ಗ. ಕನ್ನಡ ಮಣ್ಣಿನ ಗುಣ."

ಇವರ ಸಾಹಿತ್ಯ ಸಾಧನೆಗಳೂ ನಿಮಗೆ ಗೊತ್ತಿರಬಹುದು. ಹಲವಾರು ವಿಶಿಷ್ಟವಾದ ಸಂಗೀತ ಕೃತಿಗಳನ್ನು ರಚಿದ್ದಾರೆ. ಕಾದಂಬರಿಗಳು. ಕವಿತೆಗಳು ಇವರ ಲೇಖನಿಯಿಂದ ಹೊರಬಂದಿದೆ. "ಪದ್ಮನಾಭದಾಸ" ಅಂಕಿತದಲ್ಲಿ ನೂರಾರು ಕೃತಿಗಳನ್ನು ರಚಿಸಿರುವ ವಾಗ್ಗೇಯಕಾರರು ನಮ್ಮಗುರುಗಳು.

2011ರಲ್ಲಿ ಅರಕಲಗೂಡಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. ಪದ್ಮನಾಭ ಗುರುಗಳಿಗೆ ಅಧ್ಯಕ್ಷತೆಯ ಗೌರವ. ಗುರುಗಳು ಅಂದರು,
"ನನಗೇಕೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಬೇರೆ ಯಾರಾದರೂ ಹಿರಿಯ ಸಾಹಿತಿಗಳಿಗೆ ಈ ಗೌರವ ನೀಡಿ."

ಆ ಮಾತು ಕೇಳಿ, ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ನಮ್ಮ ಎಂಎಲ್ಎ.. ಮುಂತಾಗಿ ಹಿರಿಯರೆಲ್ಲಾ ಬಂದು ಮತ್ತೆ ಕೇಳಿಕೊಂಡರು. ಪದ್ಮನಾಭರು ಅಧ್ಯಕ್ಷತೆಯನ್ನು ವಹಿಸಿ, ಅತ್ಯಂತ ಯಶಸ್ವಿಯಾಗಿ ಸಮ್ಮೇಳನವನ್ನು ನಿರ್ವಹಿಸಿದರು. ಅವರದು ಬಹುಮುಖ ಪ್ರತಿಭೆ.

ಆ ವೇಳೆಗೆ ಕತ್ತಲು ಆವರಿಸತೊಡಗಿತು.

"ಬನ್ನಿ ಹೋಗೋಣ. ಬೆಂಗಳೂರಿಗೆ ಹೋಗಬೇಕು" ಎಂದು ಪ್ರಭುವಿನ ಆದೇಶ. ಶಾರದಾ ಮಂದಿರಕ್ಕೆ ವಾಪಸ್ಸು ಬಂದೆವು. ಪದ್ಮನಾಭರು ಬಾಗಿಲಲ್ಲೇ ಇದ್ದರು.

"ನಾವಿನ್ನು ಹೊರಡುತ್ತೇವೆ" ಅಂದ ಚಂದ್ರು.

"ಅಯ್ಯೋ, ಈಗಾಗಲೇ ತಡವಾಯಿತು. ಇನ್ನು ಬೆಂಗಳೂರು ತಲುಪಿ ನೀವೆಲ್ಲಾ ಮನೆಗೆ ಹೋಗಬೇಕಾದರೆ ಮಧ್ಯರಾತ್ರಿಯೇ ಆಗುತ್ತದೆ. ಈ ರಾತ್ರಿ ಇಲ್ಲಿಯೇ ಇದ್ದುಬಿಡಿ. ಚೆನ್ನಾಗಿ ಊಟ ಮಾಡಿ ಮಲಗಿ. ಬೆಳಿಗ್ಗೆ ತಿಂಡಿ ತಿಂದು ಹೊರಟುಬಿಡಿ. ನಾನೂ ನಿಮ್ಮ ಜೊತೆಗೆ ಬೆಂಗಳೂರಿಗೆ ಬರುವೆ."

ಪ್ರಭು, ಚಂದ್ರು, ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಅವರಿಗೆ ಒಪ್ಪಿಗೆ ಇದ್ದಂತಿತ್ತು. ಮಹಿಳೆಯರ ಮುಖದಲ್ಲಿ ಅಸಮ್ಮತಿ. ಪದ್ಮನಾಭರೇ ಮತ್ತೆ ಹೇಳಿದರು, "ಊರಿಗೆ ಫೋನ್ ಮಾಡಿ, ಒಂದು ದಿನ ಅಲ್ಲಿ ಸಾವರಿಸಿಕೊಳ್ಳುತ್ತಾರೆ."

ಎಲ್ಲರ ಒಪ್ಪಿಗೆ ಸಿಕ್ಕಿತು. ನಮ್ಮ ಕೋಣೆಗಳಿಗೆ ತೆರಳಿ ವಿಶ್ರಾಂತಿ ತೆಗೆದುಕೊಂಡೆವು. ಆರಾಮದಲ್ಲಿ ಊಟವಾಯಿತು. ಎಲ್ಲರೂ ರಾತ್ರಿಯ ಬೆಳಕಲ್ಲಿ ಜಗಲಿಯ ಮೇಲೆ ಕೂತೆವು.

ಧೀರೇಂದ್ರ ಹೇಳಿದ,

"ಅಂದಹಾಗೆ ನಿಮ್ಮ ತಂದೆ ಕೃಷ್ಣಯ್ಯ ದೀಕ್ಷಿತರು, ತಾಯಿ ಶಾರದಮ್ಮ ಎಂದು ತಿಳಿಯಿತು."

ಪದ್ಮನಾಭರು ಮೌನವಾಗಿ ನಮ್ಮನ್ನೆಲ್ಲಾ ನೋಡಿ, "ಹೌದು" ಎನ್ನುತ್ತಾ ನೇಪಥ್ಯಕ್ಕೆ ಜಾರಿದರು.

13
ಅಭಿನವರ ಆಶೀರ್ವಾದ..

1961, ರುದ್ರಪಟ್ಟಣದ ಇತಿಹಾಸದಲ್ಲಿ ಪರ್ವಕಾಲ. ಸುವರ್ಣ ಸಂಪುಟ. ಮದ್ರಾಸು ಆಕಾಶವಾಣಿಯಲ್ಲಿ ನಿಲಯದ ಕಲಾವಿದರಾಗಿದ್ದ, ಚೌಡಯ್ಯನವರ ಶಿಷ್ಯರಾಗಿದ್ದ ಪಿಟೀಲು ವಿದ್ವಾಂಸ ಆರ್ ಕೆ ವೆಂಕಟರಾಮಾಶಾಸ್ತ್ರಿಗಳು ಬಹಳ ಅಪರೂಪವಾದ "ಅತಿರುದ್ರ ಮಹಾಯಾಗ"ವನ್ನು ನಮ್ಮೂರಲ್ಲಿ ಆಯೋಜಿಸಿದರು. ಶೃಂಗೇರಿ ಸಂಸ್ಥಾನದ 35ನೆಯ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರ ನೇತೃತ್ವ.

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳನ್ನು ನೋಡುವುದೇ ಸುಕೃತ.

"ಶ್ರೀಗಳನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿದ ದೃಶ್ಯ ಹೃದಯಸ್ಪರ್ಶಿ. ಸುತ್ತಮುತ್ತಲ ಹಳ್ಳಿಯ ಜನರೆಲ್ಲ ಕಿಕ್ಕಿರಿದಿದ್ದರು. ಸ್ವಾಮೀಜಿ ಅವರ ಮುಖದ ಕಾಂತಿ, ವರ್ಚಸ್ಸು, ಗಾಂಭೀರ್ಯ ವರ್ಣನಾತೀತ. ನಂತರ ಅವರ ಆಶೀರ್ವಚನ, ಆಹಾ, ಎಂತಹ ಕನ್ನಡ, ಎಂತಹ ಸಾಹಿತ್ಯ ಸ್ಪಷ್ಟತೆ, ಕನ್ನಡ ವ್ಯಾಮೋಹಿಯಾಗಿದ್ದ ನನಗೆ ಅವರ ಮಾತು ಅಮೃತದಂತಿತ್ತು. ಸ್ವಚ್ಛ ಕನ್ನಡ ಉಚ್ಚಾರಣೆ, ಪದ ಜೋಡಣೆ. ಆ ಮಾತಿನ ಗತಿ, ಹಿತವಾದ ಸರ್ವಲಘು ಸ್ವರಕ್ಕೆ ನಾದಪೂರಿತ ಮೃದಂಗ ವಾದನವಿದ್ದಾಗ ಆಗುವ ಅನುಭವ ಕೊಟ್ಟಿತ್ತು. ವಿದ್ಯಾವರ್ಚಸ್ಸು ತುಂಬಿ ತುಳುಕುತ್ತಿತ್ತು. ನನ್ನ ಮನಸ್ಸು ಶಾಸ್ತ್ರ, ನಿಯಮಗಳ ಕಡೆ ಇಲ್ಲದಿದ್ದರೂ ಸ್ವಾಮಿಗಳ ಭಾಷೆ, ಅವರ ಯೋಗಸಿದ್ಧಿಯ ಮೈಕಟ್ಟು, ಮಾನವೀಯ ಧರ್ಮಕ್ಕೆ ಸಂಬಂಧಪಟ್ಟ ಮಾತುಗಳು ನನ್ನನ್ನು ಬಹಳಷ್ಟು ಆಕರ್ಷಿಸಿದ್ದವು." (ಉದ್ಧರಿತ: ನೆನಪಿನಂಗಳದಲ್ಲಿ)

ಸ್ವಾಮಿಗಳು, ನಿತ್ಯವೂ ನದಿಯಲ್ಲಿ ಈಜುತ್ತಿದ್ದರು. ಸುಮಾರು ಒಂದು ಗಂಟೆ ನೀರಿನಲ್ಲಿ ತೇಲುತ್ತಿದ್ದರು. ಅದನ್ನು ಕಣ್ತುಂಬಿಕೊಳ್ಳಲು ನಾವೆಲ್ಲಾ ನದಿತೀರದಲ್ಲಿ ಸೇರುತ್ತಿದ್ದೆವು, ಸ್ವಾಮಿಗಳ ಕಣ್ಣಿಗೆ ಕಾಣದಂತೆ!

ಆ ವರ್ಷ ನಮ್ಮ ಅಮ್ಮ (ನನ್ನ ತಂದೆಯ ತಾಯಿ, ಅವರನ್ನು ನಾವು ಹಾಗೆಯೇ ಕರೆಯುತ್ತಿದ್ದೆವು) ತೀರಿಕೊಂಡಿದ್ದರು. ಹಾಗಾಗಿ, ನನ್ನ ತಂದೆಯವರು ಯಾವುದೇ ಶುಭಕಾರ್ಯದಲ್ಲಿ ಭಾಗವಹಿಸುವಂತಿರಲಿಲ್ಲ. ವೇದ ವಿದ್ವಾಂಸರಾದ ನನ್ನ ತಂದೆಯ ಬಗ್ಗೆ ಜಗದ್ಗುರುಗಳಿಗೆ ಅಪಾರ ಗೌರವ.

ಅದಕ್ಕೆ ಗುರುಗಳು ಹೇಳಿದರು, "ನಾವೇ ನಿಮ್ಮ ಮನೆಗೆ ಬರುತ್ತೇವೆ."

ತಂದೆಯವರೆಂದರು, "ಎಂತಹ ಸುಕೃತ. ಇದು ಪೂರ್ವಜನ್ಮದ, ನಮ್ಮ ವಂಶದ ಹಿರಿಯರ ಪುಣ್ಯದ ಫಲ."

"ಸ್ವಾಮಿಗಳು, ಆಗಮಿಸಿದಾಗ, ನಾನು ಆಗ ತಾನೆ, ಸಂಧ್ಯಾವಂದನೆಯನ್ನು ಮುಗಿಸಿ ಹೊರಬರುತ್ತಿದ್ದೆ. "ಮಂಜರು ಪಂಚೆ" ಹಳದಿಯದು, ಉತ್ತರೀಯ.

ಗುರುಗಳು, ನನ್ನನ್ನು ನೋಡಿದವರೆ,

"ಇವನೇನೋ ನಿಮ್ಮ ಸುಪುತ್ರ" ಅಂದವರೆ ತಲೆಯ ಮೇಲೆ ಕೈ ಇಟ್ಟರು. ವಿದ್ಯುತ್ ಪ್ರವಹಿಸಿದಂತಾಯಿತು. ಮೈಯೆಲ್ಲಾ ಪುಳಕಿತ. ಎಂತದೋ ಅಪೂರ್ವವಾದ ಹಿಂದೆಂದೂ ಆಗದಂತಹ ಅನುಭವ. ದೈವಿಕ ಅನುಭವ ಎಂದರೆ ಇದೇನಾ. ಯಾರನ್ನೂ ಸ್ಪರ್ಶಿಸದ ಗುರುಗಳು ನನ್ನ ತಲೆಯ ಮೇಲೆ ಕೈ ಇಟ್ಟು

ಆಶೀರ್ವದಿಸಿದ್ದರು. ಅರ್ಥವಾಗಲಿಲ್ಲ; ಅವಾಕ್ಕಾದೆ. ಸಾವರಿಸಿಕೊಂಡು, ಪ್ರವರ ಹೇಳಿ, ಶಿರಸಾಷ್ಟಾಂಗ ನಮಸ್ಕಾರ ಮಾಡಿದೆ. ಆ ಆಶೀರ್ವಾದದ ಶಕ್ತಿ ನನ್ನ ಜೀವನದುದ್ದಕ್ಕೂ ಕಾಪಾಡಿದೆ, ನನ್ನ ಸಂಗೀತಕ್ಕೆ ಪುಷ್ಟಿಯನ್ನಿತ್ತಿದೆ; ಗೌರವವನ್ನು ತಂದಿದೆ.

ಪದ್ಮನಾಭರು ಕಣ್ಣು ತೆರೆದರು.

"ಏನಪ್ಪಾ, ಎಲ್ಲಾ ಮಲಗಿಬಿಟ್ರಾ"
ಎಲ್ಲರೂ ಎಚ್ಚರವಾಗಿಯೇ ಇದ್ದರು. ಇಂತಹ ದೈವಿಕ ಘಟನೆಗಳನ್ನು ಕೇಳುತ್ತಿದ್ದರೆ ನಿದ್ದೆ ಹೇಗೆ ಬರುತ್ತದೆ !

ಮುಂದೆ,

ಅತಿರುದ್ರ ಮಹಾಯಾಗವು ರುದ್ರಪಟ್ಟಣಕ್ಕೆ ಬಹಳ ಅನುಕೂಲ ಉಂಟುಮಾಡಿತು. ಡಾಂಬರು ರಸ್ತೆ, ವಾಹನ ಸೌಕರ್ಯ, ಸ್ವಚ್ಛತೆ. ಸಾವಿರಾರು ಜನರು ಯಾಗಕ್ಕೆ ಬಂದರು. ರಾಜಕಾರಣಿಗಳು, ಸನ್ಯಾಸಿಗಳು, ಸಾಮಾಜಿಕ ಧಾರ್ಮಿಕ ಮುಖಂಡರು ಹೊಳೆಯದಡದ ತೋಪಿನಲ್ಲಿ ಚಪ್ಪರ; ಹೋಮಕುಂಡಗಳು.

ವೇ ಬ್ರ ಶ್ರೀ ಕೇಶವಮೂರ್ತಿ ಘನಪಾಠಿಗಳು, ವೇ ಬ್ರ ಶ್ರೀ ಕಾಶಿ ಘನಪಾಠಿಗಳು, ಮುಖ್ಯ ಆಚಾರ್ಯರು. ಸುಮಾರು 150 ಋತ್ವಿಕರು ಬಂದಿದ್ದರು. ಎಲ್ಲರೂ ಎಲ್ಲಿದ್ದರೋ ತಿಳಿಯದು. ನಮ್ಮ ಮನೆಯಲ್ಲಿಯೇ 50 ಜನ ಋತ್ವಿಕರು.

ಸಂಜೆ ಯಾಗಮಂಟಪದಲ್ಲಿ ರುದ್ರ ಮತ್ತು ಚಮೆ ಪಠನ. ಸುಮಾರು 150 ಋತ್ವಿಕರು ಏಕಕಂಠದಲ್ಲಿ ವೇದ ಪಠನ. ದಿವ್ಯಾನುಭವ. "ಓಂ ದೇವ ದೇವೋತ್ತಮ ದೇವತಾ ಸಾರ್ವಭೌಮ" ಅನ್ನೋದು ಕೇಳಿದ್ರೆ ನನಗೆ ಪ್ರಧಾನ ಆಚಾರ್ಯರಾಗಿದ್ದ ಕೇಶವಮೂರ್ತಿ ಘನಪಾಠಿಗಳ ಆ ಸುಶ್ರಾವ್ಯವಾದ ಶಾರೀರ ಜ್ಞಾಪಕಕ್ಕೆ ಬರುತ್ತೆ. ಬಹಳ ಶಾಂತವಾದ ವದನ, ವರ್ಚಸ್ವಿ ನಯನಗಳು, ಸುಮಾರು 5.7 ಅಡಿ ಎತ್ತರದ ದೃಢಕಾಯ ದೇಹ, ಮಿತಿಯಾದ, ಮಾಧುರ್ಯವಾದ ಮಾತು. ಅವರ ಶರೀರದಲ್ಲಿ ವೇದಮಂತ್ರ ವೀಣಾ ನಾದದಂತೆ ಹೊರಹೊಮ್ಮುತ್ತಿತ್ತು. ತುಂಬ ಸರಳರು. ಅವರ ವ್ಯಕ್ತಿತ್ವ ನನ್ನನ್ನು ತುಂಬಾ ಆಕರ್ಷಿಸಿತ್ತು." (ಉದ್ಧರಿತ)
"ಸಾರ್ವಜನಿಕ ಭೋಜನಕ್ಕೆ ದೊಡ್ಡಮನೆ ಶಾಸ್ತ್ರಿಗಳ ತೋಟದಲ್ಲೇ ವ್ಯವಸ್ಥೆ. ಬಡಿಸುವವರೂ ನೂರಾರು ಜನ. ಭೋಜನ ಮಾಡೋವ್ರು ಸಾವಿರಾರು ಜನ. ನನ್ನ ಬದುಕಿನಲ್ಲಿ ಬಹುಶಃ ಆ ಅನ್ನದ ರಾಶಿಯನ್ನ ಮತ್ತೆ ನೋಡೋಕೆ ಸಾಧ್ಯವೇ ಇಲ್ಲ. ಸುಮಾರು 10–12 ಅಡಿಗಳಷ್ಟು ಎತ್ತರದ ಅನ್ನದ ರಾಶಿ. ದೊಡ್ಡ ಕೊಳದಪ್ಪಲೆಗಳಲ್ಲಿ

ಸಾರು, ಹುಳಿ, ನೂರಾರು ಮುತ್ತುಗದ ಎಲೆ ಪಿಂಡಿಗಳು. "ಅಘೋರಮ್ ಅಯ್ಯರ್"ನ ಸಾಮರ್ಥ್ಯ ಹಾಗೂ ಕೌಶಲ್ಯ ಎಷ್ಟರ ಮಟ್ಟಿಗೆ ಇತ್ತೆಂದರೆ ದೊಡ್ಡ ತಪ್ಪಲೆಗಳನ್ನು ಒಲೆಯ ಮೇಲಿಂದ ಒಬ್ಬರೆ ಇಳಿಸಿಬಿಡುತ್ತಿದ್ದರು. ದೈತ್ಯಾಕಾರದ ವ್ಯಕ್ತಿ. ಸಾಹಸ ಪುರುಷ. ಅವರ ಆ ಬಲಪ್ರಯೋಗವನ್ನು ನೋಡುವುದೇ ನನಗೆ ಆನಂದದಾಯಕವಾಗಿರುತ್ತಿತ್ತು. ನಾವೂ ಸಹ ಯಥಾಶಕ್ತಿ ಬಡಿಸುವುದರಲ್ಲಿ ಸಹಾಯ ಮಾಡ್ತಾ ಇದ್ವಿ. ಆದರೂ ಊಟ ಮಾಡುವುದರಲ್ಲೇ ಆಸಕ್ತಿ ಹೆಚ್ಚು."(ಉದ್ಧರಿತ)

ಊರ ತುಂಬಾ ಅಂಗಡಿಗಳು. ಕಡ್ಲೆಪುರಿ, ಬತ್ತಾಸು, ಖಾರಾಸೇವೆ, ಒಂದು ಹೋಟ್ಲು ಕೂಡಾ ಇತ್ತು. ಸರ್ಕಸ್ ಬಂದಿತ್ತು. ಮಕ್ಕಳಿಗೆ ಖುಷಿಯೋ ಖುಷಿ.
"ಮತ್ತೆ ಅತಿರುದ್ರಯಾಗ ಮಾಡ್ತೀರಾ?" ರಮೇಶನ ಪ್ರಶ್ನೆ.

"ಅದೊಂದು ಕನಸು ಅನ್ನಿಸುತ್ತೆ. ಯಾಕೆ ರಮೇಶ್?"

"ಅದೇ ಊಟದ ವಿಚಾರ ಬಂತಲ್ಲ. ಅನ್ನದಪರ್ವತ ನೋಡೋಕೆ." ನಕ್ಕು ಹೇಳಿದ, ಸುಮ್ನೆ, ಎಲ್ಲರೂ ಎದ್ದಿದ್ದಾರಾ ಅಂತ ಟ್ರೈ ಮಾಡ್ದೆ. ಮತ್ತೆ ನಕ್ಕ.

ಹ್ಞಾ ಎದ್ದಿಲ್ಲದೆ ಏನು. ನಿನ್ನ ಹಾಗೆ ಗೊರಕೆ ಹಾಕ್ತಾಯಿಲ್ಲ,
ಎಲ್ಲರ ಒಕ್ಕೊರಲ ಘೋಷಣೆ.

"ಮುಂದುವರೆಸಲೋ ಬೇಡವೋ"
ಪದ್ಮನಾಭ ಅವರೆ, ಮುಂದುವರೆಸಿ, ನಾಳೆಗೆ ಅಂದ್ರೆ ಆಗೋಲ್ಲ ಪ್ರಭುವಿನ ಮಾತು.

ಪದ್ಮನಾಭರು ಮುಂದುವರೆಸಿದರು,

"ನನ್ನ ತಂದೆ ಕೃಷ್ಣಯ್ಯ ದೀಕ್ಷಿತರು. ವೇದ ಪಂಡಿತರು. ಕೃಷಿಕರು. ತೋಟದಲ್ಲಿ ದುಡಿಯುವವರು. ಮಾತು ಕಡಿಮೆ. ಯಾವಾಗಲೂ ವೇದದ ಪುಸ್ತಕ ಕೈನಲ್ಲಿ. ಕೆಲಸದಲ್ಲಿ ಅತೀವ ಶ್ರದ್ಧೆ, ಮಿತಭಾಷಿ, ಗೃಹಸ್ಥರಾದರೂ ವಿರಕ್ತ. ಪುರೋಹಿತರು, ಆದ್ರೆ ಎಲ್ಲಿ ಅಂದ್ರೆ ಅಲ್ಲಿಗೆ ಹೋಗ್ತಾಯಿರಲಿಲ್ಲ. ಕಷ್ಟಸಹಿಷ್ಣು. ಮಕ್ಕಳ ಮೇಲಿನ ಪ್ರೇಮವನ್ನು ಬಹಿರಂಗವಾಗಿ ತೋರಿದವರಲ್ಲ. ಅವರಾಯಿತು. ಅವರ ಕೆಲಸವಾಯಿತು. ಪ್ರತಿ ಮಂಗಳವಾರ ಹಳಗನ ಹಳ್ಳಿಯ ಸಂತೆಯಲ್ಲಿ ವೀಳಯದ ಎಲೆ ಮಾರುತ್ತಿದ್ರು. ದಿನವೆಲ್ಲಾ ಮಾರಿದರೂ ಹತ್ತು ರೂಪಾಯಿ ಬರುತ್ತಿರಲಿಲ್ಲ."

ನನ್ನ ಅಜ್ಜಿ, ತಂದೆಯ ತಾಯಿ ಚಿನ್ನಮ್ಮ. ನಮ್ಮ ತಾತ ದೇಶಾಂತರ ಹೋದಾಗ, ನನ್ನ ತಂದೆಯನ್ನು ಮೈಸೂರಿನಲ್ಲಿ ಓದಿಸಿದರು. ಅಗರಂ ರಂಗಯ್ಯನವರ ಮನೆಯಲ್ಲಿ

ಕೆಲಸ ಮಾಡುತ್ತಾ ಸಾರಿನ ಪುಡಿ, ಚಟ್ನಿಪುಡಿ.. ಇತ್ಯಾದಿ ಮಾಡಿ ಮಾರಿ ಜೀವನ ನಡೆಸಿದ್ರು. ಮಗನ ಏಳಿಗೆಗಾಗಿಯೇ ಬಾಳಿದರು ಮಹಾತಾಯಿ.

ನನ್ನ ತಾಯಿ ಶಾರದಮ್ಮನವರು. ಸಾಧ್ವಿ ಆದರೆ ದಿಟ್ಟೆ. ಪರೋಪಕಾರಿ, ಸೃಜನಶೀಲೆ. ಆ ಕಾಲದ ಹೆಣ್ಣು ಮಕ್ಕಳಂತೆ ಕಷ್ಟಸಹಿಷ್ಣು. ಅರ್ಥವಿಲ್ಲದ ಮಡಿಮೈಲಿಗೆಗೆ ಶರಣಾದವರಲ್ಲ. ಹಬ್ಬಗಳಲ್ಲಿ ಸಡಗರಿಸುತ್ತಿದ್ದರು. ಮನೆ ಮಕ್ಕಳಿಗೆ ಎಣ್ಣೆನೀರು. ಬಸವಾಪಟ್ಟಣಕ್ಕೆ ಹೋಗಿ ಅವರೇ ನಮಗೆ ಬಟ್ಟೆ ತರೋರು. ನನ್ನ ಸಂಗೀತ ಪ್ರಪಂಚದ ಬಾಗಿಲನ್ನು ತೆರೆದ ಮಹಾಲಕ್ಷ್ಮಿ ಅವರೇ. ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ನನಗೆ, ಇಬ್ಬರು ಅಕ್ಕಂದಿರು, ಒಬ್ಬಳು ತಂಗಿ ಮತ್ತು ಒಬ್ಬ ಅಣ್ಣ. ಇದು ಸಂಸಾರದ ಚಿತ್ರ.

"ಪದ್ಮನಾಭರೆ, ಅದೇ ನೀವು ಹಲವು ಸರ್ತಿ ಶ್ರೀಕಂಠಯ್ಯನವರು ಅಂತ ಹೇಳ್ತಿರಲ್ಲಾ, ಅವರ್ಯಾರು?" ಗುರುವಿನ ಪ್ರಶ್ನೆ.

"ಅವರ ಬಗ್ಗೆ ವಿವರವಾಗಿ ನನ್ನ ಆತ್ಮಚರಿತ್ರೆಯಲ್ಲಿ ತಿಳಿಸಿರುವೆ."
"ಸಂಕ್ಷಿಪ್ತವಾಗಿ ಹೇಳಿ" ಅಂದ ಧೀರೇಂದ್ರ.

"ನನಗೆ ಸುಮಾರು ಆರೇಳು ವರ್ಷಗಳ ಪ್ರಾಯವಿರಬಹುದು. ಬೆಳಿಗ್ಗೆ ಸುಮಾರು 7.30, ಮನೆ ಒಳಗಡೆ ಇದ್ದ ನನಗೆ ಯಾವುದೋ ಒಂದು ಅದ್ಭುತ ಆಕರ್ಷಣೀಯ ಸುನಾದ ಕೇಳಿಸುತ್ತಿತ್ತು. ಅದೂ ಪ್ರಾತಃ ಕಾಲದಲ್ಲಿ, "ಶ್ರೀ ನಾರದ ನಾದ ಸರಸೀರುಹಭೃಂಗ" ಕೀರ್ತನೆಯು ಬಹಳ ಸ್ಪಷ್ಟವಾಗಿ ಕೇಳಿಸುತ್ತಿದೆಯಲ್ಲ. ನಮ್ಮ ಊರಿನಲ್ಲಿ ಇಂತಹ ಒಂದು ಗಂಡು ಶಾರೀರದ ಪರಿಚಯವೇ ಇಲ್ಲವಲ್ಲ. ಯಾರಿರಬಹುದು ಎಂದು ಯೋಚಿಸುವಷ್ಟರಲ್ಲಿ ಅದೇ ಧ್ವನಿ ಹತ್ತಿರ ಹತ್ತಿರ ಬಂದಂತಾಯಿತು. ತಕ್ಷಣ ನಾನು ಮನೆಯ ಹೊರಗಡೆ ಬಂದು ನೋಡಿದರೆ ಬಹಳ ಆಶ್ಚರ್ಯದ ಆದರೂ ಸತ್ಯವಾದ ಸಂಗತಿ. ಒಬ್ಬ ವ್ಯಕ್ತಿ ಹಾಡುತ್ತಾ ರಸ್ತೆಯಲ್ಲಿ ಬರುತ್ತಿದ್ದರು. ಪಲ್ಲವಿ ಹಾಡುತ್ತಾರೆ, ನಂತರ ತಮ್ಮಷ್ಟಕ್ಕೆ ತಾವೇ ಏನನ್ನೋ ಮಾತನಾಡಿಕೊಳ್ಳುತ್ತಾರೆ, ನಗುತ್ತಾರೆ. ಒಂದು ದಟ್ಟಿ ಪಂಚೆ, ಹೆಗಲ ಮೇಲೆ ಒಂದು ಗೋಣಿಚೀಲ, ಹಣೆಯಲ್ಲಿ ವಿಭೂತಿ, ಮುಖದಲ್ಲಿ ಏನೋ ಒಂದು ರೀತಿಯ ನೋವಿನ ಅಭಿವ್ಯಕ್ತತೆ, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರೂ ಮುಖದಲ್ಲಿ ವಿದ್ಯಾ ವರ್ಚಸ್ಸು, ನಾನು ಅವರನ್ನು ನೋಡಿದಾಕ್ಷಣ ನನ್ನ ಅಂತರಾಳದಲ್ಲಿ ಅನುಕಂಪ ಮಿಡಿಯಿತೇ ಹೊರತು ಅವರ ನಡವಳಿಕೆಯನ್ನು ನೋಡಿ ನಗು ಬರಲಿಲ್ಲ. ಅವರ ಹಾಡಿಕೆಯ ನಾದ ಸೌಖ್ಯದಲ್ಲೇ ಮಗ್ನನಾಗಿದ್ದ ನನಗೆ ಇಡೀ ಪ್ರಪಂಚವೇ ಕತ್ತಲಾಗಿ ಒಂದೇ ವ್ಯಕ್ತಿ ಭಾಸ್ಕರನಂತೆ ಬೆಳಗುತ್ತಿದ್ದಂತಹ ಅನುಭವವಾಯಿತು. ಆಹಾ! ಎಂತಹ ಶಾರೀರ. ರಸ್ತೆಯಲ್ಲಿ ಹಾಡುತ್ತಿದ್ದರೂ

ಶಾರೀರದ ಗುಣಮಟ್ಟದಲ್ಲಿ ಯಾವ ಬದಲಾವಣೆಯೂ ಇಲ್ಲ. ಆ ಧ್ವನಿಯ ಹಿಂದೆಯೇ ಶ್ರುತಿ ಇದ್ದಂತಹ ಅನುಭವ. ನೇರವಾಗಿ ಹೃದಯ ಮುಟ್ಟುವ ಭಾವತರಂಗಗಳ "ಕಾನಡ" ನನ್ನನ್ನು ಬೆರಗಾಗಿಸಿತು. ಆಗ ಶಾಸ್ತ್ರೀಯತೆಯ ಸೌಂದರ್ಯ ಏನೂ ಅರಿಯದ ಬಾಲಕನಾದ ನನಗೆ ಈ ಕಲೆ ಕೇವಲ ಕಲೆಯೇ ಅಲ್ಲ, ಇದೊಂದು ಶಕ್ತಿ ಎಂದು ಅಂತರಂಗದಲ್ಲಿ ಮತ್ತೊಂದು ಶಕ್ತಿ ನನಗೆ ಹೇಳುತ್ತಿತ್ತು. ಹಾಡುತ್ತಲೇ ನಮ್ಮ ಮನೆಯ ಬಾಗಿಲ ಹತ್ತಿರ ಬಂದರು.

ನಮ್ಮ ಮನೆಯ ಜಗುಲಿಯಲ್ಲಿ ಒಂದು ಸಣ್ಣ ತುಳಸೀಕಟ್ಟೆಯಿತ್ತು. ಆ ವ್ಯಕ್ತಿ ಆ ತುಳಸೀಕಟ್ಟೆಯ ಹತ್ತಿರ ಬಂದು "ಅಶ್ಯಪ್ಪ" ಎಂದು ಹೇಳುತ್ತ ಕುಳಿತುಕೊಂಡರು. "ಕುಯಗತ್ತಿನ್ಯಾಯ" ಅಂತ ಏನೇನೋ ತಮ್ಮಷ್ಟಕ್ಕೆ ತಾವೇ ಹೇಳಿಕೊಳ್ಳುತ್ತ ನಗುತ್ತಿದ್ದರು. ಆ ನಗುವೂ ಪೂರ್ಣವಾದದ್ದಲ್ಲ, ಸಂತೋಷದ್ದಲ್ಲ. ಮತ್ತೆ ಅವರ ಗಾಯನದ ವಿನಿಕೆಯನ್ನು ಮುಂದುವರಿಸಿ ಆ ಕಾನಡ ರಾಗದ ಕೃತಿಯನ್ನು ಸಂಪೂರ್ಣವಾಗಿ ಹಾಡಿದರು. ಅಷ್ಟಕ್ಕೇ ಮುಗಿಯಲಿಲ್ಲ. ಅದಕ್ಕೆ ಸ್ವರಕಲ್ಪನೆಯನ್ನೂ ಪ್ರಾರಂಭಿಸಿಬಿಟ್ಟರು. ಎಂತಹ ಲಯದ ಹತೋಟಿ, ಅದ್ಭುತವಾದ ಸುಮಧುರ ಸ್ವರಗುಚ್ಛಗಳು, ನಿಜವಾಗಲೂ ಕಲ್ಪನಾ ಸ್ವರಗಳೇ. ಅವರು ಹಾಡುವಾಗ ನನಗೆ ಗಂಧರ್ವರಂತೆಯೇ ಕಂಡರು. ಹಾಡಿಕೆಯಲ್ಲಿ ಎಳ್ಳಷ್ಟೂ ಅನುಮಾನವಿಲ್ಲ, ಆರ್ಭಟವಿಲ್ಲ. ಗಂಗಾಪ್ರವಾಹದಂತೆ ರಾಗ, ಸ್ವರಗಳು ಈ ಮಹಾತ್ಮನ ಶಾರೀರದಲ್ಲಿ ಪುಂಖಾನುಪುಂಖವಾಗಿ ಹೊರಬರುತ್ತಿದ್ದವು. ನಂತರ ಗಾಯನ ಮುಕ್ತಾಯಗೊಳಿಸಿ ಒಂದು ಲೋಟ ನೀರನ್ನು ಕೇಳಿದರು. ನಮ್ಮ ತಾಯಿ ಬಂದು ಕಾಫಿಯನ್ನೂ ನೀರನ್ನೂ ಕೊಟ್ಟಾಗ ಅವರ ಮುಖದಲ್ಲಿ ಧನ್ಯತಾ ಭಾವ. ಕುಡಿದ ಲೋಟವನ್ನು ಹಾಗೇ ಇಟ್ಟುಹೋಗದೆ ಅದನ್ನು ತೊಳೆದು ಅಲ್ಲೇ ಇಟ್ಟು ತಮ್ಮ ಗೋಣಿಚೀಲವನ್ನು ಹೆಗಲಮೇಲೆ ಹಾಕಿಕೊಂಡು ಹೊರಟಾಗ ನನಗೆ ತಡೆಯಲಾಗದ ದುಃಖ. ಯಾತಕ್ಕೊ ನನಗೇ ಗೊತ್ತಿಲ್ಲ. ಅಂದೇ ನನಗೆ ಶಾಸ್ತ್ರೀಯ ಸಂಗೀತದ ಬಗ್ಗೆ ಅಷ್ಟು ಭಕ್ತಿಯಂಕುರವಾದದ್ದು. ಅವರು ಹೊರಟು ಹೋದಮೇಲೆ ಯಾವುದೋ ದಿವ್ಯ ಚೈತನ್ಯವನ್ನು ಕಳೆದುಕೊಂಡ ಹಾಗೂ ಒಬ್ಬ ಗುರು ಶಿಷ್ಯನನ್ನು ಅನಾಥನನ್ನಾಗಿ ಬಿಟ್ಟುಹೋದ ಹಾಗೆ ನನ್ನ ಭಾವನೆಗಳು ಹೇಳುವಂತಿದ್ದವು. ದುಃಖ ತಡೆಯಲಾಗಲಿಲ್ಲ. 5 ನಿಮಿಷಗಳ ಕಾಲ ಕಣ್ಣಲ್ಲಿ ಗಳಗಳನೆ ನೀರು. ನಮ್ಮ ಮನೆಯಿಂದ ಚೆನ್ನಕೇಶವ ದೇವಸ್ಥಾನದ ಕಡೆಗೆ ಹೋಗುತ್ತಿದ್ದ ಆ ದಿವ್ಯಶಕ್ತಿಯನ್ನು ದಿಟ್ಟಿಸಿ ನೋಡುತ್ತಿದ್ದೆ. ಸ್ವಲ್ಪ ನಿಮಿಷಗಳ ನಂತರ ಆ ವ್ಯಕ್ತಿ/ಶಕ್ತಿ ನನ್ನಿಂದಗಲಿ ದೂರ ಹೋಗಿ ಅಗೋಚರವಾಗಿತ್ತು.

ಈ ಮಹಾನ್ ಸಂಗೀತ ವಿದ್ವಾಂಸ ಮತ್ತಾರೂ ಅಲ್ಲ, ಸಂಗೀತ ಭೂಷಣ ವಿ॥ ಆರ್.ವಿ. ಶ್ರೀಕಂಠಯ್ಯ, ತಂದೆ ಮಹಾನ್ ವಿದ್ವಾಂಸರಾಗಿದ್ದ ವೆಂಕಟರಾಯರು. ಅವರಲ್ಲೇ ಕಲಿತು, ನಂತರ ಅಣ್ಣಾಮಲೈ ವಿಶ್ವವಿದ್ಯಾಲಯಕ್ಕೆ ಹೋಗಿ ಅಲ್ಲಿ

ಸಂಗೀತಭೂಷಣರಾದ ವಿ॥ ಶ್ರೀಕಂಠಯ್ಯನವರು ಅಲ್ಲೇ ಪಿಟೀಲು ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಗಾಯನ ಮತ್ತು ವಯಲಿನ್ ವಾದನದಲ್ಲಿ ಮಹಾನ್ ವಿದ್ವಾಂಸರು.

ವಿ॥ ಶ್ರೀಕಂಠಯ್ಯನವರಿಗೆ ಯಾತಕ್ಕಾಗಿ ಈ ರೀತಿಯ ಮಾನಸಿಕ ಆಘಾತವಾಯಿತೋ ತಿಳಿದು ಬಂದಿಲ್ಲ. ಅಣ್ಣಾಮಲೈ ಬಿಟ್ಟು ರುದ್ರಪಟ್ಟಣಕ್ಕೆ ಏತಕ್ಕಾಗಿ ಬಂದರು ಎನ್ನುವುದೂ ತಿಳಿಯುವುದಿಲ್ಲ. ಭೈರವೀ ಕೆಂಪೇಗೌಡರಂತೆಯೇ ಊರೂರು ಅಲೆಯುತ್ತಿದ್ದ ಗಾನಯೋಗಿಯಾಗಿದ್ದರು. ಶ್ರೀಕಂಠಯ್ಯನವರು ಅರಕಲಗೂಡು ತಾಲ್ಲೂಕು ಬಿಟ್ಟು ಹೊರಗಡೆ ಯಾವ ಗ್ರಾಮಕ್ಕೂ ಹೋಗುತ್ತಿರಲಿಲ್ಲ. ಸಂಪೂರ್ಣವಾಗಿ ನಡಿಗೆಯೇ, ಬಸ್ಸನ್ನು ಹತ್ತಿದವರಲ್ಲ. ಜಗಲಿಯಲ್ಲಿ ಮಲಗುತ್ತಿದ್ದರು. ಹೊಳೆಯಲ್ಲಿ ಸ್ನಾನ ಮಾಡುತ್ತಿದ್ದರು. ಒಬ್ಬರ ಮನೆಯಲ್ಲಿ ಊಟ ಕೇಳುತ್ತಿರಲಿಲ್ಲ. ಎಲ್ಲಿ ಊಟವೋ ಎಲ್ಲಿ ತಿಂಡಿಯೋ ದೇವರಿಗೇ ಗೊತ್ತು.

ನಮ್ಮ ಊರಿನ ಪಕ್ಕದ ಊರೇ ಮತ್ತಿಗೋಡು, ಅಲ್ಲಿ ವಾಸುದೇವ ಶಾಸ್ತ್ರಿಗಳು ಅಂತ. ಅನುಕೂಲಸ್ಥರು. ಅವರ ಮನೆಯಲ್ಲಿ ಸ್ವಲ್ಪ ದಿವಸ ಇದ್ದು ಅವರಿಗೆ ಪಾಠ ಮಾಡಿದ್ದು ನೆನಪು. ಅವರದು ಕೊಳಲು ವಾದ್ಯ. ಊರಿನ ರಾಮಮಂದಿರದಲ್ಲಿ ಶ್ರೀಕಂಠಯ್ಯನವರ ಪಿಟೀಲು, ವಾಸು ಅವರ ಕೊಳಲುವಾದನದ ಕಛೇರಿ ಆಗಿದ್ದು ನನಗೆ ಜ್ಞಾಪಕವಿದೆ. ಅಂದೇ ನಾನು ಅವರ ವಯಲಿನ್ ವಾದನವನ್ನು ಕೇಳಿದ್ದು. ಆ ವೇಳೆಗಾಗಲೇ 15–25 ವರ್ಷಗಳಾಗಿದ್ದವು ಬುದ್ಧಿ ಭ್ರಮಣೆಯಾಗಿ. ಆದರೂ ಎಂತಹ ಸುನಾದ, ಸ್ಪಷ್ಟತೆ, ರಾಗ, ತಾನ, ಸ್ವರಗಳ ಧಾರೆ. ಆಹಾ ಎಂತಹ ಕಲಾವಿದ. ಆದರೂ ಮಧ್ಯೆ ಮಧ್ಯೆ ಏನೇನೋ ಮಾತನಾಡುತ್ತಿದ್ದರೂ ಹಾಗೆಯೇ ನುಡಿಸುತ್ತಿದ್ದರು. ಇದ್ದಕ್ಕಿದ್ದ ಹಾಗೆ "ಲೋ ಗೋವಿಂದ (ಕ್ಷೌರಿಕ, ಡೋಲು ನುಡಿಸುವವ) ಡೋಲ್ ತೊಗೊಂಡ್ ಬಾರೋ" ಅಂತ ಜೋರಾಗಿ ಕೂಗಿದ್ದು, ಆ ಅದ್ಭುತ ಸಂಗೀತ ತರಂಗದ ಶಾಂತ ವಾತಾವರಣ ಕದಡಿಹೋದದ್ದು; ಅವರ ಮುಖದಲ್ಲಿ ಆದ ಬದಲಾವಣೆ; ಮುಖ ತಗ್ಗಿಸಿಕೊಂಡೇ ನುಡಿಸುತ್ತಾ ನುಡಿಸುತ್ತಾ ಒಂದು ಸಮಾಧಿ ಸ್ಥಿತಿಗೆ ಹೋಗುವ ಸಂದರ್ಭದಲ್ಲಿ ಇಂತಹ ಆಚಾತುರ್ಯಗಳಾಗುತ್ತಿದ್ದುದು ಸ್ವಾಭಾವಿಕವಾಗಿರುತ್ತಿತ್ತು. ಆ ಕಛೇರಿಗೆ ಯಾರು ಮೃದಂಗ ನುಡಿಸಿದರೋ ಜ್ಞಾಪಕವಿಲ್ಲ. ಅಂತೂ ಅದೊಂದು ಅದ್ಭುತ, ಆನಂದದ ಸಮಯ. ಇಡೀ ರಾಮಮಂದಿರವೇ ನಾದಮಯ. ಹೀಗೆ ಅವರ ಬದುಕು, ಜೀವನವೆಲ್ಲ ಕಳೆದುಹೋಯಿತು.

1964ರ, ಒಂದು ದಿನ ಬೆಳಿಗ್ಗೆ ಸುಮಾರು ಒಂಬತ್ತು ಗಂಟೆ ಇರಬಹುದು. ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಅವರ ಮನೆಯ ಜಗುಲಿಯ ಮೇಲೆ ಮಲಗಿಸಿದ್ದರು. ಆಗಲೂ ಏನನ್ನೋ ಹಾಡುವುದು, ಮಾತನಾಡುವುದು. ಅವರನ್ನೇ

ನಾನು ಬಹಳ ಏಕಾಗ್ರತೆಯಿಂದ ದಿಟ್ಟಿಸಿ ನೋಡುತ್ತಿದ್ದೆ. "ತಾಯಿ ವಾಗ್ದೇವಿ, ಈ ವಿದ್ವಾಂಸನಿಗೆ ಏತಕೀ ಸಂಕಟ, ಬಾಧೆ. ನಿನ್ನ ಬಳಿಗೆ ಬೇಗ ಕರೆದುಕೊಳ್ಳಬಾರದೇ" ಎಂದು ನನ್ನ ಪಾಡಿಗೆ ನಾನೇ ಹೇಳಿಕೊಳ್ಳುತ್ತಿದ್ದೆ. ಕೂಡಲೆ ಅವರ ಕಂಠದಿಂದ "ನಾದ ತನು ಮನಿಶಂ ಶಂಕರಂ ನಮಾಮಿ ಮೇ ಮನಸಾ ಶಿರಸಾ" ಎಂಬ ತ್ಯಾಗರಾಜರ ಕೃತಿ ಬಂದಂತಾಯಿತು. ತಕ್ಷಣ ಈ ಅನರ್ಘ್ಯ ಸಂಗೀತ ರತ್ನ ಈ ಇಹಲೋಕವನ್ನು ಬಿಟ್ಟು ನಾದದಲ್ಲಿ ಲೀನವಾದಾಗ, ಇಡೀ ಜಗತ್ತೇ ನನಗೆ ಕತ್ತಲಿನ ಕೋಣೆಯಂತೆ ಕಾಣಿಸಿತು. ಅಂದೆಲ್ಲಾ ನನಗೆ ಏನೂ ಬೇಕಿಲ್ಲ. ಊರಿನಲ್ಲೆಲ್ಲಾ ಸ್ಮಶಾನ ಮೌನ, ನಾನಂತೂ ಎರಡು ದಿವಸಗಳು ಭಾವನಾಲೋಕದಲ್ಲಿ ಇದ್ದೆ. ಧಾರಾಕಾರವಾಗಿ ಕಣ್ಣೀರು. ಈ ಮಹಾನ್ ಚೇತನದ ಅಗಲಿಕೆಯ ಅಭಿವ್ಯಕ್ತತೆಯಾಯಿತು".(ಉದ್ಧರಿತ)

ಮತ್ತೊಂದು ಅಲೌಕಿಕ ಎನ್ನಬಹುದಾದ ಘಟನೆ ನಡೆಯಿತು. ನೆನಪಿನಂಗಳದಲ್ಲಿ ಕೃತಿಯಲ್ಲಿ ನಾನು ಹೇಳದೆ ಇರುವ ಘಟನೆ ನೆನಪಿಗೆ ಬರುತ್ತಿದೆ. ನಮ್ಮ ಮೈಯೆಲ್ಲಾ ಕಿವಿಯಾಗಿತ್ತು.

"ಶ್ರೀಕಂಠಯ್ಯನವರು, ದಿನವೂ ರಾಮಮಂದಿರದಲ್ಲಿ ಹಾಡ್ತಾ ಇದ್ರು. ನನಗೆ ಆಗ ಸಂಗೀತ ಏನೂ ಗೊತ್ತಿರಲಿಲ್ಲ. ಒಂದು ದಿನ, ಅವರು ರಾಮ ಮಂದಿರದಲ್ಲಿ ಇದ್ದಾಗ ನಾನು ಏನೋ ಸ್ಫೂರ್ತಿ ಬಂದು "ಸರಸಿಜನಾಭ ಸೋದರಿ" ಹಾಡ್ದೆ. ಅವರಿಗೆ ಏನು ಅನ್ನಿಸ್ತೊ, "ಬಾರೋ ಇಲ್ಲಿ" ಅಂತ ಕರೆದರು. ತಲೆಮೇಲೆ ಕೈಯಿಟ್ಟು "ನೀನು ವಿದ್ವಾಂಸನಾಗ್ತೀಯ" ಅಂದ್ರು.

ನನಗೆ ಆಗ ವಿದ್ವಾಂಸ ಅಂದ್ರೆ ಏನು ಅಂತ ಗೊತ್ತಿರಲಿಲ್ಲ. "ಏನೋ ಹುಚ್ಚ, ಹುಚ್ಚು ಮಾತು ಆಡ್ದ" ಅಂದ್ಕೊಂಡೆ. ಆದ್ರೆ ಇವತ್ತು ನೋಡು. ನನಗೆ ಆಗ ಪ್ರೌಢತ್ವ ಇದ್ದಿದ್ರೆ ಶ್ರೀಕಂಠಯ್ಯನವರನ್ನು ಹೇಗೆ ಸನ್ಮಾನಿಸ್ತಿದ್ನೊ?" ಪದ್ಮನಾಭರ ಗಂಟಲು ಗದ್ಗದಿತವಾಗಿತ್ತು.

ಎಲ್ಲರೂ ಮೌನವಾಗಿ ಪದ್ಮನಾಭರನ್ನೆ ನೋಡುತ್ತಿದ್ದೆವು. ಕೊನೆಗೆ ಅವರೇ
"ಸರಿ, ಏಳಿ. ಈಗ ಸರಿ ರಾತ್ರಿಯಾಗಿದೆ. ಮಲಗೋಣ." ಅಂದರು.
ನಾನೆಂದೆ, "ಮುಂದಿನ ಭಾಗ ಕೇಳೋಕ್ಕೆ ನಿಮ್ಮ ಮನೆಗೆ ಬರುವೆ"
"ಆಗಲಿ ಎಲ್ಲರೂ ಬನ್ನಿ" ಮಲಗಲು ಹೊರೆಟೆವು. ಆದರೆ ನಮ್ಮ ತಲೆಯ ತುಂಬಾ..
ಶ್ರೀ ನಾರದ ನಾದ ಸರಸೀರುಹಭೃಂಗ... ಅನುರಣಿಸುತ್ತಿತ್ತು.

14
ಭ್ರಮರದ ಝೇಂಕಾರ ಮುನಿಗಳ ಓಂಕಾರ

"ಸಂಗೀತದ ಹಂಗು ನಮಗೆ ಇರಬೇಕು, ಆದರೆ ಸಂಗೀತಕ್ಕಾಗಲೀ ಸಂಗೀತಗಾರನಿಗಾಗಲಿ ಹಂಗು ಇರಬಾರದು. ಶ್ರೀಕಂಠಯ್ಯನವರು ಹಾಗೆ ಬಾಳಿದರು. ಅವರ ಫೋಟೋವನ್ನು ನಮ್ಮೂರಿನ ರಾಮ ಮಂದಿರದಲ್ಲಿ ಹಾಕಿರುವೆ. ಅವರ ಸಂಗೀತ ಸೇವೆ, ಭಕ್ತಿ ಸಾಧನೆಗಳು, ಬದುಕಿನ ವಿಕ್ಷಿಪ್ತತೆಗಳು.. left indelible impressions on me".

ಊರಿನಲ್ಲಿ ಇದ್ದಾಗ ಸಂಗೀತವನ್ನು ಕ್ರಮಾಗತವಾಗಿ ಅಭ್ಯಸಿಸದಿದ್ದರೂ, ಸಂಗೀತದ ಬಗ್ಗೆ, ಸಂಗೀತಗಾರರ ಬಗ್ಗೆ ನನಗೆ ಯಾಕೊ ಅಸಾಧಾರಣ ಮೋಹವಿತ್ತು.
"ನಮ್ಮೂರಿಗೆ ಚೌಡಯ್ಯನವರು ಬಂದಿದ್ದರು ಅಂತ ಹೇಳಿದ್ದೆನಲ್ಲ,....".

"ಹೌದು, ಪದ್ಮನಾಭರೆ, ಓದುಗರು ಕೇಳ್ತಾಯಿದಾರೆ, ಮೊದಲ ಅಧ್ಯಾಯದಲ್ಲಿ ಆ ಹುಡುಗ ಚೌಡಯ್ಯನವರ (1895–1967) ವ್ಯಕ್ತಿತ್ವವನ್ನು ಕಣ್ಣು ತುಂಬಿಕೊಂಡ ಅಂತ ಹೇಳಿ ಬಿಟ್ಟುಬಿಟ್ಟೆಯಲ್ಲಾ, ಯಾರಾತ? ಇದೇನು ಪತ್ತೆದಾರಿ ಕಾದಂಬರಿನಾ...!. ಈಗ ವಿಷಯ ಹೇಳಿಬಿಡ್ತಿನಿ. ಆ ಹುಡುಗ ಬೇರಾರು ಅಲ್ಲ. ನಮ್ಮ ಆರ್.ಕೆ.ಪಿ.
"ಹ್ಞಾ" ನಕ್ಕು ಪದ್ಮನಾಭರು ಮುಂದುವರೆಸಿದರು.

"ಚೌಡಯ್ಯನವರನ್ನು ಊರಿನ ಆಸ್ಪತ್ರೆ ಹತ್ರ – ಡಾಕ್ಟರ್ ಮನೆಯಿರಬಹುದು – ಅಲ್ಲಿ ಇಳಿಸಿದ್ದರು. ಭವ್ಯವಾದ ವ್ಯಕ್ತಿ, ಭವ್ಯವಾದ ವ್ಯಕ್ತಿತ್ವ. ನಗೆಮೊಗ, ಮಿನುಗುವ ಕಣ್ಣುಗಳು, ಸಾಮಾನ್ಯವಾಗಿ ಜುಬ್ಬಾ, ಶಲ್ಯ. ಅವರ ಪಿಟೀಲು ವಾದನ ಜನಸಂಪ್ರೀತಿ. ಅವರ ಸುತ್ತ ಜನ ಮುತ್ತಿರುತ್ತಿದ್ದರು. ಸಾಮಾನ್ಯವಾಗಿ, ಮುಖ್ಯ ಹಾಡುಗಾರರಿಗೆ ಸಂಭಾವನೆ ಹೆಚ್ಚಿರುತ್ತದೆ. ಆದರೆ ಚೌಡಯ್ಯನವರು, ಪಿಟೀಲು ನುಡಿಸಲು ಬರುತ್ತಾರೆ ಎಂದರೆ, ಅವರಿಗೇ ಸಂಭಾವನೆ ಹೆಚ್ಚು ಕೊಡುತ್ತಿದ್ದರು."

"ಅವರೂ ಹಾಗೆಯೇ, ಧಾರಾಳವಾಗಿ ಖರ್ಚು ಮಾಡುತ್ತಿದ್ದರು. ಮೈಸೂರಿನ ಚಾಮರಾಜಪುರಂನ ಅವರ ಮನೆಯಲ್ಲಿ ಯಾವಾಗಲೂ 30–40 ಜನರು. ಊಟ ತಿಂಡಿಯ ಸತತ ಆತಿಥ್ಯ. ಅಗತ್ಯವಿದೆ ಅನಿಸಿದರೆ, ಸಾಲ ಮಾಡಿಯಾದರೂ ಜನರಿಗೆ ಸಹಾಯ ಮಾಡುವ ಅಂತಃಕರಣ."

ಚಂಬೈ ವೈದ್ಯನಾಥ ಭಾಗವತರು (1896–1974) ಅವರು ತಮ್ಮ ಊರಿನ ಈಶ್ವರನಿಗೆ, ಬೆಳ್ಳಿಯ ಕವಚವನ್ನು ಮಾಡಿಸುವುದಾಗಿ ಹರಸಿಕೊಂಡಿದ್ದರಂತೆ. ಆದರೆ ಬಹುಕಾಲ ಅದು ಸಾಧ್ಯವಾಗಲಿಲ್ಲ. ಒಮ್ಮೆ ಚೌಡಯ್ಯನವರಿಗೆ ವಿಷಯ

ತಿಳಿಯಿತು. "ನಾನು ಹಣವನ್ನು ಕೊಡುತ್ತೇನೆ" ಅಂದರು. "ಬೇಡ" ಅಂದುಬಿಟ್ಟರು ಚಂಬೈ, ಸ್ವಾಭಿಮಾನಿಗಳು.

1943ರಲ್ಲಿ ಚೌಡಯ್ಯನವರು "ವಾಣಿ" ಅನ್ನುವ ಸಂಗೀತಮಯ ಸಿನಿಮಾ ತೆಗೆದರು. ಮಾಸ್ಟರ್ ಹಿರಣ್ಣಯ್ಯನವರ ತಂದೆ ಕೆ. ಹಿರಣ್ಣಯ್ಯನವರು ನಿರ್ದೇಶಕರು. ಬಳ್ಳಾರಿ ಲಲಿತಾಂಬ ಮತ್ತು ಬಳ್ಳಾರಿ ರತ್ನಮಾಲ, ಮುಸುರಿ ಕೃಷ್ಣಮೂರ್ತಿ, ಪಂಡರಿಬಾಯಿ.. ಮೊದಲಾದವರು ಪಾತ್ರ ವಹಿಸಿದ್ದರು. ಚೌಡಯ್ಯನವರೇ ನಾಯಕರು, ಸಂಗೀತ ನಿರ್ದೇಶಕರು. ಚಿತ್ರ ಹಣ ಮಾಡಲಿಲ್ಲ. ಆದರೆ ಚೌಡಯ್ಯನವರು ಚಂಬೈ ಅವರನ್ನು ಒಪ್ಪಿಸಿ, ಅವರಿಂದ ಆ ಚಿತ್ರದಲ್ಲಿ ಹಾಡಿಸಿ, ಹತ್ತು ಸಾವಿರ ರೂಪಾಯಿ ಸಂಭಾವನೆ ಕೊಟ್ಟರು. ಚಂಬೈನ ಈಶ್ವರನಿಗೆ ಬೆಳ್ಳಿ ಕವಚದ ಭಾಗ್ಯವಾಯಿತು. ಭಾಗವತರ ಹರಕೆ ತೀರಿತು.

ಈಗಲೂ ಆಗಲೂ ಚೌಡಯ್ಯನರು ಕರ್ಣಾಟಕ ಸಂಗೀತದ ಸರ್ವಶ್ರೇಷ್ಠ ವಿದ್ವಾಂಸರು. ಗಣ್ಯರು, ಮಾನ್ಯರು. ಅವರ ಸಮಕಾಲೀನರಲ್ಲಿ ಗೌರವಾರ್ಹರು. ಯಾರೂ ಅವರ ಮಾತನ್ನು ಅಲ್ಲಗೆಳೆಯುತ್ತಿರಲಿಲ್ಲ. ಒಮ್ಮೆ ಹೀಗಾಯಿತು. ತಿರುಚಿಯಲ್ಲಿ ಅರೈಕುಡಿ ರಾಮಾನುಜ ಅಯ್ಯಂಗಾರ್ (1890–1967) ಅವರ ಕಛೇರಿ. "ನಾಯಕಿ" ರಾಗವನ್ನು ಹಾಡಿದರು. ಚೌಡಯ್ಯನವರಿಗೆ ತಮ್ಮ ಪಿಟೀಲು ವಾದನದ ಬಗ್ಗೆ ಸಮಾಧಾನವಾಗಲಿಲ್ಲ. ಕಛೇರಿ ಮುಗಿಯುತ್ತಿದ್ದಂತೆ ಘೋಷಿಸಿಬಿಟ್ಟರು. "ನಾಳೆ ಇದೇ ಸಮಯಕ್ಕೆ ಇದೇ ಸ್ಥಳದಲ್ಲಿ, ಮತ್ತೆ ಅರೈಕುಡಿಯವರ ಕಛೇರಿ ಇರುತ್ತದೆ. ನಾನೆ ಮತ್ತೆ ಪಿಟೀಲು ನುಡಿಸುತ್ತೇನೆ." ಯಾರಿಗೂ ಕೇಳಲಿಲ್ಲ; ಯಾರಿಗೂ ಹೇಳಲಿಲ್ಲ. ಅರೈಕುಡಿಯವರು ಏನೂ ಅನ್ನಲಿಲ್ಲ. ಚೌಡಯ್ಯನವರು, ಇಡೀ ರಾತ್ರಿ "ನಾಯಕಿ" ಯನ್ನು ಅಭ್ಯಾಸ ಮಾಡಿದರು. ಒಲಿಸಿಕೊಂಡರು. ಮಾರನೆಯ ದಿನದ ಕಛೇರಿ ದಿವ್ಯವಾಗಿತ್ತು. ತುಂಬುರು, ನಾರದ, ಗಂಧರ್ವರು ಅಷ್ಟೇಕೆ ಶಾರದೆಯೂ ಅಲ್ಲಿ ಹಾಜರಿದ್ದರು. ಚೌಡಯ್ಯನವರ ಧೀಮಂತಿಕೆ, ಹೃದಯ ಶ್ರೀಮಂತಿಕೆಯ ಬಗ್ಗೆ ಹೀಗೆ ಹಲವಾರು ವಿಷಯಗಳಿವೆ" ಎಂದರು ಪದ್ಮನಾಭರು. ಅರೈಕುಡಿಯವರು ಚೌಡಯ್ಯನವರ ಅನುಕೂಲ ಕೇಳಿ, ತಮ್ಮ ಕಛೇರಿಗಳನ್ನು ನಿರ್ಧರಿಸುತ್ತಿದ್ದರು. ತಮಿಳುನಾಡಿನಲ್ಲಿ ಅವರನ್ನು ಚೌಡಯ್ಯ ಅನ್ನುತ್ತಿರಲಿಲ್ಲ. ಸೌಂಡಯ್ಯ, ಅನ್ನುತ್ತಿದ್ದರು" ಎಂದು ನಕ್ಕರು.

"ನಾನು ಅವರ ಮನೆಗೆ ಹೋಗಿದ್ದೇನೆ. ಸಂಗೀತಗಾರನಾಗಿ ಚೌಡಯ್ಯನವರ ಸಂಗೀತವನ್ನು ವಿಶ್ಲೇಷಣೆ ಮಾಡಿರುವೆ. ಅವರ ಅಭಿಮಾನಿ. ಅವರ ಸಾಧನೆಗಳ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲೆ".

"ಚೌಡಯ್ಯನವರ, ಪಿಟೀಲಿಗೆ ಏಳು ತಂತಿ. ನಮ್ಮೂರಿನಲ್ಲಿ ಕಛೇರಿ ಮಾಡುವಾಗ

ತಂತಿ ಕಿತ್ತುಹೋಯಿತು. ಊರಲ್ಲೆಲ್ಲಾ ಅದೇ ಸುದ್ದಿ. ಚೌಡಯ್ಯನವರ ಪಿಟೀಲಿನ ತಂತಿ ಹರಿದು ಹೋಯಿತಂತೆ!. ಅಷ್ಟು ಚೆನ್ನಾಗಿ ನುಡಿಸಿದರು ಅಂತ ಜನ ಮಾತಾಡ್ತಾಯಿದ್ದರು!"

ಒಮ್ಮೆ, ಮೂರು ತಂಡಗಳಲ್ಲಿ ಹಿರಿಯರು, ಮಧ್ಯ ವಯಸ್ಕರು ಹಾಗೂ ಕಿರಿಯರು, ಕೌಶಿಕ್ ಅವರ "ಕುಂತಿ ಕರ್ಣರ ಗಮಕ ನಾಟಕ"ವನ್ನು ರುದ್ರಪಟ್ಟಣದಲ್ಲಿಯೂ ಮಾಡಿದ್ದೆವು. ಚೌಡಯ್ಯನವರ ಶಿಷ್ಯರಾದ ವೆಂಕಟರಾಮಾ ಶಾಸ್ತ್ರಿಗಳು ನನ್ನ ಹಾಡುಗಾರಿಕೆಗೆ ಮೆಚ್ಚಿ, "ಮದ್ರಾಸಿಗೆ ಕರೆದೊಯ್ಯುತ್ತೇನೆ" ಅಂದರು. ಆದರೆ ಅಪ್ಪ, "ಬ್ಯಾಡಾ" ಅಂದ್ರು. ಬಹುಶಃ ಸಂಗೀತದ ಋಣ ಕರ್ನಾಟಕದಲ್ಲೆ ಇತ್ತು ಅಂತ ಇರಬೇಕು.

"ರುದ್ರಪಟ್ಟಣದ ಮಾಧ್ಯಮಿಕ ಶಾಲೆಯಲ್ಲಿ ಪ್ರತಿ ಶುಕ್ರವಾರ "ಸಾಂಸ್ಕೃತಿಕ ಪಿರಿಯಡ್" ಇರುತ್ತಿತ್ತು. ನಾನು "ಸರಸಿಜನಾಭ ಸೋದರಿ" ಅಥವಾ "ರಾಮಚಂದ್ರಂ ಭಾವಯಾಮಿ" ಹಾಡುತ್ತಿದ್ದೆ. ಶಾಲೆಯಲ್ಲಿ ಸಂಗೀತದ ಟೀಚರ್ ಇದ್ದರು. ವಿಚಿತ್ರವೆಂದರೆ ಗಂಡು ಮಕ್ಕಳಿಗೆ ಸಂಗೀತದ ತರಗತಿಗೆ ಪ್ರವೇಶವಿಲ್ಲ!. ನನಗೆ ಕಲಿಯಲು ಆಸೆ. ಕಲಿಸುವವರಿಲ್ಲ. ಕಿಟಕಿಯ ಪಕ್ಕದಲ್ಲಿ ಕೂತು ಟೀಚರ್ ಪಾಠ ಕೇಳಿಸಿಕೊಂಡೆ. "ಹಿಮಾಚಲ ತನಯ ಬ್ರೊ ಚಟುಕೆ... ಕಲಿತೆ."

"ಆ ನಿಮ್ಮ ಶ್ರದ್ಧೆ ಜೊತೆಗೆ ನಿಮ್ಮ ಗೆಳತಿಯರು ದೂರು ಕೊಡದೆ ಇದ್ದ ಕಾರಣ ನೀವು ಗೆದ್ದಿದ್ದು !" ನಗೆಯ ಅಲೆಯೆದ್ದಿತು.

"ಆಗಿನ ಕಾಲದಲ್ಲಿ ನೋಡಿ ತಿಳಿ ಮಾಡಿ ಕಲಿ ಅನ್ನುವುದೇ ಮಂತ್ರ. ನಮ್ಮ ಶಾಲೆಯಲ್ಲಿ ಇಬ್ಬರು ವಿದ್ಯಾರ್ಥಿಗಳಿಗೆ 15X15 ಅಡಿ ಜಾಗ ಕೊಟ್ಟು ತರಕಾರಿ ಬೆಳಸಲು ಹೇಳುತ್ತಿದ್ದರು. ಬಹುಮಾನವನ್ನೂ ಇಟ್ಟಿದ್ದರು. ಆದರೆ ಬೆಳೆದ ಹುರುಳಿಕಾಯಿಗಳನ್ನೆಲ್ಲ ನಾನೇ ತಿಂದುಬಿಟ್ಟಿದ್ದೆ" ಮತ್ತೆ, ನಗೆ ಬಾಂಬುಗಳ ಅನುರಣನ.

"ವಿಶೇಷವೆಂದರೆ, ಪ್ರಕೃತಿಯಲ್ಲಿಯೆ ನಾದವಿದೆ. ನನ್ನ ಅಕ್ಕನ ಮನೆಯ ಹಿಂದೆ ತೋಲೆಯ ಅಂಚಿನಲ್ಲಿ ದುಂಬಿಗಳು ಕೆಲವು ಮರವನ್ನು ಕೊರೆದು ಗೂಡು ಮಾಡಿಕೊಂಡಿದ್ದವು. ಆ ರಂಧ್ರಕ್ಕೆ ಕಡ್ಡಿಯನ್ನು ಚುಚ್ಚಿದರೆ ಸುಮಧುರವಾದ ನಾದ ಬರುತ್ತಿತ್ತು. ನನಗೆ ಇದು ಆಟವಾಗಿದ್ದರೂ ಅದರಿಂದ ಬಾಲ್ಯದಲ್ಲಿ ಏನೋ ಒಂದು ರೀತಿಯ ಆನಂದವನ್ನು ಪಡ್ಕೋತಾಯಿದ್ದೆ. ಬಹುಶಃ ನನ್ನ ಸಂಗೀತದ ಬದುಕನ್ನ ತೆರೆದದ್ದು ಈ ದುಂಬಿಗಳೇ ಅನಿಸುತ್ತೆ. ಅಂದರೆ, ಪ್ರಕೃತಿಯು ಒಬ್ಬ ವ್ಯಕ್ತಿಯಲ್ಲಿ ಸಂಸ್ಕಾರ ಮೂಡಿಸೋದಕ್ಕೆ ಎಂತಹ ಅದ್ಭುತವಾದ, ವಿಸ್ಮಯವಾದ

ಮಾಧ್ಯಮಗಳನ್ನು ಸೃಷ್ಟಿಸಿದೆ ಅನ್ನೋದು ಅರ್ಥವಾಗತ್ತೆ".

"ವಿಷ್ಣುವರ್ಧನ ಅಭಿನಯದ ಎಲ್ಲೆಲ್ಲೂ ಸಂಗೀತವೇ/ ಎಲ್ಲೆಲ್ಲೂ ಸೌಂದರ್ಯವೇ/ ಕೇಳುವ ಕಿವಿಯಿರಲು/ ನೋಡುವ ಕಣ್ಣಿರಲು ಎಲ್ಲೆಲ್ಲೂ ಸಂಗೀತವೇ ಜ್ಞಾಪಕಕ್ಕೆ ಬರುತ್ತದೆ. "ಹೌದು, ಹೈಸ್ಕೂಲು ವಾತಾವರಣವೂ ಸಂಗೀತಕ್ಕೆ ಅನುವಾಗಿಯೆ ಇತ್ತು. ರುದ್ರಪಟ್ಟಣದಲ್ಲಿ ಹೈಸ್ಕೂಲು ಇಲ್ಲದೆ ಇದ್ದದರಿಂದ, ನದಿದಾಟಿ, ಬಸವಾಪಟ್ಟಣಕ್ಕೆ ಹೋಗಬೇಕಿತ್ತು. ಹರಿಗೋಲೆ ಆಧಾರ, ನೆರೆ ಬಂದರೆ ಬಳಸಿಕೊಂಡು ಹೋಗಬೇಕಾಗಿತ್ತು. ಗದ್ದೆಯ ಬದುವಿನ ಮೇಲೆ ನಡೆಯಬೇಕು. ಕೆಲವರು, ಬದುವು ಹಾಳಾಗದಿರಲಿ ಅಂತ, ಮುಳ್ಳು ಹಾಕುತ್ತಿದ್ದರು.

ಆಗಿನ ನನ್ನ ವೇಷ ವಿಚಿತ್ರ. ಉಪನಯನ ಆಗಿದ್ದರಿಂದ ಪಂಚೆ, ಬಿಳಿ ಶರಟು, ಟೋಪಿ, ಅಡ್ಡಡ್ಡಾಗಿ ಹಾಕಿಕೊಂಡ ಬ್ಯಾಗು, ಕೈನಲ್ಲಿ ಛತ್ರಿ, ಟಿಫಿನ್ ಕ್ಯಾರಿಯರ್ ಹೀಗೆ. ಹೊರಗೆ ಏನೂ ತಿನ್ತಾಯಿರಲಿಲ್ಲ. ಮನೆಗೆ ಬಂದಮೇಲೆ ಎಲ್ಲಾ ಕೆಲಸ.

"ನನಗೆ, ಸಭಾಕಂಪನ ಇರಲಿಲ್ಲ. ತಪ್ಪೋ ನೆಪ್ಪೋ ಹಾಡ್ತಾಯಿದ್ದೆ. ಮೇಷ್ಟ್ರುಗಳಿಗೆ ಬಲು ಖುಷಿ. ಗಣಪತಿ ಹಬ್ಬ, ಸ್ಕೂಲ್‌ಡೇಗಳಲ್ಲಿ ಹಾಡುವ ಅವಕಾಶ ಸಿಗ್ತಾಯಿತ್ತು. ನಮ್ಮ ಮುಖೋಪಾಧ್ಯಾಯರು ಶ್ರೀ ಕೆ.ಜಿ ಸತ್ಯನಾರಾಯಣ. ಒಂದು ದಿವ್ಸ ನನ್ನ ಕರೆದು, ಮೈಸೂರು ದಸರಾದಲ್ಲಿ ಹಾಡಿನ ಸ್ಪರ್ಧೆ ಇದೆ. ನೀನು ಹೋಗು. ನಾಳೆ ಬರುವಾಗ ಒಂದುಜೊತೆ ಬಟ್ಟೆತಂದ್ಬಿಡು. ಇಲ್ಲಿಂದಲೆ ಬಸ್ಸು ಹತ್ತಸ್ತೀನಿ. ಅಂತ ಹೇಳಿ ಕೈಗೆ ಹತ್ತು ರೂಪಾಯಿ ಕೊಟ್ಟರು. ಅವರ ಪ್ರೋತ್ಸಾಹಕ್ಕೆ ಉದಾರತೆಗೆ ನಾನು ಯಾವತ್ತೂ ಋಣಿ". ಗುರುಗಳ ನೆನಪಿನಿಂದ ಪದ್ಮನಾಭರ ಕಣ್ಣಾಲಿಗಳು ತುಂಬಿದ್ದವು.

ಕೆಜಿಎಸ್ ವಾಸುದೇವಯ್ಯನವರು, ನಮ್ಮ ಇಂಗ್ಲಿಷ್ ಮೇಷ್ಟ್ರು ಯಾವಾಗಲೂ ಹೇಳೋರು "Thyagaraja, Muthuswami Dixitar & Shyama Shastri followed the footsteps of Purandharadasa." ಆ ಮಾತಿನ ಸತ್ಯ ಇವತ್ತು ಅರ್ಥವಾಗ್ತಾಯಿದೆ.

ಹೈಸ್ಕೂಲಿನಲ್ಲಿ, ಪ್ರತಿ ವರ್ಷ, ಏಳುದಿನ ಗಣಪತಿ ಹಬ್ಬ ನಡೆಯುತ್ತಿತ್ತು. ನಾನೇ ಪುರೋಹಿತ. ಸ್ಥಳೀಯ ಕಲಾವಿದರಿಂದ ಪ್ರತಿದಿನ ಕಾರ್ಯಕ್ರಮ.

ಶಾಲೆಗೆ ಶಿವರಾಮ ಕಾರಂತರು, ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳು.... ಮೊದಲಾದ ಹಿರಿಯರನ್ನು ಕರೆಸಿ ಭಾಷಣ ಮಾಡಿಸುತ್ತಿದ್ದರು. ಶಂಕರನಾರಾಯಣ ಭಟ್ಟ ಅಂತ ಮೇಷ್ಟ್ರಿದ್ದರು. ಅವರಿಗೆ ಇಂತಹ ಕಾರ್ಯಕ್ರಮಗಳಲ್ಲಿ ಆಸಕ್ತಿ. ಒಮ್ಮೆ

ಕಾಳಿಂಗರಾವ್ (1914–1981) ಅವರನ್ನು ಕರೆಸಿದ್ರು. ಜನವೋ ಜನ. ಸೂಟ್ ಹಾಕೋರು. ಅಬ್ಬಾ ಎಂತಹ ಹಾಡುಗಾರಿಕೆ, ಕಂಠಸಿರಿ. ಆಕರ್ಷಣೆ, ಮೋಹನ್ ಕುಮಾರಿ, ಸೋಹನ್ ಕುಮಾರಿಯರು ಅವರ ಶಿಷ್ಯರು. ಅವರ ನಡುವೆ ರಾಯರು ನಿಂತು ಹಾಡುವರು. ಇಂದು ಕನ್ನಡ ಭಾವಗೀತೆಗಳ ಉಚ್ಛ್ರಾಯಕ್ಕೆ ಅವರೇ ಕಾರಣ. ಹುಯಿಲುಗೋಳ ನಾರಾಯಣರಾಯರ "ಉದಯವಾಯಿತು ನಮ್ಮ ಚೆಲುವ ಕನ್ನಡನಾಡು", ಬೇಂದ್ರೆಯವರ "ಇಳಿದು ಬಾ ತಾಯಿ.." ಹಾಡುತ್ತಿದ್ದರೆ, ಯಾರಿಗೆ ಕಣ್ಣಲ್ಲಿ ನೀರು ಬರುವುದಿಲ್ಲ!

ರುದ್ರಪಟ್ಟಣ, ಮಾಧ್ಯಮಿಕ ಶಾಲೆ, ಬಸವಾಪಟ್ಟಣ, ಹೈಸ್ಕೂಲು ಇವುಗಳ ಸಾಂಸ್ಕೃತಿಕ ವಾತಾವರಣ ನನ್ನ ಜೀವನದಲ್ಲಿ, ಸಂಗೀತಯಾನದಲ್ಲಿ ಬಹಳ ಪ್ರಭಾವ ಬೀರಿತು. ನನಗೆ ಅರಿವಿಲ್ಲದಂತೆ ಸ್ಕೂಲಿನಲ್ಲಿ ಕಲಿತದ್ದು ನನ್ನ ಜ್ಞಾನವಿಕಾಸಕ್ಕೆ ಸಹಕಾರಿಯಾಗಿದೆ. ಹೈಸ್ಕೂಲು ಮುಗಿದ ಮೇಲೆ ನಾನು ಮೈಸೂರಿಗೆ ಪಿಯುಸಿ ಓದಲು ಹೋದೆ."

15
ಶ್ರೀ ಮಹಾ ಗಣಪತಿಂ ಭಜೇ ಹಂ....

ಮೈಸೂರೆಂದರೆ, ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಇವತ್ತು ಕರ್ನಾಟಕದಲ್ಲಿ, ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿದಿದೆಯೆಂದರೆ ಮೈಸೂರು ಮತ್ತು ಯದುವಂಶದ ದೊರೆಗಳು ಕಾರಣವೆಂದು ಶ್ರೀಮತಿ ಸುಧಾಮೂರ್ತಿ(infosys foundation) ಅವರು ಹೇಳುವುದು 100% ಸತ್ಯ. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು(1751–1799) ಹತನಾದ. ಒಪ್ಪಂದದಂತೆ ಮೈಸೂರನ್ನು ಒಡೆಯರಿಗೆ ಕೆಲವು ಷರತ್ತುಗಳೊಂದಿಗೆ ಬ್ರಿಟಿಷರು ಮರಳಿಸಿದರು. ಅಂದಿನಿಂದ ಕನ್ನಡಕ್ಕೆ ಪ್ರಾಮುಖ್ಯತೆ ಮರಳಿ ಬಂತು. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ (1895–1940) ಅವರು ಸಮಾಜ ಸುಧಾರಕಷ್ಟೇ ಅಲ್ಲದೆ ಸಂಗೀತ ಸಾಹಿತ್ಯ ಪೋಷಕರೂ ಆಗಿದ್ದರು. ನಾಲ್ವಡಿಯವರಿಗೆ ಕರ್ನಾಟಕ ಹಾಗೂ ಹಿಂದೂಸ್ತಾನಿ, ಎರಡೂ ಕ್ಷೇತ್ರಗಳಲ್ಲಿ ಅಭಿರುಚಿ, ಪರಿಶ್ರಮವಿತ್ತು. ವೀಣೆ ಶೇಷಣ್ಣ, ಮುತ್ತಯ್ಯ ಭಾಗವತರ್, ಮೈಸೂರು ವಾಸುದೇವಾಚಾರ್ ಮೊದಲಾದ ಸಂಗೀತ ದಿಗ್ಗಜರು ಆಸ್ಥಾನದಲ್ಲಿ ಇದ್ದರು.

1940ರಲ್ಲಿ ಅಧಿಕಾರಕ್ಕೆ ಬಂದ ಜಯಚಾಮರಾಜೇಂದ್ರ ಒಡೆಯರ್ (1919–1974) ಸ್ವತಃ ಸಂಗೀತಗಾರರಾಗಿದ್ದರು. ಲಂಡನ್ನಿನ Trinity College of Musicನಲ್ಲಿ ಪಾಶ್ಚಿಮಾತ್ಯ ಸಂಗೀತವನ್ನು ಅಭ್ಯಸಿಸಿದವರು. ಮೈಸೂರು ವಾಸುದೇವಾಚಾರ್ ಅವರಲ್ಲಿ ಕರ್ನಾಟಕ ಸಂಗೀತವನ್ನು ಕಲಿತವರು. ಸುಮಾರು 94 ಕೃತಿಗಳನ್ನು

ಸಂಸ್ಕೃತದಲ್ಲಿ ಜಯಚಾಮರಾಜೇಂದ್ರರು ರಚಿಸಿದರು. ಅವರು ಶಿವಪೂಜೆಗೆ ಬೆಳಗಿನ 3–4 ಗಂಟೆಗೆ ಕುಳಿತುಕೊಳ್ಳುತ್ತಿದ್ದರಂತೆ. ಪೂಜೆ ಮುಗಿಯುವವರೆಗೂ ಆಸ್ಥಾನ ವಿದ್ವಾಂಸರು ಸರದಿಯ ಮೇಲೆ ಸಂಗೀತ ಪೂಜೆಯನ್ನು ಸಲ್ಲಿಸುತ್ತಿದ್ದರಂತೆ. "ಶ್ರೀ ವಿದ್ಯಾ" ಅವರ ಅಂಕಿತ. ಮೇಲ್ಕಾಣಿಸಿರುವ "ಶ್ರೀ ಮಹಾ ಗಣಪತಿಂ ಭಜೇ ಹಂ.." ಕೂಡಾ ಅವರದ್ದೆ. "ನಾನು ಮೈಸೂರಿಗೆ ಬಂದಾಗಲೂ ಮೈಸೂರಿನ ಸಂಗೀತದ ಮಹಿಮೆ ಕಡಿಮೆಯಾಗಿರಲಿಲ್ಲ" ಎಂಬುದು ಪದ್ಮನಾಭರ ಅನಿಸಿಕೆ.

ಮೈಸೂರಿನಲ್ಲಿ ಶಾರದಾವಿಲಾಸ ಕಾಲೇಜು ಸೇರಿದರು. ಬಹಳ ಒಳ್ಳೆಯ ಉಪನ್ಯಾಸಕರು ಅಲ್ಲಿದ್ದರು. ಪಾಠಗಳು ಠಾಕೂ ಟೀಕೂ. ಕ್ರೀಡೆಗಳಿಗೂ ಅವಕಾಶವಿತ್ತು. "ಆದರೆ ಹಳ್ಳಿಯಿಂದ ಬಂದ ನನಗೆ ಕೀಳರಿಮೆ ಕಾಡುತ್ತಿತ್ತು. ಕನ್ನಡದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಹೊಂದಿಕೊಳ್ಳುವ ಸಂಕಟ. ಪಾಠಕ್ಕಿಂತ ಆಟದ ಕಡೆ ಗಮನ. ಕ್ರಿಕೆಟ್, ವಾಲಿಬಾಲ್, ಖೋಖೋ, ಬ್ಯಾಸ್ಕೆಟ್ ಬಾಲ್, ಹಾಕಿ ಆಟಗಳ ಮೈದಾನ ಶಾಲೆಯಲ್ಲಿ ಇತ್ತು. ಹೆಚ್ಚಿನ ಸಮಯ ಮೈದಾನದಲ್ಲಿ ಕಳೆಯುತ್ತಿದ್ದೆ. ಕನ್ನಡ ಸಿನಿಮಾ ನೋಡೋ ಹುಚ್ಚುಬೇರೆ. ಆ ಸಮಯದಲ್ಲಿಯೇ "ಭಾರತಿ – ಕಲ್ಯಾಣ ಕುಮಾರ್" ಅವರು ನಟಿಸಿದ "ಲೌವ್ ಇನ್ ಬ್ಯಾಂಗಲೂರ್" ನೋಡಿದ್ದು. ಭಾರತಿಯವರ ಮೊದಲ ಚಿತ್ರವದು. "ಬೋನಿನಿಂದ ಹೊರಬಂದ ಹುಲಿಯಂತಾಗಿದ್ದೆ" ಎಂದು ಜ್ಞಾಪಿಸಿಕೊಳ್ಳುತ್ತಾರೆ, ಆರ್‌ಕೆಪಿ.

"ಟೌನ್‌ಹಾಲ್‌ನಲ್ಲಿ ಒಂದು ವ್ಯಾಯಾಮಶಾಲೆ ಇತ್ತು. ಅಲ್ಲಿಗೂ ನಾನು ಸೇರಿಕೊಂಡಿದ್ದೆ. ಅಲ್ಲಿಯ ಮುಖ್ಯಸ್ಥರು ವೆಂಕಟಸುಬ್ಬಯ್ಯ, ಬನುಮಯ್ಯ ಸ್ಕೂಲಿನಲ್ಲಿ ಉಪಾಧ್ಯಾಯರು. ಬಹಳ ಶಿಸ್ತಿನ ವ್ಯಕ್ತಿ. ಶ್ರದ್ಧೆಯಿಂದ ವ್ಯಾಯಾಮ ಮಾಡ್ತಾ ಇದ್ದೆ. ಡಿಸ್ಕ್, ಕ್ಲಬ್, ವೈಟ್ ಲಿಫ್ಟಿಂಗ್, ಬೆಂಚ್ ಪ್ರೆಸ್ ಎಲ್ಲಾ ಮಾಡ್ತಾ ಇದ್ದೆ.

"ಕಾಲೇಜಿನಲ್ಲಿ ನಾನು ಅಷ್ಟಾಗಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಇರಲಿಲ್ಲ. ಆಗಿನ ಕಾಲಕ್ಕೆ ಮೈಸೂರು ಸಹೋದರರೆಂದೇ ಹೆಸರುವಾಸಿಯಾಗಿದ್ದ ಪ್ರೊ. ಆರ್.ಎಸ್.ಎನ್. ಸಾಕಷ್ಟು ಚಟುವಟಿಕೆಗಳನ್ನು ಮಾಡುತ್ತಿದ್ದರೂ ನನಗೇಕೋ ಅಲ್ಲಿ ಸೇರಿಕೊಳ್ಳಲು ಹಿಂಜರಿಕೆ. ನಾನು ಒಬ್ಬ ಗಾಯಕ ಅಂತ ತೋರಿಸಿಕೊಳ್ಳಲೇ ಇಲ್ಲ.

ಕಾಲೇಜಿನಲ್ಲಿ ತುಂಬಾ ಒಳ್ಳೆಯ ವಾತಾವರಣ. ಶಾಸ್ತ್ರೀಯ ಸಂಗೀತದ ಸ್ಪರ್ಧೆಗಳು ಆಗೋದು. ಮಾನ್ಯ ವಿ॥ ಶ್ರೀನಾಥ್ ಮತ್ತು ವಿ॥ ತಾರಾನಾಥನ್, ವಿ॥ ತ್ಯಾಗರಾಜನ್, ಪಿಟೀಲು ನರಸಿಂಹಮೂರ್ತಿ ಇವರೆಲ್ಲ ಆ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದುದು ನನಗೆ ಜ್ಞಾಪಕವಿದೆ. ಶ್ರೀನಾಥ್ ಅವರು ಹಾಡಿದ ಕಲ್ಯಾಣಿಯನ್ನು ಕೇಳಿ ನಾನೂ ಹೀಗೇ ಹಾಡಬೇಕು ಎಂಬ ಅಭಿಪ್ರಾಯ ಬಂದರೂ ಅದು ಕೇವಲ ಅಭಿಪ್ರಾಯವಾಗಿಯೇ

ಉಳಿಯಿತು. ಹೀಗೆ ಹಳ್ಳಿಯಿಂದ ಬಂದ ನನ್ನಂತಹ ಕಲಾಕುಸುಮಗಳು ಕೀಳರಿಮೆಯ ಪ್ರಭಾವದಿಂದ ಅರಳದೆ, ಬಾಡಿಹೋಗಿ ಭೂಮಿಯನಪ್ಪಿದ ಪ್ರಸಂಗಗಳು ಹತ್ತು ಹಲವಾರು"(ಉದ್ಧರಿತ ; ನೆನಪಿನಂಗಳದಿಂದ).

ನಾನೆಂದೆ "ಪದ್ಮನಾಭರೆ ನಿಮ್ಮ ಮೂಲಭಾವ "ನಾದ". ಅದು ನಿಮ್ಮನ್ನು ಬಿಡಲೇ ಇಲ್ಲ, ಅಲ್ಲವೇ. ಎಲ್ಲಿಗೆ ಹೋದರೂ ನಾದದ ಸೆಳೆತ. ಮೈಸೂರೆಂದ ಮೇಲೆ ಕಬ್ಬಿನ ಗದ್ದೆಗೆ ಹಸಿದ ಆನೆಯನ್ನು ಬಿಟ್ಟಂತಾಗಿತ್ತು. ಕಾಡಿನ ಅರ್ಬುದನು "ಪುಣ್ಯಕೋಟಿಗೆ ಒಲಿದಂತೆ, ಘಟನೆಗಳು ನಿಮ್ಮನ್ನು ಸಂಗೀತಕ್ಕೇ ಒಲಿಸಿತು."

"ಹೌದು, ನಿನ್ನ ಮಾತು ನಿಜ. ಶಾರದೆಗೆ ನನ್ನದೇ ಚಿಂತೆಯಿರಬೇಕು. ಅವಳು ಪುನಃ ಪುನಃ ನನ್ನನ್ನು ತನ್ನ ಮಡಿಲಿಗೆ ತೆಗೆದುಕೊಂಡಳು. ನಾನು ಸಂಗೀತವನ್ನೂ, ಸಂಗೀತಗಾರರನ್ನೂ ಅನುಸರಿಸುತ್ತಾ ಹೋದೆ".

"ಆಗ ಚೌಡಯ್ಯನವರು ಸ್ಥಾಪಿಸಿದ್ದ ಅಯ್ಯನಾರ್ ಸಂಗೀತಶಾಲೆ ನಾರಾಯಣಶಾಸ್ತ್ರಿ ರಸ್ತೆಯಲ್ಲೇ ಇತ್ತು. ಅಂದರೆ ಬಿಡಾರಂ ರಾಮಮಂದಿರದಲ್ಲೇ ಸಂಗೀತ ಕಲಾಶಾಲೆಯ ಕಲಾಪಗಳು ನಡೆಯುತ್ತಿದ್ದವು. ಪ್ರತಿ ಪ್ರದೋಷದ ದಿವಸವೂ ಅಲ್ಲಿ ಸಂಗೀತ ಕಾರ್ಯಕ್ರಮಗಳಿರುತ್ತಿದ್ದವು., ರಾಮನವಮಿ ಸಂದರ್ಭದಲ್ಲಿ ಸುಮಾರು 10–15 ದಿವಸಗಳು ಬಹಳ ವಿಜೃಂಭಣೆಯಿಂದ ನಡೀತಾ ಇದ್ದುವು. ಎಲ್ಲ ಕಾರ್ಯಕ್ರಮಗಳಿಗೂ ಪ್ರವೇಶಧನವಿರುತ್ತಿತ್ತು. ಕಲಾಶಾಲೆಗೆ ಆಗ ಚೌಡಯ್ಯನವರೇ ಪ್ರಿನ್ಸಿಪಾಲರು. ಅವರಿಗಾಗಲೇ ಸುಮಾರು ಎಪ್ಪತ್ತು ವರ್ಷವಿರಬಹುದು.

ಅವರನ್ನು ನೋಡುವುದೇ ನನಗೆ ಬಹಳ ಪ್ರಿಯವಾದ ವಿಚಾರ. ದಿಟ್ಟ ವ್ಯಕ್ತಿ. ಆಗಲೂ ಒಳ್ಳೆಯ ಮೈಕಟ್ಟು. ಹಣೆಯಲ್ಲಿ ವಿಭೂತಿ, ತಲೆಗೆ ಪೇಟೆ, ಕಚ್ಚೆಪಂಚೆ, ಕೋಟು, ಹೀಗೆ ಅವರನ್ನ ನಾನು ನೋಡಿದ ಜ್ಞಾಪಕ, ರಾಜಠೀವಿ. ರಾಮಮಂದಿರಕ್ಕೆ ಬರ್ತಾ ಇದ್ರು. ಅವರು ಇದ್ದಾಗಲೆಲ್ಲಾ ನಾನೂ ಅಲ್ಲಿಗೆ ಹಾಜರ್. ಅಂತಹ ಆಕರ್ಷಣೀಯ ವ್ಯಕ್ತಿತ್ವ.

ನನ್ನ ಎರಡು ದಿವಸಗಳ ಸಂಗೀತದ ಓಂ ನಾಮ ಪ್ರಾರಂಭವಾಗಿದ್ದು ಮೈಸೂರು ಅಯ್ಯನಾರ್ ಕಲಾಶಾಲೆಯಲ್ಲಿ. ದಿ॥ ನಂಜುಂಡಸ್ವಾಮಿಯವರು ನನಗೆ ಮೊದಲು ಸ ಪ ಸ ಹಾಡಿಸಿದ್ದು ಬಿಡಾರಂ ರಾಮಮಂದಿರದಲ್ಲೇ. ಅದು ಕೇವಲ ನಾಲ್ಕು ಕ್ಲಾಸಿಗೇ ನಿಂತೋಯಿತು. ಏನೇ ಆಗಲಿ ಅಂತಹ ಒಂದು ಮಹಾನ್ ಮಂದಿರದಲ್ಲಿ ಸಾವಿರಾರು ಮಹಾನ್ ವಿದ್ವಾಂಸರು ಕೂತು ಹಾಡಿ, ವಿಜೃಂಭಿಸಿದ ಆ ಜಾಗದ ಮಹಿಮೆ ಅವರ್ಣನೀಯ. ಉಡುಪಿ ಕೃಷ್ಣಮಂದಿರದಲ್ಲಿ ಚೌಡಯ್ಯನವರ ಸೋಲೋ ಕಛೇರಿಯನ್ನು ಕೇಳಿದ ಜ್ಞಾಪಕ. ಹಿಂದೆ ವಿ॥ ನಂಜುಂಡಸ್ವಾಮಿ ಅವರು

ಹಾಡೋದು ಪರಿಪಾಠವಾಗಿತ್ತು. ಅಂದರೆ ಚೌಡಯ್ಯನವರು ನುಡಿಸುವ ಕೀರ್ತನೆಗಳೆಲ್ಲಾ ನಂಜುಂಡಸ್ವಾಮಿಯವರಿಗೆ ಬರ್ತಾ ಇತ್ತು. ಚೌಡಯ್ಯನವರ ಆ ಅದ್ಭುತವಾದ ನಾದಶಕ್ತಿ ಬೆರಗುಗೊಳಿಸುವಂಥಾದ್ದು. ಕಮಾನು ಹಾಕಿದರೆ ಸಾಕು ತುಂಬು ನಾದ. ಏನು ನುಡಿಸಿದರೂ ಸ್ಪಷ್ಟ, ಗಂಭೀರ, ಸೌಖ್ಯ, ಚೌಡಯ್ಯನವರು ನನ್ನ ಮಟ್ಟಿಗೆ ಯುಗಪುರುಷರು. ಅವರ ಆ ಮುಖದ ವಿದ್ಯಾ ತೇಜಸ್ಸು ಹೇಗಿತ್ತೆಂದರೆ ಅವರು ಏನು ನುಡಿಸಿದರೂ ಚೆನ್ನಾಗಿಯೇ ಇರಬೇಕಾಗಿತ್ತು. ಹಾಗೆ ನಾದ ಮಾಂತ್ರಿಕರಾಗಿದ್ದರು ಅವರು. ಅವರ ದರ್ಶನ ಮಾಡಿದ ನಾನೇ ಧನ್ಯ.

"ಮಾನಸಗಂಗೋತ್ರಿ"ಯ ಉದ್ಘಾಟನಾ ಸಮಾರಂಭ. ಸರ್ವಪಲ್ಲಿ ರಾಧಾಕೃಷ್ಣನ್ ಬಂದಿದ್ದರು. ಅವರೇ ಆಗ ರಾಷ್ಟ್ರಾಧ್ಯಕ್ಷರು. ಅವರಿಗೆ "ದ್ವಾರಂ" ಅವರ ಪಿಟೀಲಿನಲ್ಲಿ ಹೆಚ್ಚು ಒಲವು. ಇದು ಚೌಡಯ್ಯನವರಿಗೂ ಗೊತ್ತಿತ್ತು. ಈ ಸಂದರ್ಭದಲ್ಲಿ ಚೌಡಯ್ಯನವರ ಕಛೇರಿ. "ನನ್ನ ಸಂಗೀತದಲ್ಲಿ ಗೌರವವಿಲ್ಲದ ವ್ಯಕ್ತಿಯನ್ನು ನಾನೇ ಯಾಕೆ ಹೋಗಿ ಮಾತಾಡಿಸಬೇಕು" ಎಂಬ ನಿಲುವನ್ನು ಹೊತ್ತು ಚೌಡಯ್ಯನವರು ರಾಧಾಕೃಷ್ಣನ್ ಅವರ ಹತ್ತಿರ ಹೋಗಲೇ ಇಲ್ಲ. ಎಷ್ಟೇ ಆಗಲಿ ಚೌಡಯ್ಯನವರು ನಾದ ಚಕ್ರವರ್ತಿಯಲ್ವೇ? ಕಛೇರಿ ಆದ ಮೇಲೆ ಶ್ರೀ ರಾಧಾಕೃಷ್ಣನ್ ಅವರೇ ಬಂದು ಚೌಡಯ್ಯನವರನ್ನು ಮಾತಾಡಿಸಿ ಅಭಿನಂದಿಸಿದ್ದು ಮರೆಯಲಾಗದ ಘಟನೆ. ಒಬ್ಬ ನೈಜ ಕಲಾವಿದನಿಗೆ ಎಂತಹ ಸ್ವಾಭಿಮಾನ, ಎಂತಹ ಗುಂಡಿಗೆ, ಆಹಾ, ಕಲಾವಿದ ಎಂದರೆ ಚೌಡಯ್ಯನವರೇ! ಆ ನಡವಳಿಕೆ, ಮಾತುಗಾರಿಕೆ, ಕಲಾನೈಪುಣ್ಯತೆ, ಅವರ ದೃಷ್ಟಿ, ಗಾಂಭೀರ್ಯ, ಉಡುಪು, ವಿನ್ಯಾಸ, ಅಭಿಮಾನ ಎಂದೆಂದೂ ನೆನಪಿನಲ್ಲಿರುವಂಥಾದ್ದು. ಬಹುಶಃ ಇಂತಹ ನಾದೋಪಾಸಕನ ದರ್ಶನದ ಫಲದಿಂದಲೇ ಇಂದು ನಾನು ಸಂಗೀತದ ಎರಡಕ್ಷರವನ್ನು ಅಧ್ಯಯನ ಮಾಡಿದಂತಾಯ್ತು."

ಆಗ್ಗೆ ನಾರಾಯಣಶಾಸ್ತ್ರಿ ರೋಡಿನಲ್ಲಿ ಇದ್ದ ವಿ ದೇವೇಂದ್ರಪ್ಪನವರ ಮನೆಯಲ್ಲಿ ಹನುಮಜ್ಜಯಂತಿ ಉತ್ಸವ ಬಹಳ ವಿಜೃಂಭಣೆಯಿಂದ ನಡೆಯೋದು. ಮೈಸೂರಿನ ವಿದ್ವಾಂಸರಲ್ಲದೆ ಇತರೇ ಊರಿನ ವಿದ್ವಾಂಸರೆಲ್ಲಾ ಬರ್ತಾ ಇದ್ರು. ದೇವೇಂದ್ರಪ್ಪನವರಿಗೆ ಬರದ ವಾದ್ಯವೇ ಇರಲಿಲ್ಲ. ಪಿಟೀಲು, ಸಿತಾರು, ಜಲತರಂಗ್, ವೀಣೆ ಹೀಗೆ ಹತ್ತು ಹಲವಾರು ವಾದ್ಯಗಳನ್ನು ನುಡಿಸ್ತಾ ಇದ್ದರು. ಮನೆ ಭರ್ತಿ ಶಿಷ್ಯರು. ಯಾರಿಂದಲೂ ಮೂರು ಕಾಸು ಮುಟ್ಟುತ್ತಿರಲಿಲ್ಲ. ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಭಿಕ್ಷೆ ನೀಡಿದ ಒಬ್ಬ ಧೀಮಂತ ವ್ಯಕ್ತಿ. ಕೊತ್ವಾಲ್ ರಾಮಯ್ಯ ರಸ್ತೆಯಲ್ಲೇ ವಾಕ್ ಹೋಗ್ತಾ ಇದ್ದರು. ಆ ಸಮಯಕ್ಕೆ ಸರಿಯಾಗಿ ಅವರ ದರ್ಶನಕ್ಕಾಗಿ ನಾನು ಓಡಿ ಬರ್ತಾ ಇದ್ದೆ. ವೇಗದ ನಡಿಗೆ, ನಾನು ಓಡಿದರೆ ಅವರು ನಡೀತಾ ಇದ್ರು. ಆದರೆ ನಾನು ಅವರನ್ನೇ ನೋಡೋಕೆ ಬಂದಿದೀನಿ ಅಂತ ಅವರಿಗೆ ಗೊತ್ತಾಗ್ತಾ ಇರಲಿಲ್ಲ. ಅವರ ಹಾಡಿಕೆಯನ್ನು

ಕೇಳಿದ್ದೇನೆ. ಎರಡು ತಂಬೂರಿ ಇಟ್ಕೊತಾ ಇದ್ರು. ಶುದ್ಧ ತಂಬೂರಿನಾದ. ಅದೇ ಅರ್ಧ ಮನಸ್ಸನ್ನ ತುಂಬಿಬಿಡ್ತಾ ಇತ್ತು. ಹೀಗೆ ಹನುಮಜ್ಜಯಂತಿ ಮೈಸೂರಿಗೆ ಒಂದು ಸಂಗೀತದ ಹಬ್ಬ.

ಪ್ರೊ. ವಿಜಯರಾಘವನ್ ಹಾಡಿಕೆಗೆ ಪಕ್ಕವಾದ್ಯ ನಮ್ಮ ಮಹದೇವಪ್ಪನವರು. ಅಂದು ವಿಜಯರಾಘವನ್ ಹಾಡಿದ "ಮೋಕ್ಷಮು ಗಲದಾ" ಅದ್ಭುತ. ಅಂತಹ ಬಹಳ ಸೊಗಸಾದ ಹಾಡಿಕೆ, ಮಾನ್ಯ ಮಹದೇವಪ್ಪನವರ ಪಿಟೀಲು ಅಷ್ಟೇ ಮಧುರ, ನಯ, ಸೊಗಸು. ಆಗ ಮೈಸೂರಿನ ವಿದ್ವಾಂಸರಲ್ಲಿ ಮಹದೇವಪ್ಪನವರದ್ದು ಬಹಳ ಮೃದುವಾದ, ನಯವಾದ ಶೈಲಿ. ಅವರ ಬಿಳಿ ಫುಲ್ ಆರಮ್ ಶರ್ಟು, ಹೆಗಲ ಮೇಲಿನ ಅಂಗವಸ್ತ್ರ, ವಿನಯಪೂರ್ವಕ ನಡವಳಿಕೆ ನನ್ನ ಮೇಲೆ ಬಹಳ ಪರಿಣಾಮ ಬೀರಿದ್ದುವು. ಲಯವಿದ್ವಾಂಸರಾಗಿದ್ದ ಶೇಷಪ್ಪ, ರಾಮಯ್ಯ, ಹರಿಶ್ಚಂದ್ರ, ಗಾಯಕರಾಗಿದ್ದಂತಹ ಟಿ.ಆರ್. ಶ್ರೀನಿವಾಸನ್, ಗೌರೀಕೃಷ್ಣಸ್ವಾಮಿ, ರಾಮರತ್ನಂ, ತಿಟ್ಟೆ ಕೃಷ್ಣ ಅಯ್ಯಂಗಾರ್, ಮೈಸೂರು ಸಹೋದರರು, ಫ್ಲೂಟ್ ಶಾಮಾಚಾರ್, ದೇಶಿಕಾಚಾರ್, ಪಿಟೀಲು ವೆಂಕಟಾಚಾರ್, ಕೃಷ್ಣರಾಯರು, ಆರ್.ಎಸ್. ಕೇಶವಮೂರ್ತಿಗಳು, ಆರ್.ಎಸ್. ದೊರೆಸ್ವಾಮಿ ಹೀಗೆ ಹತ್ತು ಹಲವಾರು ವಿದ್ವಾಂಸರು ವಿಜೃಂಭಿಸುತ್ತಿದ್ದ ಕಾಲ. ಬಿಡಾರಂ ರಾಮಮಂದಿರಕ್ಕೆ ಹಾಗೂ ದೇವೇಂದ್ರಪ್ಪನವರ ಮನೆಗೆ ಎಲ್ಲ ವಿದ್ವಾಂಸರೂ ಬರ್ತಾ ಇದ್ದರು. ಸರಿ ಗೊತ್ತೇ ಇದೆ, ಎಲ್ಲಿ ವಿದ್ವಾಂಸರ ಗುಂಪಿರುತ್ತೆ ಅಲ್ಲಿ ನಾನು ಹಾಜರ್. ಅಷ್ಟೊತ್ತು ಸಂಗೀತವನ್ನು ಕೂತು ಕೇಳುವ ತಾಳ್ಮೆ ಇಲ್ಲದಿದ್ದರೂ ಕಾರ್ಯಕ್ರಮ ಮುಗಿದ ಮೇಲೆ ಈ ವಿದ್ವಾಂಸರೆಲ್ಲಾ ಮಾತಾಡುವುದನ್ನು ಕೇಳಿಸ್ಕೋಬೇಕಲ್ಲ, ಅದಕ್ಕೋಸ್ಕರವಾಗಿಯೇ ನಾನು 2 ಗಂಟೆಗಳ ಕಾಲ ಇರುತ್ತಿದ್ದೆ. ಇದು ನನಗೆ ಬಹಳ ತೃಪ್ತಿಯಾದ ಕೆಲಸವಾಗಿತ್ತು. ಹೀಗೆ ನನ್ನ ಲೌಕಿಕ ವಿದ್ಯಾಭ್ಯಾಸಕ್ಕಿಂತ ಈ ಅಲೌಕಿಕ ನಾದಾನುಭವ ನನಗೆ ಗೊತ್ತಿಲ್ಲದೆಯೇ ಮೈಸೂರಿನಲ್ಲಿ ನನಗಾಗಿತ್ತು ಅನ್ನುವುದು ಸತ್ಯ ಸಂಗತಿ". (ಉದ್ಧರಿತ)

ಆ ಸಮಯದಲ್ಲಿಯೆ ಟಿಆರ್ ಮಹಾಲಿಂಗಂ, ಬಾಲಮುರುಳಿಕೃಷ್ಣ, ಸುಂದರಂಬಾಳ್ ರಾಮರತ್ನಂ.. ಮೊದಲಾದವರ ಕಛೇರಿಗಳನ್ನು ಆರ್ಕೆಪಿ ಆಲಿಸಿದರು.

"ನಂಜುಂಡಸ್ವಾಮಿಯವರ ಮನೆಗೆ, ಸಂಗೀತ ಪಾಠಕ್ಕೆ ಹೋದರೂ, ಸಂಗೀತ ಕಲೀಲಿಲ್ಲ. ಆದರೆ ನನಗೆ ಇನ್ನೂ ದೊಡ್ಡಲಾಭವೇ ಆಯ್ತು" ಆರ್ಕೆಪಿ.

"ಯಾಕೆ? ಬೇರೆ ಏನಾದರೂ ಬೇರೆ ಆಕರ್ಷಣೆಯಿತ್ತಾ? ಎಷ್ಟಾದರೂ ಅದು ಹದಿ ವಯಸ್ಸು."

"ನೀ ಹೇಳೋದೇನೊ ಸರಿಯೆ. ಹದಿವಯಸ್ಸೇನೊ ಹೊಂಬಣ್ಣವೆ! ಆದರೆ ನನ್ನ ಮನಸ್ಸು ಸಂಗೀತದ ಹೊಂಗಿರಣದ ಹಿತವಾದ ಕಾವಿನಲ್ಲಿ ಹದಗೊಳ್ಳುತ್ತಿತ್ತು. ಅಲ್ಲಿಗೆ ರಾಮರತ್ನಂ ಬರ್ತಾಯಿದ್ದರು. ಅವರು ಚೌಡಯ್ಯನವರ ಶಿಷ್ಯರು. ಚೌಡಯ್ಯನವರ ಬದುಕಿನ ಘಟನಾವಳಿಗಳನ್ನು ಹೇಳ್ತಾಯಿದ್ರು. ಹಾಗೇನೇ ಚೌಡಯ್ಯನವರು ಹೇಳಿದ ಸಂಗೀತ ದಿಗ್ಗಜರ ಕಥೆಗಳನ್ನೂ ಹೇಳುವರು. ಹಾಗೆಯೇ, ಮೈಸೂರು ವಾಸುದೇವಾಚಾರ್ ಅವರ ಶಿಷ್ಯರಾದ ಪದ್ಮನಾಭರಾಯರು ಬರುತ್ತಿದ್ದರು. ಅವರ ಗುರುಗಳ ವಿಚಾರಗಳನ್ನು ಪದ್ಮನಾಭರಾಯರು ಹೇಳುತ್ತಿದ್ದರು.

ವಾಸುದೇವಾಚಾರ್ ಅವರು, ಕರ್ನಾಟಕದ ಮಹಾ ವಾಗ್ಗೇಯಕಾರರು. ಅವರ ಕೃತಿಗಳನ್ನು ಬರೆದುಕೊಂಡು, ಅವುಗಳಿಗೆ ವರ್ಣಮಟ್ಟುಗಳನ್ನು ಬರೆದವರು ವಿದ್ವಾನ್ ಚೆನ್ನಕೇಶವಯ್ಯನವರು. ಮೈಸೂರಿನ ರಾಮಸ್ವಾಮಿ ಸರ್ಕಲ್ ನಲ್ಲಿದ್ದ ಮಾಡರ್ನ ಹಿಂದೂ ಹೋಟೆಲ್ಲಿನ ಯಜಮಾನರು, ಪ್ರತಿ ತಿಂಗಳು, ವಾಸುದೇವಾಚಾರ್ ಅವರ ಕಛೇರಿಯನ್ನು ಆಯೋಜಿಸುತ್ತಿದ್ದರಂತೆ. ಕಛೇರಿಯ ಸಂಭಾವನೆ, ಒಂದು ಮಸಾಲೆದೋಸೆ !"

ಮತ್ತೊಂದು, ವಾಸುದೇವಾಚಾರ್ ಅನುಭವ, ನಾನು ಹಂಚಿಕೊಳ್ಳಲೇಬೇಕು. ವಾಸುದೇವಾಚಾರ್ಯರನ್ನು, ಮೈಸೂರು ಅರಸರು, ಸಂಗೀತ ಅಭ್ಯಾಸಕ್ಕಾಗಿ, ಪಟ್ಣಂ ಸುಬ್ರಮಣ್ಯ ಅಯ್ಯರ್ (1845–1902) ಅವರಲ್ಲಿ ಬಿಟ್ಟಿದ್ದರು. ಶಿಷ್ಯವೇತನವನ್ನೂ ಕೊಡುತ್ತಿದ್ದರು.

ಆಗಿನ ಕಾಲದ ಶಿಷ್ಯತ್ವವೆಂದರೆ, ಗುರುಗಳಿಗೆ 100% ಒಪ್ಪಿಸಿಕೊಳ್ಳುವುದು. ಚಾಚೂ ತಪ್ಪದೆ ಅವರ ಆದೇಶಗಳನ್ನು ಪಾಲಿಸುವುದು. ಕಠಿಣವಾದ ಸಾಧನೆಗೆ ಹಾಗೂ ಗುರು ಸೇವೆಗೆ ಪಕ್ಕಾಗಿಸಿಕೊಳ್ಳುವುದೂ ಆಗಿತ್ತು. ಪಟ್ಣಂ ಅವರ ಮನೆಯ ಎದುರು ಮನೆಯೇ "ಮಹಾ" ವೈದ್ಯನಾಥ ಅಯ್ಯರ್ (1844–1893) ಅವರದ್ದಾಗಿತ್ತು. "ಮಹಾ" ಎನ್ನುವುದು ವೈದ್ಯನಾಥ ಅಯ್ಯರ್ ಅವರ ಬಿರುದು. ವಾಸುದೇವಾಚಾರ್ಯರಿಗೆ ಹಗಲೂ ರಾತ್ರಿ ಸಂಗೀತ ಪಾಠ ಪ್ರವಚನ ನಡೆಯುತ್ತಿತ್ತು. ಅವರಿಗೂ ಅಪಾರ ಶ್ರದ್ಧಾ ಭಕ್ತಿ. ಶ್ರಮವಹಿಸಿ ಕಲಿಯುತ್ತಿದ್ದರು. ಆದರೆ, ಅವರ ಮನಸ್ಸಿನಲ್ಲಿ ಒಂದು ನೋವಿತ್ತು. ಮಹಾ ವೈದ್ಯನಾಥ ಅಯ್ಯರ್ ಅವರ ಸಂಗೀತ ಕೇಳಬೇಕು ಅಂತ. ಆದರೆ ಗುರುಗಳಿಗೆ ಮತ್ತು ವೈದ್ಯನಾಥರಿಗೆ ಅಷ್ಟು ಒಳ್ಳೆಯ ಸಂಬಂಧ ಇರಲಿಲ್ಲ. ಗುರುವಿನ ಒಪ್ಪಿಗೆಯಿಲ್ಲದೆ ವೈದ್ಯನಾಥರ ಕಛೇರಿಗೆ ಹೋಗುವಂತಿಲ್ಲ. ಇದೊಂದು ದೊಡ್ಡ ಪೀಕಲಾಟ. ಕೊನೆಗೆ ಒಂದು ಯೋಜನೆ ಹಾಕಿದರು.

ಮಹಾ ವೈದ್ಯನಾಥರ ಕಛೇರಿಯು ಆಯೋಜಿತವಾಗಿರುವ, ಒಂದು ರಾತ್ರಿ,

ವಾಸುದೇವಾಚಾರ್ಯರು, ತಮ್ಮ ಹಾಸಿಗೆಯಲ್ಲಿ ದಿಂಬುಗಳನ್ನು ಜೋಡಿಸಿಟ್ಟು, ವ್ಯಕ್ತಿಯೊಬ್ಬ ಮಲಗಿರುವಂತೆ ಕಾಣಿಸುವ ಹಾಗೆ ಮಾಡಿ, ಕಛೇರಿಗೆ ಹೋದರು. ಅಂದಿನ ಕಾಲದ ಕಛೇರಿಗಳು. 4–5 ಗಂಟೆ ಇರುತ್ತಿದ್ದವು. ಬೆಳಗಿನ ಜಾವಕ್ಕೆ ಕಛೇರಿ ಮುಗಿದ ನಂತರ ಬಂದು ಗದ್ದಲವಿಲ್ಲದೆ ಮಲಗಿಬಿಟ್ಟರು ವಾಸುದೇವಾಚಾರ್ಯರು. ನಿದ್ದೆಯೇನೋ ಸುಖವಾಗಿ ಬಂತು. ಮಹಾ ವೈದ್ಯನಾಥರ ಸಂಗೀತ ಸಮುದ್ರದಲ್ಲಿ ತೇಲಿಹೋಗಿದ್ದರು.

ಆದರೆ, ಬೆಳಿಗ್ಗೆ ಬುಲಾವ್ ಬಂತು ಪಟ್ಣಂ ಅವರಿಂದ. ಗುರುಗಳೆಂದರು,
"ವಾಸು, ನೀನಿನ್ನು ಮೈಸೂರಿಗೆ ಹೋಗು. ನಾನು ಪಾಠ ಮಾಡುವುದು ಏನೂ ಉಳಿದಿಲ್ಲ."

ಆಚಾರ್ಯರಿಗೆ ಜಂಘಾಬಲವೇ ಉಡುಗಿಹೋಯಿತು. ಬವಳಿ ಬಂದಂತಾಯಿತು. ತಕ್ಷಣವೆ ಗುರುಗಳ ಪಾದವನ್ನು ಹಿಡಿದುಕೊಂಡು ಅಳತೊಡಗಿದರು.

"ನನ್ನನ್ನು ಕ್ಷಮಿಸಿ, ನನ್ನನ್ನು ಕ್ಷಮಿಸಿ" ಎಂಬ ಆರ್ತನಾದವು ಅವರ ನಾಭಿಯಿಂದ ಹೊರಟಿತು. ಅಷ್ಟು ಸುಲಭರೆ, ಪಟ್ನಂ ಅವರು?

"ಇನ್ನೆಂದೂ ಹೀಗೆ ಮಾಡಲಾರೆ. ಮಹಾ ಅಪಚಾರವಾಗಿದೆ, ಕ್ಷಮಿಸಿ, ಕ್ಷಮಿಸಿ".
ಸುಮಾರು ಹೊತ್ತು ವಾಸುದೇವಾಚಾರ್ಯರ ಕಣ್ಣೀರು ನಿಲ್ಲಲೇ ಇಲ್ಲ. ಅದು ಕಡಲಾಗಿ ಹರಿಯುತ್ತಿತ್ತು. ಕೊನೆಗೆ ಗುರುಗಳ ಮನಸ್ಸು ಕರಗಿತು.

"ವಾಸು, ನೀನು ತಿಳಿದಂತೆ ನನಗೂ ಮಹಾ ವೈದ್ಯನಾಥ ಅಯ್ಯರ್ ಅವರಿಗೂ ಏನೂ ವೈಮನಸ್ಯ ಇಲ್ಲ. ಅಂತರಂಗದ ಮಾತು ಹೇಳುವೆ. ಅವರು ಮಹಾ ವಿದ್ವಾಂಸರು. ಸರಸ್ವತಿಯ ವರಪುತ್ರರು. ನಾದ ದೇವತೆ ಅವರ ನಾಲಿಗೆಯಲ್ಲಿ ವಾಸಿಸುತ್ತಾಳೆ. ಅವರ ಕಛೇರಿ ಕೇಳಿದರೆ ತಪ್ಪಿಲ್ಲ. ಆದರೆ ಈಗಲ್ಲ. ಪ್ರತಿಯೊಬ್ಬ ಗುರುವು ವಿಶಿಷ್ಠವಾದ ಸಂಗೀತ ಸಾಧನೆ ಮಾಡಿರುತ್ತಾನೆ. ನಾದದೇವತೆ ಪ್ರತಿಯೊಬ್ಬರಿಗೂ ಅವರದೇ ಆದ ಗುಣ, ಶಕ್ತಿ, ಭಾವ, ಅಭಿವ್ಯಕ್ತಿಗಳನ್ನು ನೀಡಿರುತ್ತಾಳೆ. ಹಾಗಿರುವುದರಿಂದ, ಓರ್ವ ಗುರುವಿನ ಬಳಿ ಕಲಿಯುತ್ತಿರುವ ಶಿಷ್ಯ ಇನ್ನೊಬ್ಬರ ಸಂಗೀತ ಕೇಳಿದರೆ, ಕಲಿಕೆಯ ಹಾದಿ ಬದಲಾಗುತ್ತದೆ. ಸಾಧನೆ ಮುಗ್ಗರಿಸುತ್ತದೆ. ನೀನು ಎಲ್ಲವನ್ನೂ ಒಬ್ಬ ಗುರುವಿನ ಬಳಿ ಕಲಿತು, ನಿನ್ನದೇ ಹಾದಿಯನ್ನು ಗುರುತಿಸಿಕೊಂಡ ನಂತರ ಯಾರ ಕಛೇರಿಗಾದರೂ ಹೋಗು ತೊಂದರೆಯಿಲ್ಲ."

ವಾಸುದೇವಾಚಾರ್ಯರಿಗೆ ಬೆಳಕು ಕಾಣಿಸಿತು.

ಮತ್ತೊಮ್ಮೆ ಅವರು ಗುರು ಕಾರುಣ್ಯಕ್ಕೆ ಶಿರಸಾಷ್ಟಂಗ ವಂದಿಸಿದರು.

“ನನಗೆ ಈ ರೀತಿಯ ಆಕರ್ಷಣೆಗಳು ಇದ್ದವು....ಮುಗಿಸಿದರು ಪದ್ಮನಾಭರು.

"ಅಯ್ಯೊ ನಾನು ತಮಾಶೆ ಮಾಡಿದೆ. ಅಂದ ಹಾಗೆ ಪಟ್ನಂ ಅವರ ನಿಲುವಿನ ಬಗ್ಗೆ ನಿಮ್ಮ ಅಭಿಪ್ರಾಯವೇನು?"

“ಪಟ್ನಂ ಸುಬ್ರಮಣ್ಯ ಅಯ್ಯರ್ ಅವರು ಹೇಳಿದ್ದು ಸರಿಯಾಗಿದೆ. ನಾನೂ ಅದೇ ಅಭಿಪ್ರಾಯ ಉಳ್ಳವನಾಗಿರುವೆ. ಈಗಲೂ ಹಾಗೆಯೇ ಅಲ್ಲವೆ. ಸ್ನಾತಕನಾಗುವರೆಗೂ ನಿಗದಿತ ವಿಷಯಗಳನ್ನು ಕಲಿಯಬೇಕು. ಅದು ನಮ್ಮ ಮೂಲ ಬೇರು. ಆನಂತರ ಏನು ಬೇಕಾದರೂ ಮಾಡಬಹುದು. ಅದರಲ್ಲೂ ಆಗಿನ ಕಾಲದ ಗುರುಗಳು ಶಿಷ್ಯರನ್ನು ಮಕ್ಕಳಿಗಿಂತಾ ಮಿಗಿಲಾಗಿ ಪ್ರೀತಿಸುತ್ತಿದ್ದರು. ತಮ್ಮ ಇಡೀ ಜೀವನದ ಸಂಗೀತ ಶಾರದೆಯ ತಪಸ್ಸಿನ ಫಲವನ್ನು ಧಾರೆಯರೆಯುತಿದ್ದರು. ತನು ಮನ ಧನವನ್ನು ಶಿಷ್ಯರಿಗಾಗಿ ಮೀಸಲಾಗಿಡುತ್ತಿದ್ದರು. ಶಿಷ್ಯರು ಗುರುವಿನ ಸಂಗೀತ ಪರಂಪರೆಯನ್ನು ಮುಂದುವರೆಸಬೇಕಲ್ಲವೆ.”

ಪದ್ಮನಾಭರು ಮೌನಿಗಳಾದರು. ಆಲೋಚನೆಯಲ್ಲಿ ಮುಳುಗಿದರು.

"ಸರಿ, ನಾನು ಬರುತ್ತೇನೆ, ನಾಳೆ ಮುಂದುವರೆಸೋಣ."

"ಹ್ಞಾ.. ಆಗಲಿ, ಮೈಸೂರಿನ ಕಥೆ ಮುಗಿಯಿತು. ನನ್ನ ಪಿಯುಸಿ ಆಗಲಿಲ್ಲ. ಅಣ್ಣ ಬೆಂಗಳೂರಿನ ಟಾಟಾ ವಿಜ್ಞಾನ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ಮುಗಿಸಿದ್ದ. ತಂಗಿ ಎಸ್‌ಎಸ್‌ಎಲ್‌ಸಿ ಪಾಸು ಮಾಡಿದ್ದಳು. ನನ್ನ ತಂದೆಯ ದೂರದೃಷ್ಟಿ. ಬೆಂಗಳೂರಿನಲ್ಲಿ ಸಂಸಾರ ಹೂಡಲು ನಿರ್ಧರಿಸಿದರು. ನಾನು “ರಾವ್ಸ್ ಟುಟೋರಿಯಲ್" ಸೇರಿದೆ." ಅದು 1967.

16
ಶರೀರಮಾದ್ಯಂ ಖಲು ಧರ್ಮಸಾಧನಮ್

1998 – ಲಂಡನ್ನಿಂದ ನ್ಯೂ ಕ್ಯಾಸಲ್ 400 ಕಿಮಿ ದೂರವಿದೆ. ಅಲ್ಲಿ "ಗೋರ್ಡಿ" ಎಂಬ ಇಂಗ್ಲಿಷ್ ಆಡುನುಡಿಯಾಡುತ್ತಾರೆ. ಟೈನ್ ನದಿ ಕಣಿವೆಯ ಈ ಭಾಗ ಔದ್ಯೋಗಿಕ ತಾಣವೂ ಹೌದು. ಜನರು ಸ್ನೇಹಮಯಿಗಳು. ಸುಮಾರು 3 ಲಕ್ಷ ಜನಸಂಖ್ಯೆಯ ಈ ನಗರದಲ್ಲಿ ಹಲವಾರು ಕನ್ನಡಿಗರೂ ಇದ್ದಾರೆ.

ಅಂದು, ಅಂತಹ ಕನ್ನಡಿಗರೊಬ್ಬರ ಮನೆಯಲ್ಲಿ ಸಂಗೀತ ಸಾಹಿತ್ಯ ಗೋಷ್ಠಿ. ಶ್ರೀ ಕೆ.ಎಸ್.ನಿಸಾರ್ ಅಹಮದ್ ಇದ್ದರು. ಗಾಯನಕ್ಕೆ ನಮ್ಮ ಪದ್ಮನಾಭರು. ವಿದೇಶಕ್ಕೆ ಅವರ ಮೊದಲ ಭೇಟಿ.

ಪದ್ಮನಾಭರು, ಅಂದು ಹಾಡಿದ್ದು, ಪುರಂದರರ "ಕೇಳನೋ ಹರಿ ತಾಳನೋ / ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ.... ಕೃತಿ. "ಸುರಟಿ" ರಾಗ, ಅಷ್ಟು ಸುಲಭವಲ್ಲ.

ಪದ್ಮನಾಭರು ಸುಮ್ಮನೆ ಹಾಡುವುದಿಲ್ಲ, ಹಾಡಿನ ಜಾಡು ಬಿಡಿಸಿ ಹಾಡುತ್ತಾರೆ. ಕೇಳುಗರಿಗೆ ಮನಸ್ಸು ಮಾತ್ರವಲ್ಲ, ಬುದ್ಧಿಯೂ ತುಂಬಬೇಕು. ಗಾಯನವು ಮನರಂಜನೆಯ ಹಂತದಲ್ಲಿ ಮುಗಿಯಬಾರದು. ಜೀವನದ ಉತ್ತಮಿಕೆಗದು ವೇದಿಕೆಯಾಗಬೇಕು. "ಪುರಂದರರ ಹಿರಿಮೆ ಇಲ್ಲಿದೆ ನೋಡಿ. ಮೊದಲ ಸಾಲು ಪ್ರಶ್ನೆ, "ಕೇಳನೋ ಹರಿ ತಾಳನೋ." ಮುಂದಿನ ಸಾಲಿನಲ್ಲಿ ಉತ್ತರ, "ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ, ಕೇಳನೋ ಹರಿ ತಾಳನೋ." ಇಡೀ ಕೃತಿಯಲ್ಲಿ "ಸಂಗೀತ ಹಾಗೂ ಜೀವನ ಸಾರವನ್ನೆ ಪುರಂದರರು ತಂದಿದ್ದಾರೆ." ನಮ್ಮ ಜೀವನಕ್ಕೂ ಈ ಮಾತು ಅನ್ವಯವಾಗುತ್ತದೆ. ವಾದಿರಾಜರ "ಏನು ಸುಕೃತವ ಮಾಡಿದಳೋ ಯಶೋದೆ/ ಶ್ರೀನಿಧಿ ಕೃಷ್ಣನ್ನ ಕರೆದು ಮುದ್ದಿಸುವಳಂತೆ" ಕೃತಿಯನ್ನೂ ಹಾಡಿದರು. ನಿಸಾರರಿಗೆ ಬಹಳ ಖುಷಿಯಾಯಿತು. ಮುಂಚೆ ಸಾಹಿತ್ಯದ ಬಗ್ಗೆ ಮಾತನಾಡಿದ್ದವರು, ಈಗ ಮತ್ತೂ ಹತ್ತು ನಿಮಿಷ ಮಾತನಾಡಿದರು, ಕರ್ನಾಟಕ ಸಂಗೀತದ ಬಗ್ಗೆ. ಪದ್ಮನಾಭರ ಬಗ್ಗೆ.

ಕಾರ್ಯಕ್ರಮ ಮುಗಿಯಿತು. ಮನೆಮಂದಿಯೆಲ್ಲಾ ನಮಸ್ಕರಿಸಿದರು. ಪದ್ಮನಾಭದಾಸರು ಸ್ವೀಕರಿಸುವ ಎಲ್ಲಾ ನಮಸ್ಕಾರಗಳನ್ನು ವಾದಿರಾಜರಿಗೆ ಅರ್ಪಿಸಿಬಿಡುತ್ತಾರೆ. "ಗೆದ್ದರೂ ನಿನ್ನದೆ, ಸೋತರೂ ನಿನ್ನದೆ" ಎಂಬ ಆತ್ಮಗತ ನಿಲುವು, ಸಮರ್ಪಣೆ. ನಮಸ್ಕರಿಸಿದ ಮನೆಯವರ ಪೈಕಿ, ಒಬ್ಬರು ಹಿರಿಯ ಮಹಿಳೆ ಇದ್ದರು. ಇವರಿಗೋ ಸಂಕೋಚವಾಯಿತು.

"ನೀವು ಬಿ.ಎಸ್. ವೇದಾವತಿಯವರಲ್ಲವೇ?"
"ಹೌದು, ನಿಮಗೆ ಹೇಗೆ ಗೊತ್ತು?"

"ನೀವು ಇಂಗ್ಲಿಷ್ ಉಪನ್ಯಾಸಕಿಯಾಗಿದ್ರಿ, ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ."

"ಹೌದು."

“ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ.” ಪದ್ಮನಾಭರು ವೇದಾವತಿಯರಿಗೆ ನಮಸ್ಕರಿಸಿದರು. ನ್ಯೂಕ್ಯಾಸಲ್‌ನ ಆ ಕಛೇರಿ ನಡೆದಿದ್ದು ಶ್ರೀಮತಿ ವೇದಾವತಿಯವರ ಮಗನ ಮನೆಯಲ್ಲಿ.

ವಿಜಯಾ ಕಾಲೇಜು ಅವರಿಗೆ ಹಲವಾರು ನೆನಪುಗಳನ್ನು. ಕೆದಕಿತು. ಮೈಸೂರಿನಲ್ಲಿ ಕುಂಠಿತವಾದ ವಿದ್ಯಾಭ್ಯಾಸ ಚಿಗುರಿದ್ದು ಬೆಂಗಳೂರಿನಲ್ಲಿ. ಜಯನಗರದಲ್ಲಿ ಮನೆ. ಪೂರಕ ಪರೀಕ್ಷೆಯಲ್ಲಿ ಪಿಯುಸಿ ಪಾಸಾಯಿತು. ಮತ್ತೆ ಕಾಲೇಜಿಗೆ ಸೇರಲು 7–8 ತಿಂಗಳುಗಳಿದ್ದವು. ಹೇಗೆ ಕಾಲ ಕಳೆಯುವುದು. ಗಮಕಿ ರಾಮಕೃಷ್ಣ ಶಾಸ್ತ್ರಿಗಳ ಮನೆ ಸಮೀಪವೇ ಇತ್ತು. ಅವರ ಮಗ ಶ್ರೀ ಸೀತಾರಾಮ ಶಾಸ್ತ್ರಿಗಳು. ರಾಣಿ ಸರಳಾದೇವಿಯಲ್ಲಿ ಮೇಷ್ಟ್ರು. ಸೈಕಲ್‌ನಲ್ಲಿ ಸ್ಕೂಲಿಗೆ ಹೋಗುವರು. ತಾಯಿಯವರು ಅವರ ಮನೆಗೆ ಪುರಾಣ ಕೇಳಲು ಹೋಗುತ್ತಿದ್ದರು. "ಬೇಕಾದ್ರೆ ಅಲ್ಲಿ ಪಾಠಕ್ಕೆ ಹೋಗು" ಅಂದ್ರು ಅಮ್ಮ. ಇವರು ಪಾಠಕ್ಕೆ ಹೋದ್ರು. “ಹಾಡಿಗಿಂತ ಹರಟೆ ಪ್ರಾಧಾನ್ಯವಾಗಿತ್ತು” ಅಂತ ನೆನಪಿಸಿಕೊಳ್ಳುತ್ತಾರೆ ಆರ್‌ಕೆಪಿ. ಒಂದು ತಿಂಗಳಾಯಿತು. ಎರಡು ತಿಂಗಳಾಯಿತು. ಇವರು ಪಾಠಕ್ಕೆ ಹೋಗುತ್ತಿದ್ದರು. ಮೇಷ್ಟ್ರು ಇವರ ಮುಖ ನೋಡುತ್ತಿದ್ದರು. ಒಮ್ಮೆ ಕೇಳೇ ಬಿಟ್ಟರು, "ಏನು ಪದ್ಮನಾಭ, ಫೀಸು ಕೊಡೊಲ್ವೇ?" ಇವರಿಗೆ ಗಾಬರಿಯಾಯ್ತು. ಸಂಗೀತಪಾಠಕ್ಕೂ ಫೀಸಾ! ಅಲ್ಲಿಗೆ ಸ ಪ ಸ ಮುಕ್ತಾಯವಾಯ್ತು.

ಆಗ, ಬೆಂಗಳೂರಿನ ಜಯನಗರ, ಒಂದು ಪ್ರಶಾಂತ ಪ್ರದೇಶ!. ಈಗ ಊಹಿಸಲೂ ಸಾಧ್ಯವಿಲ್ಲ. ಪದ್ಮನಾಭರು ಜಯನಗರದ ‘Victory Badminton Club’ ಸೇರಿದರು. ನಿತ್ಯವೂ ಮನದಣಿಯೆ ಆಟ. ಬ್ಯಾಡ್ಮಿಂಟನ್ನು ಅವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿತ್ತು. ಮುಂದಿನ ಚಟುವಟಿಕೆಗಳಿಗೆ ಬೇಕಾದ ದೈಹಿಕ ಸಾಮರ್ಥ್ಯವನ್ನು ಒದಗಿಸಲು ವಿಧಿ ಆಟ ಆಡಿತ್ತು.

ಮುಂದಿನ ವರ್ಷ, ಬಸವನಗುಡಿಯ ವಿಜಯಾ ಕಾಲೇಜಿಗೆ ಸೇರಿದರು. ಭೌತಶಾಸ್ತ್ರದಲ್ಲಿ ಉತ್ತಮ ಅಂಕ ಬಂದಿತ್ತು. ಫಿಸಿಕ್ಸ್ (ಆನರ್ಸ್)ಗೆ ಪ್ರವೇಶ. ಬ್ಯಾಡ್ಮಿಂಟನ್ ಪ್ರಾವೀಣ್ಯತೆಯಿಂದ ಕಾಲೇಜು ತಂಡದಲ್ಲಿ ಆಡುವ ಅವಕಾಶ. ಪ್ರಭಾವಿ ಫ್ರಂಟ್‌ಪ್ಲೇಯರ್ ಅಂತ ಹೆಮ್ಮೆಯ ನೆನಪು. ಕ್ಲಾಸಿನ ಕ್ಯಾಪ್ಟನ್. ವಿಶ್ವವಿದ್ಯಾಲಯ ತಂಡಕ್ಕೆ ಆಯ್ಕೆ. ರಾಷ್ಟ್ರದ ವಿವಿಧ ವಿಶ್ವವಿದ್ಯಾಲಯಗಳಿಗೆ ಸ್ಪರ್ಧೆಗೆ ಹೋಗಿದ್ದಾರೆ. ಕಾಲೇಜಿನಲ್ಲಿ ಇವರ ನಾಯಕತ್ವದಲ್ಲಿ ತರಗತಿಯ ತಂಡ ಛಾಂಪಿಯನ್ ಆಯಿತು. ಕಾಲೇಜಿನ ವಾರ್ಷಿಕ ಸಂಚಿಕೆಯಲ್ಲಿ ಫೋಟೊ ಮುದ್ರಿತವಾಯ್ತು. ಕಾಲೇಜಿನ ಹೊರಗಡೆಯೂ ಇವರನ್ನು ಆಡಲು ಕರೆಯುತ್ತಿದ್ದರು. ಖೋ ಖೋ, ಕಬ್ಬಡ್ಡಿ, ವಾಲಿಬಾಲ್‌ಗಳಲ್ಲೂ ಕಾಲೇಜಿನ ಪ್ರತಿನಿಧಿ. ಶೇಷಾದ್ರಿ ಅನ್ನುವ ಒಬ್ಬ ಉತ್ತಮ ಬ್ಯಾಡ್ಮಿಂಟನ್ ಆಟಗಾರರನ್ನು ಸಿಂಗಲ್ಸ್‌ನಲ್ಲಿ ಸೋಲಿಸಿದೆ

ಎಂದು ಜ್ಞಾಪಿಸಿಕೊಳ್ಳುತ್ತಾರೆ.

ಆರ್ಕೆಪಿ ಹೇಳುತ್ತಾರೆ, "ಕ್ರೀಡೆ ಅದ್ಭುತವಾದ ಜೀವನಾನುಭವವನ್ನು ಕೊಟ್ಟಿತು. ತಾಳ್ಮೆ ಶ್ರದ್ಧೆ, ಛಲ, ಭಗವಂತನಲ್ಲಿ ಶರಣ್ಯತೆಯನ್ನು ಮೂಡಿಸಿತು. ಬ್ಯಾಡ್ಮಿಂಟನ್, ನನಗೆ ಒಳ್ಳೆಯ ಸ್ನೇಹಿತರನ್ನೂ, Sportsman spirit ಅನ್ನೂ, ನಾಲ್ಕು ಜನರ ನಡುವೆ ಬೆರೆಯುವ ಗುಣವನ್ನೂ ಕರುಣಿಸಿತು."

ಕಾಲೇಜಿನಲ್ಲಿ ಅಷ್ಟೇನು ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗಿರಲಿಲ್ಲ ಅಂತ ಆರ್‌ಕೆಪಿ, ಅನ್ನುತ್ತಾರೆ. ಆದರೆ ಅನುಭವಗಳು ಆಸಕ್ತಿಯುತವಾಗಿದೆ. ಆರ್‌ಕೆಪಿ ಅವರ ಮಾತುಗಳನ್ನೆ ಕೇಳಿ :–

"ಕಾಲೇಜು ದಿನಾಚರಣೆ ಅಂಗವಾಗಿ ಎಲ್ಲ ರೀತಿಯ ಸಾಂಸ್ಕೃತಿಕ ಸ್ಪರ್ಧೆಗಳಾಗ್ತಾ ಇದ್ದುವು. ಮೊದಲನೇ ವರ್ಷ ಚಳಿ ಜ್ವರ ಬಿಟ್ಟು ಗಾಯನ ಸ್ಪರ್ಧೆಗೆ ಹೆಸರು ಕೊಟ್ಟುಬಿಟ್ಟೆ. ಎಲ್ಲ ಸ್ಪರ್ಧಿಗಳ ಮಧ್ಯೆ ನಾನೊಬ್ಬನೇ ಗಾಯಕ; ಮಿಕ್ಕವರೆಲ್ಲ ಗಾಯಕಿಯರೇ, ನನಗೋ ಮೊದಲೇ ಹೆದರಿಕೆ. ಹಳ್ಳಿಯಿಂದ ಬಂದವನೆಂಬ ಕೀಳರಿಮೆ. ಹುಡುಗರೆಲ್ಲಾ ಎಲ್ಲಿ ರೇಗಿಸ್ತಾರೋ ಏನೋ ಅಂತ ಬಹಳ ಗಾಬರಿ. ಏನೇ ಆಗಲಿ ನೋಡೇ ಬಿಡೋಣ ಅಂತ, ನನಗೆ ಬರ್ತಾ ಇದ್ದ ದೇವರನಾಮ "ದಯಮಾಡೋ ರಂಗ ದಯಮಾಡೋ" ತಯಾರು ಮಾಡಿಕೊಂಡೆ. ತಾಳ ಗೀಳ ಎಲ್ಲಾ ಇಲ್ಲ. ಬೇಕಾದವರು ಅವರವರಿಗೆ ಯಾವ ತಾಳಬೇಕೋ ಅದನ್ನು ಹಾಕ್ಕೊಬಹುದು! ಅದು ಕಲ್ಯಾಣಿ ರಾಗದ್ದು, ನಮ್ಮೂರಿನ ಮರಿಯಪ್ಪ ಮಾವಯ್ಯ ಹೇಳಿಕೊಟ್ಟಿದ್ದು, ಸ್ಟೇಜ್ ಮೇಲೆ ಹೋದೆ. ಕಾಲೇಜಿನ ಹುಡುಗರೆಲ್ಲಾ ಸೇರಿದ್ದಾರೆ. ಒಬ್ಬೊಬ್ಬರು ಒಂದೊಂದು ರೀತೀಲಿ ಕಿರಿಚಾಡ್ತಾ ಇದ್ದಾರೆ, ಏನಪ್ಪಾ ಗ್ರಹಚಾರ, ಎಲ್ಲೋ ಬಂದು ಸಿಕ್ಕಿಹಾಕಿಕೊಂಡೆನಲ್ಲ ಅಂತ ಮನಸ್ಸಲ್ಲೇ ಬೇಜಾರು ಮಾಡ್ಕೋತಾ ಇದ್ದೆ. ಅಂತೂ ಇಂತೂ ಸ್ಟೇಜ್ ಮೇಲೆ ಬಂದೆ. ತಕ್ಷಣವೇ ಒಂದು ಧ್ವನಿ ಕೇಳಿಸ್ತು
"ಏನ್ ಗುರು, ಆಟ ಆಡೋದ್ ಬಿಟ್ಟು ಹಾಡಕ್ ಬಂದಿದ್ದೀಯಲ್ಲ."

ನಾನೂ ತಮಾಷೆಯಾಗಿ ಹೇಳ್ದೆ.
"ಹೂ, ಹಾಗೆ ಹಾಡೋಣ ಅನ್ನಿಸ್ತು ಬಂದಿದೀನಿ."

ಆಗ ಸಭೆಯಲ್ಲಿ ಸ್ವಲ್ಪ ಶಾಂತಿ ಸ್ಥಾಪನೆಯಾಗಿತ್ತು. ಶ್ರುತಿರಹಿತ ನನ್ನ ಸಂಗೀತ ಪ್ರಾರಂಭವಾಯ್ತು. ನನಗೆ ಬರೋದನ್ನ ಬಹಳ ಶ್ರದ್ಧೆಯಿಂದ ನಿರೂಪಿಸಿದೆ. ಎಲ್ಲರಿಗೂ ಆಶ್ಚರ್ಯ. ಮುಗಿದ ತಕ್ಷಣ ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಿ, ಶಿಳ್ಳೆಯನ್ನೂ ಹಾಕಿದ್ರು. ನನಗೆ ಎರಡನೇ ಬಹುಮಾನ ಬಂತು. ತುಂಬಾ ಖುಷಿಯಾಯಿತು. ಆವತ್ತಿಂದ ನಾನು ಕಾಲೇಜಿನಲ್ಲಿ ಬಹಳ ಜನಪ್ರಿಯನಾಗಿಬಿಟ್ಟೆ.

ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರಾಗಿದ್ದ ಶ್ರೀ ಸತ್ಯನಾರಾಯಣ ಶಾಸ್ತ್ರಿಗಳು ಕರೆದು, ತಲೆ ಸವರಿ "ಚೆನ್ನಾಗೇನೊ ಹಾಡ್ತಿಯಾ, ಆದರೆ ಶಾಸ್ತ್ರೀಯತೆ ಇರಬೇಕು, ನಿಖರವಾಗಿ ಲಯಬದ್ಧವಾಗಿ ಇರಬೇಕು" ಅಂದ್ರು.

ಆ ಸಮಯದಲ್ಲಿ ನಮ್ಮ ಕಾಲೇಜಿನ ಹಲವು ಅಧ್ಯಾಪಕರಿಗೆ ಸಂಗೀತದಲ್ಲಿ ಪರಿಶ್ರಮವಿತ್ತು. ನೀವು ಕೇಳಿರ್ತೀರಿ, ಎಂಎ ವೆಂಕಟಾಚಾರ್, ಫಿಸಿಕ್ಸ್ ಉಪನ್ಯಾಸಕರು. ಅವರಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಸಮಾನ ಪಾಂಡಿತ್ಯವಿತ್ತು. ಒಂದಕ್ಷರ ಇಂಗ್ಲಿಷ್ ಸೇರಿಸದೆ ಭೌತಶಾಸ್ತ್ರದ ಪಾಠಗಳನ್ನು ಕನ್ನಡದಲ್ಲಿ ಮಾಡಬಲ್ಲವರಾಗಿದ್ದರು. ಅವರು ಗಾಯಕರು. ನಮ್ಮ ಕಾಲೇಜಿನಲ್ಲಿ ಕಛೇರಿಗಳನ್ನು ನೀಡಿದ್ದರು. ನಮ್ಮ ಸಹೋದ್ಯೋಗಿ ಎಂ.ಆರ್. ನರಸಿಂಹನ್ ಅವರು ವೆಂಕಟಾಚಾರ್‌ರವರ ಭಾವಮೈದ ಮತ್ತು ಸೋದರಳಿಯ. ಮತ್ತೊಬ್ಬರು ಗಣಿತಶಾಸ್ತ್ರದ ಪ್ರಾಧ್ಯಾಪಕರು ಟಿ ಎಸ್ ರಾಮಚಂದ್ರನ್. ಇಬ್ಬರೂ ಆಕಾಶವಾಣಿ ಕಲಾವಿದರು.

ಆರ್.ಜಿ. ಕುಲಕರ್ಣಿ, ಕನ್ನಡ ಪ್ರಾಧ್ಯಾಪಕರು. "ಹೂವೆ..ಹೂವೆ.." ಅಂತ ಒಂದು ಪದ್ಯ ಬರೆದಿದ್ದರು. ಅದರಲ್ಲಿ ಎಲ್ಲಾ ರಾಜ್ಯಗಳ ವಿವರಣೆಯಿತ್ತು. ಹುಡುಗಿಯರು ಆಯಾ ರಾಜ್ಯದ ವೇಷ ಹಾಕಿಕೊಂಡು ಬಂದಾಗ, ಸಂಬಂಧಿಸಿದ ಭಾಗವನ್ನು ನಾನು ಹಾಡಬೇಕಿತ್ತು. ಹೀಗೆ ನಿಧಾನವಾಗಿ ನಾನು ಗರಿಬಿಚ್ಚತೊಡಗಿದ್ದೆ.

ಕಾಲೇಜ್ ದಿನಾಚರಣೆಗೆ ಕನ್ನಡ ಪ್ರಾಧ್ಯಾಪಕರಾಗಿದ್ದ ಕೆ.ವಿ. ಶ್ರೀನಿವಾಸ ಮೂರ್ತಿ ಮತ್ತು ನಾನು "ವಾತಾಪಿ ಗಣಪತಿಂ ಭಜೇಹಂ" ಹಾಡಿದೆವು. ಮೂರ್ತಿಮೇಷ್ಟ್ರ ಮನೆಯಲ್ಲಿಯೇ ಗಂಟೆಗಟ್ಟಲೆ ಅಭ್ಯಾಸ. ನಾವು ಹಾಡ್ತಾ ಇರೋವಾಗಲೇ ಪ್ರಿನ್ಸಿಪಾಲ್ ಶ್ರೀ ಬಿ.ವಿ. ನಾರಾಯಣ ರಾವ್, ಬಂದು ಕಿವಿಯಲ್ಲಿ
"ಸಾಕು ನಿಲ್ಲಿಸ್ಬಿಡಿ, ಕೇಸರಿಭಾತ್ ಜಾಸ್ತಿ ತಿನ್ಬಾರದು, ಒಳ್ಳೇದಲ್ಲ," ಅನ್ನೋಣವೆ !

ಏನೇ ಆಗಲಿ, ಹೀಗೆ ಕಾಲೇಜಿನಲ್ಲಿ ಕ್ರೀಡೆ ಮತ್ತು ಸಂಗೀತದ ಚಟುವಟಿಕೆಗಳಲ್ಲಿ ನಾನು ಬಹಳ ಇಷ್ಟಪಟ್ಟು ಭಾಗವಹಿಸುತ್ತಿದ್ದೆ. ಅದೊಂದು ಅದ್ಭುತ ಅನುಭವ."

ಪದವಿ ಪರೀಕ್ಷೆಯಲ್ಲಿ ಗೆದ್ದರು. ಭೋರುಕಾ ಸ್ಟೀಲ್ ಕಾರ್ಖಾನೆಯಲ್ಲಿ ಕೆಲಸವಾಯಿತು. ಬ್ಯಾಡ್ಮಿಂಟನ್ ಆಟಗಾರನೆಂದು ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕೆಲಸ ಸಿಕ್ಕಿತ್ತು. ಆಗ "ಉದ್ಯೋಗ ವಿನಿಮಯ ಕೇಂದ್ರ" ದಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ಲಿಖಿತ ಪರೀಕ್ಷೆಗೆ ಕರೆ ಬಂತು. ಎನ್ಐಬಿಎಂ ಪರೀಕ್ಷೆ. ಆಬ್ಜೆಕ್ಟಿವ್ ಪ್ರಶ್ನೆಗಳು. ಅಲ್ಲಿಯೂ ಗೆದ್ದರು. ಮುಂದೆ, ಮೌಖಿಕ ಸಂದರ್ಶನ. ಆರ್ಕೆಪಿ ಎಲ್ಲ ಉದ್ಯೋಗ ಸಂದರ್ಶನಗಳಿಗೆ ವಿಶ್ವವಿದ್ಯಾಲಯದ

ಬ್ಯಾಡ್ಮಿಂಟನ್ ಬ್ಲೇಜ಼ರ್ ಹಾಕಿಕೊಂಡು ಹೋಗುತ್ತಿದ್ದರು. ನಿರೀಕ್ಷೆಯಂತೆ ಸಂದರ್ಶನವು ಕ್ರೀಡೆಯ ಬಗ್ಗೆ, ವಿಶೇಷವಾಗಿ ಬ್ಯಾಡ್ಮಿಂಟನ್ ಬಗ್ಗೆಯೇ ಇರುತ್ತಿತ್ತು.

17
ಬೀಜರೂಪವಾಗಿದ್ದ ಸರ್ವಮಹತ್ತೂ ಸಂಸ್ಕಾರ ರೂಪವಾಗಿ

ನಾನು, ಪದ್ಮನಾಭರ ಮನೆಗೆ ಹೋದಾಗ, ಕುವೆಂಪು ಅವರ "ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ" ಲೇಖನವನ್ನು ಓದುತ್ತಿದ್ದರು.
ನಾನೆಂದೆ, "ಓ, ಇದು ಕುವೆಂಪು ಅವರ "ವಿಭೂತಿ ಪೂಜೆ"ಯಲ್ಲಿದೆ. 1963 ರಲ್ಲಿ ಪ್ರಕಟ.
"ಹೌದು, ಈ ಭಾಗವನ್ನು ನೋಡು"

"ವಿವೇಕಾನಂದರಲ್ಲಿ ಪ್ರಕಾಶವಾಗಿರುವ ಸರ್ವಮಹತ್ತೂ ನರೇಂದ್ರನಲ್ಲಿ ಬೀಜರೂಪವಾಗಿ ಸಂಸ್ಕಾರರೂಪವಾಗಿ ಇತ್ತೆಂದು ಒಪ್ಪಿಕೊಂಡರೂ ಅದು ವ್ಯಕ್ತಿಯ ಸಾಧನೆಯೂ ಅದಕ್ಕೆ ಸಂವಾದಿಯಾದ ಗುರುಶಕ್ತಿಯ ಕೃಪೆಯೂ ಇಲ್ಲದೆ ವ್ಯಕ್ತವಾಗಲಾರದು ಎಂಬುದು ಸ್ಪಷ್ಟವಾಗುತ್ತದೆ. ನೆಲ ನೀರು ಗಾಳಿಗಳ ಗುರುಕೃಪೆಯಿದ್ದರೆ ತಾನೆ, ಬೀಜದಲ್ಲಿ ಗುಪ್ತವಾಗಿರುವ ವೃಕ್ಷತ್ವ ತನ್ನ ಸುಪ್ತಿಯಿಂದ ಎಚ್ಚೆತ್ತು ಬೆಳೆಯಲು ಸಾಧ್ಯವಾಗುತ್ತದೆ? ನಮ್ಮೆಲ್ಲರಲ್ಲಿಯೂ ಗುಪ್ತವಾಗಿರುವ ಆ ಸುಪ್ತಶಕ್ತಿ ಎಚ್ಚರಗೊಳ್ಳಬೇಕಾದರೆ ಅಂತಹ ಗುರುಕೃಪಾ ರೂಪವಾದ ದೈವೇಚ್ಛೆಯ ಬಲ ಅತ್ಯಂತ ಆವಶ್ಯಕ. ಯಾವ ರೂಪದಲ್ಲಿ ಒದಗಲಿ, ಯಾವ ರೀತಿಯಲ್ಲಾದರೂ ಕೆಲಸಮಾಡಲಿ, ಅಂತಹ ಗುರುಕೃಪೆಯ ಆಶೀರ್ವಾದದ ಬಲಕ್ಕಾಗಿ ನಾವು ಸಾಧನೆ ಮಾಡದಿದ್ದರೆ ನಮ್ಮ ಅಂತಃಶಕ್ತಿ ಸಮರ್ಪಕವಾಗಿ ಸಂಪೂರ್ಣವಾಗಿ ಶ್ರೀಯುಕ್ತವಾಗಿ ಮೈದೋರಲಾರದು. ಒಂದು ವೇಳೆ ಅವಿನಯಶೀಲವಾದ ಅಹಂ ಪ್ರಯತ್ನದಿಂದ ಸ್ವಪ್ರತಿಷ್ಠೆಯ ಉದ್ದೇಶಕ್ಕಾಗಿ ಹೊರಹೊಮ್ಮಿದರೂ ಬಂಡೆಯ ಮೇಲಿರುವ ಅಲ್ಪಮೃತ್ತಿಕೆಯಲ್ಲಿ ಮೊಳೆಯುವ ಗಿಡದಂತೆ ಹ್ರಸ್ವವೂ ಕುಬ್ಜವೂ ವಿಕೃತವೂ ಆಗಿ ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ." (ಕುವೆಂಪು)

"ನಿಜ, ವಿಶ್ವಮಾನವ ಕುವೆಂಪುರವರ ನಿಶಿತಮತಿಯಿಂದ ಮೂಡಿರುವ ಸಾಲುಗಳು."

"ಈ ಮಾತುಗಳು ನನ್ನ ಅನುಭವವೂ ಆಗಿದೆ. ಬದುಕೊಂದು ಅಚ್ಚರಿಯ ಮೂಟೆ. ಯಾವ ಘಳಿಗೆಯಲ್ಲಿ ಯಾವ ರೀತಿ ತೆರೆದುಕೊಳ್ಳುವುದೋ ತಿಳಿಯುವುದಿಲ್ಲ. ಅವಕಾಶಗಳಿಲ್ಲವೆಂದು ನಾವು ಗೊಣಗುತ್ತೇವೆ. ಆದರೆ ಅವಕಾಶಗಳು ನಮ್ಮ ಮನೆಯ ಬಾಗಿಲನ್ನು ತಟ್ಟುತ್ತಿರುತ್ತವೆ. ಬಾಗಿಲು ತೆರೆದು ಅವಕಾಶವನ್ನು ಸ್ವಾಗತಿಸಲು

ನಾವು ಸಿದ್ಧವಾಗಿರಬೇಕಷ್ಟೆ." ಪದ್ಮನಾಭರೆಂದರು

"ರಾಜನ್ ಮತ್ತು ನಿನ್ನ, ಸಂವಾದಿ ವಚನಗಳ "ಇಬ್ಬನಿ–ಬನಿ" ಓದಿದೆ. ಚೆನ್ನಾಗಿದೆ. It is a good concept.

ಬನಿ–20 ರಲ್ಲಿ "ಬೆಳೆ ಸಹಜದಲಿ/ ಬಾಗು ಸಹಜದಲಿ/ ಬೆಳೆಬಾಗುಗಳಿರಲಿ/ ಅರಿವಿನ ಪರಿಧಿಯಲಿ,"
ಮತ್ತು ಬನಿ–57 ರಲ್ಲಿ "ಗುರಿ ಸಾಧನೆಗೆ/ ಕೃತಿಯ ಗತಿಗೆ/ಬೇಕು ನಿಶಿತಮತಿ/ ಬಾಗದ ಧೃತಿ."
ಈ ಮಾತುಗಳು ಪರಿಣಾಮಕಾರಿಯಾಗಿದೆ. ನನ್ನ ಬದುಕಿನಲ್ಲಿ
ಅಳವಡಿಸಿಕೊಂಡಿರುವೆ."

"ಈ ವಿಷಯ ಈಗ ಏಕೆ ಬಂತು?"

"ಕಾರಣವಿದೆ, ನನ್ನಲ್ಲಿದ್ದ ಸಂಗೀತದ ದಾಹಕ್ಕೆ ನೀರುಣಿಸಿದವರು ಸನ್ಮಾನ್ಯ ಶ್ರೀ ಎಚ್.ವಿ. ಕೃಷ್ಣಮೂರ್ತಿಯವರು"
"ಯಾರವರು?"

"ನನಗೆ ಬ್ಯಾಂಕಿನಲ್ಲಿ ಕೆಲಸವಾಯಿತು. 1973 ರ ಅಕ್ಟೋಬರ್‌ನಲ್ಲಿ ಎಚ್‌ಎಎಲ್ ಶಾಖೆಗೆ ಸೇರಿದೆ. Clerk- Typist ಆಗಿ. ವಿದೇಶಿ ವಿನಿಮಯ ವಿಭಾಗ. ಎಲ್ಲಿಯ ರುದ್ರಪಟ್ಟಣದ ಕಾವೇರಿ ತೀರ! ಎಲ್ಲಿಯ ವಿದೇಶಿ ವಿನಿಮಯ! ನನ್ನ ಬೆರಳಚ್ಚಿನಲ್ಲಿ ಬಹಳ ತಪ್ಪುಗಳು ಇರುತ್ತಿದ್ದವು. ವಿಜಯಾ ಕಾಲೇಜಿನ ಅನುಭವಗಳು ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದ್ದವು. ಆದರೂ ಕೆಲವರನ್ನು ಗಮನಿಸಿದಾಗ ಹಳ್ಳಿಯಿಂದ ಬಂದ ನಾನು ಸ್ವಲ್ಪ ಕುಗ್ಗುತ್ತಿದ್ದೆ. ಕ್ರಮೇಣ ಅಂತಹ ಹಿಂಜರಿಕೆಗಳು ಕಣ್ಮರೆಯಾದವು. ಬ್ಯಾಂಕು – ಮನೆಯ ಯಾಂತ್ರಿಕ ಜೀವನ ಆರಂಭವಾಗಿತ್ತು. ಸಂಜೆಯ ಹೊತ್ತು ನಮ್ಮ ರಸ್ತೆಯ ಹುಡುಗರೆಲ್ಲ, ಕಾಲೇಜಿನ ಸಹಪಾಠಿಗಳು, ಮೂಲೆಯಲ್ಲಿ ನಿಂತು ಕಾಡುಹರಟೆ ಹೊಡೆಯುತ್ತಿದ್ದೆವು. ಪ್ರಪಂಚದ ಎಲ್ಲಾ ವಿಷಯಗಳಿಗೂ ನಮ್ಮ punch & pun ಇರುತ್ತಿದ್ದವು.

1974ರ ಜನವರಿಯ ಒಂದು ಸಂಜೆ, ಪದ್ಮನಾಭರು
"ಏನ್ ಜೀವನಾ ಇದು. ನಾನು ಸಂಗೀತ ಕಲಿಬೇಕು" ಅಂದ್ರು.

ಥಟ್ಟನೆ ಚೇಚು, "ಏನ್ರಿ ಆಶ್ಚರ್ಯ ನೀವು ಸಂಗೀತಾನೇ" ಅಂತ ಎಲ್ಲರೂ ಬಿದ್ದು ಬಿದ್ದು ನಗೋಕೆ ಪ್ರಾರಂಭಿಸಿಬಿಟ್ಟರು.

“ಯಾಕ್ರೀ ಚೇಚು, ಇಷ್ಟು ನಗ್ತಾ ಇದ್ದೀರಿ?”

“ಅಯ್ಯೋ ಸ್ವಾಮಿ, ನೀವೆಲ್ಲಿ? ಸಂಗೀತ ಎಲ್ಲಿ? ನಿಮಗೆ ಈ ಪ್ಯಾರಿಸ್ ಕಾರ್ನರ್‌ನಲ್ಲಿ ಹರಟೆ ಹೊಡೆಯೋಕೆ ಕಾಲ ಸಾಕಾಗೊಲ್ಲ. ಅದೂ ಅಲ್ಲದೆ ಸಂಗೀತಕ್ಕೆ ಒಂದು ಸಂಸ್ಕಾರ ಬೇಡವೇ. ನಿಮ್ಮನ್ನ ನೋಡಿದ್ರೆ ಸಂಗೀತಕ್ಕೂ ನಿಮಗೂ ಬಹಳ ದೂರ ಇದೆ ಅನ್ನಿಸುತ್ತೆ. ನಿಮಗೆ ಈಗಾಗಲೇ 25 ವರ್ಷ ಆಗಿದೆ. ಸುಮ್ನೆ ಮದುವೆ ಮಾಡ್ಕೊಂಡು ಹಾಯಾಗಿ ಇರಬಾರದೆ. ಸಂಗೀತ ಕಲಿಯೋ ಜನಾನೇ ಬೇರೆ."

ಆರ್ಕೆಪಿ ಹೇಳಿದ್ರು "ನನಗೇನೂ ಬೇಜಾರಾಗಲಿಲ್ಲ. ಏಕೆಂದ್ರೆ ನಾನೇನೂ ಸೀರಿಯಸ್ಸಾಗಿರಲಿಲ್ಲವಲ್ಲ."

ಮಾರನೆ ದಿನ ಆಶ್ಚರ್ಯ ಕಾದಿತ್ತು. ಸಂಜೆ ಚೇಚು ನನ್ನ ಒಬ್ಬರ ಮನೆಗೆ ಕರೆದುಕೊಂಡು ಹೋದ್ರು.

"ಮಾವಾ, ಇವರು ಆರ್.ಕೆ. ಪದ್ಮನಾಭ, ಸಂಗೀತ ಕಲೀಬೇಕಂತೆ. ಪದ್ಮನಾಭ್ ಇವರು ನಮ್ಮ ಮಾವ ಎಚ್.ವಿ.ಕೃಷ್ಣಮೂರ್ತಿ ಅಂತ. ಸಂಗೀತದ ಮೇಷ್ಟ್ರು.
ಕೃಷ್ಣಮೂರ್ತಿಗಳು ಹೇಳಿದರು "ನಾಳೆ ಕಾಲೇಜಿಗೆ ಬನ್ನಿ."
"ವಿಜಯಾ ಸಂಗೀತ ಕಾಲೇಜು" ನನ್ನ ಕೈ ಬೀಸಿ ಕರೆಯಿತು.

ಈ ಮಧ್ಯೆ, ಬೆಳಗಾವಿಯಲ್ಲಿ ಬ್ಯಾಂಕಿನ ಟ್ರೈನಿಂಗ್. ವಾಪಸ್ಸು ಕ್ಲಾಸಿಗೆ ಬರೊವಷ್ಟರಲ್ಲಿ ಆರ್ಕೆಪಿಗೆ ಸರಳೆ ಮತ್ತು ಜಂಟಿವರಸೆಗಳನ್ನು ಕಲಿಯಲು ಆಗಲಿಲ್ಲ. ಮೇಷ್ಟ್ರು "ಹಂಸಧ್ವನಿ ವರ್ಣ" ಶುರು ಮಾಡಿದ್ದರು. ಕಾಲೇಜೂ ಸಂಕಷ್ಟದಲ್ಲಿತ್ತು. ಸ್ಥಳ ಬದಲಾವಣೆಯಾಯ್ತು. ವಿದುಷಿ ಟಿ.ಎಸ್.ರಮಾ ತರಗತಿ ತಗೊಳ್ತಾಯಿದ್ರು. ನಾಲ್ಕು ಜನ ಯುವ ವಿದ್ಯಾರ್ಥಿಗಳು. ಆರ್ಕೆಪಿ, ಡಿ.ವಿ.ನಾಗರಾಜ್, ಗುರುಮೂರ್ತಿ ಮತ್ತು ನಾಗರಾಜ್ (ರಾಜ್ ಕಮಲ್). ಅವರಿಗೆಲ್ಲ ಸಂಗೀತದ ಪರಿಶ್ರಮ ಇತ್ತು. ಪದ್ಮನಾಭರಿಗೆ ಬಹಳ ಜಟಿಲ ಅನ್ನಿಸ್ತು.

ಪ್ರಿಯ ಓದುಗ, ಲೇಖಕನಾಗಿ ನಾನು ಸಾಧ್ಯವಾದಷ್ಟು ಮಟ್ಟಿಗೆ ಪದ್ಮನಾಭದಾಸರ “ಪದ್ಮನಾದ” ಹೇಳುತ್ತಿರುವೆ. ಆದರೆ ಅನುಭವದ ಮುಂದೆ ಅಕ್ಷರ ಸೋಲುತ್ತದೆ. ಭಾವಗಳನ್ನು ಸೆರೆಹಿಡಿಯಲು ಯಾವತ್ತೂ ಲೇಖನಿಗೆ ಸಾಧ್ಯವಾಗದು. ಹಾಗಾಗಿ ಮುಂದಿನ ಭಾಗದ ಅಪೂರ್ವ ಅನುಭವವನ್ನು ನೀನು ಪದ್ಮನಾಭರ ಮಾತಿನಲ್ಲಿ ಕೇಳಿದರೆ ಒಳಿತು. ನನ್ನ ಶ್ರಮವೂ ಸಾರ್ಥಕವಾಗುತ್ತದೆ.

(ಉದ್ಧರಿತ)
"ಏಕಾ ಏಕಿ ಮೇಷ್ಟ್ರು ದೀಕ್ಷಿತರ "ನಾಟ" ರಾಗದ ಕೃತಿ "ಮಹಾಗಣಪತಿಂ" ಪ್ರಾರಂಭಿಸಿ ಬಿಟ್ರು. ನನಗೆ ಹಿಂದೆ ಮುಂದೆ ಗೊತ್ತಿಲ್ಲ. ಮಿಕ್ಕವರಿಗೆ ಪರಿಶ್ರಮ ಇತ್ತು. ನಾನೊಬ್ಬನೇ odd man out. ಅಂತೂ ಇಂತೂ ಕಷ್ಟಪಟ್ಟುಕ್ಕೊಂಡು ಆವತ್ತಿನ ಕ್ಲಾಸ್ ಮುಗೀತು. ಬದುಕಿದೆಯಾ ಬಡ ಜೀವವೇ ಅಂತ ಮನೆಗೆ ಓಡಿಬಂದೆ. ಸಂಗೀತ ಇಷ್ಟು ಜಟಿಲ ಅಂತ ನನಗೆ ಮನವರಿಕೆಯಾಗಿರಲಿಲ್ಲ. ಎರಡು ಕ್ಲಾಸ್‌ಗೆ ಹೋಗಲೇ ಇಲ್ಲ.

ಆದರೂ ಹೋಗದೇ ಇರೋಕೆ ಮನಸ್ಸು ಬರಲಿಲ್ಲ. ನಾದದೇವತೆ ಕೈಬೀಸಿ ಕರೆಯೋವಾಗ ಹೋಗದೇ ಹ್ಯಾಗೆ ಇರೋದು? ಅಂತೂ ಹೋದೆ. ನನಗೆ "ನಾಟ" ರಾಗದ ideaನೇ ಇಲ್ಲ, ಆವತ್ತೂ ಅದೇ ಪಾಠ. ಈ ಮೂರು ಜನರೂ ಚೆನ್ನಾಗಿ ಹಾಡಿದರು. ನಾನು ತಡವರಿಸ್ತಾನೇ ಇದ್ದೆ. It was a very bad and bitter experience. ಕೃತಿ ಆದ ಮೇಲೆ ಸ್ವರ ಪ್ರಾರಂಭವಾಗೋಯ್ತು. ನನಗೆ ಇದ್ದಿದ್ದ ಸ್ವಲ್ಪ ಜೀವವೂ ಹೊರಟು ಹೋದಹಾಗಾಯ್ತು. ತುಂಬಾ ಮುಜಗರವಾಯ್ತು. "ನೀಸರಿಗ" ಮಹಾಗಣಪತಿ ಸ್ವರ ಹಾಡಬೇಕು. ಆಯಾ ಕಾಲದಲ್ಲಿ ಅಷ್ಟೇ, ನನಗೆ ಸ್ವರಸ್ಥಾನಗಳ ಪರಿಚಯವೇ ಇಲ್ಲ. ಅಷ್ಟೇ ಏಕೆ ನನಗೆ ಏನೂ ಗೊತ್ತಾಗ್ತಾನೂ ಇರಲಿಲ್ಲ. ತುಂಬಾ ಸಂದಿಗ್ಧ ಪರಿಸ್ಥಿತಿ. ಶಾರೀರ ಚೆನ್ನಾಗಿದೆ ಅನ್ನೋದು ಬಿಟ್ರೆ, ಜ್ಞಾನ ಸೊನ್ನೆ. ನನಗೆ ತುಂಬ ದುಃಖವಾಯಿತು.

ಮೂರೂ ಜನರೂ ಇರೋದರಲ್ಲಿ ಸ್ವರ ಹಾಕಿದರು. ನನ್ನ ಸರದಿ ಬಂತು. ನನಗೆ ತಾಳವೂ ಗೊತ್ತಾಗ್ತಾಯಿಲ್ಲ. ಸ್ವರಸ್ಥಾನಗಳಂತೂ ದೇವರೇ ಗತಿ. ಬಿಸಿ ತುಪ್ಪ ನುಂಗುವಂತಹ ಸನ್ನಿವೇಶ, ಮನಸ್ಸಲ್ಲೇ ತಾಯಿ ವಾಗ್ದೇವಿಯನ್ನು ಪ್ರಾರ್ಥಿಸಿದೆ.

"ತಾಯಿ ನನಗೇಕೆ ಈ ಶಿಕ್ಷೆ, ಬಹುಶಃ ಈ ಕಲೆ ನನಗಲ್ಲವೇನೋ" ಅಂತ, ಆ ಒಂದು ಸೆಕೆಂಡಿನಲ್ಲಿ ಏನೇನೋ ಲೆಕ್ಕಾಚಾರ ಹಾಕ್ತಾ ಬಂದೆ. ಆದರೆ ಅಂತರಂಗದ ದುಃಖ, ದುಮ್ಮಾನ ನಿಲ್ಲಲಿಲ್ಲ. ಜೋರಾಗಿ ಎಲ್ಲರ ಎದುರುಗಡೆ ಕಣ್ಣುಮುಚ್ಚಿ ಅಳೋಕೆ ಪ್ರಾರಂಭ ಮಾಡಿದೆ. ಸುಮಾರು ಐದು ನಿಮಿಷಗಳು ನನಗೆ ತಡೆಯೋಕೆ ಆಗಲಿಲ್ಲ. ಅಷ್ಟು ನಾನು ದುಃಖಿತನಾಗಿದ್ದೆ. ಅವತ್ತು ಅರ್ಥವಾಯ್ತು. ಶಾಸ್ತ್ರೀಯ ಸಂಗೀತಕ್ಕೆ ಶಾರೀರವೇ ಮುಖ್ಯವಲ್ಲ, ಅದನ್ನು ಬಿಟ್ಟು ಇನ್ನೂ ಯಾವುದೋ ಅಗೋಚರವಾದ ಸ್ಥಿತಿ, ಸಂಸ್ಕಾರ ಇರಬೇಕು ಅಥವಾ ಬೆಳೆಸಿಕೋಬೇಕು ಅಂತ. ಅಂತೂ ಆವತ್ತು ಮುಂದೆ ಯಾವ ಪಾಠವೂ ಆಗಲಿಲ್ಲ.

ನಾನು ಬಹಳ ಚಿಂತಾಕ್ರಾಂತನಾಗಿ ಮನೆಗೆ ಹೊರಟು ಹೋದೆ. ರಾತ್ರಿಯೆಲ್ಲ ನಿದ್ದೆಯಿಲ್ಲ. ಕಾಲೇಜು ಸೇರಿದಮೇಲೆ ಆಶಾಗೋಪುರಗಳ ಮಧ್ಯ ತೇಲಾಡುತ್ತಿದ್ದ

ನನಗೆ ಎಂತಹ ಆಘಾತ ಮತ್ತು ಮುಖಭಂಗ. ಈ ಸಂಗೀತ ನನಗೆ ತುಂಬಾ ಕಠಿಣ ಅನ್ನಿಸ್ತು. ಶಾಸ್ತ್ರೀಯ ಚೌಕಟ್ಟು ಎಷ್ಟು ವ್ಯವಸ್ಥಿತವಾದದ್ದು, ಸುಭದ್ರವಾದದ್ದು, ವೈಜ್ಞಾನಿಕವಾದದ್ದು. ಸುಮ್ಮನೇ ಎಲ್ಲಾರೂ ಹೋಗಿ market ನಲ್ಲಿ ಪದಾರ್ಥಗಳನ್ನು ಕೊಂಡ್ಕೊಳ್ಳೋ ಹಾಗೆ ಅಲ್ಲ. ಎಂತಹ ಸೃಜನಾತ್ಮಕ ಕಲೆ, ಭಾವನಾತ್ಮಕವಾದ ಶಿಸ್ತಿನ ಕಲೆ, ವಿಜ್ಞಾನಕ್ಕೂ ಎಟುಕದ ಕಲೆ ಅನ್ನುವ ಚಿಂತನೆಗಳು ನನ್ನ ಕಣ್ಣ ಮುಂದೆ ಸಿನಿಮಾ ದೃಶ್ಯದಂತೆ ಸುಳಿದು ಹೋದವು.

ಹಾಗೆಯೇ ಈ ಕಲೆಗೆ ನಾನು ಯೋಗ್ಯನಲ್ಲ, ನನ್ನ ಯೋಗ್ಯತೆಗೆ ಎಟುಕುವುದಿಲ್ಲ. ದೊಡ್ಡವರು ಹೇಳ್ತಾರೆ "Don't build castles in the air" ಅಂತ. ಎಲ್ಲಾ ಬೃಹತ್ ಗೋಪುರಗಳು ಕೆಳಗೆ ಬಿದ್ದು ನೀರು ಪಾಲಾದಂತಾಗಿತ್ತು ನನ್ನ ಬದುಕು. ಕಲೆಯ ಮೇಲೆ ಗೌರವ ಹೆಚ್ಚಿತು. ನನ್ನ ಮೇಲೆ ನಂಬಿಕೆ ಕಡಿಮೆಯಾಯಿತು. ಹಾಗಾಗಿ ಸುಮಾರು ಎರಡು ತಿಂಗಳು ನಾನು ಕಾಲೇಜಿಗೆ ಹೋಗಲೇ ಇಲ್ಲ.

ಒಂದು ದಿವಸ ಸಾಯಂಕಾಲ ಸುಮಾರು 7.30 ಇರಬಹುದು. ಜಯನಗರ ೩ನೇ ಬ್ಲಾಕ್‌ನ ಮನೆ, ಮನೆಯಲ್ಲಿ ಯಾರೂ ಇರಲಿಲ್ಲ ಅಂತ ನೆನಪು. ಅದೇನೋ ಅಕಸ್ಮಾತ್ ಮನೆಯಲ್ಲಿದ್ದೆ. ಯಾರೊ ಬಾಗಿಲು ತಟ್ಟಿದ ಹಾಗಾಯ್ತು, ಹೋಗಿ ಬಾಗಿಲು ತೆಗೆದು ನೋಡಿದರೆ ಮಹದಾಶ್ಚರ್ಯ "ಮೇಷ್ಟ್ರು" ಬಂದಿಟ್ಟಿದ್ದಾರೆ. "ಬನ್ನಿ ಸಾರ್" ಅಂತ ಒಳಗಡೆ ಕರೆದೆ.

ಅಷ್ಟರಲ್ಲೇ ಅವರಿಗೆ ನನ್ನ ಮೇಲೆ ತುಂಬಾ ಅಭಿಮಾನ ವಾತ್ಸಲ್ಯ ಬೆಳೆದುಬಿಟ್ಟಿತ್ತು. ಸಂಗೀತ ಒಂದು ಬಿಟ್ಟು ಮಿಕ್ಕೆಲ್ಲಾದ್ರಲ್ಲೂ ನಾನೇ ಮೊದಲು, ಕಾಫಿ ತರೋದು, ಕಳ್ಳೆಕಾಯಿ ಬೀಜ, ಬಿಸಿ ಬಿಸಿ ಬೋಂಡ ತರೋದು, ಆಗಾಗ ಕಾಲೇಜಿನಲ್ಲಿ ಅಡುಗೆ ಮಾಡಿಸೋದು ಇದಕ್ಕೆಲ್ಲಾ ನಾನೇ ನಾಯಕ. ಆದರೆ ಏತಕ್ಕಾಗಿ ನಾನು ಕಾಲೇಜು ಸೇರಿದ್ನೋ ಅದರಲ್ಲೇ ನಾನು ದುರ್ಬಲನಾಗಿದ್ದೆ. ಏನೇ ಇರಲಿ ಮೇಷ್ಟ್ರು, ಸೌಜನ್ಯಕ್ಕೆ ನಾನು ತಲೆಬಾಗಿದೆ. ಮೇಷ್ಟ್ರು ಕೂತ್ಕೊಂಡ್ರು.

"ಏನ್ರೀ ಪತ್ತೆ ಇಲ್ಲ. ಏನಾಯ್ತು ನಿಮಗೆ, ಬೇಜಾರ್ ಮಾಡ್ಕೊಂಡ್ರಾ? ಆಂ, ಬನ್ನಿ ಬನ್ನಿ ನಾಳೇ ಬರ್ಲೇ ಬೇಕು. ಕಾಯ್ತಾ ಇದ್ದೀನಿ, ಕಾಲೇಜ್ ವಿಷಯಾನೂ ಸ್ವಲ್ಪ ಮಾತಾಡ್ಬೇಕು" ಅಂದ್ರು.

ಹೇಗೋ ತಪ್ಪಿಸಿಕೊಳ್ಳೋಣ ಅಂತ ಹೇಳಿ "ಆಗಲಿ ಸಾರ್ ಖಂಡಿತ ಬರ್ತೀನಿ" ಅಂತ ಹೇಳೋಣ ಅಂತ ಹೊರಟರೂ ಅಂತರಂಗದಲ್ಲಿದ್ದ ನನ್ನ ದುಃಖ ಮತ್ತೆ ಮರುಕಳಿಸಿ ಬಂತು. ಮೇಷ್ಟ್ರ ಕೈ ಹಿಡ್ಕೊಂಡು ಬಿಕ್ಕಿ ಬಿಕ್ಕಿ ಕಣ್ಣೀರಿಟ್ಟೆ, ಮೇಷ್ಟ್ರಿಗೆ

ಏನೂಂತ್ಲೆ ಗೊತ್ತಾಗ್ಲಿಲ್ಲ. ನಾನು ಅಳೋದು ನೋಡಿ ಅವರ ಕಣ್ಣಲ್ಲೂ ನೀರು. ಎಂತಹ ಸಂದರ್ಭ, ಮನೆಯಲ್ಲಿ ಯಾರೂ ಇಲ್ಲದ ಮೌನವಾವರಿಸಿದ್ದ ವಾತಾವರಣದಲ್ಲಿ ಗುರು–ಶಿಷ್ಯರ ಅಂತರಂಗದ ಭಾವನೆಗಳ ಅಭಿವ್ಯಕ್ತಿ. ಈಗ ಆ ದೃಶ್ಯವನ್ನ ನೆನೆಸಿಕೊಂಡರೆ ಸಾಕು. ಈಗಲೂ ನನ್ನ ಕಣ್ಣಿನಲ್ಲಿ ನೀರು. ಅದೇನು ಬಾಂಧವ್ಯವೋ, ತಾಯಿ ಶಾರದೆಯ ಶಕ್ತಿಯೋ, ಯಾವುದೋ ಒಂದು ಅಮೂರ್ತ ಚೈತನ್ಯದ ಕಾರ್ಯಚಟುವಟಿಕೆಯೋ, ಅದು ಅನಿರ್ವಚನೀಯ. ಹೀಗೆ ಈ ದೃಶ್ಯ 5–10 ನಿಮಿಷಗಳಾದವು. ಮೇಷ್ಟ್ರು

"ಏನಾಯ್ತು, ಯಾಕೆ ಇಷ್ಟು ಭಾವುಕರಾಗಿದ್ದೀರಿ, ನೀವು ಇಷ್ಟು sensitive ಅನ್ನೋದನ್ನ ನಂಬೋಕೆ ಆಗೊಲ್ಲ. You are such an energetic youngster, You can bring mountain alone, ಹೇಳಿ ಏನು ವಿಚಾರ" ಅಂತ ಅವರೂ ಸ್ವಲ್ಪ ಲೌಕಿಕ ಪ್ರಪಂಚಕ್ಕೆ ಬಂದು ಎರಡು ಮಾತಾಡಿದ್ರು. ತಕ್ಷಣ ನಾನು

"ಸಾರ್ ನಾನು ಸಂಗೀತ ಕಲಿತು ಒಳ್ಳೆಯ ಕಲಾವಿದ ಆಗ್ಬೇಕು ಅಂತ ಆಸೆ ಇಟ್ಕೊಂಡ್ ಬಂದೆ. ಆದ್ರೆ now I feel I am unfit, ಆದ್ದರಿಂದ ನಾನು ಇನ್ನು ಕಾಲೇಜಿಗೆ ಬರೋಲ್ಲ" ಅಂತ ಧೈರ್ಯವಾಗಿ ಹೇಳಿಟ್ಟೆ.

ಮೇಷ್ಟ್ರು ನನಗೆ friend ಥರಾನೇ ಇದ್ರು. ಇನ್ನೂ ಹೊಸದು ಬೇರೆ. ನಾನು ಆಗಲೇ ಕೆಲಸದಲ್ಲಿದ್ದೆ. ಆ ಗೌರವಾನೂ ಮೇಷ್ಟ್ರು ಇಟ್ಕೊಂಡಿದ್ರು. ತಕ್ಷಣ ಮೇಷ್ಟ್ರು

"ನೋಡ್ರಿ, ನೈಜ ಗಂಡು ಶಾರೀರಕ್ಕಾಗಿ ನಾನು ಇಷ್ಟು ವರುಷ ಹುಡುಕ್ತಾ ಇದ್ದೆ. ನೀವು ಸಿಕ್ಕಿದ್ರಲ್ಲ ಅಂತ ಬಹಳ ಸಂತೋಷದಿಂದಿದ್ದೆ. ಒಳ್ಳೆ Atom bomb ಹಾಕಿದ್ರಲ್ರಿ, ಹುಚ್ಚುಹುಚ್ಚಾಗಿ ಆಡ್‌ಬೇಡಿ, ಸುಮ್ಮೆ ಬನ್ನಿ" ಅಂತ ಎರಡು ಉತ್ತೇಜನ ಪೂರ್ವಕವಾದ ಸಮಾಧಾನದ ಮಾತನ್ನ ಹೇಳಿ ಹೊರಟ್ರು.

ಅವರನ್ನು ಕಳಿಸಿ ಕೊಟ್ಟ ಮೇಲೆ ನನಗೆ ಮಾತು ಬೇಕಿರಲಿಲ್ಲ. ಮೌನ ಬೇಕಿತ್ತು. ಜಗತ್ತೆಲ್ಲಾ ನನಗೆ ಕತ್ತಲಾಗಿ ಕಾಣಿಸ್ತಾ ಇತ್ತು. ಕಣ್ಣಿದ್ದರೂ ಕುರುಡನಂತೆ ಭಾಸವಾಗ್ತಾ ಇತ್ತು. ಕುರ್ಚಿಯ ಮೇಲೆ ಕುಳಿತು ಸುಮ್ಮನೆ ಆದ ಘಟನೆಯನ್ನೆಲ್ಲಾ ಪುನರ್ ವಿಮರ್ಶಿಸಿಕೊಂಡೆ, ಏನಾದರೂ ಉತ್ತರ ಸಿಗುವುದೇನೋ ಅಂತ. ಪುನಃ ಪುನಃ ನನ್ನ ಸಂಗೀತದ ಅಶಕ್ತತೆಯೇ ನನ್ನ ಕಣ್ಣ ಮುಂದೆ ಬರುತ್ತಿತ್ತೇ ಹೊರತು ಯಾವ ಪ್ರಯೋಜನಕಾರಿಯಾದ ಅಭಿಪ್ರಾಯಗಳೂ ಸಿಗಲಿಲ್ಲ. ಇರಲಿ ಎಂದು ರಾತ್ರಿ ಊಟ ಮಾಡಿ ಮಲಗಿದ್ದಾಯಿತು. ಕನಸಿನಲ್ಲಿ ಮಹಾಗಣಪತಿಂ, ಮನಸಿನಲ್ಲಿ ಮಹಾಗಣಪತಿಂ. ಆ ಕೀರ್ತನೆ ನೆನೆಸಿಕೊಂಡರೇ ದಿಗಿಲು, ಮೈ ನಡುಕ. ಹೀಗಾಗಿತ್ತು ನನ್ನ ಮನೋಸ್ಥಿತಿ. ಸಂಗೀತವನ್ನು ಬಿಟ್ಟು ಬಿಡುವುದೇ ಲೇಸು ಎಂದು ನಿರ್ಧರಿಸಿದ್ದ ನನಗೆ ಯಾವುದೋ ಒಂದು ಅಂತರಂಗ ಧ್ವನಿ ನನಗರಿವಿಲ್ಲದಂತೆಯೇ ಕ್ಲಾಸಿಗೆ ಹೋಗು ಎಂದು ಪ್ರೇರೇಪಿಸುವಂತಿತ್ತು.

ನನಗರಿವಿಲ್ಲದಂತೆಯೇ ಮಾರನೆಯ ದಿವಸ ಕ್ಲಾಸಿಗೆ ಹೋದೆ. ಮಹಾಗಣಪತಿಂ ಕೇಳಿದರೆ ನಡುಗುತ್ತಿದ್ದ ನನ್ನ ಅಂತರಂಗವನ್ನರಿತ ಮೇಷ್ಟ್ರು ಅಂದು "ದೀಕ್ಷಿತರ ಸಿದ್ಧಿವಿನಾಯಕಂ ಅನಿಶಂ" ಕೃತಿಯನ್ನು ಪ್ರಾರಂಭ ಮಾಡಿದರು. ಗಮಕದಲ್ಲಿ ಈ ರಾಗವನ್ನು ಹಾಡುತ್ತಿದ್ದ ನನ್ನನ್ನು ಹುರಿದುಂಬಿಸಲು ಮೇಷ್ಟ್ರು "ಸ್ವಲ್ಪ ರಾಗ ಹಾಡ್ರಿ" ಅನ್ನೋಣವೇ. ನನಗೆ ಇದು safest ಅನ್ನಿಸಿತು. ಸರಿ ಪ್ರಾರಂಭಿಸಿಯೇ ಬಿಟ್ಟೆ. ಎಲ್ಲ ತಾರಸ್ಥಾಯಿ ಸಂಚಾರಗಳೇ, ನಾಟಕದಲ್ಲಿ ಬಹಳ ಗಟ್ಟಿಯಾಗಿ ಕಿರುಚಿ ಅಭ್ಯಾಸವಿತ್ತಲ್ಲ. ಅದರ ನಯ, ಘನವನ್ನರಿಯದೆ, ವ್ಯಾಕರಣವನ್ನ ತಿಳಿಯದೆ ಕೇವಲ ಯಾವುದೋ ಒಂದು ಕುಶಲತೆಯಿಂದ ಹಾಡಿದೆ. ಮೇಷ್ಟ್ರು "ಏನ್ರೀ, ಜೋರಾಗಿದೆ ಮನೋಧರ್ಮ" ಅಂತ ಹುರಿದುಂಬಿಸಿ ಎರಡು ಒಳ್ಳೆ ಮಾತಾಡಿದ್ರು. ಇಲ್ಲೇ ಒಬ್ಬ ಗುರುವಿನ ಪಾತ್ರವಿರುವುದು. ಕಲ್ಲನ್ನ ಶಿಲ್ಪವನ್ನಾಗಿ ಮಾಡುವುದೇ ಗುರುವಿನ ಕರ್ತವ್ಯ. ನನಗೂ ಸ್ವಲ್ಪ ಸಮಾಧಾನವಾಯಿತು, ಖುಷಿಯಾಯಿತು."

ದಾರಿ ಬಹಳ ದೀರ್ಘವಾಗಿತ್ತು. ಗುರಿ ದೂರವಿತ್ತು.

ಆದರೆ ಹೆಳವನ ಹೆಗಲ ಮೇಲೆ ಕುರುಡ ಕೂತಿರಲಿಲ್ಲ !

18
ನಡೆವರೆಡಹದೆ ಕುಳಿತರೆಡಹುವರೆ....

ಹರಿಶ್ಚಂದ್ರ ಕಾವ್ಯದಲ್ಲಿ ರಾಘವಾಂಕನು ಹೇಳಿರುವ ಈ ಸಾಲುಗಳು ಎಷ್ಟು ಅರ್ಥಗರ್ಭಿತವಾಗಿದೆ. ಪಾಪ, ರಾಘವಾಂಕನೂ ಕುಟೀಕಾಕಾರರಿಂದ ನೊಂದಿರಬೇಕು. ಹಾಗೆನ್ನುತ್ತಾ ತಮ್ಮ ಗಟ್ಟಿಧ್ವನಿಯಲ್ಲಿ ಪದ್ಯವನ್ನು ಗಮಕರೂಪದಲ್ಲಿ ಹಾಡತೊಡಗಿದರು ಆರ್ಕೆಪಿ.

ನಡೆವರೆಡಹದೆ ಕುಳಿತರೆಡಹುವರೆ ಕಾವ್ಯಮಂ
ನಡಸುವಾತಂ ರಸಾವೇಶ ಮಱಹಾಲಸ್ಯ
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುವನೆ ಒಂದೆರಡೆಡೆಯೊಳು ।
ಎಡೆವಾಯ್ದು ಬಂದ ತಪ್ಪಂ ಹಿಡಿದು ಸಾಧಿಸದೆ
ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆ
ಯೊಡೆವುದೇ ಬೇನೆಯಱಿಯದ ನೀರಸರನೇಕೆ ಪುಟ್ಟಿಸಿದನಬುಜಭವನು॥

"ನಡೆಯತಕ್ಕವನು ಎಡವುತ್ತಾನಲ್ಲದೆ ಎದ್ದು ನಿಲ್ಲಲೂ ಶಕ್ತಿಯಿಲ್ಲದವನು ಎಡವುತ್ತಾನೆಯೆ? ಹಾಗೆ ಕವಿಯು ಕಾವ್ಯವನ್ನು ರಚಿಸುವಾಗ ರಸಾವೇಶದಿಂದಲೋ, ಮರೆವಿನಿಂದಲೋ, ಆಲಸ್ಯದಿಂದಲೂ ತಪ್ಪು ಮಾಡಿಯಾನು. ಒಂದೆರಡು ಎಡೆಗಳಲ್ಲಿ ತಪ್ಪು ನುಸುಳಿದ ಮಾತ್ರಕ್ಕೆ ಅದನ್ನೇ ಹಿಡಿದು ಸಾಧಿಸಬಾರದು. ಕಡೆತನಕ

ಬಂದ ಗುಣವನ್ನು ಮೆಚ್ಚಿ ತಲೆದೂಗಬೇಕು. ತಲೆದೂಗಿದರೆ ತಲೆ ಒಡೆದುಹೋಗುವುದೆ! ಕವಿಯ ಕಷ್ಟವನ್ನು ಅರಿಯಲಾರದ ನೀರಸ ಜನರನ್ನು ಬ್ರಹ್ಮನು ಅದೇಕೆ ಸೃಷ್ಟಿಸಿದನೋ?"

"ಹಳೆಗನ್ನಡಕಾವ್ಯವಾದರೂ ರಾಘವಾಂಕನು ಸುಲಭ, ಬಹುಶಃ ನನ್ನಂತಹ ಗಾಯಕರ ಆರಂಭಿಕ ದಿನಗಳನ್ನು ನೋಡಿಯೇ ಹೀಗೆ ಬರೆದಿಬೇಕು." ಸ್ವಲ್ಪ ನಕ್ಕರು. "ಮುಂದೇನಾಯಿತು? ದಾರಿ ದೀರ್ಘ, ಗುರಿ ದೂರ."

"ನೀನು, ಬಾದಲ್ ಸರ್ಕಾರ್ ಅವರ "ಏವಂ ಇಂದ್ರಜಿತ್" ನಾಟಕವನ್ನು ನೋಡಿರುವೆಯಾ?"

"ನೋಡಿದ್ದೇನೆ"

"ಅದರಲ್ಲಿ ನಾಯಕನ ಪಾತ್ರವು ಕೊನೆಯಲ್ಲಿ ಹೀಗೆ ಹೇಳುತ್ತದೆ. "ಪಥಿಕ, ಜೀವನದಲ್ಲಿ ದಾರಿಯೆ ಗುರಿ. ಹಾಗಾಗಿ ನೀನು ಸುಮ್ಮನೆ ನಡೆಯುತ್ತಿರು" ಚಿಂತನೆಗೆ ಹಚ್ಚುವ ಸಾರ್ಥಕ ನುಡಿಗಳು.

"ನಾದ ದೇವತೆಯು ನನ್ನನ್ನು ಕೈಹಿಡಿದೇ ನಡೆಸಿದಳು. ಎಡವಿದಾಗ ಎತ್ತಿದಳು, ನೊಂದಾಗ ಮೈದಡವಿದಳು". ನಾನು ಸಂಗೀತಯಾನವನ್ನು ಆರಂಭಿಸಿದೆ. ಪ್ರತಿ ಗುರುವಾರ, ವಿಜಯಾ ಸಂಗೀತ ಕಾಲೇಜಿನಲ್ಲಿ, ಶುಕ್ರವಾರ ಅಯ್ಯನಾರ್ ಕಾಲೇಜಿನಲ್ಲಿ ಹಲವು ಹಿರಿಯ ಗಾಯಕರ ಕಛೇರಿಗಳನ್ನು ಕೇಳಿದೆ.

1975ರ ಜನವರಿ ಇರಬಹುದು. ನನಗಾಗ ಆಗಿದ್ದಿದ್ದು 4–5 ಕೀರ್ತನೆಗಳಷ್ಟೆ. ಜಯನಗರ ಟಿ ಬ್ಲಾಕ್ ರಾಮಮಂದಿರದಲ್ಲಿ "ಸಂಗೀತ ರೂಪಕ" ನಡೆಸಿಕೊಡಲು ಗುರುಗಳು ಒಪ್ಪಿಕೊಂಡಿದ್ದರು. ವಾಲ್ಮೀಕಿ ರಾಮಾಯಣದ 50 ಶ್ಲೋಕಗಳನ್ನು ವಿವಿಧ ರಾಗಗಳಲ್ಲಿ ತಾಳಕ್ಕೆ ಅಳವಡಿಸಿ, ಸಿದ್ಧಪಡಿಸಿದ್ದರು. ಹಾಡಲು ಎರಡು ಗುಂಪು, ನಾಲ್ಕು ಪುರುಷರು, ನಾಲ್ಕು ಮಹಿಳೆಯರು.

"ಸೌರಾಷ್ಟ್ರ ರಾಗದಿಂದ ಪ್ರಾರಂಭವಾಗುವ ಶ್ಲೋಕ, ನನಗೆ ಆ ರಾಗದ ಪರಿಚಯವೇ ಇಲ್ಲ. ಇಂಥ ರಾಗಗಳು ಹಾಡುವುದು ಸುಲಭವಲ್ಲ. ಕೇಳ್ಮೆಯಿಂದ ಹಾಡುವ ರಾಗಗಳಲ್ಲ, ಶಾಸ್ತ್ರ ಸಮ್ಮತವಾಗಿ ಹಾಡಬೇಕು. ಸಂಚಾರಗಳು ಶುದ್ಧವಾಗಿರಬೇಕು. ಅಲ್ಲಿಂದಲೇ ಶುರು ನಡುಕ. ಆಗಲ್ಲ ಅಂತ ಹೇಳೋ ಹಾಗಿಲ್ಲ. ಹಾಡೋಕೆ ನನ್ನ ಮೇಲೆ ನನಗೆ ನಂಬಿಕೆ ಇಲ್ಲ. ಒಳ್ಳೆಯ ಶಾರೀರ ಶಾಸ್ತ್ರೀಯ ಸಂಗೀತಕ್ಕೆ ಬೇಕು. ಅದೇ ಒಳ್ಳೆಯ ಸಂಗೀತವನ್ನು ನೀಡಬಲ್ಲದು ಅನ್ನೋದು ಭ್ರಮೆ. ಶ್ರುತಿ

ಶುದ್ಧವಾಗಿರಬೇಕು, ಲಯ ಶುದ್ಧವಾಗಿರಬೇಕು, ಸಾಹಿತ್ಯ ಸ್ಪಷ್ಟತೆಯಿರಬೇಕು, ಗಮಕ ಶುದ್ಧವಾಗಿರಬೇಕು, ನುಡಿಕಾರ ಇರಬೇಕು, ಮಂಜುಳವಾಗಿರಬೇಕು."

"ಮಹಿಳೆಯರ ಗಾಯನದಲ್ಲಿ ಒಳ್ಳೆಯ ಹೊಂದಾವಣಿಕೆ, ಭಾವ, ಲಾಲಿತ್ಯ. ನಮ್ಮದು ತದ್ವಿರುದ್ಧ. ನಾವ್ಯಾರೂ ಇನ್ನೂ ಸಂಗೀತದ ಬಾಲ್ಯಾವಸ್ಥೆಯನ್ನೇ ದಾಟಿರಲಿಲ್ಲ. ಮೇಷ್ಟ್ರಿಗೆ ಯಾವ ಧೈರ್ಯವೋ, ನನಗಂತೂ ಬಹಳ ಸಂಕೋಚ ಆಗಿತ್ತು. "ಅಭಿಗಮ್ಯ" ಅನ್ನುವ ಒಂದು ಶ್ಲೋಕ. ಅದಕ್ಕೆ ಅಸಾವೇರಿಯ ರಾಗ ಜೋಡಣೆ. ದುರದೃಷ್ಟವಶಾತ್ ಅದು ನಮ್ಮ ಪಾಲಿಗೆ ರಾಮರಾಮ! ಆ ಉರುಟುಗಳನ್ನ ಹಾಡೋದು ತುಂಬಾನೇ ಕಷ್ಟವಾಗೋದು. ಪಾಪ ಸೀತಾಲಕ್ಷ್ಮಿಯವರು (ಮಹಿಳೆಯರ ಗುಂಪಿನವರು) ಯಾವತ್ತೂ ಯಾರ ಬಗ್ಗೆನೂ ಹಗುರವಾಗಿ ಮಾತಾಡಿದವರಲ್ಲ. ನಾವು ಹಾಡೋದನ್ನು ಕೇಳಿ ಅವರಿಗೆ ತಡ್ಕೊಳ್ಳಲಿಕ್ಕೆ ಆಗ್ಲಿಲ್ಲ, "ಸ್ವಲ್ಪ ಶುದ್ಧವಾಗಿ ಹಾಡ್ರಪ್ಪ, ಕೇಳೋಕಾಗೊಲ್ಲ" ಅಂದ್ರು. ನಾವು ಹಾಡೋದು ನೋಡಿ ನಮಗೆ ನಗು ಒಂದಡೆ ಇನ್ನೊಂದೆಡೆ ಅವಮಾನ." (ಉದ್ಧರಿತ).

1975 ರಲ್ಲಿ, ಗಣಪತಿ ಉತ್ಸವ ಮೂರು ದಿವಸ. ಗುರುಗಳು ಹೇಳಿದರು.

"ರೀ, ನೀವು ಮತ್ತು ನಾಗರಾಜ್ ಒಂದು ದಿವಸ ಹಾಡಬೇಕು."

"ನಾನೇನೋ ರಾಗಾನ ಹೇಗೊ ಒಂದು ಪ್ರತಿಭೆಯಿಂದ ಹಾಡ್ತಿದ್ದೆ. ಆದರೆ ಸಂಗೀತಕ್ಕೆ ಪ್ರತಿಭೆ ಇದ್ದರೆ ಸಾಲದು ಸಾಧನೆ ಬೇಕು."

"ಬೇಡ ಸಾರ್, ನನಗೆ ಸ್ವರ ಹಾಕೋಕೆ ಬರೋಲ್ಲ, ಲಯ ನಿಂತಿಲ್ಲ, ಅವಮಾನ ಆಗತ್ತೆ. ದಯಮಾಡಿ ಬೇಡ."

"ನಾ ಹೇಳಿದಷ್ಟು ಕೇಳಿ, ಸುಮ್ನೆ ಹಾಡಿ."

"ಅವತ್ತು ಘಟಾನುಘಟಿಗಳು ಪ್ರೇಕ್ಷಕ ವರ್ಗದಲ್ಲಿ. Serious and traditional listeners. ನಾಗರಾಜ್ ನನ್ನ ಜೊತೆ ಹಾಡುಗಾರರು. "ಅದೆ ನನಗೆ ಸ್ವಲ್ಪ ಧೈರ್ಯವಾಗಿತ್ತು" ಅಂದ್ರು ಆರ್ಕೆಪಿ. ಅಭ್ಯಾಸ ಮಾಡಿದೆವು. ನಾನು ಷಣ್ಮುಖ ಪ್ರಿಯ ರಾಗ "ಮೊಗಮ್" ಆಗಿ ಹಾಡ್ದೆ. ಹಾಗೂ ಹೀಗೂ ರಾಗ ನಾಲ್ಕು ನಿಮಿಷ ಆಯ್ತು. ಮೇಷ್ಟ್ರು ಎಂಟು ನಿಮಿಷ ವಯಲಿನ್ ಬಹಳ ಸೊಗಸಾಗಿ ನುಡಿಸಿದರು. ನಂತರ ಸಿದ್ಧಿವಿನಾಯಕಂ ಕೃತಿ ಪ್ರಾರಂಭವಾಯ್ತು. "ಸಿದ್ಧ ಯಕ್ಷ ಕಿನ್ನರಾದಿ ಸೇವಿತಂ" ನಾಗರಾಜ ಸ್ವಲ್ಪ ನೆರವಲ್ ಮಾಡಿ ಸ್ವರ ಪ್ರಾರಂಭಿಸಿದರು. ನಾನು ಸುಮ್ಮನೇ ಹ್ಯಾಗೆ ಕೂತ್ಕೊಳ್ಳೋದು? ಸ್ವರ ಪ್ರಾರಂಭಿಸಿದೆ. ಎರಡು ಆವರ್ತ ರಥ ನಡೀತು. ಆಮೇಲೆ

mind blank ಆಗೋಯ್ತು, ಬಹಳ ಬುದ್ಧಿವಂತಿಕೆಯಿಂದ "ಗಮಪದನಿ ಸಾ ಅಂತ ಷಡ್ಜದಲ್ಲಿ ನಿಂತ್ಕೊಂಡು ಕೊನೆಗೂ "ಮಗರಿ" "ಸಿದ್ಧ ಯಕ್ಷ" ತೊಗೊಂಡಾಗ ಮೇಷ್ಟ್ರಿಗೆ ನಗುವೋ ನಗು !

"ಇನ್ನೂ ಎರಡು ಆವರ್ತ ನೆಲಸಿದ್ದರೆ ಕಛೇರಿನೇ ಮುಗಿದು ಹೋಗ್ತಾ ಇತ್ತಲ್ಲ!" ಅಂತ ಅಲ್ಲೇ ತಮಾಷೆ ಮಾಡಿದ್ರು. ನನಗೋ ಸಂಕಟ. ಭಗವಂತ, ಈ ಕಾರ್ಯಕ್ರಮ ಮುಗಿದ್ರೆ ಸಾಕಲ್ಲಪ್ಪ ಅನ್ನೋಥರ ಇದ್ದೆ. ನಾಗರಾಜ ಮಧ್ಯಮಕಾಲ ಸ್ವರ ಹಾಕಿದ ನಂತರ ಮೇಷ್ಟ್ರು ಪಾಪ ತಾವೇ 10–20 ಆವರ್ತ ಸ್ವರ ಹಾಕಿ ಮುಕ್ತಾಯ ನುಡಿಸಿ ನಮ್ಮನ್ನು ಕಾಪಾಡಿದ್ರು. ನಾಗರಾಜ್‌ಗೆ ಸ್ವರಗಳ ಹರಿವು ಇತ್ತು. ಹೇಗೋ ಮುಗಿಯಿತು. ಆದರೂ ಒಂದು ಕಲೆ ಕರಗತವಾಗದೆ ವೇದಿಕೆಗೆ ಹೋದರೆ ಎಂತಹ ನರಕಯಾತನೆ ಅನ್ನೋದು ಮನವರಿಕೆ ಆಯ್ತು. ಈ ನಮ್ಮ ಪದ್ಧತಿಯ ಬಗ್ಗೆ ಇನ್ನೂ ಹೆಚ್ಚಿನ ಗೌರವ ಪ್ರಾರಂಭವಾಯ್ತು."

"ಅಂತರಂಗದಲ್ಲಿ ನನ್ನ ಹಾಡಿಕೆಯನ್ನು ನೋಡಿ ನಕ್ಕಿದ್ದರೂ, ಬಾಹ್ಯದಲ್ಲಿ ಜನ ನನ್ನನ್ನ ಹುರಿದುಂಬಿಸಿದ್ದರು."

"ಶಾರೀರ ಚೆನ್ನಾಗಿದೆ, ಚೆನ್ನಾಗಿ ಅಭ್ಯಾಸ ಮಾಡಿ".

"ಅರ್ಹತೆ ಇಲ್ಲದೇ ವೇದಿಕೆಗೆ ಬರೋದು ಒಳ್ಳೇದಲ್ಲ" ಕೆಲವರ ಅಭಿಪ್ರಾಯ.
ನನ್ನನ್ನು ನೋಡಿ ಹಾಗೇ ಒಂದು ರೀತಿ ಹಾಸ್ಯಾಸ್ಪದ ನಗೆಯನ್ನ ಬೀರಿ ಯಾವ ರೀತಿಯೂ ಪ್ರತಿಕ್ರಿಯಿಸದೆ ಜಾಗ ಖಾಲಿ ಮಾಡಿದವರು ಇನ್ನೂ ಕೆಲವರು.

"ಪಾಪ, ವೇದಿಕೆ ಎಷ್ಟು ಕಷ್ಟ ಅಲ್ಲವಾ, ಅಲ್ಲ ನಾಕಾವರ್ತ ಸ್ವರ ಹಾಡೋದು ಇಷ್ಟು ಕಷ್ಟ ಇರುತ್ತೇ ಅಂತ ನಿಮ್ಮ ಕಛೇರಿ ಕೇಳೇ ನಂಗೆ ಗೊತ್ತಾಗಿದ್ದು" ಅಂತ ಅನುಕಂಪವೋ ಅಥವಾ ಹಾಸ್ಯವೋ, ಎರಡು ಮಾತು ಹೇಳಿದ್ದವರೂ ಇದ್ದರು.

ಹೀಗೆ.. ಆಗತಾನೇ ಬಹಳ ಸೂಕ್ಷ್ಮವಾದ ಗಾನ ಸಸಿಯಾಗಿದ್ದ ನನಗೆ ಹತ್ತು ಹಲವಾರು ರೀತಿಯ ಅನಿಸಿಕೆಗಳ ಹೊಡೆತ. ಇಷ್ಟೆಲ್ಲಾ ಆದರೂ ನನ್ನ ಅಂತರಂಗದಲ್ಲಿ ಒಂದು ಧ್ವನಿ ಕೂಗಿ ಹೇಳುತ್ತಿತ್ತು:

"ಹೆದರಬೇಡ, ಮುನ್ನುಗ್ಗು, ಹೇಡಿಯಾಗಬೇಡ, ಸಾಧಿಸು, ಗೆಲುವಿನ ಬೆಳಕು ಖಂಡಿತ ಕಾಣಿಸುತ್ತೆ".

ಕಛೇರಿ ಹ್ಯಾಗೇ ಆಗಲಿ ಅಂದಿನಿಂದ ನಮ್ಮ ಮೇಷ್ಟ್ರ ಪ್ರೇರಣೆಯಿಂದ ನನ್ನ,

ನಾಗರಾಜರ ಯುಗಳ ಗಾಯನ ಪ್ರಾರಂಭವಾಯ್ತು."

1976ರಲ್ಲಿ, ಕೊಳ್ಳೆಗಾಲದಲ್ಲಿ "ನಿಜಗುಣ ಶಿವಯೋಗಿ ಸಂಗೀತೋತ್ಸವ." ಆರ್ಕೆಪಿ ಮತ್ತು ನಾಗರಾಜ್ ಅವರಿಗೂ ಮೇಷ್ಟ್ರ ಸಹಾಯದಿಂದ 15 ನಿಮಿಷ ಹಾಡುವ ಅವಕಾಶ. ಅಭ್ಯಾಸ ಜೋರಾಗೇ ನಡೀತು. ರಾತ್ರಿಯೆಲ್ಲಾ ಪಿಟೀಲು ಹಿಡ್ಕೊಂಡು ಕೂತ್ರು. ಸ್ವರಪ್ರಸ್ತಾರವೇ ಅರ್ಥವಾಗ್ತಾಯಿಲ್ಲ. ಒಂದೊಂದು ಸರಿ ಒಂದೊಂದು ರೀತಿಯ ಹಾಡುಗಾರಿಕೆ. ಆರ್ಕೆಪಿ ಜ್ಞಾಪಿಸಿಕೊಳ್ಳುತ್ತಾರೆ.

ಅಲ್ಲಿ ಶರಣ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದ ಬಸವಣ್ಣಪ್ಪ ಅನ್ನುವವರು ಇದ್ರು. ಸಾಹಿತ್ಯದ ಬಗ್ಗೆ ಕಟ್ಟುನಿಟ್ಟು. "ನಿಮ್ಮ ಸಂಗೀತದಿಂದ ನಮ್ಮ ಸಾಹಿತ್ಯ ಕೆಡ್ತದಲ್ಲಪ್ಪ. ಸ್ವಲ್ಪ ಸರಿಯಾಗಿ ಉಚ್ಚಾರ ಮಾಡಿ, ಶಬ್ದಗಳನ್ನು ಎಳೀಬೇಡಿ. ಕುಗ್ಗಿಸಬೇಡಿ" ಅಂತೆಲ್ಲಾ ಹೇಳಿ ನಮಗೆ ಹೆದರಿಸ್ತಾಯಿದ್ರು.

"ಮಾರನೆ ದಿವಸ, ನಮ್ಮ ಕಾರ್ಯಕ್ರಮ, ಯುವ ಪ್ರತಿಭೆ, ಹದಿನೈದು ನಿಮಿಷ, ಮೂರು ನಿಜಗುಣರ ಕೃತಿಗಳು. ಎದುರುಗಡೆ ಆರ್.ಆರ್.ಕೆ., ಅರ್ಧ ಸ್ಪಿರಿಟ್ ಕಡಿಮೆಯಾಯ್ತು. ಅವರು ಕೂತ್ಕೋತಾ ಇದ್ದಿದ್ದೇ ತಪ್ಪು ಹಾಡೋ ಹಾಗೆ ಮಾಡೋಕೆ ಅನ್ನೋ ಭಾವನೆ ಎಲ್ಲರಲ್ಲೂ ಇತ್ತು.

"ನಾನು ಬಂದ್ ಕೂತ್ರೆ ನಿಮ್ ಸಂಗೀತ ಅಷ್ಟೆ" ಅಂತ ಅವರೇ ಹೇಳ್ತಾ ಇದ್ರು. ಅವರ ಮುಂದೆ ಹಾಡೋಕೆ ಎದೆಗಾರಿಕೆ ಇರಬೇಕು. ಕಂಠಶ್ರೀ ತುಂಬಿರಬೇಕು. ಶೇಕಡಾ 100ರಷ್ಟು ನಂಬಿಕೆ ಇರಬೇಕು. ಸಾಮರ್ಥ್ಯ ಇರಬೇಕು. ಅಂದರೆ ಇಂಥವರ ಉಪಸ್ಥಿತಿ ಅಂದಿನ ಯುವ ವಿದ್ವಾಂಸರಿಗೆ ಒಂದು ಸವಾಲಾಗಿತ್ತು. ಇವರ ದರ್ಪ, ಗಾಂಭೀರ್ಯಗಳನ್ನೂ ಭೇದಿಸಿ "ಭಲೇ" ಎನಿಸಿಕೊಂಡರೆ ಎಲ್ಲಿ ಬೇಕಾದರೂ ಹಾಡಬಹುದಾಗಿತ್ತು. ಅಂದರೆ ಇವರೆಲ್ಲ ಯುವಕರಿಗೆ ದಾರಿದೀಪವಾಗಿದ್ದರು. ಮೇಲ್ನೋಟಕ್ಕೆ ಒರಟಾಗಿ ಕಂಡರೆ ಕಲೆಯ ವಿಷಯದಲ್ಲಿ ಇವರೆಲ್ಲಾ "ದೀಪದ ಬತ್ತಿಗಳು".

"ಎಡಗಡೆ ನೋಡಿದರೆ ಈ ಬಸವಣ್ಣಪ್ಪನವರ ಸಾಹಿತ್ಯದ ಕಾಟ, ಮುಂದೆ ನೋಡಿದ್ರೆ ವಿದ್ವಾಂಸರ ಮಹಾಪೂರ, ಹಿಂದೆ ನೋಡೋ ಹಾಗಿಲ್ಲ. ಕುರ್ಚಿಮೇಲೆ ನಮ್ಮ ಮೇಷ್ಟ್ರು. ಅವರಿಲ್ಲದೇ ಇದ್ರೆ ನಮ್ಮದೇ ಆದ ರೀತಿಯಲ್ಲಿ ಹೇಗೋ ಮುಗಿಸಬಹುದಾಗಿತ್ತು. ಅದರಲ್ಲೂ ನನ್ನ ಪರಿಸ್ಥಿತಿ ಚಿಂತಾಜನಕ. ಹಾಡಲೇಬೇಕಾಗಿದ್ದ ಅನಿವಾರ್ಯತೆ."

ಶುರುವಾಯ್ತು. ನನಗೇ ನಮ್ಮ ಹಾಡಿಕೆ. ಕರ್ಣಕಠೋರವಾಗಿ ಕೇಳಿಸ್ತಾ ಇತ್ತು.

ಬಸವಣ್ಣಪ್ಪನವರು ಸಾಹಿತ್ಯ ಕೇಳಿ ತಲೇ ಚಚ್ಕೋತಾ ಇದ್ದಾರೆ. ಈ ಕಡೆ ಆರ್.ಆರ್.ಕೆ. "ಸಾಮರ್ಥ್ಯ ಇಲ್ಲದೇ ಹೋದ್ಮೇಲೆ ವೇದಿಕೆಗೆ ಯಾಕೆ ಬರಬೇಕು" ಅಂತ ಹೇಳ್ತಾ ಇದಾರೇನೋ ಅನ್ನೋ ಹಾಗಿತ್ತು ಅವರ ಮುಖಾರವಿಂದ. ಸರಿ "ಕಮಲ ಕೋಮಲ" ಆನಂದ ಭೈರವಿ ರಾಗದ ಕೃತಿಯನ್ನ ಹಾಡಿ ಕೊನೆಗೆ ಮತ್ತೊಂದು ಯಾವುದೋ ಕೃತಿ. ಕೆಳಗಿಳಿದು ಬಂದೆವು.

ಹೊನ್ನಪ್ಪ ಭಾಗವತರು,
"ಆನಂದ ಭೈರವಿ ಬಹಳ ಚೆನ್ನಾಗಿತ್ತಪ್ಪ. ಆಹಾ, ತುಂಬಾ ಚೆನ್ನಾಗಿತ್ತು" ಎಂದರು. ಅವರ ಮಾತಿನಲ್ಲಿ ಹಾಸ್ಯಲೇಪನವಿದ್ದದ್ದನ್ನು ನಾನು ಅರಿತುಕೊಂಡೆ.

ಮೇಷ್ಟ್ರು ಶುರು ಮಾಡಿದ್ರು ಸಹಸ್ರ ನಾಮ,
"ಆನಂದಭೈರವಿಯಲ್ಲಿ ಏನ್ರೀ ಉದ್ದಕ್ಕೂ ಬರೀ ಅಂತರ ಗಾಂಧಾರಾನೇ ಹಾಡಿದ್ರಲ್ಲರೀ".

ಇದನ್ನೆಲ್ಲ ಹೇಗೋ ತಡ್ಕೊಬಹುದಾಗಿತ್ತು. ಬಸವಣ್ಣಪ್ಪನವರು "ಅಪ್ಪ ಹುಡುಗರ, ಏನಪ್ಪ ನೀವ್ ಏನ್ ಹಾಡಿದ್ರಿ, ಏನ್ ಸಾಹಿತ್ಯ ಉಚ್ಚಾರಣೆ ಮಾಡಿದ್ರಿ, ಏನೇನೂ ಗೊತ್ತಾಗ್ಲಿಲ್ಲವಲ್ಲಪ್ಪ" ಅಂತ ಬಾಣ ಬಿಟ್ರು.

ನಮ್ಮ ಹೀನಾಯ ಪರಿಸ್ಥಿತಿ ಯಾರಿಗೂ ಬೇಡ, ಹ್ಯಾಪ್ ಮೋರೆ ಹಾಕ್ಕೊಂಡು ಎಲ್ಲರನ್ನೂ ತಪ್ಪಿಸಿ ಹೊರಗೆ ಬಂದಿದ್ದಾಯಿತು. ಹೀಗೆ ಅಲ್ಲಿಯ ಸಂಗೀತದ ಹೂರಣದ ಸವಿಯೂಟ ಒಂದಡೆ ಆದ್ರೆ, ವೈಯಕ್ತಿಕವಾಗಿ ನನ್ನ ಸಂಗೀತದ ಕಹಿಯ ರೂಪಗಳ ಊಟ ಮಾಡಿದ್ದಾಯಿತು. ಇವೆಲ್ಲ ಬದುಕಿನ ಬೆಳವಣಿಗೆಗೆ ಒಳ್ಳೆಯ ಆಹಾರ ಎನ್ನುವುದು ಸತ್ಯ ಎಂಬುದನ್ನು ಅರಿತುಕೊಂಡೆ". (ಉದ್ಧರಿತ).

ವಿದ್ವಾಂಸರಿಂದ ಆರಂಭವಾಗಿದ್ದ ಗಾನಕಲಾಪರಿಷತ್ತಿನ ಸ್ಥಾಪಕರಲ್ಲಿ, ಎಚ್.ವಿ.ಕೃಷ್ಣಮೂರ್ತಿಗಳೂ ಒಬ್ಬರಾದ್ದರಿಂದ, ಪದ್ಮನಾಭರು ಮತ್ತು ಡಿವಿ ನಾಗರಾಜನ್ ಅವರಿಗೆ ಯುಗಳ ಗಾಯನವನ್ನು ಹಾಡುವ ಅವಕಾಶ. ಆದರೆ, ಇವರು ಕಲಿತಿದ್ದು 8–10 ಕೀರ್ತನೆಗಳು. ಅದರಲ್ಲೆ ಆಟ ಆಡೋರು. ಸ್ವಲ್ಪಸ್ವಲ್ಪವೆ ಧೈರ್ಯ ಬರತೊಡಗಿತು. ಮನಸ್ಸಿನಲ್ಲಿ ನೋವೂ ಇತ್ತು. ಪೂರ್ತಿ ನ್ಯಾಯಾ ಮಾಡ್ತಾಯಿಲ್ಲ; ಸಂತೆಗೆ ಮೂರುಮೊಳ ಆಗ್ತಾಯಿದೆ ಅಂತ.

ಗಾಂಧಿಬಜಾರ್‌ನಲಿದ್ದ ಅಯ್ಯನಾರ್ ಸಂಗೀತ ಕಾಲೇಜಿನಲ್ಲಿ ಶುಕ್ರವಾರದ ಕಛೇರಿಯಲ್ಲಿ ಹಾಡೋಕ್ಕೆ ಎಲ್ಲರೂ ಇಷ್ಟಪಡ್ತಾಯಿದ್ರು. ಶ್ರದ್ಧೆಯಿಂದ ಭಾಗವಹಿಸುವರು. ಸಂಭಾವನೆ ಕೇಳುತ್ತಿರಲಿಲ್ಲ. ಇಲ್ಲಿ ಕಛೇರಿ ಕೇಳುವಾಗಲೆಲ್ಲಾ

ಪದ್ಮನಾಭ್ ತಮ್ಮನ್ನು ತಾವು ವಿಶ್ಲೇಷಣೆ ಮಾಡಿಕೊಳ್ಳಲು ಆರಂಭಿಸಿದರು. ಅನಿಸಿತ್ತು, "ಶಾರೀರ ಚೆನ್ನಾಗಿದ್ದರೂ ಅದಕ್ಕೆ ಸರಿಯಾದ ಸಂಸ್ಕರಣವಾಗಿರಲಿಲ್ಲ. ಶ್ರುತಿಗೂ ಶಾರೀರಕ್ಕೂ ಅಷ್ಟಕಷ್ಟೆ. ಪಂಚಮ–ತಾರಾಷಡ್ಜ ಸೇರ್ತಾನೇ ಇರಲಿಲ್ಲ. ಮಿಕ್ಕಿದ ಸ್ವರಗಳು ಸೇರುತ್ತಿವೆಯಾ ಇಲ್ಲವಾ ಗೊತ್ತಾಗುತ್ತಿರಲಿಲ್ಲ. ಹೀಗೆ ನನ್ನ ಸಂಗೀತವನ್ನು ನಾನೇ ಅನುಭವಿಸುವ ಸ್ಥಿತಿಯಲ್ಲಿ ಇರಲಿಲ್ಲ" ಅನ್ನುತ್ತಾರೆ ಆರ್ಕೆಪಿ.

ಆಗಾಗ ಸಣ್ಣಪುಟ್ಟ ಕಛೇರಿಗಳನ್ನು ಮಾಡ್ತಾಯಿದ್ರು ಇಬ್ಬರೂ ಕೂಡಿ. ಸಂಗೀತ ಕಾಲೇಜಿನ ಕಾರ್ಯಕ್ರಮಗಳಲ್ಲಿ, ಪದ್ಮನಾಭರದೆ ಓಡಾಟ. ತ್ಯಾಗರಾಜ ಆರಾಧನೆಗಳ ವ್ಯವಸ್ಥೆಯೂ ಇವರದೆ, ಅತ್ಯುತ್ತಮ ಸಂಘಟಕರು. ಕಛೇರಿ ಮಾಡುತ್ತಿರುವ ಈ ಯುವಕರಿಗೆ ಕೆಲವು ಸಲ ಪೀಕಲಾಟ. "ಓ ! ಪದ್ಮನಾಭ್ ಬನ್ನಿ ಬನ್ನಿ, ಪಂಚರತ್ನ ಪ್ರಾರಂಭಿಸಬೇಕು" ಇವರಿಗೋ ಹೇಳೋ ಹಾಗಿಲ್ಲ, ಕೂರೋ ಹಾಗಿಲ್ಲ, ಓಡಾಡೋ ಹಾಗಿಲ್ಲ.

"ಏನಿದು, ಇಷ್ಟು ಕ್ಲಿಷ್ಟವಾದ, ಈ ಕಗ್ಗದ ಕೃತಿಗಳನ್ನು ಹಾಡ್ತಾರಲ್ಲಾ, ಏನಿದೆ ಇದರಲ್ಲಿ ಸಾಕಪ್ಪಾ" ಅನ್ನಿಸ್ತಿತ್ತು. ಪಂಚರತ್ನದ ಸಮಯದಲ್ಲಿ ಅಡಿಗೆಯವರ ಜೊತೆ ಹರಟೆ, ಅಲ್ಲಿ ಇಲ್ಲಿ ಓಡಾಟ. ಆದರೆ ಅಂತರಂಗದಲ್ಲಿ ನೋವಿನ ಮೂಟೆ. ಕೆಲವರು ಬೇಕಂತಲೆ,
"ಏನ್ ಪದ್ಮನಾಭರೆ, ಪಂಚರತ್ನ ಬರೋಲ್ವೇ, ಚೆನ್ನಾಯ್ತು, ಆಗಲೇ ಕಛೇರಿ ಬೇರೆ ಮಾಡ್ತಿರಲ್ಲಾ."

"ಹೀಗೆ ಅನೇಕ ರೀತಿಯ ಅವಮಾನ ಆದ ಪ್ರಸಂಗಗಳು ಬೇಕಾದಷ್ಟಿವೆ. ಸುಂದರವಾದ ಶಿಲ್ಪವು ಕಲ್ಲಿನಲ್ಲಿ ಮೂಡಲು ಬೇಕೇ ಬೇಕು ನೂರಾರು ಚಾಣದ, ಸುತ್ತಿಗೆ ಏಟುಗಳು."

ಒಮ್ಮೆ ಹಿಂತಿರುಗಿ ವಾದಿರಾಜರ ಚಿತ್ರಕ್ಕೆ ನಮಿಸಿ, ಕೇಳಿದರು
"ಕಾಫೀ ಕುಡಿತೀರಾ"
"ಹ್ಞೂ.. ನಂಗೆ ಸಕ್ಕರೆ ರಹಿತ" ಅಂದರು ಗುರುಪ್ರಸಾದ್. ನಂಗೆ ಕಾಫಿಚಟ ನನ್ನ ಅಮ್ಮನಿಂದ ಬಂದಿದ್ದು..

ಆರ್ಕೆಪಿ ಹೇಳಿದ್ರು "ವಿಶ್ವ ಗೊತ್ತಿಲ್ವಾ"
"ಯಾರಿಗೆ ಗೊತ್ತಿಲ್ಲ, ಜಿಆರ್‌ವಿ ಅಲ್ವಾ"

"ಹೌದು, ನಮ್ಮ ಸಹೋದ್ಯೋಗಿ, ನಮ್ಮ ಹೆಮ್ಮೆಯ ಜಿ.ಆರ್.ವಿಶ್ವನಾಥ್. ಇಲ್ಲೆ ಜಯನಗರದಲ್ಲಿ ಇದ್ದಾರೆ. 1969ರ ಕಾನ್ಪುರ ಟೆಸ್ಟ್‌ನಲ್ಲಿ, ಮೊದಲ ಇನ್ನಿಂಗ್ಸ್‌ನಲ್ಲಿ

"ಶೂನ್ಯ ಸಂಪಾದನೆ" ಮಾಡುದ್ರು. ಎಲ್ಲರೂ ವಿಶ್ವನ್ನ write off ಮಾಡಿದ್ರು. ಆದರೆ, ನಮ್ಮ ವಿಶ್ವ ಎರಡನೆ ಇನಿಂಗ್ಸ್‌ನಲ್ಲಿ ಶತಕ ಬಾರಿಸಿದರು. ಅನಂತರ "ಮೊದಲ ಟೆಸ್ಟ್‌ನಲ್ಲಿ ಶತಕ ಬಾರಿಸಿದವರು ಮತ್ತೆ ಶತಕ ಹೊಡಿಯೊಲ್ಲ ಅನ್ನುವ ಶಾಪವಿಮೋಚನೆ ಮಾಡಿದರು. ಅವರ ಜೊತೆ ಕೆಲಸ ಮಾಡಿದ್ದು ನನಗೆ ಹೆಮ್ಮೆ ಹಾಗೂ ಸ್ಫೂರ್ತಿ. ಅವರು ನನಗೆ ತೋರುಗಂಬ...

19
ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ

ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ
ನಾದಮೂರ್ತಿ ನಿನ್ನ ಪಾದ ಮೋದದಿಂದ ಭಜಿಸುವೆನು

ಕರ್ನಾಟಕವು ಬಹುಪುಣ್ಯಭೂಮಿ. ಒಂದೆಡೆ ಕೆಂಪಾದರೆ ಮತ್ತೊಂದೆಡೆ ಕಪ್ಪು ಮಣ್ಣು, ಒಂದೆಡೆ ಕಾವೇರಿಯಾದರೆ ಮತ್ತೊಂದೆಡೆ ಕೃಷ್ಣೆ. ಪ್ರಪಂಚದ ಮೇರು ಅಧ್ಯಾತ್ಮತತ್ತ್ವಗಳಾದ ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳ ಸಂಗಮಸ್ಥಳ. ವಚನಕಾರರು, ಹರಿದಾಸರುಗಳು, ತತ್ತ್ವಪದಕಾರರು ಮೊದಲಾದ ಜ್ಞಾನ ಪಿಪಾಸುಗಳ ಆಡುಂಬೊಲ. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತಗಳನ್ನು ವಿಪುಲವಾಗಿ ಬೆಳೆಯಿಸಿದ ಸಂಸ್ಕಾರವಂತರ ನಾಡು.

ಸಂಗೀತದ ಕಲಿಕೆಯ ದಾಹವೆಂಬುದೊಂದು ಹುಚ್ಚು. ಹತ್ತಿದರೆ ಬಿಡುವುದಿಲ್ಲ. ನಿಮಗೆ ಗೊತ್ತಿರಬೇಕು, ಗುರುರಾಜರು, ಗದುಗಿನ ರೋಣದ ಹೊಂಬಳದವರು, ಅವರ 16 ಮಕ್ಕಳಲ್ಲಿ ಹಿರಿಯ ನಮ್ಮ ಭೀಮಣ್ಣ. 11ನೆಯ ವಯಸ್ಸಿಗೆ ಸಂಗೀತ ಕಲಿಯಲಿಕ್ಕೆ ಮನೆ ಬಿಟ್ಟು ಮುಂಬಾಯಿಗೆ ಹೋದ. ಹಸಿವು, ನೀರಡಿಕೆ. ಫುಟ್‌ಪಾತಿನಲ್ಲಿ ಮಲಗಿದ. ವಾಪಸ್ಸು ಬಂದ. ಮತ್ತೆ ಗ್ವಾಲಿಯರ್‌ಗೆ ಓಡಿದ. ಅಲ್ಲಿ ಸಂಗೀತ ಕಲಿಸಿದ ಗುರು ಪಂಡಿತ್ ವಿನಾಯಕ್ ಪಟವರ್ಧನ್ ಹೇಳಿದರು,
"ಮಗೂ ನೀನು ಕುಂದಗೋಳಕ್ಕೆ ಹೋಗು, ಸವಾಯಿ ಗಂಧರ್ವರಿದ್ದಾರಲ್ಲಾ".

ಹಿಂತಿರುಗಿದ ಭೀಮಣ್ಣ ಹಿಂತಿರುಗಿ ನೋಡಲಿಲ್ಲ. ತಂದೆ ಗುರುರಾಜ ಜೋಶಿಯವರು ಇಟ್ಟ ತೊಡರುಗಾಲುಗಳನ್ನು ಸಂಗೀತದ ಶಕ್ತಿಯಿಂದ ಗೆದ್ದರು. ಕೊನೆಗೆ ತಂದೆಯೇ "ನಾದಪುತ್ರ ಹುಟ್ಟಿದ" ಅನ್ನುವ ಪುಸ್ತಕ ಬರೆದು ಮಗನನ್ನು ಸನ್ಮಾನಿಸಿದರು. ನಿಮಗಿವರು ಗೊತ್ತು, ನಮ್ಮ ಹೆಮ್ಮೆಯ ಪಂಡಿತ ಭೀಮಸೇನ ಜೋಶಿ (1922 – 2011). "ಭಾರತರತ್ನ" ಪ್ರಶಸ್ತಿ ಪಡೆದ ಕರ್ನಾಟಕದ ಹಿಂದೂಸ್ತಾನಿ ಗಾಯಕರು ಸಂಗೀತಗಾರರು.

"ಹುಡುಗಾಟವಲ್ಲ, ತಿಣುಕಾಟದ ನಡುವೆ ಹುಡುಕಾಟದ ಛಲವಿರಬೇಕು". ಥಾಮಸ್ಸ್ ಆಲ್ವಾ ಎಡಿಸನ್ ವಿದ್ಯುತ್ತಿನ ಬಲ್ಬ್ ಕಂಡು ಹಿಡಿಯುವ ಮುನ್ನ ನೂರಾರು ವೈಫಲ್ಯಗಳನ್ನು ಕಂಡ. ಆದರೆ ಅವನೆನ್ನುತ್ತಾನೆ, "ನೂರುಬಾರಿಯೂ ನಾನು ಹೊಸತನ್ನೆ ಕಂಡೆ", ಸೋಲುಗಳೆಲ್ಲಾ ಗೆಲುವಿನ ಮೆಟ್ಟಿಲುಗಳೇ ಆಗಿವೆ.

ಆರ್ಕೆಪಿ ಅಂದರು, "ಭೀಮಸೇನರ ಛಲವನ್ನು ನೋಡು. ಎಡಿಸನ್ ಆಗುವುದಿಲ್ಲ ಅಂದುಬಿಟ್ಟಿದ್ದರೆ ವಿದ್ಯುತ್ತಿನ ಬಲ್ಬ್ ಸಿಗುತ್ತಿತ್ತೆ. ಕಲಿಯುವ ಸಾಧಿಸುವ ಮನಸ್ಸಿದ್ದರೆ ಕಡಲೂ ಹಾದಿ ಬಿಡುತ್ತದೆ. ನಾನು ಎಚ್‌ಎಎಲ್ ಶಾಖೆಗೆ ಹೋಗುತ್ತಿದ್ದಾಗ, ಬೆಳಗ್ಗೆ ಮೂರು ಗಂಟೆಗೆ ಏಳುತ್ತಿದ್ದೆ. ಸಾಧನೆ ಮಾಡುತ್ತಿದ್ದೆ. ಶಾರೀರ ಸಂಸ್ಕರಣ ಸುಮ್ಮನೆ ಆಗುವುದಿಲ್ಲ. ಸಾಣೆ ಹಿಡಿಯಬೇಕು. ಏಳು ಗಂಟೆಗೆ, ಗುಬ್ಬಚ್ಚಿ ಸ್ನಾನ ಮಾಡಿ, ಎಷ್ಟೊ ಬಾರಿ, ಎಚ್‌ಎಎಲ್ ಬಸ್ಸಿನಲ್ಲಿ ಶರಟು ಹಾಕಿಕೊಳ್ಳುತ್ತಿದ್ದೆ."

"ಜನ ಸಂಪರ್ಕ, ಅವರಿಗೆ ಪ್ರಿಯವಾದ ಕೆಲಸ." 1977ರಲ್ಲಿ ಜಯನಗರ ಟಿ ಬ್ಲಾಕ್ ಶಾಖೆಗೆ ವರ್ಗವಾಗಿ ಬಂದರು. Split hour ಕೆಲಸ. ಮಧ್ಯಾಹ್ನದ ವೇಳೆಯಲ್ಲಿ ಗ್ರಾಹಕರ ಮನೆಗೆ ಹೋಗಿ ಸೇವೆ. ಡಾ.ವಿಕೆಆರ್‌ವಿ ರಾವ್, ದಿ ಹಿಂದೂ ಪತ್ರಿಕೆಯ ಪ್ರಹ್ಲಾದ ರಾವ್ ಮುಂತಾದ ಗೌರವಾನ್ವಿತ ಗ್ರಾಹಕರು. ಒಮ್ಮೆ ಹಿಂದೂ ಪತ್ರಿಕೆಯಲ್ಲಿ ಬಹಳ ಅಭಿಮಾನದಿಂದ ಆರ್ಕೆಪಿ ಬಗ್ಗೆ ಬರೆದಿದ್ದರು. ಒಳ್ಳೆಯ ಮಾತು, ನಡವಳಿಕೆಗಳಿಂದ ಯಾರ ಹೃದಯವನ್ನಾದರೂ ಪ್ರವೇಶಿಸಬಹುದೆಂಬ ಸತ್ಯ ಅರಿವಿಗೆ ಬಂತು.

21–08–1978ರಲ್ಲಿ ಮದುವೆಯಾಯಿತು. ಹುಡುಗಿ, ರುದ್ರಪಟ್ಟಣದ ವೆಂಕಟರಮಣ ಶಾಸ್ತ್ರಿಗಳ ಮೊಮ್ಮಗಳು ವಿಜಯಲಕ್ಷ್ಮಿ. ಪದ್ಮನಾಭರ ಸಂಗೀತದ ಗೀಳನ್ನು ಒಪ್ಪಿಕೊಂಡು, "ಜವಾಬ್ದಾರಿಯಿಂದ ಸಂಸಾರವನ್ನು ಸಾರವತ್ತಾಗಿಸಿ ಸುಖದಾಂಪತ್ಯದ ದೀಪವನ್ನು ಬೆಳಗುತ್ತಿರುವ ಆಕೆಗೆ ನಾನು ಋಣಿ" ಅನ್ನುತ್ತಾರೆ ಆರ್ಕೆಪಿ.

1979ರ ವೇಳೆಗೆ, ಡಿ.ವಿ. ನಾಗರಾಜ್ ಅವರ ಜೊತೆ ಕೂಡಿ ಕಛೇರಿಗಳನ್ನು ಮಾಡುತ್ತಿದ್ದರು. ಪ್ರತಿ ಕಛೇರಿಯೂ ಕಲಿಕಯೆ ತಾಣ. "ಕೃಷ್ಣ ಸಂಗೀತ ಸಭೆ"ಯಲ್ಲಿ ಒಂದು ಕಛೇರಿ. ನಡುಕ ಹೋಗಿರಲಿಲ್ಲ. ಅಂದಿನ ಪ್ರಸಿದ್ಧ ಸಂಗೀತ ವಿಮರ್ಶಕರಾದ ಬಿವಿಕೆ ಶಾಸ್ತ್ರಿಗಳು ಬಂದಿದ್ದರು. ಇವರ ಗಾಬರಿ ಹೆಚ್ಚಾಯಿತು.

ಪದ್ಮನಾಭರು ಅಂದ್ರು "ಆನಂದಭೈರವಿ ರಾಗದ "ಪಾಹಿಶ್ರೀ ಗಿರಿರಾಜಸುತೆ" ಆಗತಾನೆ ಪಾಠ ಆಗಿತ್ತು. ಅದನ್ನೆ ಹಾಡೋಣ ಅಂತ ನಿರ್ಧರಿಸಿದೆವು. ಆನಂದ ಭೈರವಿ ಹಾಡೋವಾಗ, ರೀತಿಗೌಳದ ಛಾಯೆಗಳು ಬರೋದಕ್ಕೆ

ಪ್ರಾರಂಭವಾಯಿತು. ಪಿಟೀಲು ವಾದಕರಿಗೆ ಏನು ನುಡಿಸಬೇಕು ಅಂತ ಅರ್ಥವಾಗ್ತಾ ಇರಲಿಲ್ಲ. ನಾವು "ಪಾಹಿ ಶ್ರೀ" ಹಾಡ್ತೀವಿ ಅಂತ ತಿಳಿದಿದ್ದರಿಂದ ಆನಂದಭೈರವೀನೇ ಹಾಡಬೇಕಾದ್ದು ಅಂತ ಖಚಿತ ಮಾಡ್ಕೊಂಡು ಆಗಾಗ್ಗೆ ಆ "ಪದಪಸಾ" ಪ್ರಯೋಗವನ್ನು ತೂರಿಸ್ತಾ ಬಂದ್ರು. ನಾನು ಆ ಜಾಡನ್ನೇ ಹಿಡಿದು ಅಂತೂ ಇಂತೂ ಆನಂದಭೈರವೀ ರಾಗವನ್ನು ಮುಗಿಸಿದೆ. ಆ ಕೃತಿಯಲ್ಲಿ ಸಂದರ್ಭೋಚಿತವಾಗಿ ಅಂತರಗಾಂಧಾರ ಪ್ರಯೋಗವಿದೆ. "ಗಗಮಾ" ಹಾಡೋವಾಗ ಕೆಲವು ಸಂದರ್ಭಗಳಲ್ಲಿ ಅಂತರಗಾಂಧಾರ ಹಾಡ್ಬೇಕು, ಕೆಲವು ಸಂದರ್ಭಗಳಲ್ಲಿ ಸಾಧಾರಣ ಗಾಂಧಾರವನ್ನೇ ಪ್ರಯೋಗ ಮಾಡಬೇಕಾಗುತ್ತೆ. ಇದರ ವಿವೇಚನೆ ಇರಬೇಕು. ನನಗೆ ಮನಸ್ಸಿಗೆ ತುಂಬಾ ನೋವಾಯ್ತು. ಅಂದು ಶಂಕರಾಭರಣ ಪ್ರಮುಖರಾಗ. ರಾಗವನ್ನೂ ಸ್ವಲ್ಪ ತಾನವನ್ನೂ ಹಾಡಿ ಖಂಡ ಝಂಪೆ ತಾಳ(9 ಅಕ್ಷರ ಎಡುಪು)ದ "ಏಲ ನೀ ದಯರಾದಾ" ಎಂಬ ಒಂದು ಪಲ್ಲವಿಯನ್ನು ನಿರ್ವಹಿಸಿದ್ದಾಯಿತು.

"ವ್ಯವಸಾಯ ಮಾಡಬೇಕಪ್ಪ. ಶಾರೀರವೇ ಸಂಗೀತವಲ್ಲ, ಮನೋಧರ್ಮ ಬೆಳೀಬೇಕು, ಸಂಗೀತ ಶಾಸ್ತ್ರ ಸಮ್ಮತವಾಗಿರಬೇಕು", ಅನ್ನುವ ಮಾತು ಕೆಲ ಪ್ರೇಕ್ಷಕರದು.

ಏನೇ ಆಗಲಿ, we are the best judges; ನಮ್ಮ ಸಂಗೀತವನ್ನು ನಾವೇ ಅವಲೋಕನ ಮಾಡ್ಕೋಬೇಕು. ಯಾವುದು ಚೆನ್ನು. ಯಾವುದು ಅಲ್ಲ ಅನ್ನೋದು ನಮಗೆ ಅರಿವಾಗಬೇಕು. ಆ ಕಛೇರಿ ನನಗೆ "eye opener." ನನ್ನ ಬದುಕಿನಲ್ಲಿ ಆನಂದಭೈರವಿ ಪ್ರಯೋಗ, ಮತ್ತೊಮ್ಮೆ ತಪ್ಪನ್ನು ಮಾಡಬಾರದು ಅನ್ನೋ ಪ್ರಜ್ಞೆ, ಛಲ ನನ್ನಲ್ಲಿ ಮೂಡಿಬಂದದ್ದು. ಆ ಕಛೇರಿಯಿಂದಲೇ ಮಾನ್ಯ ಬಿ.ವಿ.ಕೆ.ಯವರು Deccan Herald ನಲ್ಲಿ ಒಂದು ವಿಮರ್ಶೆ ಬರದ್ರು. ಅವರ ದೊಡ್ಡ ಗುಣ, ನಮ್ಮ ಪುಣ್ಯ. ಅಲ್ಲಿ ಆದ ಪ್ರಮಾದವನ್ನು ಅವರು ಪ್ರಸ್ತಾಪಿಸದೆ ಎರಡುಮಾತು ಬರೆದರು. ಹಿರಿಯ ವ್ಯಕ್ತಿ".

ಒಮ್ಮೆ ಹೀಗಾಯ್ತು. ಪುಟ್ಟ ಸಭೆ. ಬ್ಯಾಡ್ಮಿಂಟನ್ ಸ್ನೇಹಿತರೆಲ್ಲಾ ಸೇರಿದ್ದರು. ಸಂಗೀತದ ವಿಚಾರ ಬಂತು. ಒಬ್ಬರು ಹಾಡಿದರು. ಆಗ ಮತ್ತೊಬ್ಬ

"ಏ, ನಮಗೇನು ಗೊತ್ತಾಗೋಲ್ಲ ಅಂತ ಏನೇನೋ ಹಾಡ್ಬೇಡಾ, ಪದ್ಮನಾಭ ಇಲ್ಲೇ ಇದ್ದಾನೆ" ಅಂತ ತಮಾಷೆಗಾಗಿ ಹೇಳಿದ.
ತಕ್ಷಣ ಆ ವ್ಯಕ್ತಿ

"ಅಯ್ಯೋ ಬಿಡು, ಪದ್ಮನಾಭನಿಗೆ ಏನು ಸಂಗೀತ ಗೊತ್ತಿದೆ ಅಂತ ನನಗೂ ಗೊತ್ತಿದೆ"

ಅಂತ ಬಹಳ ಹಾಸ್ಯಾಸ್ಪದವಾಗಿ ನನ್ನನ್ನು ನೋಡುತ್ತಲೇ ಹೇಳಿದರು. ಸತ್ಯವಿರಬಹುದು ಸುಳ್ಳಿರಬಹುದು. ಆದರೆ ಸಭೆಯಲ್ಲಿ ಈ ರೀತಿ ಹೇಳಬಾರದಿತ್ತು. ಅಹಂಕಾರ ಅನ್ನುವ ಪೆಡಂಭೂತ ಎಂಥವರನ್ನೂ ಕಾಡುತ್ತದೆ. ಅವರ ಮಾತುಗಳು ಪದ್ಮನಾಭರಿಗೆ ಈಟಿಯ ಏಟುಗಳಾಗಿತ್ತು. ಆರ್ಕೆಪಿ ಹೇಳುತ್ತಾರೆ, "ನನ್ನ ಅಂತರಂಗದ ಛಲ ಚೈತನ್ಯವಾಗಿ ಸೆಟೆದು ನಿಂತಿತು. ಯಾವ ಸ್ನೇಹಿತ ಈ ರೀತಿ ಹಾಸ್ಯಾಸ್ಪದವಾಗಿ ಮಾತಾಡಿದನೋ ಅವನೇ ಬಂದು ನನಗೆ ನಮಸ್ಕಾರ ಮಾಡೋ ಹಾಗೆ ನಾನು ಜ್ಞಾನ ಸಂಪಾದನೆ ಮಾಡ್ಬೇಕು, ನನ್ನ ಸಂಗೀತದ ಮಟ್ಟ ಹಾಗಾಗ್ಬೇಕು, ಅದಕ್ಕಾಗಿ ನಾನು ಏನು ಬೇಕಾದರೂ ಮಾಡೋಕೆ ಸಿದ್ಧ ಅನ್ನುವ ಸಂಕಲ್ಪವನ್ನು ತೆಗೆದುಕೊಂಡೆ. ಅಂದಿನಿಂದಲೇ ಪ್ರಾರಂಭವಾಯಿತು, ನನ್ನ ಚಿಂತನಾ ಚಿಲುಮೆಯ ಪ್ರಕ್ರಿಯೆ. ನಾನು ಮೊದಲು ಪ್ರಾರಂಭಿಸಿದ ಸಾಧನೆ ನನ್ನ "ಶಾರೀರ ಸಂಸ್ಕರಣ." ನಮ್ಮ ಬದುಕಿನಲ್ಲಿ ಕೆಲವೊಮ್ಮೆ ಅವಹೇಳನವೇ ವರವಾಗಿ ಪರಿವರ್ತನೆ ತರುತ್ತದೆ ಎಂಬುದಕ್ಕೆ ನಾನೇ ಉದಾಹರಣೆ"

1980ರಲ್ಲಿ, "ತ್ಯಾಗರಾಜ ಗಾನ ಸಭಾ"ದಲ್ಲಿ ಆರ್ಕೆಪಿ – ನಾಗರಾಜ್ ಕಛೇರಿ. ಸಂತೋಷ ಹೆದರಿಕೆ ಮತ್ತು ಸವಾಲು ಮತ್ತೆ ಎದುರಾಯಿತು. ಚಿಂತಲಪಲ್ಲಿ ರಾಮಚಂದ್ರರಾಯರು, ಆರ್.ಆರ್. ಕೇಶವಮೂರ್ತಿಗಳು ಬರುವವರಿದ್ದರು. ಸುಮ್ಮನೆ ಕೇಳಿ ಹೋಗುವವರಲ್ಲ. ನೇರವಾಗೇ ವಿಮರ್ಶೆಯನ್ನು ಹೇಳುವ ಪರಿಪಾಠದವರು. ಏನಾದರೂ ಹೊಸರೀತಿಯಲ್ಲಿ ಈ ಕಛೇರಿ ಮಾಡ್ಬೇಕು ಅಂತ ಆರ್ಕೆಪಿ, "ವೀರಿಬೋಣಿ" ಭೈರವಿ ವರ್ಣವನ್ನು ಮಿಶ್ರ ನಡೆಯಲ್ಲಿ ಹಾಡಲು ನಿರ್ಧರಿಸಿದರು. ಒಂದು ತಿಂಗಳು ಅದಕ್ಕಾಗಿ ಶ್ರಮ. ವೀರಿಬೋಣಿ ಸ್ವಾಧೀನವಾಯ್ತು. ಸಾಧನೆಯ ಈ ಪ್ರಕ್ರಿಯೆಯಲ್ಲಿ ಹಳೇ ಮಹಾನ್ ವಿದ್ವಾಂಸರ ಸಂಗೀತವನ್ನೂ ಪ್ರತಿದಿನ ಎರಡು ಗಂಟೆಗಳ ಕಾಲ ಕೇಳುವ ಒಂದು ಅಭ್ಯಾಸವನ್ನು ಬೆಳೆಸಿಕೊಂಡರು.

ಪದ್ಮನಾಭ ನೆನಪಿಸಿಕೊಂಡರು, (ನೆನಪಿನಂಗಳದಲ್ಲಿ ಕೃತಿಯಿಂದ) "ನನ್ನ ಅದೃಷ್ಟಕ್ಕೆ ನನ್ನ ಸ್ನೇಹಿತರೊಬ್ಬರು ನನಗೆ "ಆಲತ್ತೂರ್ ಸಹೋದರ"ರ ಒಂದು live recording ಕೊಟ್ಟರು. ನನ್ನ ಹತ್ತಿರ ಆಗ cassette player ಇರಲಿಲ್ಲ. ಎದುರು ಮನೆಯಿಂದ ತೆಗೆದುಕೊಂಡು ಬಂದು ಕೇಳುತ್ತಿದ್ದೆ. ಅಲತ್ತೂರ್ ಸಹೋದರರಲ್ಲಿ ಒಬ್ಬರಾದ (ಸುಬ್ರಹ್ಮಣ್ಯಂ) ಅವರ ತೋಡಿ ರಾಗವನ್ನು ಕೇಳಿದೆ. ಮೈ ರೋಮಾಂಚನವಾಯಿತು. ಆಹಾ! ಸಂಗೀತಾಂದ್ರೆ ಇದು, ಶಾರೀರ ಅಂದ್ರೆ ಇದು, ನುಡಿಕಾರ ಅಂದ್ರೆ ಇದು, ಗಾಂಭೀರ್ಯ ಅಂದ್ರೆ ಇದು, ಶುದ್ಧತೆ ಅಂದ್ರೆ ಇದು ಅನ್ನಿಸ್ತು.

ಅವರು ಹಾಡಿದ "ದಾಚುಕೋವಲೀನಾ" ಕೃತಿಯನ್ನು ಕೇಳಿದೆ. ಅಬ್ಬಬ್ಬಾ ಏನು ಹಾಡುಗಾರಿಕೆ. ಏನು precision. ಇಬ್ಬರೂ ಕೃತಿಯನ್ನು ಸಿಗಿದು ಹಾಡಿದ್ದರು. ಸಿಂಹ ಗರ್ಜನೆ. ನೆರವಲ್, ಅಬ್ಬಬ್ಬ ಆ ವೇಗಕ್ಕೆ ಆ ಸ್ಫುಟತೆ, ಸ್ಪಷ್ಟತೆ "incredible".

ಲಾಲ್ಗುಡಿಯವರ ವಯಲಿನ್ ಎಂದರೆ ಕೇಳಬೇಕೆ, ಏನ್ ಹಾಡಿದ್ರೂ ಅದರ carbon copy ಲಾಲ್ಗುಡಿಯವರ ವಯಲಿನ್. ಅಸಾಧಾರಣ ಪುರುಷ. ಪಕ್ಕವಾದ್ಯ ಚಕ್ರವರ್ತಿ. ಪಾಲ್ಘಾಟ್ ಮಣಿ ಅಯ್ಯರ್ ಅವರ ಮೃದಂಗ, ರಾಮರಾಮ! ಎಂತಹ ಮೃಷ್ಟಾನ್ನ, ಮಣಿಯವರ ಮೃದಂಗದ ಸೊಗಸು ವರ್ಣನಾತೀತ. ಆ ನಾದವೇ ವಿಶೇಷ. ಆ following skill ಅದ್ಭುತ. ಸುಮಾರು 100 ಸಾರಿ ಕೇಳಿರಬಹುದು. ಈಗಲೂ ಕೇಳ್ತೀನಿ. ಇನ್ನೂ ಕೇಳಬೇಕು ಅನ್ನಿಸುತ್ತೆ. It can never become stale. ಇದೇ ನಿಜವಾದ ಸಂಗೀತ ದರ್ಶನ. ಅವರ ಗಾಯನಕ್ಕೆ ಮಾರುಹೋದೆ. ಸುಮ್ಮನೆ ಕೇಳುವುದೇ ನನಗೆ ಪರಿಪಾಠವಾಯಿತು.

ಆ ಹೊತ್ತಿಗಾಗಲೇ ನಾನು ಸಂಗೀತದ ವರ್ಣಮಟ್ಟನ್ನೂ ಬರೆಯುವಂತಹ ಅಭ್ಯಾಸವನ್ನು ಬೆಳೆಸಿಕೊಂಡಿದ್ದೆ. ಅಷ್ಟು ಸಾರಿ ಕೇಳಿದ್ದರಿಂದ ಪ್ರತಿ ಸಂಗತಿಯೂ ನನಗೆ ಬಾಯಿಗೆ ಬಂದಿತ್ತು. ಅದಕ್ಕೆ ಸರಿಯಾದ notation ಬರೆದು, ನಾಗರಾಜರನ್ನು ಕರೆದು ಈ ಕೃತಿಯನ್ನು ಹೇಳಿಕೊಟ್ಟೆ. ತ್ಯಾಗರಾಜ ಗಾನ ಸಭೆಗೆ ಇದನ್ನೇ ಪ್ರಧಾನವಾಗಿ ಹಾಡಬೇಕೆಂದು ನಿರ್ಧರಿಸಿದೆವು.

ಅಂದು ಭಾನುವಾರ ಬೆಳಗಿನಿಂದಲೇ tension, ಊಟ ಸರಿಯಾಗಿ ಸೇರಲಿಲ್ಲ. ಯಾವತ್ತೂ ಇಲ್ಲದ ಮೈಕೈ ನೋವು ಆವತ್ತೇ, ಏನೋ ಆಲಸ್ಯದ ಅನುಭವ. ಅಂತೂ ನಾಲ್ಕು ಗಂಟೆಗೆ ರಾಜಾಜಿನಗರದ ವಾಣಿ ವಿದ್ಯಾ ಕೇಂದ್ರದಲ್ಲಿ ಕಛೇರಿ.

ಕಾರ್ಯಕ್ರಮ ಪ್ರಾರಂಭ ಆಯ್ತು. ಬಹಳ ಒಳ್ಳೆಯ ಶ್ರೋತೃಗಳು. ಕಾರ್ಯಕ್ರಮವೂ ಆಯಿತು. ಇದ್ದಿದ್ದರಲ್ಲಿ ಸ್ವಲ್ಪ ಸಮಾಧಾನ, ಮಾರನೇ ದಿವಸ ಸಂಯುಕ್ತ ಕರ್ನಾಟಕದಲ್ಲಿ ನಮ್ಮ photo ಮತ್ತು caption.
"ರಂಜನೆ ಇಲ್ಲದ ಯುಗಳ ಗಾಯನ."

ನನಗೆ ನಿಜವಾಗಲೂ ಬೇಜಾರಾಗಲಿಲ್ಲ. ಇನ್ನೂ ಛಲ ಹೆಚ್ಚಾಯಿತು. ಈ ವಿಮರ್ಶೆಯು ನನ್ನ ಸಾಧನೆಗೆ ಮತ್ತೂ ಪ್ರೇರಕವಾಯ್ತು. ಅಂದರೆ negativeನ ನಾವು ಬದುಕಿನಲ್ಲಿ positive ಮಾಡ್ಕೋಬೇಕು. ಅಂದಿನಿಂದ ನನ್ನ ಸಾಧನಾ ಸಮಯವನ್ನು ದಿನಕ್ಕೆ 4 ಗಂಟೆಗಳ ಕಾಲ ವಿಸ್ತರಿಸುತ್ತಾ ಬಂದೆ. ಶಾರೀರ ಸಂಸ್ಕರಣಕ್ಕೆ ನಾನೇ ಕೆಲವು ಕ್ರಮಗಳನ್ನು ರೂಢಿಸಿಕೊಂಡೆ. ಪ್ರತಿ ಸ್ವರದಲ್ಲೂ ಸುಮಾರು ೨೦ ಸೆಕೆಂಡುಗಳು ನಿಲ್ಲುವಂತಹ ಸಾಧನಾಕ್ರಮವನ್ನು ಅಳವಡಿಸಿಕೊಂಡೆ. ಮಂದ್ರ, ಮಧ್ಯಮ, ತಾರಸ್ಥಾಯಿಗಳಲ್ಲಿ ಸಂಪೂರ್ಣವಾಗಿ open throated ಆಗಿ ಹಾಡುವ ಸಾಧನೆಯನ್ನು ಪ್ರಾರಂಭಿಸಿದೆ. ಹೆಚ್ಚಾಗಿ ಮಂದ್ರ ಸಾಧನೆಗೆ ಪ್ರಾಶಸ್ತ್ಯ ಕೊಡಲಾರಂಭಿಸಿದೆ. ಮಂದ್ರ ಷಡ್ಜವೂ ಸ್ಪಷ್ಟವಾಗಿ ಕೇಳಿಸುವಷ್ಟು ಗಾತ್ರವನ್ನು ಶಾರೀರದಲ್ಲಿ ತುಂಬಲು ಪ್ರಯತ್ನಿಸಲಾರಂಭಿಸಿದೆ. ಮಂದ್ರ ಪಂಚಮ ಹಿಡಿದಾಗ

ಆಹಾ! ಬ್ರಹ್ಮಾನಂದವೇ. ನನಗೆ ತುಂಬಾ ಶಾಂತಿಯನ್ನು, ನೆಮ್ಮದಿಯನ್ನು ಕೊಡೋದು.

ಬದುಕಿನಲ್ಲಿ ನಮ್ಮ ಭಾವನೆಗಳಿಗೆ ವಿರುದ್ಧವಾಗಿ ಎಷ್ಟೋ ಘಟನೆಗಳು ನಡೆಯುತ್ತವೆ. ಅದನ್ನ ನಾವು ನಮ್ಮ ಒಳ್ಳೇದಕ್ಕಾಗಿ ಬದಲು ಮಾಡ್ಕೊಬೇಕು ಅನ್ನೋ ಒಂದು ಪಾಠ ಕಲಿತೆ. ಆ ವಿಮರ್ಶೆ ಬರೆದವರು ನನಗೆ ಈಗ ತುಂಬಾ ಆತ್ಮೀಯರು, ಸ್ನೇಹಿತರು. ನನ್ನ ಹಾಡಿಕೆಯ ಬಗ್ಗೆ ಅವರಿಗೆ ತುಂಬಾ ಗೌರವ. ವಿಮರ್ಶಿಸುವುದು ಅವರ ಕರ್ತವ್ಯ. ಆ ವಿಮರ್ಶೆಯನ್ನು ಮತ್ತೆ ವಿಮರ್ಶೆ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ನನ್ನ ವಿರುದ್ಧವಾಗಿ ಬರೆದ ಆ ವ್ಯಕ್ತಿಯೇ ನನ್ನ ಸಂಗೀತವನ್ನು ತುಂಬಾ ಮೆಚ್ಚಿಕೊಂಡಿದ್ದಾರೆ ಅಂದ್ರೆ ಅದಕ್ಕಿಂತ ನನಗೆ ಇನ್ನೇನು ಬೇಕು. ನನಗೆ ಅದೊಂದು ಹೆಮ್ಮೆಯ ವಿಷಯ. ಹೀಗೆ ನನ್ನ ಸ್ನೇಹಿತನ ಅನಗತ್ಯವಾದ ಅವಹೇಳನ ಮತ್ತು ಪತ್ರಿಕೆಯ ಈ ವಿಮರ್ಶೆ ನನ್ನ ಸಂಗೀತದ ಬದುಕಿಗೆ ಒಂದು ಸುಂದರವಾದ ವರ್ಣವಾಗಿ ಪರಿವರ್ತನೆಯಾಯಿತು. ಪ್ರತಿ ದಿನ ರಾತ್ರಿ ನನ್ನ ಸಾಧನೆಯನ್ನು ಮುಗಿಸಿ ಕಣ್ಣುಮುಚ್ಚಿ ಒಂದು ನಿಮಿಷ ಈ ಘಟನೆಯನ್ನು ಮೆಲುಕು ಹಾಕಿಕೊಳ್ಳುತ್ತಿದ್ದೆ. ಇದೇ ನನಗೆ ಪ್ರೇರಕ ಶಕ್ತಿಯಾಗಿರುತ್ತಿತ್ತು, ಉತ್ಸಾಹದ ಚಿಲುಮೆಯಾಗಿರುತ್ತಿತ್ತು.

ಆದರೂ ನನ್ನ ಹಾಡಿಕೆಯ ಕ್ರಮದಲ್ಲಿ ಏನೋ ನ್ಯೂನತೆಯನ್ನು ನಾನೇ ಗುರುತಿಸತೊಡಗಿದೆ. ಆಗ ಅಷ್ಟು ಸುಲಭವಾಗಿ ವಿದ್ವಾಂಸರನ್ನು ಕಾಣುವ ಹಾಗಿರಲಿಲ್ಲ. ಚರ್ಚೆ ಮಾಡುವ ಹಾಗಿರಲಿಲ್ಲ. ಒಂದೊಂದು ಕೃತಿಯನ್ನು ಕಲಿಯುವುದೂ ಕಷ್ಟಸಾಧ್ಯವಾದ ವಿಷಯವಾಗಿತ್ತು. ಶಾರೀರ ಸಂಸ್ಕರಣ ವಿಚಾರವಂತೂ ಸಿಗುವ ಹಾಗೇ ಇಲ್ಲ. ಹೀಗಾಗಿ ತುಂಬಾ ಗೊಂದಲದಲ್ಲಿ ಇದ್ದೆ. ನಾನು ಹೊರಗಡೆ ಕೇಳುತ್ತಿದ್ದ ಸಂಗೀತಕ್ಕೂ ನನಗೂ ಅಜಗಜಾಂತರ ಎನಿಸುತ್ತಿತ್ತು. ಹಾಗಾಗಿ ಎಷ್ಟೋ ರಾತ್ರಿಗಳು ನಿದ್ದೆಯಿಲ್ಲದೆ ದುಃಖಿಸುತ್ತಿದ್ದುದೂ ಉಂಟು. ಒಂದು ದಿವಸ ಸಂಜೆ ನಮ್ಮ ಸ್ನೇಹಿತನ ಮನೆಗೆ ಹೋಗಿದ್ದೆ. ಅವರ ಮನೆಯಲ್ಲಿ ಒಂದು ಒಳ್ಳೆಯ tape recorder ಮತ್ತು ಬೃಹತ್ತಾದ ಸ್ಪೀಕರ್ಸ್‌ಗಳಿದ್ದವು. ಒಂದು ಲೋಟ ಕಾಫಿ ಆದ ತಕ್ಷಣ tape recorder on ಮಾಡಿದೆ. ಭೈರವಿ ಸ್ವರಜತಿ ಪ್ರಾರಂಭವಾಯ್ತು. ಅದುವರೆವಿಗೆ ನಾನು ಅಷ್ಟು active ಆಗಿದ್ದ ಧ್ವನಿಯನ್ನ ಕೇಳಿರಲಿಲ್ಲ. ಆಹಾ! ಅದ್ಭುತವಾದ ನಿರೂಪಣೆ. ಒಳ್ಳೆಯ ರಾಗಶುದ್ಧ, ಗಮಕ ಶುದ್ಧ, ಲಯಶುದ್ಧ ಸಂಗೀತ. ಆ ಹಾಡಿಕೆಯಲ್ಲಿ ಆ ವ್ಯಕ್ತಿಯ confidence ನೂರಕ್ಕೆ ನೂರರಷ್ಟು, ಅದ್ಭುತವಾದ presentation, ಮಣಿ ಅಯ್ಯರ್ ಅವರ ಮೃದಂಗ, "ಶ್ಯಾಮಕೃಷ್ಣ ಸೋದರಿ" ಎಂಬ ನೆರವಲ್. ಕಾಲ ಮತ್ತು ಮಧ್ಯಮ ಕಾಲದ ಸರ್ವಲಘುಸ್ವರಗಳು, ಪ್ರತಿಯೊಂದು ಸ್ವರವೂ ನನ್ನ ಅಂತರಂಗದ ಭಾವನೆಗಳನ್ನು ಕಲಕಿತು. ಈ ಸಂಗೀತಕ್ಕಾಗಿ ಹಲವಾರು ವರ್ಷಗಳಿಂದ ಕಾಯುತ್ತಿದ್ದೆ. ಅವತ್ತು

ನನಗೆ ಗೋಚರವಾದುದು ಇದು ನನಗೆ ಒಪ್ಪಿಗೆಯಾಗುವ ಸಂಗೀತ ಎಂದು. ಆ tape recorderಗೆ ದೀರ್ಘದಂಡ ನಮಸ್ಕಾರ ಮಾಡಿದೆ. ಆ ಮಹಾನ್ ವಿದ್ವಾಂಸರೇ ಮಾಂತ್ರಿಕ ಶೆಮ್ಮನಗುಡಿ ಶ್ರೀನಿವಾಸ ಅಯ್ಯರ್."

20
ಕೊರಳೊಳು ಮಾಲೆ ಧರಿಸಿದರಿಲ್ಲ

ಕೊರಳೊಳು ಮಾಲೆ ಧರಿಸಿದರಿಲ್ಲ,
ಬೆರಳೊಳು ಜಪಮಣಿ ಎಣಿಸಿದರಿಲ್ಲ

ಅರಸನಾಗುವುದು ಅಷ್ಟು ಸುಲಭವಲ್ಲ, ಅರಸುತ್ತಿರಬೇಕು. ಪದ್ಮನಾಭರ ಜೀವನದಲ್ಲಿ ಈ ಅರಸುವಿಕೆ ನಿರಂತರವಾಗಿರುವುದು ಗೋಚರವಾಗುತ್ತದೆ. ಅದಕ್ಕೆ ವಯಸ್ಸಿನ ಭಯವಿಲ್ಲ, ವಿದ್ಯೆಯ ದಾಹವಷ್ಟೆ. 1974 ರಲ್ಲಿ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯತೊಡಗಿ, ಮತ್ತಷ್ಟು ಅರಸುವಿಕೆಗೆ ಪಕ್ಕಾಗಿ, ತನ್ನನ್ನು ತಾನೆ ತಿದ್ದಿಕೊಳ್ಳುತ್ತಾ ಹೊಸದಿಗಂತಗಳತ್ತ ಗಮನಕೊಡುವಾಗ ಪದ್ಮನಾಭರಿಗೆ ಸಿಕ್ಕ ದೊಡ್ಡ ಅಶೀರ್ವಾದವೇ ಶೆಮ್ಮನಗುಡಿ ಶ್ರೀನಿವಾಸ ಅಯ್ಯರ್.
ಆರ್ಕೆಪಿ ಕೇಳಿದರು,
"ರವಿ, ಮಿಲ್ಟನ್ ಗೊತ್ತಾ?"
"ಯಾರು? ಜಾನ್ ಮಿಲ್ಟನ್ನಾ?"
"ಹೌದು, ಅತನ ದೊಡ್ಡ ಕಾವ್ಯ ಯಾವುದು?"
"ಅದೇ ಪ್ಯಾರಡೈಸ್ ಲಾಸ್ಟ್"
"ಹೌದು, ಅದು ಇಂಗ್ಲೀಷ್ ಸಾಹಿತ್ಯದ ಮಹಾಕಾವ್ಯ. 1667 ರಿಂದ 1674 ರವರೆಗೆ, 12 ಸಂಪುಟಗಳಲ್ಲಿ ಪ್ಯಾರಡೈಸ್ ಲಾಸ್ಟ್ ಅನ್ನು ಬಿಡುಗಡೆ ಮಾಡಲಾಯಿತು. ಆದರೆ, ಮಿಲ್ಟನ್ ಮಹಾಶಯನಿಗೆ 1652ರಲ್ಲಿ, ಅವನ 44ನೆಯ ವಯಸ್ಸಿಗೆ ಸಂಪೂರ್ಣ ಕುರುಡುತನ ಬಂತು. ಮಹಾಕಾವ್ಯ ಬರೆದಿದ್ದು ಕುರುಡನಾದ ಮೇಲೆ. ಎಂತಹ ಮಹತ್ಸಾಧನೆ." ಅದಕ್ಕೆ ನಾನು ನಂಬುವುದು ಮತ್ತು ಕಿರಿಯರಿಗೆ ಹೇಳುವುದು "ಮನಸ್ಸಿದ್ದಲ್ಲಿ ಮಹಾದೇವ".

ಶೆಮ್ಮನಗುಡಿಯವರ ಬಗ್ಗೆ ನಾನು ನಾಲ್ಕು ಮಾತು ಹೇಳುವ ಮುನ್ನ ಆರ್ಕೆಪಿ ಅವರಿಂದಲೆ ನಾಲ್ಕು ಮಾತು ಕೇಳೋಣ. ಆ ಬಗ್ಗೆ ನಾನು ಮಾತನಾಡುವುದು "ರಸಿಕನ ಕಿವಿಗೆ ಕಾದ ಎಣ್ಣೆಯನ್ನು ಹುಯ್ದಂತೆ" ಆಗುವುದು. ಹಿಂದಿನ ಅಧ್ಯಾಯದ ಸುಲಲಿತ ಮುಂದುವರಿಕೆಯೇ ಈ ಭಾಗ.

(ಉದ್ಧರಿತ) "ಅಲ್ಲಿಂದ ಆರಂಭವಾಯಿತು ನನ್ನ ಬಿರುಸಾದ ಅಧ್ಯಯನ. ಆ

ಸ್ವರಜತಿಯನ್ನು 100 ಸಾರಿ ಕೇಳಿರಬಹುದು. ನನ್ನ ಹತ್ತಿರ ಆಗ ಟೇಪ್ ರೆಕಾರ್ಡರ್ ಇರಲಿಲ್ಲ. ಅದಕ್ಕಾಗಿಯೇ ಹಾಗೂ ಹೀಗೂ ಮಾಡಿ ಒಂದು ಮಾನೋ ಟೇಪ್ ರೆಕಾರ್ಡರ್ ಕೊಂಡಿದ್ದಾಯಿತು. ಶೆಮ್ಮನಗುಡಿ ಅವರ ಮೂರು ನಾಲ್ಕು ಕ್ಯಾಸೆಟ್ ಕೊಂಡು ತಂದೆ. ಅಂದಿನಿಂದ ಅವರನ್ನು "ನನ್ನ ಪರೋಕ್ಷ ಗುರುಗಳೆಂದೇ ಸ್ವೀಕರಿಸಿದೆ".

ಅವರ ರಾಗಾಲಾಪನ ಕ್ರಮ, ಕೃತಿ ನಿರೂಪಣೆ, ಸ್ವರ ಕಲ್ಪನೆ ಎಲ್ಲವೂ ಸಂಗೀತ ಸಾಗರದಂತೆ ಗೋಚರವಾಯಿತು. ಪರಿಪೂರ್ಣ ಸಂಗೀತಗಾರರು ಎನಿಸಿತು. ಅವರ ವರಾಳಿ, ಶಂಕರಾಭರಣ, ಕಲ್ಯಾಣಿ, ರೀತಿಗೌಳ, ಅಭೇರಿ, ಸಾಳಗ ಭೈರವಿ, ಆನಂದಭೈರವಿ, ಖರಹರಪ್ರಿಯ, ಭೈರವಿ, ನಾರಾಯಣಗೌಳ, ಆರಭಿ, ದೇವಗಾಂಧಾರಿ, ಸುರಟಿ, ಶುದ್ಧ ಧನ್ಯಾಸಿ, ಬೇಗಡೆ ರಾಗಗಳನ್ನು ಕೇಳಿ ದಿಙ್ಮೂಢನಾದೆ. ಅವರ ಪ್ರಸ್ತುತಿಗೆ ಶಿರಬಾಗಿ ನಮಿಸಿದೆ. ಅವರು ಹಾಡಿರುವ "ಎಂದುಕು ಪೆದ್ದಲ, ಕರುಣಏಲಾ ಗಂಟೆ, ವಿನರಾದ ನಾ ಮನವಿ, ಜನನೀ, ನಿನುವಿನಾ, ರಾಮಕಥಾಸುಧಾರಸ, ಮರಿವೇರೆ, ದೈತಮು ಸುಖಮಾ, ಶ್ರೀವೆಂಕಟೇಶ ಗಿರೀಶಮಾಶ್ರಯೇಹಂ ಮೇಹಂ, ಶ್ರೀ ಪಾರ್ಥಸಾರಥಿ, ದೇವದೇವ, ಅಖಿಲಾಂಡೇಶ್ವರಿ, ಭೈರವಿ ಸ್ವರಜತಿ, ನಗುಮೋಮು, ಕ್ಷಣಮೈ, ನಾದೋಪಾಸನ, ಶ್ರೀರಾಮಂ, ಪಂಕಜಲೋಚನ, ದಿವಾಕರ ತನುಜಂ, ಬುಧಮಾಶ್ರಯಾಮಿ, ಪದವಿನಿ, ಶ್ರೀಮಾತೃಭೂತಂ, ಮರುಕೇಲರಾ, ಪಟ್ಟವಿರುವರಾದು, ಶ್ರೀಕೃಷ್ಣಂಭಜಮಾನಸ, ಕೃತಿಗುಚ್ಛಗಳು, ಒಂದೇ ಎರಡೇ."

ಆ ಹಾಡಿಕೆಯಲ್ಲಿ ಏನೋ ಮೃದುತ್ವ, ಸುಖ, ಗಮಕಶುದ್ಧ ಗಾಂಭೀರ್ಯ, ಅದ್ಭುತ ಸಂಗತಿಗಳು, ಆಹಾ ತುಂಬಾ ಆಕರ್ಷಣೀಯ. ಕೃತಿಗಳನ್ನು ಕೇಳ್ತಾ ಇದ್ದರೆ, ಅದನ್ನು ಬಿಟ್ಟು ಇನ್ನೇನೂ ಕೇಳಬಾರದು ಅನ್ನಿಸ್ತಾ ಇತ್ತು. ಬೇರೆ ಪ್ರಕಾರ ಕೇಳಿಬಿಟ್ಟರೆ ಎಲ್ಲಿ ಈ ರುಚಿ ಕೆಡುತ್ತೋ ಎಂಬ ಭಯ, ಮುಂದೆ ಅವರ ನೆರವಲ್, ಅವರೊಬ್ಬ ಸಂಗೀತ ವಾಸ್ತುಶಿಲ್ಪಿ, ವಿನ್ಯಾಸಕಾರ, ರೂವಾರಿ. ಅದೂ ಅವರು ಪಂಚಮದಲ್ಲಿ ನೆರೆವಲ್ ಮಾಡ್ತಾ ಇದ್ದರೆ, ಹಸಿರಿಂದ ಕೂಡಿರುವ ಉದ್ಯಾನವನದಲ್ಲಿ ಶುಭ್ರವಾದ ಗಾಳಿಯಲ್ಲಿ ಜೋಕಾಲಿ ಆಡ್ತಾ ಇದ್ರೆ ಏನು ಅನುಭವ ಆಗುತ್ತೋ ಅದೇ ಅನುಭವ. ಅಲ್ಲಿ ಯಾವ ಲಯಕಾರಿಯ ಅಬ್ಬರವಿಲ್ಲ. ಸ್ವರಗಳಲ್ಲಿ ಹೆಚ್ಚಿನ ಏರಿಳಿತಗಳಿಲ್ಲ. ದಾಟು ಪ್ರಯೋಗವಿಲ್ಲ. ಆ ಪಂಚಮಕ್ಕೆ ಹಿಂದಿನ ಅಥವಾ ಮುಂದಿನ ಸ್ವರವನ್ನು ಪೋಣಿಸಿಕೊಂಡು ಬಂದು ಮುಕ್ತಾಯ ಮಾಡುತ್ತಿದ್ದುದು ಎಂದರೆ ನನ್ನಲ್ಲಿ ವಿಶೇಷವಾದ ಚೈತನ್ಯವನ್ನು ತುಂಬುತ್ತಿತ್ತು.

ಇನ್ನು, ಅವರ ಮಧ್ಯಮ ಕಾಲದ ನೆರವಲ್ ಎಂದರೆ "ಗುಡುಗು ಮಳೆಯ" ಗರ್ಜನೆ, ಸಾಹಿತ್ಯದ ಮಧ್ಯದಲ್ಲಿನ ಆ ಮೂರು, ಐದು, ಏಳು ಅಕ್ಷರಗಳ ವಿಂಗಡಣೆ,

ಅದಕ್ಕೆ ಸರಿಯಾಗಿ ಮಣಿಯವರ ಮೃದಂಗ, ರೋಮಾಂಚನ. ಆದರೆ ಅದು ಕೇವಲ ಲಯಕಾರಿಯಾಗಿ ಎಂದೂ ಇರುತ್ತಿರಲಿಲ್ಲ. ಸಂಪೂರ್ಣ ರಾಗ ಭಾವ. ಜೀವಸ್ವರಗಳಲ್ಲಿ ನಿಲುಗಡೆ, ಅದಕ್ಕೆ ಹೆಚ್ಚು ಒತ್ತು ಕೊಡುವುದು ಮತ್ತು ನ್ಯಾಸ ಮಾಡುವುದು ಈ ಅಸಾಧಾರಣ ಪ್ರತಿಭೆ ನನ್ನ ಮನಸ್ಸಿನಲ್ಲಿ ಬೇರೂರಿದ್ದು ಸಹಜವೇ. ಅಂತಹ ಗಾಂಧರ್ವ ಗಾಯನ ಶೆಮ್ಮನಗುಡಿಯವರದ್ದು. ನಂತರ ಅವರ ಸ್ವರಪ್ರಸ್ತಾರ, ಕಾಲ, ಮಧ್ಯಮ ಕಾಲಗಳಲ್ಲಿ ಅಸಾಧಾರಣ ಪ್ರಸ್ತುತಿ. ಕೇವಲ ಒಂದು ಎರಡು ಆವರ್ತಗಳಲ್ಲಿ ಹತ್ತು ಹಲವಾರು ರೀತಿಯ ವೈವಿಧ್ಯಮಯ ಸ್ವರಗುಚ್ಛಗಳನ್ನು ಪೋಣಿಸುತ್ತಿದ್ದರು.

ಅವರು ಸರ್ವಲಘು ಸ್ವರಗಳ ರಾಜನಾಗಿದ್ದರು. ನಾಲ್ಕು ಅಕ್ಷರಗಳ ದಾಟು ಸ್ವರಗಳನ್ನು ಹಾಡಿ ಸಂವೇದನೆಗಳನ್ನು ಸೃಷ್ಟಿ ಮಾಡುವರು. ಮೆಟ್ರೊನೊಮ್ (Metronome) ಇದ್ರೂ, ಸರಿಯಾಗಿ ಆ ಮೀಟರ್‌ಗೆ, ಅಂಟಿಕೊಳ್ಳುತ್ತಿತ್ತು. ಅಲ್ಲದೆ ಸ್ವರಗಳಿಗೆ ಕೊಡುತ್ತಿದ್ದ ಹೊಡೆತಗಳು, ಬಿರ್ಕಾಗಳು, ವಿಸ್ತಾರವಾದ ಆವರ್ತನಗಳು, ಆ ಅದ್ಭುತವಾದ ವೇಗ, ಅಬ್ಬಬ್ಬಾ ಯೋಚನೆ ಮಾಡೋಕೂ ಸಾಧ್ಯವಿಲ್ಲ. ಆದರೆ ಯಾವುದೇ ಸಂಕೀರ್ಣವಾದ ಮುಕ್ತಾಯವಿಲ್ಲ. ಆದರೂ ಶ್ರೋತೃಗಳು ಕರತಾಡನವನ್ನು ಸ್ವಾಭಾವಿಕವಾಗಿಯೇ ಮಾಡಬೇಕು. ಆ ಒಂದು ಪರಿಣಾಮವನ್ನು ಬೀರ್ತಾ ಇತ್ತು ಆ ಸ್ವರ ಕಲ್ಪನೆ.

ಇನ್ನು ಶ್ಲೋಕಗಳು. ರಾಮ ರಾಮ! ಏನ್ ಹಾಡ್ತಾ ಇದ್ರು. ಅದು ರಾಗ ಮಾಲಿಕೆಗಳಲ್ಲಿ, ಹಂಸಾನಂದಿಯಲ್ಲಿ ಶ್ಲೋಕದ ಒಂದು ಸಾಲನ್ನ ಸುಮಾರು ಹದಿನೈದು ನಿಮಿಷ ಹಾಡಿದ್ದಾರೆ. ಯಾರೋ ಉಸ್ತಾದ್ ಹಾಡಿರಬೇಕು ಅಂತ ಅನ್ನಬೇಕು. ಅಂಥ ಶುದ್ಧ, ಗಮಕ ಸಹಿತ ಅದ್ಭುತ ರಾಗ ನಿರೂಪಣೆ. ಒಬ್ಬ ವಿದ್ವಾಂಸನಲ್ಲಿ ಈ ಎಲ್ಲ ಗುಣಗಳೂ ಮೇಳೈಸಿರುವುದು ತುಂಬಾ ಅಪರೂಪ. ಎಲ್ಲಾ ವೈವಿಧ್ಯಗಳಲ್ಲೂ ಅವರು ಸಮರ್ಥರಾಗಿದ್ದರು. ಮಹಾನುಭಾವರಾಗಿದ್ದರು.

ಹೀಗೆ ನಾನು ಅವರ ಸಂಗೀತದಿಂದ ಬಹಳಷ್ಟು ಪ್ರಭಾವಿತನಾದೆ. ಆದರೆ ಅವರ ಹಾಗೇ ಹಾಡಲು ಪ್ರಯತ್ನಿಸಲಿಲ್ಲ. ಅವರ ಪ್ರಸಾದವನ್ನು ನನ್ನ ಮನೋಧರ್ಮಕ್ಕೆ ಒಗ್ಗಿಸಿಕೊಳ್ಳಲು ಪ್ರಾರಂಭಿಸಿದೆ. ಹೀಗೆ ನನ್ನ ಸಾಧನೆ 1981ರಿಂದ 1989ರ ವರೆಗೆ ಸುಮಾರು ಎಂಟು ವರ್ಷಗಳು ನಿರಂತರವಾಗಿ ನಡೆದವು. ಪ್ರತಿದಿನ 6–8 ಗಂಟೆಗಳ ಸಾಧನೆ, ಚಿಂತನೆ, ಅನುಷ್ಠಾನ, ಕೇಳ್ಮೆ ನನ್ನ ಜೀವನದಲ್ಲಿ ಬಹಳ ಸ್ವಾಭಾವಿಕವಾಗಿಯೇ ಬೆರೆತುಹೋಯಿತು. ಶೆಮ್ಮನಗುಡಿಯವರ ಸಂಗೀತವನ್ನು ಕೇಳದ ದಿವಸವೇ ಇಲ್ಲ.

ಶ್ರೀರಂಜಿನಿ ಶೆಮ್ಮನಗುಡಿಯವರಿಗೇ ಮೀಸಲಾಗಿಡಬೇಕಾದ ರಾಗ, ಅವರ ಬಾಯಲ್ಲಿ

ಆ ರಾಗ ಅಷ್ಟು ಸೊಗಸು, ಮಧುರ. ವಿಸ್ತಾರತೆಗೆ ಅಷ್ಟಾಗಿ ಒಗ್ಗುವ ರಾಗವಲ್ಲ, ಪಂಚಮ ವರ್ಜವಿರುವುದರಿಂದ, ತಕ್ಷಣ ಷಡ್ಜಕ್ಕೆ ಹಾಡುವ ಪ್ರವೃತ್ತಿ ಇರುವುದು ಸ್ವಾಭಾವಿಕ. ಅದೇ ಸಂದರ್ಭಕ್ಕೆ ಸರಿಯಾಗಿ ನನಗೆ ಅವರು ಹಾಡಿದ್ದ "ಮಾರುಬಲ್ಕ" ಕೃತಿಯ ಕ್ಯಾಸೆಟ್ ಸಿಕ್ಕಿತು. ಮಣಿ ಅಯ್ಯರ್, ಲಾಲ್ ಗುಡಿ ಪಕ್ಕವಾದ್ಯದಲ್ಲಿ, ನಾನು ಅವರ ಸಂಗೀತವನ್ನು ದೇವರ ಮನೆಯಲ್ಲೇ ಕೇಳುವ ಅಭ್ಯಾಸ. ಅವರ ಗಾನವನ್ನು ಆ ಮಟ್ಟದಲ್ಲಿ ನಾನು ಇಟ್ಟುಕೊಂಡಿದ್ದೇನೆ. ಇಂದೂ ಅದೇ ಅಭಿಪ್ರಾಯ. ಶ್ರೀರಂಜಿನಿ ರಾಗವನ್ನು ಪ್ರಾರಂಭ ಮಾಡೋಕೆ ಮೊದಲು ಸುಮ್ಮನೆ ಒಂದು "ಹಂ" ಮಾಡ್ತಾರೆ. ಆಹಾ! ಅದು ಇಡೀ ಶ್ರೀರಂಜನಿಯ ಛಾಯೆಯನ್ನು ತುಂಬಿ ಬಿಡುತ್ತೆ. ಅದೇನು ಅಸ್ತ್ರವೋ! ಅದೇನು ಮಂತ್ರಶಕ್ತಿಯೋ! ಭಗವಂತನೇ ಬಲ್ಲ. ರಾಗ ಭಾವದ ಹೊಳೆ ಹರಿದು ಹೋಗ್ತಾ ಇತ್ತು. ಅದರಲ್ಲೂ ಅವರು ತಾರ ರಿಶಭದಲ್ಲಿ ನಿಂತು ವಿನ್ಯಾಸ ಮಾಡ್ತಾ ಇದ್ದದ್ದು, ಏನು ನುಡಿಕಾರ! ಏನು ಅಭಿಪ್ರಾಯಗಳು! ಅದನ್ನ ಬರೆಯೋಕಾಗುತ್ತಾ? ಆಗಿನ ನನ್ನ ಮನೋಸ್ಥಿತಿಗೆ ಧನ್ವಂತರಿಯಾಗಿ ಬಂದಿತ್ತು ಆ ಗಾನ. ಅಷ್ಟು ಅದ್ಭುತವಾದ ರಾಗಾಲಾಪನೆ.

ಅದಕ್ಕೆ ಸರಿಯಾದ, ಹಿತಮಿತವಾದ, ಬಹಳ ಆಕರ್ಷಣೀಯವಾದ ಲಾಲ್ಗುಡಿ ಅವರ ಪಿಟೀಲು. ಅವರು ಸುಮ್ಮನೆ ಒಂದು ಬೋ ಹಾಕಿದ್ರೆ ತುಂಬು ಗಾಂಭೀರ್ಯದ ನಾದ. ಅವರು ಮುಂದಿನ ಸ್ವರಕ್ಕೆ ಹೋದರೆ ಅದಕ್ಕೆ ಸರಿಯಾದ ವಿಧೇಯಪೂರ್ವಕ ಅನುಸರಣೆ, ಏನು ಹಾಡಿದರೆ ಅದನ್ನೇ ನುಡಿಸುವ ಅಸಾಧಾರಣ ಪ್ರತಿಭೆ. ವ್ಯವಹಾರಕ್ಕೂ ಸಿದ್ಧ ಮನೋಧರ್ಮಕ್ಕೂ ಸಿದ್ಧ, ಕಬ್ಬಿಣದ ಕಡಲೆಯಂಥ ರಾಗ ತಾನ ಪಲ್ಲವಿಗಳಿಗೆ ಬಲಭೀಮ, ಸರಳ ಸುಂದರ ಕೃತಿಗಳಿಗೆ ಪ್ರಹ್ಲಾದ. ಇದು ಲಾಲ್‌ಗುಡಿಯವರ ಪಿಟೀಲಿನ ವೈಶಿಷ್ಟ್ಯ. ಎಂದೂ ತಮ್ಮ ಪಕ್ಕವಾದ್ಯ ಧರ್ಮವನ್ನು ಮೀರದೆ ಕಛೇರಿಯನ್ನು ವೈಭವೀಕರಿಸುವ ಅವರ ಪ್ರವೃತ್ತಿ ಅನುಕರಣೀಯ. ಅಂತಹ ಅದ್ಭುತ ದೇವಗಾನವನ್ನು ಕೇಳಿದ ಮೇಲೆ ಪಿಟೀಲು ಕೇಳುವುದು ಕಷ್ಟವೇ. ಆದರೆ ಲಾಲ್ಗುಡಿಯವರ ಪಿಟೀಲು ವಾದ್ಯ ವೈಖರಿ ಎಂದೂ ಯಾರಿಗೂ ಬೇಸರ ತಂದ ದಿವಸವೇ ಇಲ್ಲ. ಪಕ್ಕ ವಾದ್ಯ ಚಕ್ರವರ್ತಿ ಲಾಲ್ಗುಡಿಯವರು. ಆಗ ಸಾಮಾನ್ಯವಾಗಿ ಉಪ ಪಕ್ಕವಾದ್ಯಗಳು ಕಡಿಮೆಯೇ. ಲಯಬ್ರಹ್ಮ ಪಾಲ್ಘಾಟ್ ಮಣಿ ಅಯ್ಯರ್ ಅವರು ಇದ್ಬಿಟ್ರೆ ಯಾರೂ ಬೇಡ ಅಂತೇ ಅನ್ನಿಸ್ತಾ ಇತ್ತು. ಶ್ರುತಿ ಮತ್ತು ವಾದ್ಯಗಳ ಸಂಪೂರ್ಣವಾದ ಹೊಂದಾವಣಿಕೆ ಅವರ ವಿಶೇಷತೆ. ಸುಮ್ಮನೆ ಅವರ ಬೆರಳುಗಳು ಕರಣಿಯ ಮೇಲೆ ಆಡಿದರೆ ಸಾಕು, ಝೇಂಕಾರ ನಾದ. ಆಹಾ! ಆ ಎಡವಂತೂ ನಾಭಿಯಿಂದ ಹೊರಹೊಮ್ಮುವ ಗಾನದಂತೆ ಕೇಳುತ್ತಿತ್ತು. ಅವರ ಎಡ ಮತ್ತು ಬಲಗಳ ಪ್ರಯೋಗ ಬ್ರಹ್ಮಾನಂದ. ಶೆಮ್ಮನಗುಡಿ ಅವರ ಸರ್ವಲಘು ಸ್ವರಗಳಿಗೆ ನುಡಿಸ್ತಾ ಇದ್ದರೆ ಬ್ರಹ್ಮಾನಂದ. ಎಂತಹ ಅದ್ಭುತವಾದ ಊಹೆಯೆಂದರೆ ಶೆಮ್ಮನಗುಡಿಯವರು ಎಲ್ಲಿ ಮುಕ್ತಾಯ ಸ್ವರವನ್ನು ಹಾಡ್ತಾರೋ ಅಲ್ಲಿಗೆ ಸರಿಯಾಗಿ ಮುಕ್ತಾಯ ಕೊಡ್ತಾ ಇದ್ದರು. ಕೃತಿಗಳಿಗೆ

ಅವರ ಅನುಸರಣೆ, ಅಯ್ಯೋ! ಏನ್ ಹೇಳೋದು.

ಎಲ್ಲ ಕೃತಿಗಳನ್ನೂ ಹಾಡುತ್ತಿದ್ದ ಮಣಿ ಅಯ್ಯರ್ ಅವರಿಗೆ ಗಾಯನದ ಗುಟ್ಟು ಸಂಪೂರ್ಣವಾಗಿ ತಿಳಿದಿತ್ತು. ವಿದ್ಯಾ ವರ್ಚಸ್ವಿ ಬಹಳ ಸರಳ ವ್ಯಕ್ತಿ, ಮಾತು ಕಡಿಮೆ. ಮಾತೆಲ್ಲಾ ಬೆರಳುಗಳಲ್ಲಿ, ಉಡುಪೂ ತುಂಬ ಸರಳ. ಮಂಡಿಗೂ ಸ್ವಲ್ಪ ಕೆಳಗಿನ ಬಿಳಿ ದಟ್ಟಿ ಪಂಚೆ, ಅರ್ಧ ತೋಳಿನ ಜುಬ್ಬ ಅಂಗಿ, ಹೆಗಲ ಮೇಲೆ ಒಂದು ಶಲ್ಯ. ಯಾವಾಗಲೂ ಬಹಳ ಗಂಭೀರ ಮುಖ. ಅವರು ವೇದಿಕೆಯ ಮೇಲೆ ಕುಳಿತರೆ ಸಾಕು ಪ್ರಧಾನ ಗಾಯಕನಿಗೆ ಏನೋ ಒಂದು ನಡುಕ ಪ್ರಾರಂಭವಾಗಿಬಿಡೋದು. ಅಂತಹ ಪ್ರಭಾವಿ ಮೃದಂಗ ದೇವತಾ ಪುರುಷ. ಬಹುಶಃ ಅಂತಹ ವ್ಯಕ್ತಿತ್ವವನ್ನು ನಾವು ನೋಡುವುದು ವಿರಳ. ಅಂತೂ ಮೂವರ ಆ ತಂಡ ನನ್ನ ಮೇಲೆ ಅತೀವ ಪ್ರಭಾವ ಬೀರಿತು. ಆ ಮೂವರನ್ನು ನಾನು ವೇದಿಕೆಯ ಮೇಲೂ ನೋಡಿದ್ದೇನೆ. ಮಹದಾನಂದಪಟ್ಟಿದ್ದೇನೆ. ನಾನೇ ಧನ್ಯ ಅನ್ನುವ ಭಾವನೆಯನ್ನು ತಿಳಿದು ಇಡೀ ದಿನವೆಲ್ಲ ಅವರ ಸಂಗೀತವನ್ನು ಹೃದಯಾಂತರಂಗಕ್ಕೆ ತೆಗೆದುಕೊಂಡಿದ್ದೇನೆ. ಮಾರುಬಲ್ಕ ಕೃತಿ ಅನುಪಲ್ಲವಿಯ ಸಂಗತಿಗಳು (ಜಾರಚೋರ ಭಜನ ಜೇಸಿತಿನಾ) ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತಾ ಒಂದರ ಹಿಂದೆ ಮತ್ತೊಂದು ಬರ್ತಾ ಇರೋದಕ್ಕೆ, ಲಾಲ್ಗುಡಿ ಮತ್ತು ಮಣಿಯವರು ಶೆಮ್ಮನಗುಡಿಯವರ ಹಿಂದೆಯೇ ನುಡಿಸಿಕೊಂಡು ಬರುತ್ತಿದ್ದ ಚಾಕಚಕ್ಯತೆ ನನ್ನಲ್ಲಿ ದಿಗ್ಭ್ರಾಂತಿಯನ್ನುಂಟು ಮಾಡುತ್ತಿತ್ತು. ಇವು ನನ್ನ ಮೇಲೆ ಅಸಾಧಾರಣವಾದ ಪರಿಣಾಮವನ್ನು ಬೀರಿತು. ಸಂಗೀತ ಅಂದ್ರೆ ಹೀಗಿರಬೇಕು ಅನ್ನುವ ನಿರ್ಧಾರಕ್ಕೆ ಬಂದೆ".

ಪ್ರಿಯ ಓದುಗ, ಇನ್ನು ನಾಲ್ಕು ಮಾತು ಹೇಳಿ ಈ ಅಧ್ಯಾಯ ಮುಗಿಸುತ್ತೇನೆ. ಶೆಮ್ಮನಗುಡಿಯವರದು (1908 – 2003) ತುಂಬು ಜೀವನ. ತಂಜಾವೂರು ಜಿಲ್ಲೆಯವರೆ. ಮಹಾನ್ ಸಾಧಕರು. ಸಂಗೀತ ನೃತ್ಯ ನಾಟಕ ಅಕಾಡೆಮಿಯ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಮೊದಲಾದ ಹಲವಾರು ಪ್ರಶಸ್ತಿಗಳು ಅವರಿಗೆ ಸಿಕ್ಕಿದೆ. ಆ ಮೇರು ಸಂಗೀತಕ್ಕೆ ಅವೆಲ್ಲಾ ಗೌಣ. ಮನಮುಟ್ಟುವ ಭಾವಪೂರ್ಣ ಗಾಯಕರು. ಅವರನ್ನು "ಆಧುನಿಕ ಕರ್ಣಾಟಕ ಸಂಗೀತದ ಹರಿಕಾರ" ಎನ್ನುವುದುಂಟು. 90 ರ ವಯಸ್ಸಿನಲ್ಲೂ ಕಛೇರಿ ಮಾಡುತ್ತಿದ್ದರು. ಅದೇ ಸ್ಫೂರ್ತಿ, ಅದೇ ಶಕ್ತಿ.

ನಮ್ಮ ಎಂಎಸ್ ಸುಬ್ಬಲಕ್ಷ್ಮಿ (1916 – 2004) ಶೆಮ್ಮನಗುಡಿ ಅವರ ಶಿಷ್ಯೆ.
ಆರ್ಕೆಪಿ ಅವರನ್ನು ಕೇಳಿದೆ, "ನೀವು ಮತ್ತು ಎಂಎಸ್ ಗುರುಬಂಧುಗಳಾದಿರಲ್ಲವೆ?"

"ಹೇಗೆ?"
"ಅವರು ನೇರ ಶಿಷ್ಯರು, ನೀವು ಪರೋಕ್ಷ ಶಿಷ್ಯರು" ಆರ್ಕೆಪಿ ನಕ್ಕರು.

"ನೀವು ಶೆಮ್ಮನಗುಡಿಯವರನ್ನು ಭೇಟಿಯಾಗಿರುವಿರಾ?"

"ಆಗಿದ್ದೇನೆ. ರುದ್ರಪಟ್ಟಣದಲ್ಲಿ ಇರುವಾಗ ರೇಡಿಯೋದಲ್ಲಿ ಅವರ ಗಾಯನ ಕೇಳುತ್ತಿದ್ದೆ. ಅವರು ಹೀಗಿರಬಹುದು, ಹಾಗಿರಬಹುದು ಎಂದು ಊಹಿಸಿಕೊಳ್ಳುತ್ತಿದ್ದೆ. 1979 ರಲ್ಲಿ ಬೆಂಗಳೂರು ಗಾಯನ ಸಮಾಜದಲ್ಲಿ ಶೆಮ್ಮನಗುಡಿಯವರ ಕಛೇರಿಯನ್ನು ನೇರಾನೇರಾ ಕೇಳಿರುವೆ. ಆದರೆ, 1980ರಲ್ಲಿ ಆದ ಅವರ ಪ್ರಭಾವವೇ ಬೇರೆ."

"1997/98 ರಲ್ಲಿ ನಾನು ಮದ್ರಾಸಿನ ಶೆಮ್ಮನಗುಡಿಯವರ ಮನೆಗೆ ಹೋಗಿದ್ದೆ. ಈಸಿಚೇರ್‌ನಲ್ಲಿ ಕೂತಿದ್ದರು.

"ಯಾರು?" ಅಂದ್ರು.

"ನಾನು ಪದ್ಮನಾಭ"

"ಯಾವ ಊರೂ"

"ರುದ್ರ ಪಟ್ಟಣ"

"ಓ ಬುದ್ದಿವಂತರ ಊರು" ಅನ್ನುತ್ತಾ ಬಹಳ ಖುಷಿಯಿಂದ ಮಾತನಾಡಿದರು.
ಅವರ ಪಾದದ ಬಳಿ ನಾನು ಕುಳಿತೆ.

"ಮಾಮಾ ಒಂದು ಹಾಡುವಿರಾ?" ಅಲ್ಲಿನ ಪದ್ಧತಿಯಂತೆ ನಾನೂ ಶೆಮ್ಮನಗುಡಿಯವರನ್ನು ಮಾಮ ಎಂದೇ ಕರೆದೆ.

"ಅಗಲಿ" ಎನ್ನುತ್ತಾ ಸ್ವಲ್ಪ ಹಾಡಿದರು.

"ಕಾಫೀನಾ ಟೀನಾ" ಎಂದು ಆಪ್ಯಾಯತೆಯಿಂದ ಕೇಳಿದರು.

"ಒಂದು ಫೋಟೋ ತೆಗೆದುಕೊಳ್ಳಲಾ?"

"ಹ್ಞು, ತೆಗೆದುಕೊ, ಅದರೆ ಒಂದು ರೂಪಾಯಿ ಕೊಡಬೇಕು" ಎನ್ನುತ್ತಾ ನಕ್ಕರು.
ಬಳಿಯಲ್ಲಿ ಒಬ್ಬ ಶಿಷ್ಯರು ಇದ್ದರು. ಆತನನ್ನು ಕರೆದು, ಸ್ಟೇಟ್ ಬ್ಯಾಂಕಿನ ಪಾಸ್

ಬುಕ್ ತಾ. ಎಷ್ಟು ಹಣವಿದೆ ನೋಡೋಣ" ಎನ್ನುತ್ತಾ ಮರಳಿ ನಕ್ಕರು. ಮಾತುಕತೆಯೆಲ್ಲಾ ತಮಿಳಿನಲ್ಲಿ.

"ನನಗೆ ಇನ್ನೇನು ಆಸೆಯಿಲ್ಲ. ಆದೇಶಕ್ಕಾಗಿ ಕಾಯುತ್ತಿರುವೆ. ನವಾವರಣ, ನವಗ್ರಹ ಕೃತಿಗಳನ್ನು ನಾನೆ ಮೊದಲು ಹಾಡಿದ್ದು" ಮಿಂಚುಗಣ್ಣಿನ ಮಾತು.

"ನಾನೂ ಹಾಡಲಾ"
"ಹ್ನು" ಎಂದರು. ಹಾಡಿದೆ.

"ಓ ನನ್ನಂತೆಯೇ ಹಾಡುವೆಯಾ." ಖುಷಿಪಟ್ಟರು. ಮೆಲು ಮಾತು.

"ಇಲ್ಲ ಇಲ್ಲಾ, ನೀವೆಲ್ಲಿ ನಾನೆಲ್ಲಿ, ನೀವು ಹಿಮಾಲಯ, ನಾನು ಚಾಮುಂಡಿ ಬೆಟ್ಟ."

ಶೆಮ್ಮಂಗುಡಿಯವರು ನಕ್ಕರು. ನನ್ನ ತಲೆಯ ಮೇಲೆ ಕೈಯಿರಿಸಿ,
"ಚೆನ್ನಾಗಿ ಹಾಡುವೆ, ಚೆನ್ನಾಗಿ ಅಭ್ಯಾಸ ಮಾಡು, ಒಳ್ಳೆಯ ಶಾರೀರವಿದೆ, ಶುದ್ಧವಾಗಿ ಹಾಡಿರುವೆ. ದೈವಿಕವಾಗಿ ಹಾಡಿರುವೆ. ನಿನಗೆ ಒಳ್ಳೆಯ ಭವಿಷ್ಯವಿದೆ. ಮದ್ರಾಸಿಗೆ ಬಂದಾಗ ಬಾ" ಎಂದು ಆಶೀರ್ವದಿಸಿದರು.

ನಾನು ಬೆಂಗಳೂರಿಗೆ ಬಂದ ನಂತರ, "ಶೆಮ್ಮನಗುಡಿ ಶ್ರೀನಿವಾಸ ಅಯ್ಯರ್ ಟ್ರಸ್ಟಿನಿಂದ ಒಂದು ಪತ್ರ ಬಂತು. ಮದ್ರಾಸಿನಲ್ಲಿ ಕಛೇರಿ ಮಾಡಲು ಆಹ್ವಾನವಿತ್ತು. ಆದರೆ ನಾನು ಇಂಗ್ಲೇಂಡ್ಗೆ ಹೋಗಬೇಕಿತ್ತು. ಒಂದು ಸುವರ್ಣ ಅವಕಾಶ ತಪ್ಪಿತು. ಆದರೆ ಶೆಮ್ಮನಗುಡಿಯರ ಆಶೀರ್ವಾದ ಯಾವಾಗಲೂ ನನ್ನ ಶಿರದಲ್ಲಿ ಉಳಿಯಿತು.

21
ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು ॥
ಇರುಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ
ಕೈ ಹಿಡಿದು ನಡೆಸೆನ್ನನು ॥ಪ॥

"ಮೂಲತಃ, ಇಂಗ್ಲೀಷ್ ಕವಿ ಕಾರ್ಡಿನಲ್ ನ್ಯೂಮನ್ (1801–1890) ಅವರು ಗೊಂದಲ, ಮಾನಸಿಕ ಯಾತನೆ, ದೈಹಿಕ ನೋವಿನಲ್ಲಿದ್ದಾಗ ಬರೆದ ಕವನ

'Lead, Kindly Light'. ಪ್ರಾತಃಸ್ಮರಣೀಯರಾದ ಕನ್ನಡದ ಕಣ್ವ ಆಚಾರ್ಯ ಬಿಎಂಶ್ರೀ ಅವರು, ಈ ಪದ್ಯವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅನುವಾದವೇ ಮೂಲವೆನ್ನುವ ರೀತಿಯಲ್ಲಿ ಕನ್ನಡ ಜನಮನವನ್ನು ಈ ಪದ್ಯ ಗಾಢವಾಗಿ ಪ್ರಭಾವಿಸಿದೆ. ನನಗೂ ಈ ಪದ್ಯ ಇಷ್ಟ. ನಾದ ದೇವತೆಯಲ್ಲಿ ಇದನ್ನು ನಾನು ಪ್ರಾರ್ಥನೆಯಾಗಿ ಹಾಡಿದೆ. ಹಾಡುವಾಗ ತೀವ್ರ ಭಾವೋದ್ವೇಗವನ್ನೂ ಆಧ್ಯಾತ್ಮಿಕ ಅನುಭೂತಿಯನ್ನೂ ಅನುಭವಿಸಿದೆ. ನನ್ನ ಅಶ್ರುಬಿಂದುಗಳು ಕಡಲಾಯಿತು" ಎನ್ನುತ್ತಾ ಪದ್ಮನಾಭರು ಮಾತು ಆರಂಭಿಸಿದರು. "ಭಗವಂತ ನನ್ನನ್ನು ಕೈ ಹಿಡಿದು ನಡೆಸಿದ್ದಾನೆ. ಅವನ ಕರುಣೆ ಅಪಾರ".

1979 ರಲ್ಲಿ ಈ ಮನೆ ಕಟ್ಟಿದೆ. ಅಣ್ಣನ ಮತ್ತು ಮನೆಯವರ ಸಹಕಾರ ಸಿಕ್ಕಿತು. ಸಂಗೀತ ಕಛೇರಿಗಳು ಸ್ವಲ್ಪ ಕಡಿಮೆಯಾಗಿತ್ತು. ಬ್ಯಾಂಕ್‌ನ, ಉದ್ಯೋಗ ನಿಮಿತ್ತ ಕಾರ್ಯಬಾಹುಳ್ಯ ಹೆಚ್ಚಿತ್ತು. 1981 ರಲ್ಲಿ, ಸಂಗೀತಪಾಠ ಹೇಳಲು ಆರಂಭಿಸಿದೆ.

ಪಾಠ ಹೇಳುವುದು ಒಂದು ಮಧುರ ಶೈಕ್ಷಣಿಕ ಅನುಭವ. ಕಲಿಸಿದ್ದಕ್ಕಿಂತ ಕಲಿಯುವುದೇ ಹೆಚ್ಚು. ಪಾಠ ಮಾಡುವ ರೀತಿಯಲ್ಲಿ ನನ್ನದೇ ಕ್ರಮಗಳನ್ನು ಹುಡುಕಿಕೊಂಡೆ. ನನ್ನಲ್ಲಿ ನನಗೆ ಹೆಚ್ಚಿನ ನಂಬಿಕೆ ಬಂತು. ಜನಸಂಪರ್ಕ ಮಿಗಿಲಾಯಿತು.

ಆರ್ಕೆಪಿ, ಈಗಲೂ ಆಗಲೂ ಕಲಿಸಲು ಸಿದ್ಧವಾಗಿಯೇ ಸಂಗೀತದ ತರಗತಿಗಳಿಗೆ ಹೋಗುತ್ತಾರೆ. 'ಕಲಿತು ಕಲಿಸು' ಎನ್ನುವುದು ಅವರ ತತ್ತ್ವ. ಆಗ ವರ್ಣಗಳನ್ನು 40–50 ಸಾರಿ ಹಾಡಿ ಕಲಿಯುತ್ತಿದ್ದರು. ತ್ಯಾಗರಾಜರ ದೀಕ್ಷಿತರ ಪುಟ್ಟ ಕೃತಿಗಳಿಂದ ಪಾಠ. ಪುರಂದರರ ವ್ಯಕ್ತಿತ್ವ, ಬದುಕು ಮತ್ತು ಸರಳೆ, ಜಂಪೆ, ಅಲಂಕಾರ, ಗೀತೆ, ಪ್ರಬಂಧ, ವರ್ಣ, ಸ್ವರಜತಿ. ಹತ್ತಾರು ವಿಷಯಗಳ ಬಗ್ಗೆ ಭಾಷಣ.. ಯುವ ಕಲಾವಿದರಿಗೆ ವಿಶೇಷ ವೇದಿಕೆ. ಅವರ "ನೆನಪಿನಂಗಳದಲ್ಲಿ" ಈ ಮಾತುಗಳಿವೆ.

"1981 ರಲ್ಲಿ ನಾನು ಸಂಗೀತ ಶಿಕ್ಷಕನಾಗಿದ್ದು ನನ್ನ ಸಂಗೀತ ಬದುಕಿಗೆ ಒಂದು ಹೊಸ ಆಯಾಮ ನೀಡಿತು. ಸತತ ಚಿಂತನೆ, ಸಾಧನೆಗಳು ಸ್ವಾಭಾವಿಕವಾಗಿಯೇ ಮೈಗೂಡಿದವು. ಕರ್ನಾಟಕ ಸಂಗೀತ ತ್ರಿಮೂರ್ತಿಗಳ ಕೃತಿಗಳನ್ನು ಅಭ್ಯಾಸ ಮಾಡುವುದರ ಜೊತೆಗೆ ಅಧ್ಯಯನ. ಶಾರೀರ ಸಂಸ್ಕರಣಕ್ಕಾಗಿ ಕೆಲವು ಪ್ರಯೋಗಾತ್ಮಕ ಸಾಧನೆಗಳನ್ನು ಸೃಷ್ಟಿಸಿಕೊಂಡೆ. ಸಪ್ತಸ್ವರ ಸ್ಥಾನಗಳಲ್ಲಿ ಒಂದೊಂದು ಸ್ವರವನ್ನು 30–40 ಸೆಕೆಂಡುಗಳಷ್ಟು ಕಾಲ ನಿರಂತರವಾಗಿ ನಿಲ್ಲಿಸುವ ಸಾಧನೆಯನ್ನ ಕಂಡುಕೊಂಡೆ. ಅಂತರ ಗಾಂಧಾರವನ್ನು ಶುದ್ಧವಾಗಿ ಅದರ ಮೂಲಸ್ಥಾನದಲ್ಲಿ ಹಿಡಿದು, ಶಾರೀರಕ್ಕೆ ಪುಷ್ಟಿ ಕೊಡುವ ಸಂದರ್ಭದಲ್ಲಿ ಮೈ

ಮರೆಯುತ್ತಿದ್ದೆ. ಹೀಗೆ ಒಂದೊಂದು ಸ್ವರಗಳ ಸಂಪೂರ್ಣ ದರ್ಶನವನ್ನು ಪಡೆಯುವ ಪ್ರಯತ್ನದ ಹಾದಿಯನ್ನು ಹಿಡಿದುಕೊಂಡೆ. ಕ್ಲಿಷ್ಟತೆಯನ್ನು ಸರಳೀಕರಿಸಿ ಮಕ್ಕಳಿಗೆ ಆಕರ್ಷಣೀಯವಾಗಿ ಪಾಠ ಹೇಳಿಕೊಡಲು ಪ್ರಾರಂಭಿಸಿದೆ. ಇದೇ ನನಗೆ ದಾರಿ ದೀವಟಿಗೆಯಾಯಿತು.

ಪಾಠ ಹೇಳಿ ಕೊಡುವುದು ಯಾಂತ್ರಿಕ ಕೆಲಸವಾಗಿರಲಿಲ್ಲ. ಆತ್ಮೀಯತೆಯ ಆನಂದದ ಕೈಂಕರ್ಯವಾಗಿತ್ತು. ನಾನು ಕೇಳಿದ ಕೃತಿಗಳಿಗೆ ಶುದ್ಧವಾದ "ವರ್ಣಮಟ್ಟ"ನ್ನು ತಯಾರು ಮಾಡಲು ಪ್ರಾರಂಭಿಸಿದೆ. ನೂರಾರು ಕೃತಿಗಳಿಗೆ ವರ್ಣಮಟ್ಟನ್ನು ಸಿದ್ಧಪಡಿಸಿ ಪಾಠ ಮಾಡಿದೆ. ನನ್ನ ಹಾಡಿಕೆಯಲ್ಲಿ ನನಗೆ ನಂಬಿಕೆ ಬಂತು. ಕ್ರಮದ ಬಗ್ಗೆ ಹೆಮ್ಮೆ ಎನಿಸಿತು. ಶಾರೀರ ಸಂಪತ್ತಿನ ಮೌಲ್ಯದ ಅರಿವಾಯಿತು. ತ್ರಿಮೂರ್ತಿಗಳ ಒಂದೊಂದು ಕೃತಿಯೂ ಭಗವದ್ಗೀತೆಯ ಶ್ಲೋಕದಂತೆ ಕಂಡವು. ತ್ಯಾಗರಾಜರ ವಸ್ತುನಿಷ್ಠ, ಭಾವಪೂರಿತ ಕೃತಿಗಳ ವೈಭವಕ್ಕೆ ಮಾರು ಹೋದೆ. ದೀಕ್ಷಿತರ ಗುಣವಾಚಕಗಳ ಸಂಗೀತಸೌರಭ ಕೃತಿಗಳ ಸೃಷ್ಟಿಗೆ ತಲೆಬಾಗಿದೆ. ಶ್ಯಾಮಾಶಾಸ್ತ್ರಿಗಳ ನಿರ್ಮಲ, ಕೋಮಲ ನಾದಮಯ ಕೃತಿಗಳಿಗೆ ನಮಸ್ಕರಿಸಿದೆ. ನಾನು ಆಳವಾಗಿ ಹೋದಷ್ಟೂ ಅವುಗಳು ನನ್ನಿಂದ ದೂರ ಹೋಗುತ್ತಿವೆಯೆನೋ ಎಂಬ ಅನುಭವವಾಗುತ್ತಿತ್ತು. ಆದರೂ ಅವುಗಳನ್ನು ತಲುಪುವ ಪ್ರಯತ್ನ ಮಾಡಿದೆ. ಎಲ್ಲೋ ಒಂದು ಕಡೆ ಯಶಸ್ಸಿನ ಬೆಳಕನ್ನು ಕಂಡೆ.

ಹೀಗೆ ಸುಮಾರು 8 ವರ್ಷಗಳು ಬಹಳ ನಿಸ್ಪೃಹತೆಯಿಂದ ದಿನಕ್ಕೆ 6–7 ಗಂಟೆಗಳ ಸಾಧನೆಯ ಪ್ರಕ್ರಿಯೆ ನಡೆಯುತ್ತಲೆ ಇತ್ತು. ಶಿಷ್ಯ ಸಮೂಹವೂ ವೃದ್ಧಿಯಾಯಿತು. ನನ್ನ ಸಂಗೀತಮಟ್ಟವೂ ವೃದ್ಧಿಯಾಯಿತು. ಭಾವ ಸಂಪರ್ಕವೂ ಹೆಚ್ಚಾಯಿತು. ಸುಮಾರು 1989ರ ಹೊತ್ತಿಗೆ ನಾನು ಒಬ್ಬ ನಿಷ್ಠಾವಂತ ಕಲಾವಿದ ಎನಿಸಿಕೊಂಡಿದ್ದೆ".

ಓದುಗ,
ನಿನಗೆ ಐದನೆಯ ಅಧ್ಯಾಯದಲ್ಲಿಯೇ ಹೇಳಿದ್ದೇನೆ. ಆಗ ನಾವು ಸಪ್ತಸ್ವರ ದೇವತಾ ಧ್ಯಾನ ಮಂದಿರದಲ್ಲಿ ಗುರು ವಾದಿರಾಜರ ಮೂರ್ತಿಯ ಮುಂದೆ ಇದ್ದೆವು. ಪುಸ್ತಕದ ಬೀರುವಿನಲ್ಲಿದ್ದ "ವಾದಿರಾಜರ ಕೃತಿಗಳು" ಅನ್ನುವ ಪುಸ್ತಕ ಮರಳಿ ಸಿಕ್ಕ ಬಗ್ಗೆ ಆಗ ಹೇಳಿದ್ದೆ. ಅದರಲ್ಲಿದ್ದ "ನಾರಾಯಣ ಎನ್ನಿರೋ ಸಜ್ಜನರೆಲ್ಲ" ಕೃತಿಯನ್ನು ದರ್ಶಿಸಿದ ನಂತರ ಆರ್ಕೆಪಿ ಅವರ ಜೀವನದ ದಿಕ್ಕು ಬದಲಾಗಿ ಹೋಯಿತು. "1989ರ ಮುಂಚೆ ಇದ್ದ ಪದ್ಮನಾಭನೇ ಬೇರೆ, ಆನಂತರದ ಪದ್ಮನಾಭನೇ ಬೇರೆ".

ನಾನೂ ಮತ್ತು ಗುರುಪ್ರಸಾದ್, ಪದ್ಮನಾಭರ ಮನೆಯ ಮಹಡಿಯ ಪಡಸಾಲೆಯಲ್ಲಿ ನಿಂತಿದ್ದೆವು. ಎದುರಿಗೆ ಪುಟ್ಟ ದೇವರ ಕೋಣೆ. ವಾದಿರಾಜ ಸ್ವಾಮಿಗಳ ಸುಂದರ ಕರಿಕಲ್ಲಿನ ಮೂರ್ತಿ ಅಲ್ಲಿ ವಿರಾಜಮಾನವಾಗಿದೆ. ಪದ್ಮಾಸನದ ಭಂಗಿ. ತಲೆಮೇಲೆ

ನೈವೇದ್ಯದ ತಟ್ಟೆಯನ್ನು ಇಟ್ಟುಕೊಂಡಿದ್ದಾರೆ. ಹಯವದನ ದೇವರು ಹಯರೂಪದಲ್ಲಿಯೇ ಬಂದು, ನೈವೇದ್ಯವನ್ನು ಸ್ವೀಕರಿಸುತ್ತಿದ್ದಾರೆ. ಮುಂದೆ ದೀಪದ ಕಂಬ. ಸುವಾಸನಾಯುಕ್ತ ಪರಿಸರ. ಹಲವಾರು ದೇವ ದೇವತೆಗಳ ಚಿತ್ರಗಳು. ನೋಡಿದ ತಕ್ಷಣ ಕೈಗಳು ತಾನಾಗಿಯೆ ಕೂಡಿದವು.

ಆರ್ಕೆಪಿ, ವಾದಿರಾಜರ ಬಗ್ಗೆ ಮಾತನಾಡತೊಡಗಿದರು.
"ಸದ್ಗುರು ವಾದಿರಾಜಸ್ವಾಮಿಗಳ ಜ್ಞಾನಾಕ್ಷತೆ ದೊರೆತ ಮೇಲೆ ನಾನು ಇನ್ನೂ ಚೈತನ್ಯ ರೂಪಿಯಾದೆ. ರಾತ್ರಿ ಹಗಲು ಅವರ ಕೃತಿಗಳ ಅಧ್ಯಯನದಲ್ಲಿ ತೊಡಗಿಕೊಂಡೆ. ಅಧ್ಯಯನದಿಂದ ಆನಂದ. ಗುರುಗಳ ಕೃತಿಗೆ ರಾಗ ಸಂಯೋಜನೆ ಮಾಡುವ ಮೊದಲು ಆಯಾಯಾ ರಾಗಗಳ ಆಳವಾದ ಅಧ್ಯಯನ ಮಾಡತೊಡಗಿದೆ. ಅವುಗಳ ಸೌಂದರ್ಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಸ್ವರಗುಚ್ಛಗಳಲ್ಲಿ ಇಂತಹ ಒಂದು ಶಕ್ತಿ ಇದೆಯೇ ಎಂದು ದಿಗ್ಭ್ರಾಂತನಾದೆ. ಅದರಲ್ಲೂ ನಟಭೈರವಿ, ಮುಖಾರಿ, ಪೂರ್ವಿಕಲ್ಯಾಣಿ, ಯದುಕುಲ ಕಾಂಬೋದಿ, ಕಾನಡ, ಹಂಸಾನಂದಿ, "ಮೋಹನ, ಮಾಯಾಮಾಳವಗೌಳ, ಆನಂದಭೈರವಿ, ಆಹಿರ್‌ಭೈರವ್, ಹೀಗೆ ರಾಗಗಳ ಗುರುಗಳ ಕೃತಿಗಳು 25 ದಿವಸದಲ್ಲಿ ಸೃಷ್ಟಿಯಾದವು. ನನಗೆ ಬ್ರಹ್ಮಾನಂದವಾಯಿತು. ಎಲ್ಲ ಕೃತಿಗಳ ಸಾಹಿತ್ಯವೂ ನನ್ನ ಅಂತರಾಳವನ್ನು ಹೊಕ್ಕಿದವು. ಆನಂದದ ಪರಾಕಾಷ್ಠೆಯನ್ನು ಕಂಡುಕೊಂಡೆ. ಆ ಕೃತಿಗಳಲ್ಲಿ ಅದೇನು ಶಕ್ತಿ, ಚೈತನ್ಯಗಳು ತುಂಬಿಕೊಂಡಿದ್ದವೋ ನನಗೇ ಅರ್ಥವಾಗುತ್ತಿರಲಿಲ್ಲ. ಸತ್ಯ ಹೇಳುವುದಾದರೆ ನಾನು ರಾಗಸಂಯೋಜನೆಗೆ ಕಷ್ಟಪಡಲೇ ಇಲ್ಲ. ಬಹಳ ಸುಲಲಿತವಾಗಿ ರಾಗ, ತಾಳಗಳ ಸಾಹಿತ್ಯದಲ್ಲಿ ಬೆರೆತುಹೋದವು. ಗುರುಗಳ ಸಾಹಿತ್ಯದ ಸಾಮರ್ಥ್ಯದ ದರ್ಶನವಾಯಿತು. ದೇವರನಾಮವನ್ನು ಹಾಡಬೇಕಾದರೆ ಅಥವಾ ರಾಗ ಸಂಯೋಜನೆ ಮಾಡಬೇಕಾದರೆ ಅಪಾರ ಜ್ಞಾನವಿರಬೇಕು ಎಂಬ ಅರಿವಾಯಿತು. ರಾಗಗಳ ಭಾವವರಿಯದೆ ದೇವರ ನಾಮಗಳನ್ನು ಹೃದಯಸ್ಪರ್ಶಿಯಾಗಿ ಹಾಡಲಾಗುವುದಿಲ್ಲ. "ದೇವರನಾಮವನ್ನು ಸುಲಭವಾಗಿ ಕಲಿಯಬಹುದು" ಎಂಬ ಮಾತು ರೂಢಿಯಲ್ಲಿದೆ. ಅವುಗಳನ್ನು ಹಾಡಬೇಕಾದರೆ ಸಾಹಿತ್ಯ ಶುದ್ಧಿಯಿರಬೇಕು. ಲಯದ ಹತೋಟಿಯಿರಬೇಕು. ಹಾಡುವಾಗ ರಾಗ ಸೌಂದರ್ಯವನ್ನು ಅರಿತು, ಭಾವ ಭಾವನೆಗಳಿಗೆ ಒತ್ತುಕೊಡಬೇಕು. ಗಾಯಕ ಭಾವುಕನಾಗಿರಬೇಕು. ಇವುಗಳಿಲ್ಲದ ಗಾಯನ ಜನಸಾಮಾನ್ಯರನ್ನು ಮುಟ್ಟಲಾರದು. ಇವೆಲ್ಲಾ ನನಗರ್ಥವಾದದ್ದು.

ಗುರುಗಳ ಕೃತಿಗಳ ರಾಗ ಸಂಯೋಜನೆಯ ಸಂದರ್ಭದಲ್ಲಿ, ನಟಭೈರವಿ ರಾಗದ "ನಾರಾಯಣನೆಂಬ ನಾಮವೇ ಮೂಲಮಂತ್ರ" ಎಂಬ ಕೀರ್ತನೆಯ ಚರಣದ ಅಂತ್ಯದಲ್ಲಿ "ಅಬ್ಜಾಕ್ಷ ಹಯವದನ" ಎಂಬ ಮಾತಿಗೆ ಧಾತು ತಾರಸ್ಥಾಯಿಯಲ್ಲಿ ಗಾಂಧಾರವನ್ನು ಮುಟ್ಟಿ, ಪುನಃ "ರಿಸದಾ" ಪ್ರಯೋಗದಿಂದ ಅವರೋಹಣದಲ್ಲಿ

"ನಾರಾಯಣ" ಎಂದು ಹಾಡುವಾಗ ನಾನು ನಾನೇ ಆಗ್ತಾ ಇರಲಿಲ್ಲ. ಆ ಪದಪ್ರಯೋಗ ಮತ್ತು ರಾಗದ ಮಧುರತೆಯಿಂದ ಸುಮಾರು ಮೂವತ್ತು ನಿಮಿಷಗಳು ಮೂಕನಂತೆ ಕುಳಿತದ್ದು ಇಂದೂ ನನ್ನ ಅಂತರಂಗವನ್ನು ಕಲಕುತ್ತಿದೆ. ಆಶ್ಚರ್ಯಕರ ವಿಚಾರವೆಂದರೆ ಆಯಾಯಾ ಸಾಹಿತ್ಯಕ್ಕೆ ಆಯಾಯಾ ರಾಗಗಳು ಬಹಳ ಸ್ವಾಭಾವಿಕವಾಗಿ ಹೊಂದಿಕೊಳ್ಳುತ್ತಾ, ಸಾಹಿತ್ಯದ ಹಾಗೂ ಆಯಾಯ ರಾಗಗಳ ಹೂರಣದ ರುಚಿಯನ್ನು ಬಹಳ ತೀವ್ರವಾಗಿ, ಶೀಘ್ರವಾಗಿ ಕೊಡುವುದನ್ನ ಅನುಭವಿಸಿದ ನನಗೆ "ಸ್ವರ್ಗ" ಇನ್ನೇನು ಒಂದು ಚೋಟುದ್ದವಿದೆ ಎನಿಸುತ್ತಿತ್ತು. ಕೆಲವು ಸಂದರ್ಭಗಳಲ್ಲಿ ನನಗೆ ಇವೆಲ್ಲಾ ಕನಸೇನೋ ಎನಿಸುತ್ತಿತ್ತು." ಈಗ ಕೇಳಿ ಎಂದು ಆರ್ಕೆಪಿ ಹಾಡತೊಡಗಿದರು,

"ಪ್ರಭೋ ವಾದಿರಾಜಾ "ನೀನೇ ..ಕಾಯಬೇಕು
ವಾದಿರಾಜಾ. ನೀನೆ.. ಕಾಯಬೇಕು.
ಎನಗನ್ಯರಿಲ್ಲ ನೀನೆ...ನೀನೆ.. ನೀನೆ ನೀನೇ ಬಂಧು.. ನೀನೇ ಬಳಗ
ಪ್ರಭೋ ವಾದಿರಾಜ. ವಾದಿರಾಜ. ಪ್ರಭೋ ವಾದಿರಾಜ."

ನಾದ ಮಾಧುರ್ಯದಲ್ಲಿ ನಾವು ತೇಲಿ ಹೋದೆವು. "ಇದನ್ನು ಈಗಲೆ ರಚಿಸಿದ್ದು" ಅನ್ನುತ್ತಿದ್ದ ಹಾಗೆ ಪದ್ಮನಾಭ ಅವರ ಕಣ್ಣಾಲಿಗಳು ತುಂಬಿದ್ದವು. ನಾನು, ಗುರು ಮೂಕವಿಸ್ಮಿತವಾದೆವು.

ಜೆಪಿ ನಗರದ, ನಂಬರ್ 16, 1ನೆ ಅಡ್ಡ ರಸ್ತೆ, 2ನೆಯ ಹಂತದಲ್ಲಿ ಆರ್ಕೆಪಿ ಮನೆ, "ಶ್ರೀನಿವಾಸ". ತಲೆ ಎತ್ತಿ ನೊಡಿದರೆ, "ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್", "ಶಾರದಾ ಕಲಾ ಕೇಂದ್ರ" ಅನ್ನುವ ಫಲಕಗಳು. ಕೆಳಗೆ ವಾಸದ ಮನೆ. ಮಹಡಿಯಲ್ಲಿ ಸಾಧನಾ ಕುಟೀರ. ಆಯತಾಕಾರದ ಪಡಸಾಲೆಯ ಗೋಡೆಗಳ ಮೇಲೆಲ್ಲಾ ದೇಶದ ಹಲವಾರು ಸಂಘ, ಸಂಸ್ಥೆಗಳು ನೀಡಿರುವ ಬಿನ್ನವತ್ತಳೆಗಳು, ಫಲಕಗಳು, ಛಾಯಾಚಿತ್ರಗಳು, ಪದ್ಮನಾಭರಿಗೆ ಹಾಕಿದ ಹಾರಗಳು. ಬ್ಯಾಡ್ಜುಗಳು. ಎಲ್ಲವನ್ನೂ ಇಟ್ಟಿದ್ದಾರೆ.

ನಿಮಗೆ ಆಶ್ಚರ್ಯವಾಗುವುದಲ್ಲವೇ. "ಪ್ರತಿಯೊಂದು ಕೊಡುಗೆಯಲ್ಲಿಯೂ ಪ್ರೀತಿ ವಿಶ್ವಾಸವಿದೆ, ಅದನ್ನು ಗೌರವಿಸಬೇಕು. ನೋಡು ಜನರು ಕೊಟ್ಟಿರುವ ಚಿನ್ನದ ಕಡಗಗಳೂ ಇಲ್ಲಿದೆ. ನೂರಾರು ಬೆಳ್ಳಿಯ ವಿಗ್ರಹಗಳು, ಸೊಂಟದೆತ್ತರದ ದೀಪದ ಕಂಬಗಳು. ಎಲ್ಲವನ್ನೂ ಸಂರಕ್ಷಿಸಿರುವೆ."

ಉಡುಪಿಯ ಅಷ್ಟಮಠಗಳಲ್ಲಿ ಆಗಿರುವ ಸನ್ಮಾನದ ಚಿತ್ರಗಳು. ಪರ್ಯಾಯದಲ್ಲಿ ನಡೆಸಿದ ಕಛೇರಿಯ ಚಿತ್ರಗಳು. ಪೇಜಾವರ ವಿಶ್ವೇಶ ಶ್ರೀಪಾದಂಗಳು

ಸನ್ಮಾನಿಸುತ್ತಿರುವ ಚಿತ್ರ, ಕಂಚಿಯ ಶ್ರೀಶ್ರೀ ಜಯೀಂದ್ರ ಸರಸ್ವತಿಗಳು, ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರು, ಶ್ರೀ ಗಣಪತಿ ಸಚ್ಚಿದಾನಂದರು. ಜೀಯರ್ ಸ್ವಾಮಿಗಳು, ರಾಮಕೃಷ್ಣ ಮಠದ ಸ್ವಾಮಿಗಳು, ಕಾಶಿಯ ಜಂಗಮ ಮಠದ ಸ್ವಾಮಿಗಳು,... ಹೀಗೆ ರಾಷ್ಟ್ರದ ಆಧ್ಯಾತ್ಮಿಕ ಕ್ಷೇತ್ರದ ಹಿರಿಯ ಸಾಧು ಸಂತರ ಚಿತ್ರಗಳು, ನಮ್ಮ ಕಣ್ಮನಗಳನ್ನು ತುಂಬಿತು. ನನಗೆ ಬಹಳ ಹೆಮ್ಮೆಯಾಯಿತು. ಗುರು ಪ್ರಸಾದ್ ಹೇಳಿದರು,
"ರವಿ, ಇಲ್ನೋಡು"

ಭಾರತದ ಮೂರು ಜನ ರಾಷ್ಟ್ರಪತಿಗಳೊಂದಿನ ಚಿತ್ರ. ಪ್ರಣಬ್ ಕುಮಾರ್ ಮುಖರ್ಜಿಯವರೊಂದಿಗೆ ಕರ್ನಾಟಕ ರಾಜಭವನದಲ್ಲಿ, ಪದ್ಮನಾಭರ ಕಛೇರಿ ನಡೆದ ಸಂದರ್ಭದ ಚಿತ್ರ. ಅಂದಿನ ರಾಜ್ಯಪಾಲ ಹಂಸರಾಜ ಭಾರದ್ವಾಜರು ಇದ್ದಾರೆ. ಮತ್ತೊಂದರಲ್ಲಿ, ದೇಶ ಕಂಡ ಅತ್ಯುತ್ತಮ ರಾಷ್ಟ್ರಪತಿ ಅಬ್ದುಲ್ ಕಲಾಂರೊಂದಿಗೆ, ಅವರು ಬೆಂಗಳೂರಿಗೆ ಬಂದಾಗ. ಮತ್ತೊಂದರಲ್ಲಿ ಆರ್ ವೆಂಕಟರಾಮನ್. ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್, ಸಿದ್ದರಾಮಯ್ಯ, ಮತ್ತು ಶಿವರಾಮ ಕಾರಂತರು, ಸಂತೋಷ್ ಹೆಗಡೆಯಂತಹ ಹಿರಿಯ ಜೀವಿಗಳು....ಹೀಗೆ ಪಟ್ಟಿ ಉದ್ದವಿದೆ.

ಪಡಸಾಲೆಯಿಂದ ಬಲ ಪಕ್ಕಕ್ಕೆ ತಿರುಗಿದರೆ ಮತ್ತೊಂದು ಕೋಣೆ. ಅಲ್ಲಿಯೂ ಸನ್ಮಾನ ಫಲಕಗಳು. ಅವರಿಗೆ ತೊಡಿಸಿದ ಪೇಟಗಳ ರಾಶಿಯನ್ನು ಅಂದವಾಗಿ ಜೋಡಿಸಿದ್ದಾರೆ. ಪದ್ಮನಾಭರು ರಚಿಸಿರುವ ಪುಸ್ತಕಗಳ ಸಂಗ್ರಹವೂ ಅಲ್ಲಿದೆ. ಒಂದು ವಿಚಾರ ಗಮನಿಸಿ, ಆರ್ಕೆಪಿಯವರೊಂದಿಗೆ ಮಾತಾಡುವಾಗ ಬರಿಯ ಸಂಗೀತವಲ್ಲ, ಹಾಸ್ಯ ಚಟಾಕಿಗಳೂ ಹಾರುತ್ತಿರುತ್ತವೆ. ಹಾಡುಹಬ್ಬವಾಗಿ ಹರಿಯುತ್ತಿರುತ್ತದೆ. ಅವರ ಹತ್ತಾರು ಅನುಭವಗಳು ನಿಮ್ಮದಾಗುತ್ತದೆ.

ಮತ್ತೆ, ಪಡಸಾಲೆಗೆ ಬಂದು ಎರಡನೆಯ ಮಹಡಿಗೆ ಹೋಗಬೇಕು. ಅಲ್ಲಿಯೇ ಆರ್ಕೆಪಿ ಅವರ ವಾಚನಾಲಯವಿದೆ. ಮಹಡಿಯ ವಿಶಾಲ ಜಾಗದಲ್ಲಿ, ತರಗತಿಗಳನ್ನೂ, ಮೀಟಿಂಗಳನ್ನೂ ನಡೆಸಬಹುದು. ಯಥಾಪ್ರಕಾರ ಆ ಸಭಾಂಗಣದಲ್ಲಿ ಫಲಕಗಳೋ ಫಲಕಗಳು.

"ಇನ್ನೂ ಕೆಲವನ್ನು ವಾದಿರಾಜ ಭವನದಲ್ಲಿ ಇರಿಸಿರುವೆ" ಅಂದರು ಪದ್ಮನಾಭ್.

"1984ಕ್ಕೆ, ನನಗೆ ಪ್ರಧಾನ ಕಛೇರಿಗೆ ವರ್ಗವಾಯಿತು" ಅಂತ ಆರ್ಕೆಪಿ ಹೇಳಿದಾಗ ನಾವಿಬ್ಬರೂ ವಾಸ್ತವಕ್ಕೆ ಬಂದೆವು. ಸಹೋದ್ಯೋಗಿಯೊಬ್ಬರ ಸಾಧನೆಯ ಮೆಲುಕಿನ ಸವಿಯಲ್ಲಿ ನಾವಿದ್ದೆವು.

"ನಿಮಗೆ ಈ ಘಟನೆಯ ಬಗ್ಗೆ ತಿಳಿದಿದೆ. ಆದರೂ ಹೇಳಿಬಿಡ್ತೇನೆ. ನನ್ನ ಸಂಗೀತದ ಕೆರಿಯರ್ಗೆ ತಿರುವು ಕೊಟ್ಟ ಪ್ರಸಂಗ. ನಾನು ಪ್ರಧಾನ ಕಛೇರಿಯಲ್ಲಿ ಕೆಲಸ ಮಾಡ್ತಾ ಇದ್ದಾಗ ಇದ್ದ ನಮ್ಮ ಹಿರಿಯ ಅಧಿಕಾರಿಗಳು ಬಹಳ ಸಂಗೀತಾಭಿಮಾನಿಗಳು. ಅವರಲ್ಲಿ ಶ್ರೀ ಶಂಕರನಾರಾಯಣ್ "ಪ್ರಧಾನ ವ್ಯವಸ್ಥಾಪಕರು", ಬಹಳ ಒಳ್ಳೆಯ ಸಂಗೀತ ರಸಿಕರು. ನನ್ನನ್ನು ಕಂಡರೆ ಅವರಿಗೆ ತುಂಬಾ ಅಭಿಮಾನ. ಪೂಜೆ ಪುನಸ್ಕಾರಗಳಲ್ಲಿ ಅಪಾರ ನಂಬಿಕೆ. ಮುನ್ನುಗ್ಗುವ ವ್ಯಕ್ತಿತ್ವ. ಯಾವ ಸಮಸ್ಯೆಯನ್ನೂ ಕ್ಷಣದಲ್ಲಿ ಪರಿಹಾರ ಮಾಡುತ್ತಿದ್ದ ಚಾಕಚಕ್ಯತೆ. ನಮ್ಮ ಬ್ಯಾಂಕ್ ಅವರ ಕಾಲದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ರಾಮಸೇವಾ ಮಂಡಲಿಗೆ ಪ್ರತಿವರ್ಷ ಸಾಕಷ್ಟು ಪ್ರಮಾಣದಲ್ಲಿ ಆರ್ಥಿಕ ನೆರವನ್ನು ನೀಡುತ್ತಿತ್ತು. ರಾಮಸೇವಾ ಮಂಡಲಿಯ ಶ್ರೀ ನಾರಾಯಣಸ್ವಾಮಿ ಅವರು ಒಂದು ಸಾರಿ ಶಂಕರನಾರಾಯಣ ಅವರನ್ನು ನೋಡಲು ಬಂದರು. ಶಂಕರನಾರಾಯಣ ಅವರು ಕೂಡಲೇ ಚೇಂಬರ್ಗೆ ನನ್ನನ್ನು ಕರೆಸಿದರು. ನಂತರ ಆಗಲೇ ತಯಾರಾಗಿದ್ದ ರಾಮೋತ್ಸವದ ಕಾರ್ಯಕ್ರಮದ ಪಟ್ಟಿಯನ್ನು ನೋಡಿ, ಕೇಳಿದರು.

"ಎನ್ನ ನಾರಾಯಣಸ್ವಾಮಿ, Local talent ಆಪರ್ಚುನಿಟಿಯೇ ಕಡಕ್ಕಾದ? This is very bad" .

ನಾರಾಯಣ ಸ್ವಾಮಿ ಏನೂ ಮಾತಾಡಲಿಲ್ಲ. ತಕ್ಷಣ ಶಂಕರನಾರಾಯಣ ಅವರು ನನ್ನ ಕಡೆ ಕೈ ತೋರಿಸಿ
"ಇವರ್ ರಂಬ ನಲ್ಲ ಪಾಡ್ವಾರ್, ಇವರ್ ಪೋಡಣು"
ಅಂತ ಹೇಳಿ ನನ್ನ ಹೆಸರನ್ನು ಅಲ್ಲೇ ಕಾರ್ಯಕ್ರಮ ಪಟ್ಟಿಗೆ ಸೇರಿಸಿದರು. ಮೊದಲ ಬಾರಿಗೆ ಉಮಯಾಲಪುರಮ್ ಶಿವರಾಮನ್ ಮತ್ತು ವಿ.ವಿ. ಸುಬ್ರಹ್ಮಣ್ಯಮ್ ಅವರ ಪಕ್ಕವಾದ್ಯದಲ್ಲಿ ನನ್ನ ಕಛೇರಿಯನ್ನು ಏರ್ಪಾಡು ಮಾಡಿಸಿದ್ದು ಬಹುಶಃ ನನ್ನ ಬದುಕಿನಲ್ಲಿ ಒಂದು ಹೊಸ ತಿರುವು ಕಂಡಿತು.

ಅದಾದ ಮೇಲೆ ಪ್ರತಿವರ್ಷ ಶಿವರಾಮನ್, ಪಾಲ್ಘಾಟ್ ರಘು, ಟಿ.ಕೆ. ಮೂರ್ತಿ ಹೀಗೆ ಆಗ ಬಹಳ ಪ್ರಸಿದ್ಧವಾಗಿದ್ದ ಪಕ್ಕವಾದ್ಯ ಧುರೀಣರ ಜೊತೆಯಲ್ಲಿ ಹಾಡುವ ಒಂದು ಅದ್ಭುತ ಅವಕಾಶವಾಯಿತು. ಇಂದಿಗೂ ನಾನು ಶ್ರೀ ಶಂಕರನಾರಾಯಣ್ ಅವರನ್ನು ಜ್ಞಾಪಿಸಿಕೊಳ್ಳುತ್ತೇನೆ.

ನಂತರ ಬಂದ ಶ್ರೀ ಸುಂದರರಾಮನ್ ಅವರೂ ಸಹ ಕಟ್ಟಾ ಕರ್ನಾಟಕ ಸಂಗೀತ ಪ್ರೇಮಿ, ಬಹಳ ದೊಡ್ಡವ್ಯಕ್ತಿ. ಬಹಳ ಸರಳ. ನಾನು ಚೆಂಬರ್‌ಗೆ ಹೋದ್ರೆ ಅವರು ಎದ್ದು ನಿಂತು ನನ್ನನ್ನು ಸ್ವಾಗತಿಸುತ್ತಾ ಇದ್ದರು.

"Sir, you are my GM. I am afterall a clerk. Why do you stand and receive me sir? I feel embarrassed."
"Padmanabh, ಪಾರಂಗೋ ಇನ್ನಿಕಿ ನಾ General Manager. After my retirement nobody cares for me, You are an artist. An artist is an artist forever. I salute this great art of Carnatic Music".

22
ನಿನ್ನಪಾದ ಸೇವೆ ಎನಗೀಶ ಸೇವೆ

ನಿನ್ನಪಾದ ಸೇವೆ ಎನಗೀಶ ಸೇವೆ
ನಿನ್ನಕ್ಷತೆಯೇ ನೀಡ್ವುದು ದಕ್ಷತೆ
ನಿನ್ನ ದರುಶನ ಹರಿಸಂದರ್ಶನ
ನಿನ್ನ ಸನ್ನಿಧಿ ಪದ್ಮನಾಭದಾಸಗೆ ನಿಧಿ

ನಿಮ್ಮಲ್ಲಿ ಹಲವರು "ವಾದಿರಾಜ ಭವನ"ಕ್ಕೆ ಹೋಗಿರುತ್ತೀರಿ. ಸಂಗೀತದ ಜೊತೆಗೆ ಪುಷ್ಕಳ ಭೋಜನ, ಗೆಳೆಯರ ಭೇಟಿ, ನಗೆಚಟಾಕಿ.. ಹೀಗೆ ಹತ್ತಾರು ಚಿತ್ರಗಳು ನಿಮ್ಮ ಕಣ್ಮುಂದೆ ಬರಬಹುದು.

"ಆ ಪುಸ್ತಕ ಸಿಕ್ಕುವ ಮುನ್ನ ವಾದಿರಾಜರ ಕೃತಿಗಳಿರಲಿ, ವಾದಿರಾಜರ ಹೆಸರನ್ನೂ ನಾನು ಕೇಳಿರಲಿಲ್ಲ." ಅನ್ನುತ್ತಾರೆ ಆರ್ಕೆಪಿ. ಎಂತಹ ಆಶ್ಚರ್ಯ! ಪವಾಡ ಸದೃಶ ವಿಚಾರ. ಅವರ ಜೀವನದ ದಿಕ್ಕು ಬದಲಾವಣೆಯಾಯಿತು. ಸಂಗೀತ ಮತ್ತು ಸಾಮಾಜಿಕ ವಲಯದಲ್ಲಿ ಮನ್ನಣೆ ದೊರೆಯಿತು. 1990 ರ ಅಕ್ಟೋಬರ್‌ನಲ್ಲಿ "ಶಾರದಾ ಕಲಾಕೇಂದ್ರ" ವನ್ನು ಸ್ಥಾಪಿಸಿ ಹತ್ತಾರು ಸಂಗೀತ ಕೃತಿಗಳನ್ನು, ವಿವಿಧ ಕಲಾವಿದರ ಕ್ಯಾಸೆಟ್‌ಗಳನ್ನೂ ಬೆಳಕಿಗೆ ತಂದರು. ವಾದಿರಾಜರ ಕೃಪೆ.

"ವಾದಿರಾಜ.. ವಾದಿರಾಜ.." ಅನ್ನತೊಡಗಿದರು. ಇಡೀ ದಿನ ಅವರ ನಾಮಸ್ಮರಣೆ. "ಓಹ್ ಸ್ವಾಮಿಗಳು ಹೀಗಿದ್ದಿರಬಹುದು, ಹಾಗಿದ್ದಿರಬಹುದು.." ಎಂಬ ಕಲ್ಪನಾವಿಲಾಸ. ಶ್ರೀಕ್ಷೇತ್ರ ಸೋದೆಗೆ ಭೇಟಿಕೊಡಬೇಕೆಂಬ ತವಕ.

1991ರ ಮೊದಲ ದಿನಗಳು. ಇಬ್ಬರು ಗೆಳೆಯರ ಜೊತೆಗೆ ಸೋದೆಯತ್ತ ಹೊರಟೇ ಬಿಟ್ಟರು. ಪವಿತ್ರಭೂಮಿಯನ್ನು ಸ್ಪರ್ಶಿಸಿದ ಕ್ಷಣವೆ ವಿದ್ಯುತ್ ಸಂಚಾರವಾಯ್ತು. ಮಣ್ಣು, ಕಣ್ಣು ಮುಟ್ಟಿ ಮುಡಿಗೇರಿತು. ವಾದಿರಾಜರ ವೃಂದಾವನದ ಮುಂದೆ

ನಿಂತಾಗ ಕಣ್ಣಲ್ಲಿ ನೀರು ಧಾರಾಕಾರ.

ನಾನು ಕೇಳಿದೆ,
"ಪದ್ಮನಾಭರೆ, ಏಕೆ ನೀವು ಇಂತಹ ಸಂದರ್ಭಗಳು ಬಂದಾಗ ಪದೇ ಪದೆ ಭಾವೋದ್ವೇಗಕ್ಕೆ ಒಳಗಾಗುವಿರಿ?"

"ನಾನು ಮೂಲತಃ ಭಾವಜೀವಿಯಲ್ಲ. ಜೀವನದ ಘಟನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಾ ಚಿಂತೆಯ ಕಾರ್ಮೋಡವನ್ನು ಹೊತ್ತುಕೊಳ್ಳುವುದಿಲ್ಲ. ಸ್ವಲ್ಪ ಲಘು ಸ್ವಭಾವವೇ. ಮಾತಿನಲ್ಲೇ ಏಕೆ, ಪಾಠ ಮಾಡುವಾಗಲೂ ಹಾಸ್ಯ ಮಾಡುತ್ತೇನೆ. ಶಿಷ್ಯರು ನಗುತ್ತಲೇ ಕಲಿಯುತ್ತಾರೆ. "ನೋಡಿ ತಿಳಿ; ಹಾಡಿ ನಲಿ" ಅನ್ನುವ ಸೂತ್ರ ನನ್ನದು."

"ಆದರೆ ಗುರು ಸನ್ನಿಧಿಯಲ್ಲಿ, ಗಾಯನದ ಗಹನ ಗಳಿಗೆಗಳಲ್ಲಿ ನಾನು ನಾನಾಗಿರುವುದಿಲ್ಲ. ನಾದದೊಂದಿಗೆ ಬೆರೆತು ಹೋಗುತ್ತೇನೆ. ಮನದ ಬಟ್ಟಲು ತುಂಬಿರುತ್ತದೆ. ಪರಾಕಾಷ್ಠೆಯ ಸಂದರ್ಭಗಳಲ್ಲಿ, ಪಕ್ಕವಾದ್ಯದವರಿರಲಿ, ಪಕ್ಕವಾದ್ಯವೂ ಕೇಳುವುದಿಲ್ಲ. ಇನ್ನು ಕಛೇರಿಯಲ್ಲಿ ಎಷ್ಟು ಸಾವಿರ ಶ್ರೋತೃಗಳು ಇದ್ದರೂ ಅರಿವಿಗೆ ಬರುವುದಿಲ್ಲ. ಆ ಲೋಕವೇ ಬೇರೆಯಾಗಿರುತ್ತದೆ. ನನ್ನದು ಕಲ್ಪಿತ ಗಾಯನವಲ್ಲ. ಮನೋಧರ್ಮ ಸಂಗೀತ. ನಾದಸಂಚಾರದಲ್ಲಿ ನಾದದೇವಿಗೆ ನಾದಸಮರ್ಪಣೆಯಾಗುತ್ತದೆ, ನಾದಸಂತರ್ಪಣೆಯೂ ಆಗುತ್ತದೆ. ಆದರೆ ಅದು ಉಪೋತ್ಪನ್ನವಷ್ಟೆ. ಗಾಯನದ ಉತ್ತುಂಗದಲ್ಲಿ ಗಾಯಕನೂ ಗಾಯನವೂ ಏಕೀಭವಿಸುತ್ತದೆ. "ನೀನು ಬೇರೆಯಲ್ಲ; ನಾನು ಬೇರೆಯಲ್ಲ" ಎಂಬ ಸ್ಥಿತಿ ಅನುಭವವಾಗುತ್ತದೆ. ಎಷ್ಟೋ ಬಾರಿ ಹಾಡುತ್ತಿರುವಾಗ ನನಗೆ ಮಹಾವಿಷ್ಣು, ಶಿವ, ಶಾರದೆಯರ ದರ್ಶನವಾಗಿದೆ. ಸೊಂಡಿಲ ಗಣಪ ಕಂಡಿದ್ದಾನೆ. ವಾದಿರಾಜರು ಕಂಡಿದ್ದಾರೆ, ಪುರಂದರರ ಕಾಲಿನ ಗೆಜ್ಜೆಗಳ ನಿನಾದ ಕೇಳಿದೆ.

ಈಗಲೂ ನೀನು ಗಮನಿಸಿರಬಹುದು,
"ಪ್ರಭೋ ವಾದಿರಾಜ ನೀನೇ.. ಕಾಯಬೇಕು..ಎನಗನ್ಯರಿಲ್ಲ" ಹಾಡುತ್ತಾ.. ಹಾಡುತ್ತಾ ಕಣ್ಣು ತುಂಬಿತು. ಇದು ಗುರು ಕೃಪೆಯಷ್ಟೆ. ಇದು ನನ್ನ ಅನುಭವ. ಇತರರು ನಂಬಿದರೆ ನಂಬಹುದು, ಇಲ್ಲದಿದ್ದರೆ ಇಲ್ಲ".

ವಾದಿರಾಜ ಸ್ವಾಮಿಗಳ ಬೃಂದಾವನದ ಸನ್ನಿಧಿ. ಸಂಗೀತ ಸಾಮ್ರಾಟರ, ಸಾಮ್ರಾಟತ್ವದ ದರ್ಶನ ಸಿಕ್ಕಿತು. ಮಂಡೆ ಬಾಗಿ ಮಂಡಿ ಊರಿ ನಮಿಸಿದರು. ಪೀಠಾಧಿಪತಿಗಳಾದ ಶ್ರೀ ಶ್ರೀ ವಿಶ್ವೋತ್ತಮ ತೀರ್ಥರನ್ನು ಕಂಡಾಗ
"ನೀವು ಯಾವ ಮಠ?"

“ಶಂಕರ ಮಠ”

"ರಾಜರ ಸೇವೆಗೆ ಯಾರು ಬೇಕಾದರೂ ಬರಬಹುದು. ಇಲ್ಲಿ ವ್ಯಕ್ತಿಯ ನಂಬಿಕೆ, ವಿಶ್ವಾಸ, ಗೌರವ, ಭಕ್ತಿ ಮುಖ್ಯವೇ ಹೊರತು ಮಠವಲ್ಲ"
ಎಂದು ನುಡಿದು, ಮನಸ್ಸು ತುಂಬಿ ಹರಸಿದರು.

ಪದ್ಮನಾಭರು ದೀರ್ಘದಂಡ ಪ್ರಣಾಮವನ್ನರ್ಪಿಸಿ “ನಾನೊಬ್ಬ ಸಂಗೀತ ಕಲಾವಿದ” ಎಂದು ಪರಿಚಯಿಸಿಕೊಂಡರು. ವಾದಿರಾಜರ ಕೃತಿಗಳನ್ನು ಸನ್ನಿಧಾನದಲ್ಲಿ ಹಾಡಿದರು. ಜೊತೆಗೆ ಈ ಕೃತಿಗಳನ್ನು ಕ್ಯಾಸೆಟ್ ಮಾಡಿ ಪ್ರಸಾರ ಮಾಡುವ ವಿಚಾರವನ್ನು ಪ್ರಸ್ತಾಪಿಸಿದರು. ಆಶೀರ್ವಾದ ಸಿಕ್ಕಿತು. "ಯಶಸ್ವಿಯಾಗಿ" ಎಂದು ತುಂಬು ಹೃದಯದಿಂದ ಗುರು ಹಾರೈಕೆ ಸಿಕ್ಕಿತು.

"ನನಗೆ ಸಾಕ್ಷಾತ್ ವಾದಿರಾಜರೇ ಅನುಗ್ರಹಿಸಿದಂತೆ ಭಾಸವಾಯಿತು. ಗಾನ ಮಂತ್ರಾಕ್ಷತೆ ದೊರೆತ ಮೇಲೆ ನನಗೇತರ ತಡೆ ಎಂದು ನನ್ನ ಅಂತರಂಗ ಹೇಳಿತು. ಗುರುಗಳಿಗೆ ನಮಸ್ಕರಿಸಿ ಹೊರಗೆ ಬಂದು ಮತ್ತೆ ಧವಳ ಗಂಗೆಯನ್ನು ದಾಟಿ ಒಂದು ಕಡೆ ಕುಳಿತುಕೊಂಡೆ. ಆಗ ತಾನೆ ಶಿವರಾತ್ರಿ ಕಳೆದು ಬಿಸಿಲಿನ ತಾಪ ಹೆಚ್ಚಾಗಿ ಇದ್ದಂತಿತ್ತು. ಆದರೂ ಆ ಅದ್ಭುತವಾದ ಹಸಿರು ಗಿಡ ಮರಗಳಿಂದ ಬರುತ್ತಿದ್ದ ತಂಗಾಳಿ ದೇಹಕ್ಕೆ ತಂಪು ನೀಡಿತು. ಮನಸ್ಸಿಗೂ ಶಾಂತಿ ನೀಡಿತು. ಆ ತಂಗಾಳಿ ಕೇವಲ ಗಾಳಿಯಾಗದೆ ನಾದ ತರಂಗಗಳಿಂದ ಆವರಿಸಿ ಸ್ವರಗಳ ಅಂದಚೆಂದವನ್ನು ಬೀರುವಂತಿತ್ತು. ಅಂದರೆ ವಾದಿರಾಜಸ್ವಾಮಿಗಳ ಬೃಂದಾವನದ ಆ ಪರಿಸರ ಸಂಪೂರ್ಣವಾಗಿ ನಾದ ತರಂಗಗಳಿಂದ ಆವೃತವಾಗಿದೆ ಎಂಬ ಸತ್ಯವನ್ನು ಅರಿತುಕೊಂಡೆ. ಹೀಗೆ ವಾದಿರಾಜ ಸ್ವಾಮಿಗಳು "ಮಹಾಭಾರತದಲ್ಲಿ ಶ್ರೀಕೃಷ್ಣ ತನ್ನ ವಿಶ್ವರೂಪ ದರ್ಶನ ಮಾಡಿಸಿದ ಹಾಗೆ" ನನಗೂ ತಮ್ಮ ಸಂಗೀತ ದರ್ಶನವನ್ನು ಮಾಡಿಸಿದ ಅನುಭವವಾಯಿತು. ಮಂಡಿಯೂರಿ ಕೂತು ಶ್ರೀ ವಾದಿರಾಜ ಗುರುಸಾರ್ವಭೌಮರನ್ನು ತಲೆಯೆತ್ತಿ ನೋಡಲು ಯತ್ನಿಸಿದೆ. ನನಗೆ ದರ್ಶನವಾದದ್ದು ಅವರ ಭೌತಿಕ ಶರೀರವಲ್ಲ. ಅವರ ನಾದ ಶಕ್ತಿಯ ಸೌಂದರ್ಯ. ಅಂದೇ ವಾದಿರಾಜ ಸ್ವಾಮಿಗಳು ಕೇವಲ ಯತಿ, ಕವಿ, ದಾರ್ಶನಿಕ, ಜ್ಞಾನಿ, ಬೋಧಕ, ಅಷ್ಟೇ ಅಲ್ಲ, ಒಬ್ಬ ಮಹಾನ್ ಕ್ರಾಂತಿಕಾರಿ ಶಾಸ್ತ್ರೀಯ ಸಂಗೀತ ಧೀಮಂತ ಯೋಗಿ ಎಂಬ ಅಚಲ ನಿರ್ಧಾರಕ್ಕೆ ಬಂದೆ. ಅಂದಿನಿಂದ "ನಂಬಿ ಕೆಟ್ಟವರಿಲ್ಲವೋ ವಾದಿರಾಜರ, ನಂಬದೆ ಕೆಟ್ಟರೆ ಕೆಡಲಿ" ಎಂಬ ದೃಢವಾದ ನಂಬಿಕೆ ಮಾತ್ರ ಬೆಳೆಸಿಕೊಂಡೆ. ಹಾಗೆಯೇ ಗುರುಗಳ ಕೃತಿಗಳ ಕ್ಯಾಸೆಟ್ ಮತ್ತು ಪುಸ್ತಕವನ್ನು ಲೋಕಾರ್ಪಣೆ ಮಾಡುವ ನಿರ್ಧಾರವನ್ನು ತೆಗೆದುಕೊಂಡು ಮತ್ತೆ ನಮಿಸಿ ಬೆಂಗಳೂರಿಗಾಗಿ ಬಸ್ ಹತ್ತಿದಾಗ ದುಃಖ ಮೇಲೆ ಮೇಲೆ ಬಂದು ಅಬ್ಬರಿಸುತ್ತಿತ್ತು. ಗುರುಗಳ ಸಾನ್ನಿಧ್ಯವನ್ನು ತೊರೆದು ಬರುವುದು ಹೇಗೆ? ಇದು ಸಾಧ್ಯವೇ?

ಎನ್ನುವಷ್ಟರ ಮಟ್ಟಿಗೆ ಆ ಪರಿಸರಕ್ಕೆ ನಾನು ಅಂಟಿಕೊಂಡಿದ್ದೆ. ಆದರೂ, ಎಷ್ಟೇ ಭಾವ ಜೀವಿಯಾದರೂ ಲೌಕಿಕ ಪ್ರಪಂಚಕ್ಕೆ ಬರಲೇಬೇಕು. ಸೋದಾ ಕ್ಷೇತ್ರದಿಂದ ಯಾವುದೋ ಒಂದು ಅಗೋಚರ ಶಕ್ತಿಯ ಚೈತನ್ಯದ ಗಂಟನ್ನು ಹೊತ್ತು ತಂದ ಅನುಭವದ ಆನಂದವನ್ನು ಸವಿಯುತ್ತಲೇ ಬೆಂಗಳೂರನ್ನು ಬಂದು ಸೇರಿದೆ" ಎಂದರು ಆರ್ಕೆಪಿ.

07–03–1991ರಂದು ಆರ್ಕೆಪಿ ಅವರ ಮೊದಲ ಸಾರ್ವಜನಿಕ ಸಮಾರಂಭ. ವಾದಿರಾಜರ ಕೃತಿಗಳ ಕ್ಯಾಸೆಟ್ ಬಿಡುಗಡೆ. ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ. ಶ್ರೀ ಆರ್ ಕೆ ಶ್ರೀಕಂಠನ್, ಎಸ್ ಎಂ ಕೃಷ್ಣಮೂರ್ತಿ, ಗುರುಗಳಾದ ಎಚ್ ವಿ ಕೃಷ್ಣಮೂರ್ತಿ ಅವರುಗಳು ಅತಿಥಿಗಳು. ಆರ್ಕೆಪಿ ಮತ್ತು ಅವರ ಸಹಗಾಯಕರು ಕ್ಯಾಸೆಟ್ಟಿನಲ್ಲಿರುವ ಹಾಡುಗಳ ಕಛೇರಿಯನ್ನು ನಡೆಸಿದರು. "ಕಾರ್ಯಕ್ರಮವು ವಾದಿರಾಜರ ಆರಾಧನೆಯಂತೆ ನಡೆಯಿತು" ಎಂದು ನೆನಪಿಸಿಕೊಳ್ಳುತ್ತಾರೆ.

ನಂತರದ ದಿನಗಳಲ್ಲಿ ಸೋದೆಗೆ ಹೋಗುವುದು, ವಾದಿರಾಜರ ಕೃತಿಗಳ ಧ್ವನಿಸುರಳಿ ಬಿಡುಗಡೆ ಮಾಡುವುದು, ವಾರ್ಷಿಕ ಕಾರ್ಯಕ್ರಮವಾಯಿತು. ಎಂಟು ಸಂಪುಟಗಳ, ಶುದ್ಧವರ್ಣಮಟ್ಟುಗಳನ್ನು ಸೂಚಿಸಿದ ಸುಮಾರು ಎಂಬತ್ತು ಕೃತಿಗಳು ಪ್ರಕಾಶಿತವಾಯಿತು. ವಿದ್ಯಾರ್ಥಿಗಳಿಗೆ, ಆಸಕ್ತರಿಗೆ ವಾದಿರಾಜ ಕೃತಿಗಳ ಕಲಿಕೆಯ ಹೆಬ್ಬಾಗಿಲು ತೆರೆಯಿತು. ವಾದಿರಾಜರ "ಲಕ್ಷ್ಮೀ ಶೋಭಾನೆ"ಯನ್ನು ಮದುಮಕ್ಕಳಿಗೆ ಮುದವಾಗುತ್ತದೆಯೆಂದು ಮದುವೆ ಮನೆಯಲ್ಲಿ ಹಾಡುತ್ತಿದ್ದರು. ಮಠಗಳಲ್ಲಿ ಹಾಡುತ್ತಿದ್ದರು. ಆದರೆ ಪದ್ಮನಾಭರು ಶ್ರೀ ಎಸ್ ಕೃಷ್ಣಮೂರ್ತಿಯರಿಂದ ಸಂಗೀತ ಸಂಯೋಜನೆ ಮಾಡಿಸಿ, ವರ್ಣಮಟ್ಟುಗಳನ್ನು ಸಿದ್ದಪಡಿಸಿ, ತಮ್ಮ ಶಿಷ್ಯರಿಂದ ಹಾಡಿಸಿ, ಕ್ಯಾಸೆಟ್ಗಳನ್ನೂ ಮಾಡಿಸಿದರು. ಪುಸ್ತಕವನ್ನೂ ಮುದ್ರಿಸಿದರು. ಸೋದೆಯ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ಶ್ರೀಪಾದಂಗಳವರು ಶಾರದಾ ಕಲಾ ಕೇಂದ್ರದ ಈ ರಚನಾತ್ಮಕ ಕೆಲಸಕ್ಕೆ ಸಂತೋಷಪಟ್ಟು ಮುನ್ನುಡಿ ಬರೆದು ಶುಭ ಹಾರೈಸಿದ್ದಾರೆ.

1996–97ರ ಒಂದು ನಡುರಾತ್ರಿ ಪದ್ಮನಾಭರಿಗೆ ವಿಶೇಷ ರೀತಿಯ ಅನುಭವವೊಂದು ಅಯಿತು. ಅವರ ಮಾತುಗಳಲ್ಲೆ ಕೇಳಿ.

"ಸದ್ಗುರು ವಾದಿರಾಜರನ್ನು ಆರಾಧಿಸಿದಷ್ಟೂ ಮತ್ತೂ ಆರಾಧಿಸಬೇಕು ಎಂಬ ತವಕ ನನ್ನಲ್ಲಿ ಮೂಡುತ್ತಾ ಬಂತು. ಗುರುಗಳನ್ನು ಸಂಪೂರ್ಣವಾಗಿ ನಂಬಿದೆ. ನನ್ನ ಸಂಗೀತ ಸಾಧನೆಯನ್ನು ಬಹಳ ಕಟ್ಟುನಿಟ್ಟಾಗಿ ಮಾಡುತ್ತಾ ಬಂದೆ. ಅವರ ಅನುಗ್ರಹಕ್ಕೆ ಪಾತ್ರರಾಗುವುದು ಕಷ್ಟ. ಆದರೆ ಅವರ ಅನುಗ್ರಹವಾದರೆ ಇನ್ನು ಹಿಂದೆ

ತಿರುಗಿ ನೋಡುವ ಹಾಗೇ ಇಲ್ಲ. ಮುಟ್ಟಿದ್ದೆಲ್ಲಾ ಚಿನ್ನ, ಯಶಸ್ಸು, ಗುರುಗಳಲ್ಲಿ ಭಕ್ತಿ ಹೆಚ್ಚಾದಷ್ಟೂ, ನನಗೆ ಸಂಗೀತದ ಪ್ರಚಾರದ ಬಗ್ಗೆ ತುಂಬಾ ತುಡಿತ ಪ್ರಾರಂಭವಾಯಿತು.

ಅಂತರಂಗದಲ್ಲಿ ಯಾವುದೋ ಒಂದು ಒಳದನಿ "ಗುರುಗಳಿಗೆ ನೀನೇನಾದರೂ ಶಾಶ್ವತವಾದ ಕೈಂಕರ್ಯವನ್ನು ಸಲ್ಲಿಸಬೇಕು. ಕಸವಾಗಿದ್ದ ನಿನ್ನನ್ನ ರಸವನ್ನಾಗಿ ಮಾಡಿದ್ದಾರೆ. ಈಗ ನೀನು ಜನಾನುರಾಗಿಯಾಗಿದ್ದೀಯೆ, ಜನರಲ್ಲಿ ವಿಶ್ವಾಸವನ್ನು ಬೆಳೆಸಿಕೊಂಡಿದ್ದೀಯೆ, ನೀನು ಏನಾದರೂ ಮಾಡಲೇಬೇಕು" ಎಂದು ಪ್ರತಿ ದಿನ ಒತ್ತಿ ಒತ್ತಿ ಹೇಳಿದ ಹಾಗೆ ಭಾಸವಾಗುತ್ತಿತ್ತು. ನನಗೆ ಏನು ಮಾಡುವುದು ಎಂಬುದೇ ತೋಚುತ್ತಿರಲಿಲ್ಲ. ಪ್ರತಿದಿವಸವೂ ಇದೇ ಯೋಚನೆ. ದಿನದಿನಕ್ಕೆ ಅಂತರಂಗದ ದನಿಯ ಒತ್ತಡ ಹೆಚ್ಚಾಯಿತು. ನನಗೆ ಮನೆಗೆ ಬರಲು ಆಗುತ್ತಿರಲಿಲ್ಲ. ಬಹಳ ಶಕ್ತಿಯುತವಾದ ಗಾಳಿ ನನ್ನನ್ನು ತಳ್ಳಿ ಎಬ್ಬಿಸುವಂತೆ ಭಾಸವಾಗುತ್ತಿತ್ತು. ಹೀಗೆ ದಿನದಿಂದ ದಿನಕ್ಕೆ, ದಿನವಿಡೀ ಈ ಅನುಭವವಾಗುವುದಕ್ಕೆ ಪ್ರಾರಂಭವಾಯಿತು. ಒಂದು ದಿವಸ ರಾತ್ರಿ ಸುಮಾರು ಎರಡು ಗಂಟೆ ಇರಬಹುದು. ಯಾವುದೋ ಒಂದು ಸುಮಧುರವಾದ ವಾಣಿ ಕೇಳಿಸಿದಂತೆ ಭಾಸವಾಯಿತು. "ನನಗಾಗಿ ಒಂದು ಕಲಾಮಂದಿರ ನಿರ್ಮಾಣವಾಗಬೇಕು. "ಹುಳಿಯೂ ಸಿಹಿಯಾಗುತ್ತದೆ" ಎಂದು ಮಾತ್ರ ನನಗೆ ಕೇಳಿಸಿದಂತಾಯಿತು. ಇದು ನನ್ನ ಭಾವನೆಗಳಿದ್ದರೂ ಇರಬಹುದು. ಆದರೆ ಈ ವಿಚಾರ ನನ್ನ ಮನಸ್ಸಿನಲ್ಲಿ ಮೂಡಿದ್ದಂತೂ ನಿಜ. ಅಂದರೆ ಗುರುಗಳ ಹೆಸರಿನಲ್ಲಿ ಒಂದು ಕಲಾಮಂದಿರವನ್ನು ನಿರ್ಮಿಸಬೇಕು ಎಂಬುದು ನನಗೆ ವೇದ್ಯವಾಯಿತು. ಆ ಹುಳಿ–ಸಿಹಿಯ ಬಗ್ಗೆ ನನಗೇನೂ ಅಂದು ಅರ್ಥವಾಗಲಿಲ್ಲ. ಅದು ಹಾಗೇ ಮರೆತೇ ಹೋಯಿತು.

ಆದರೆ ಎಲ್ಲಿ ಭವನದ ನಿರ್ಮಾಣವಾಗಬೇಕು, ಹೇಗೆ ಮಾಡಬೇಕು, ಇದರ ರೀತಿ ನೀತಿಗಳೇನಿರಬೇಕು ಎಂಬ ಯಾವ ಕಲ್ಪನೆಯೂ ಇಲ್ಲದ ನನಗೆ ಹೇಗೆ ಪ್ರಾರಂಭಿಸಬೇಕು ಎಂಬುದೇ ಅರ್ಥವಾಗಲಿಲ್ಲ. ಸರಿ ಇದ್ದೇ ಇದೆ ಗುರುಗಳ ಜಪ. "ವಾದಿರಾಜ ಗುರವೇ ನಮಃ." ಜಾಗವನ್ನು ಹುಡುಕಲು ಪ್ರಾರಂಭಿಸಿದೆ.

ಈ ಬುವಿಯಲ್ಲಿ ನಾವೆಲ್ಲ ಅತಿಥಿಗಳು. ಕಾಲದ ಓಟಕ್ಕೆ ಕಡಿವಾಣವಿಲ್ಲ, ಯಾರೂ ಹಾಕಲಾಗುವುದಿಲ್ಲ. ಪ್ರಕೃತಿಯ ಮಡಿಲಲ್ಲಿ ನಾವು ಎಷ್ಟೊಂದು ಆಟವಾಡುತ್ತೇವೆ. ಕಷ್ಟ ಸುಖಗಳು. ಬಂಧುಗಳು ಬಂಧುತ್ವ, ಗೆಳೆತನ, ನಮಗಾಗಿ ಪಂಚೇಂದ್ರಿಯಗಳು, ಪಂಚಭೂತಗಳು, ಸಪ್ತಸ್ವರಗಳು. ಬರಿಗೈನಲ್ಲಿ ನಾವು ಬರಲಿಲ್ಲ. ಇಲ್ಲಿಯೇ ತೆಗೆದುಕೊಂಡೆವು. ವಾಪಸ್ಸು ಕೊಡಲು ನಮ್ಮದು ಅಂತ ಏನೂ ಇಲ್ಲ. "ಕೆರೆಯ ನೀರನು ಕೆರೆಗೆ ಚೆಲ್ಲಿ ವರ ಪಡೆಯಿರಿ" ಎಂದು ದಾಸರೇ ಹೇಳಿದ್ದರಲ್ಲ !

ಪದ್ಮನಾಭರು ಜನಪ್ರೀತಿಯನ್ನು ಗಳಿಸಿದರು. ಪಾಠವನ್ನು ಸಮಾಜಸೇವೆಯಂತೆ ಮಾಡಿದರು. ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಈಗ ವಾದಿರಾಜರೇ ಇವರ ಮೂಲಕ ದೊಡ್ಡ ಕೆಲಸ ಮಾಡಿಸಿದರು.

ಹುಳಿಮಾವಿನ ಜಾಗ ಮನಸ್ಸಿಗೆ ಬಂತು. ಅಲ್ಲಿ ಸ್ವಲ್ಪ ಅಕ್ರಮ ಚುಟುವಟಿಕೆಗಳು ನಡೆಯುತ್ತಿದ್ದವು. ರಾತ್ರಿ ವೇಳೆ, ಇವರೇ ಹೋಗಿ, ಅದನ್ನು ನಿಲ್ಲಿಸಿದರು. ಕಟ್ಟಡ ನಿರ್ಮಾಣ ಮುಂದುವರೆಯಿತು.

ಅಪಾರ ಶಿಷ್ಯವರ್ಗ, ಅಭಿಮಾನಿಗಳು, ಎ ಎಚ್ ರಾಮರಾಯರಂತಹ ಸಂಗೀತ ಆರಾಧಕ ದಾನಿಗಳು, ಉಚಿತವಾಗಿ ಸೇವೆಸಲ್ಲಿಸಿದ ವಿನ್ಯಾಸಕಾರರು, ವಿವಿಧ ವಿಭಾಗಗಳ ಪರಿಣಿತರು ಜೊತೆಗೆ ಗೋಷ್ಠಿಜನರ ಕ್ರಿಯಾಪೂರ್ಣ ಪಾತ್ರ. ಒಂದು ಕೋಟಿ ರೂಪಾಯಿ ಅಂದಾಜು ವೆಚ್ಚ. ಎಲ್ಲರಿಗೂ ಭವನ ನಮ್ಮದೇ ಎಂಬ ಭಾವ. "ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್" ಆರಂಭವಾಯಿತು.

1998ರ ಏಪ್ರಿಲ್‌ನಲ್ಲಿ ಸೋದೆಸ್ವಾಮಿಗಳಾಗಿದ್ದ ಶ್ರೀ ಶ್ರೀ ವಿಶ್ವೋತ್ತಮತೀರ್ಥರಿಂದ ಶಿಲಾನ್ಯಾಸ. ಉದ್ಘಾಟನೆ, 28–11–1999 ರಲ್ಲಿ. ಸೋದೆ ಸ್ವಾಮಿಗಳು, ಶ್ರೀ ಆರ್ ಕೆ ಶ್ರೀಕಂಠನ್ ಮತ್ತು ಡಾ. ಎಚ್ ರಾಮರಾವ್ ಅವರು ಮುಖ್ಯ ಅತಿಥಿಗಳು. ಸಂಗೀತ ಜಾತ್ರೆಯೆ ನಡೆಯಿತು. ಸ್ವಾಮಿಗಳ ಅನುಗ್ರಹ ಭಾಷಣದಲ್ಲಿ "ಹುಳಿಮಾವು ಅದು, ಸಿಹಿಮಾವು ಇದು" ಎಂದರು. ಆರ್‌ಕೆಪಿ ಅವರ ಮನದಲ್ಲಿ "ಹುಳಿಯೂ ಸಿಹಿಯಾಗುತ್ತದೆ" ಎಂಬ ವಾಣಿಯು ಅನುರಣಿಸಿತು.

ವಾದಿರಾಜ ಕಲಾಭವನ, ಭೂತರಾಜರ ಗುಡಿ, ಧ್ಯಾನ ಮಂದಿರ, ಸಾಕಾರವಾಯಿತು. 3000 ಜನರಿಗೆ ಊಟ. ಕಲಾಪಗಳು ಮುಗಿದಾಗ ಸಂಜೆ 5.30.

ಪದ್ಮನಾಭರಿಗೆ ಊಟ ಬೇಡವಾಗಿತ್ತು. ಧ್ಯಾನ ಮಂದಿರದಲ್ಲಿ ವಾದಿರಾಜರ ಮುಂದೆ ನಿಂತರು. ದಿವ್ಯತೆ. ಆನಂದ. ವಿವರಿಸಲಾಗದ ಅನುಭವ. ಮಿಂಚಿನಂತಹ ಬೆಳಕು. 30 ನಿಮಿಷ. ಯಾರೂ ಇಲ್ಲ, ಇವರು ಮತ್ತು ಗುರುಗಳು. ವಾದಿರಾಜರು ಹೇಳಿದರು,

"ನೀನು ಇನ್ನೂ ಹೆಚ್ಚು ಸೇವಾಕಾರ್ಯದಲ್ಲಿ ತೊಡಗಿಕೊಳ್ಳಬೇಕು."
ಪದ್ಮನಾಭರು ಪಕ್ಕನೆ ಲೌಕಿಕಕ್ಕೆ ಬಂದರು.

"ಹ್ಞ" ಗುರುಗಳು ಏನೆಂದರು?"

23
ಎನಕ್ ಉಂಗ್ಯೆ ಮಾದರಿ ಒರು ಪುಳ್ಳೆ ಪೊರುಂದಾ

ಪ್ರಕೃತಿಯ ವಿಶಿಷ್ಟ ಶಿಶುವಾದ ನಮಗೆ ಪ್ರಕೃತಿಯು ಕೊಟ್ಟಿರುವ ವಿಶೇಷವಾದ ಶಕ್ತಿಯು ಯಾವುದು? ಎಂಬ ಪ್ರಶ್ನೆಗೆ ನಮ್ಮ ನಮ್ಮ ಬುದ್ಧಿಗೆ ಗ್ರಾಹ್ಯವಾದ ರೀತಿಯಲ್ಲಿ ನೂರಾರು ಉತ್ತರಗಳು ಬರುತ್ತವೆ. ಆದರೆ ಇತ್ತೀಚಿನ ಮನಶಾಸ್ತ್ರಜ್ಞರು ಏನು ಹೇಳುತ್ತಾರೆ?. ಕೇಳಿ:

"The One Asset You Really Need to Win and Keep the Job You Love" by James Reed and Paul G. Stoltz ನಲ್ಲಿ ಲೇಖಕರು ಈ ರೀತಿ ಹೇಳುತ್ತಾರೆ.

"Your mindset is about what you see, think, and believe.... It is the internal lens through which you see and navigate life. Mindset influences everything you see, as well as everything you do."

Mindset is who you really are at your core. It's your habitual way of thinking. While it's not easy to change, the purpose of life is to evolve and become a better human being. So you should think about these human qualities from time to time and always endeavor to do better. Your mindset is what really differentiates you from your peers."

"ಮನಸ್ಸಿದ್ದಲ್ಲಿ ಮಹಾದೇವ" ಎಂಬುದು ನಮಗೆ ಗೊತ್ತಿರುವುದೇ ಆದರೂ ಆಧುನಿಕ ವಿಜ್ಞಾನಿಗಳು ಗಾದೆಯ ಮಾತನ್ನು ಸಮರ್ಥಿಸುತ್ತಿರುವುದು ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಅನುವಾಗುತ್ತದೆ. ಪದ್ಮನಾಭರ ಇಚ್ಛಾಶಕ್ತಿಯು ಎಷ್ಟು ಪ್ರಬಲವೆಂಬುದನ್ನು ಗಮನಿಸಿ. ಅಳುಕುತ್ತ 25ರಲ್ಲಿ ಸಂಗೀತದಂತಹ ಕಠಿಣ ವಿದ್ಯೆಯ ಬೆನ್ನುಹತ್ತಿ, ಅಂಜುತ್ತಾ ವೇದಿಕೆಯನ್ನೇರಿ, ಇಚ್ಛಾಶಕ್ತಿಯನ್ನು ಪಳಗಿಸುತ್ತಾ ಇಚ್ಛಿತ ಗುರಿಯತ್ತ ನಡೆಯುತ್ತಲೇ ಇದ್ದಾರೆ. ಎಡರುತೊಡರುಗಳನ್ನು ಎದೆಗಾರಿಕೆಯಿಂದ ಎದುರಿಸಿ ಎತ್ತರಕ್ಕೆ ಏರುತ್ತಲೇ ಇದ್ದಾರೆ. ನಮಗೆ, ನಮ್ಮ ಮಕ್ಕಳಿಗೆ ಈತ ಆದರ್ಶವ್ಯಕ್ತಿಯೆನ್ನುವುದು ಒಪ್ಪುವ ಸಾರ್ಥಕ ಅಭಿಪ್ರಾಯ.

ವಾದಿರಾಜ ಸ್ವಾಮಿಗಳ ಜ್ಞಾನಾಕ್ಷತೆ ಸಿಕ್ಕಮೇಲೆ, ಆರ್ಕೆಪಿಯವರ ಚಟುವಟಿಕೆಗಳು ಬಿರುಸಾಯಿತು. ಭಾರತೀಯ ವಿದ್ಯಾಭವನದ ವತಿಯಿಂದ ಮೈಸೂರು ವಾಸುದೇವಾಚಾರ್ಯರ ಮೊಮ್ಮಕ್ಕಳಾದ ಶ್ರೀ ಎಸ್ ಕೃಷ್ಣಮೂರ್ತಿಗಳು 50–60 ಕ್ಯಾಸೆಟ್ಗಳನ್ನು ಹೊರತಂದಿದ್ದರು. ಒಳ್ಳೆಯ ಸಂಗೀತಗಾರರು, ಶಿಸ್ತಿನ ಸಿಪಾಯಿ. ನೂರಾರು ಶಾಸ್ತ್ರೀಯ ರಾಗಗಳನ್ನು ಬಳಸಿ ಶಂಕರ, ಬಸವ, ಪುರಂದರ, ಕನಕ, ಶ್ಯಾಮಾಶಾಸ್ತ್ರಿಗಳ ಕೃತಿಗಳಲ್ಲದೆ ಲಕ್ಷ್ಮಿಸ್ತುತಿ, ಶಿವಸ್ತುತಿ, ಪಂಚರತ್ನ ಕೃತಿಗಳು, ಸ್ವರ ಜತಿಗಳು ಮೊದಲಾದ ಉಪಯುಕ್ತ ಕ್ಯಾಸೆಟ್ಟುಗಳನ್ನು ಬಿಡುಗಡೆ ಮಾಡಿದ್ದರು.

ಕನ್ನಡ, ತೆಲುಗು, ಇಂಗ್ಲಿಷ್, ಸಂಸ್ಕೃತದಲ್ಲಿ ಪಂಡಿತರಾದ ಡಿವಿಜಿ ಅವರ ಶಿಷ್ಯ ಗೆಳೆಯ ಟಿ ಎನ್ ಪದ್ಮನಾಭನ್ ಅವರು ಸಂಗೀತ ಮತ್ತು ಇತರ ವಿಷಯಗಳ ಬಗ್ಗೆ ಪ್ರವಚನಗಳನ್ನು ನೀಡುತ್ತಿದ್ದರು. ಆರ್ಕೆಪಿಗೆ ಇವರೆಲ್ಲ ಹತ್ತಿರದ ಗೆಳೆಯರು. ಉನ್ನತ ಮಟ್ಟದ ಸತ್ಸಂಗಿಗಳು. ಆರ್ಕೆಪಿ, ಪ್ರತಿದಿನ ಸಿದ್ಧಪಡಿಸುತ್ತಿದ್ದ ವರ್ಣಗಳನ್ನು ಇವರಿಬ್ಬರಿಗೂ ಹಾಡಿ ತೋರಿಸುತ್ತಿದ್ದರು. ಇಬ್ಬರು ಮಹನೀಯರುಗಳಿಂದ ಮೆಚ್ಚುಗೆ ಸಿಗುತ್ತಿತ್ತು.

ಇದೇ ಸಂದರ್ಭದಲ್ಲಿ ಮತ್ತೂರು ಕೃಷ್ಣಮೂರ್ತಿಗಳು ವಾಸುದೇವಾಚಾರ್ಯರ ಸಮಗ್ರಕೃತಿಗಳನ್ನು ವರ್ಣಮಟ್ಟುಗಳ ಸಮೇತ ಪ್ರಕಟಿಸಿ, ಕ್ಯಾಸೆಟ್ಟುಗಳನ್ನು ಹೊರತರಬೇಕೆಂದು ನಿರ್ಧರಿಸಿ, ಶ್ರೀ ಎಸ್ ಕೃಷ್ಣಮೂರ್ತಿಗಳ ಒಪ್ಪಿಗೆ ಪಡೆಯಲು ಭವನಕ್ಕೆ ಬಂದರು. ಯೋಗಾಯೋಗ, ಆ ಸಂದರ್ಭದಲ್ಲಿ ಆರ್ಕೆಪಿಯವರೂ ಹಾಜರಿದ್ದರು. ಎಸ್ ಕೃಷ್ಣಮೂರ್ತಿಗಳು ಅಂದರು,

"ನೀವು ಪ್ರಕಟಿಸಿ, ಆರ್ಕೆಪಿ ಕ್ಯಾಸೆಟ್ಟು ಮಾಡಲಿ."

ಆರ್ಕೆಪಿ ಹೇಳುತ್ತಾರೆ,
"ಸತ್ಯ ಹೇಳುವುದಾದರೆ ನನಗೆ ವಾಸುದೇವಾಚಾರ್ಯರ ಕೃತಿಗಳ ಪರಿಚಯವೇ ಇರಲಿಲ್ಲ. ಆ ಕೊರತೇನೂ ನನ್ನನ್ನು ಕಾಡುತ್ತಾ ಇತ್ತು. ನನಗೆ ನಾನೇ ನಂಬೋದಕ್ಕೆ ಆಗಲಿಲ್ಲ. ರಾತ್ರಿಯೆಲ್ಲ ಈ ವಿಚಾರದ ಚಿಂತನೆಯೇ. ಎಸ್.ಕೆ.ಎಂ. ಹೀಗೆ ಹೇಳಿದ್ರಲ್ಲ, ಹೇಗೆ ಇದು ಸಾಧ್ಯ? ನನ್ನಿಂದ ಆಗೋ ಕೆಲಸವೇ ಅನ್ನುವ ಅನೇಕ ಸಮಸ್ಯೆಗಳು ನನ್ನಲ್ಲಿ ಉದ್ಭವಿಸಿದವು. ಆದರೆ ಅಂತರಂಗದ ಒಂದು ಶಕ್ತಿ ನನ್ನನ್ನು ಪ್ರೇರೇಪಿಸುತ್ತಲೇ ಇತ್ತು. ಮಾರನೆಯ ದಿವಸ ಎಸ್.ಕೆ.ಎಂ. ಅವರ ಹತ್ತಿರ ಹೋಗಿ ಈ ಕೈಂಕರ್ಯ ನಾನು ಮಾಡ್ತೀನಿ ಅಂತ ಧೈರ್ಯವಾಗಿ ಹೇಳಿಬಿಟ್ಟೆ. ಮಾನಸಿಕವಾಗಿ ಶೃಂಗೇರಿ ಶಾರದೆಗೆ ನಮಸ್ಕಾರ ಮಾಡಿ 'ಶಾರದಾ ಕಲಾ ಕೇಂದ್ರ' ಅಂತ ಒಂದು ಸಂಸ್ಥೆಯನ್ನು ಹುಟ್ಟುಹಾಕಿದೆ, 1990 ಅಕ್ಟೋಬರ್ – ನವೆಂಬರ್ ತಿಂಗಳಲ್ಲಿ. ಎಸ್.ಕೆ.ಎಂ. ಮೊದಲ ಮುದ್ರಣಕ್ಕೋಸ್ಕರ ವಾಸುದೇವಾಚಾರ್ಯರ

ಹತ್ತು ಕೃತಿಗಳಿಗೆ ವರ್ಣಮಟ್ಟು ಸಿದ್ಧಪಡಿಸಿಯೇ ಬಿಟ್ಟರು".

ಆರ್ಕೆಪಿಯವರ ನಿರ್ಮಾಣದಲ್ಲಿ ಎಂಎಸ್ ಶೀಲಾ ಹತ್ತು ಕೃತಿಗಳನ್ನು ಹಾಡಿದರು. 1991, ಜನವರಿಯಲ್ಲಿ "ಗಾನಕಲಾ ಪರಷತ್ತಿನ" ವಾರ್ಷಿಕ ಸಂಗೀತ ಸಮ್ಮೇಳನ ಹಾಗೂ ವಾಸುದೇವಾಚಾರ್ಯರ 125ನೆಯ ವರ್ಧಂತಿಯ ಸಂದರ್ಭದಲ್ಲಿ ಅದು ಬಿಡುಗಡೆಯಾಯಿತು. ಆರ್ಕೆಪಿಯವರು ಮೊದಲ ಬಾರಿಗೆ ತುಂಬಿದ ಸಭೆಯಲ್ಲಿ ಭಾಷಣ ಮಾಡಿದರು.

ಮುಂದಿನ ಐದು ವರ್ಷಗಳಲ್ಲಿ ವಾಸುದೇವಾಚಾರ್ಯರ 175 ಕೃತಿಗಳನ್ನು ಕ್ಯಾಸೆಟ್ ರೂಪದಲ್ಲಿ ಆರ್ಕೆಪಿ ಹೊರತಂದರು. ಮೊದಲ ಮೂರು ಸಂಪುಟಗಳನ್ನು ಮಾತ್ರಾ ಮತ್ತೂರು ಕೃಷ್ಣಮೂರ್ತಿಯವರು ಪ್ರಕಟಿಸಿದರು. ಮುಂದಿನ ಹದಿನೆಂಟು ಸಂಪುಟಗಳನ್ನು ಆರ್ಕೆಪಿ ಅವರು ಪ್ರಕಟಿಸಿದರು. ವಾಸುದೇವಾಚಾರ್ಯರ ಮೊಮ್ಮಕ್ಕಳಾದ ಎಸ್ ಕೃಷ್ಣಮೂರ್ತಿಯವರು ಬಿಡುಗಡೆ ಮಾಡಿದರು.

ಕ್ಯಾಸೆಟ್ ಹಾಗೂ ಪುಸ್ತಕಗಳ ಪ್ರಕಟಣೆಯು ಐತಿಹಾಸಿಕವಾದುದು. ಏಕೆಂದರೆ ಅಲ್ಲಿಯವರೆಗೆ ವಾಸುದೇವಾಚಾರ್ಯರ ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿಯೇ ಇರಲಿಲ್ಲ!. ತೆಲುಗು ಮತ್ತು ಸಂಸ್ಕೃತದಲ್ಲಿತ್ತು. ಕನ್ನಡ ಸಾಹಿತ್ಯಶ್ರೀಗೆ, ಕನ್ನಡ ಲಿಪಿಯಲ್ಲಿ ವಾಸುದೇವಾಚಾರ್ಯರ ಕೃತಿಗಳನ್ನು ವರ್ಣಮಟ್ಟುಗಳ ಸಮೇತ ಪ್ರಕಟ ಮಾಡಿ ಪದ್ಮನಾಭರು ಹೊಸ ಮಾಲೆ ತೊಡಿಸಿದರು. ಕನ್ನಡ ಜನತೆಗೆ, ವಿಶೇಷವಾಗಿ ಸಂಗೀತಾಸಕ್ತರಿಗೆ ಸಂತೋಷವಾಯಿತು. ಕಲಿಕೆಗೆ ಅನುಕೂಲವಾಗುವ ಕೈಂಕರ್ಯವಾಯಿತು.

ಮುತ್ತುಸ್ವಾಮಿ ದೀಕ್ಷಿತರ "ಬೃಹಸ್ಪತೇ ತಾರಾಪತೇ" ನಾಟಕದಲ್ಲಿ ಪಾತ್ರ ಮಾಡುವಾಗ ಆರ್ಕೆಪಿ ಪಲ್ಲವಿಯನ್ನು ಮಾತ್ರ ಹಾಡಿದ್ದರು. ಪೂರ್ಣ ಕೃತಿ ಹಾಡುವ ಅಭಿಲಾಷೆ ಅವರದು. ಒಮ್ಮೆ ಶ್ರೀ ಆರ್ಕೆ ಶ್ರೀಕಂಠನ್ ಅವರಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ "ನಾವಿಬ್ಬರೂ ನವಗ್ರಹ ಕೃತಿಗಳನ್ನು ಹಾಡೋಣ, ನಾನು ವರ್ಣಮಟ್ಟುಗಳನ್ನು ಕೊಡುತ್ತೇನೆ" ಎಂದರು. ಭಾಗ್ಯೋದಯವಾಯಿತು. ಆರ್ಕೆಪಿ ಮತ್ತು ಆರ್ಕೆಎಸ್ ಇಬ್ಬರೂ ಒಟ್ಟಿಗೆ ಅಭ್ಯಾಸ ಮಾಡಿದರು.

ಆರ್ಕೆಪಿ ಹೇಳುತ್ತಾರೆ –
"ಅದೊಂದು ವಿಶಿಷ್ಟ ಅನುಭವ, ಒಂಬತ್ತು ಕೃತಿಗಳನ್ನು ಬಹಳ ಶ್ರದ್ಧಾಭಕ್ತಿಗಳಿಂದ ಅಭ್ಯಾಸ ಮಾಡಿಕೊಂಡೆ. ಅತ್ಯದ್ಭುತವಾದ ಕೃತಿಗುಚ್ಛಗಳು. ದೀಕ್ಷಿತರ ಕಲ್ಪನಾ ಸಮುದ್ರದ ಜ್ಞಾನಕ್ಕೆ ಸಂಪೂರ್ಣವಾಗಿ ಶರಣಾದೆ. ಆ ಫರ್ಜ್, ಯದುಕುಲ ಕಾಂಬೋದಿ, ಅಠಾಣ, ನಾಟಕುರಂಜಿ ರಾಗಗಳ ವಿಸ್ತಾರತೆ, ಪ್ರಯೋಗ, ರಾಗಭಾವ,

ಲಯ ಚಾತುರ್ಯ, ಸಾಹಿತ್ಯ ವಿಂಗಡಣೆ, ಸುಳಾದಿ, ತಾಳಗಳ ಬಳಕೆ (ಈ ಎಲ್ಲ ಕೃತಿಗಳನ್ನೂ ಒಟ್ಟಿಗೆ ಸೇರಿಸಿಬಿಟ್ಟರೆ ರಾಗಮಾಲಿಕಾ ಸುಳಾದಿಯಾಗುತ್ತದೆ. ಎಂತಹ ಅದ್ಭುತ ಕಲ್ಪನೆ) ಗಾಯಕನಿಗೆ ಸವಾಲೇ ಸರಿ"

ಕ್ಯಾಸೆಟ್ ಮತ್ತು ಪುಸ್ತಕವನ್ನು, ದೀಕ್ಷಿತರ ನಾಟಕದ ದಿವಸ ಸಂಜಯ್ ಥಿಯೇಟರ್ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಿದರು, ಅಂದು ಮಾನ್ಯ ಬಿ.ವಿ.ಕೃಷ್ಣಮೂರ್ತಿ, ಆರ್.ಕೆ.ಶ್ರೀಕಂಠನ್ ಮತ್ತು ಬೆಂಗಳೂರು ವೆಂಕಟ್ರಾಂ ಮುಂತಾದ ಎಲ್ಲ ಸಂಗೀತ ವಿದ್ವಾಂಸರು ಸೇರಿದ್ದು ದೈವಸಭೆಯಾಗಿತ್ತು. ಇಡೀ ಸಭಾಂಗಣ ಕಿಕ್ಕಿರಿದಿತ್ತು. ಎಷ್ಟೋ ಜನ ಸ್ಥಳಾವಕಾಶವಿಲ್ಲದೆ ನಿಂತಿದ್ದರು. ಕ್ಯಾಸೆಟ್ ಬಿಡುಗಡೆಯಾಗುವ ಮೊದಲು ಶ್ರೀಕಂಠನ್ ಮತ್ತು ಆರ್ಕೆಪಿ ಕೆಲವು ನವಗ್ರಹ ಕೃತಿಗಳನ್ನು ಹಾಡಿದರು.

"ಸಂಗೀತ ಕ್ಷೇತ್ರದಲ್ಲಿ ಅದೊಂದು ಮೈಲಿಗಲ್ಲು. ಇಡೀ ಕೆ.ಆರ್. ರಸ್ತೆ, ಸಂಚಾರ ಸ್ಥಗಿತವಾಗುವಷ್ಟು ಜನಸ್ತೋಮ. ಒಂದು ಶಾಸ್ತ್ರೀಯ ಕಲೆಗೆ, ವಾಗ್ಗೇಯಕಾರನಿಗೆ ಜನ ತೋರಿಸಿದ ಆ ಗೌರವ ಪ್ರೀತಿ ಬಹುಶಃ ನನ್ನ ಬದುಕಿನಲ್ಲಿ ಅಚ್ಚಳಿಯದೆ ಇಂದಿಗೂ ಉಳಿದಿದೆ" ಅನ್ನುತ್ತಾರೆ ಪದ್ಮನಾಭರು.

ಸಂಗೀತ ಪ್ರಪಂಚಕ್ಕೆ ನವಗ್ರಹ ಕೃತಿಗಳ ಕ್ಯಾಸೆಟ್ ಮತ್ತು ಮೊದಲ ಬಾರಿಗೆ ಕನ್ನಡದ ವರ್ಣಮಟ್ಟಿನ ಪುಸ್ತಕ ಮತ್ತು ದೀಕ್ಷಿತರ ನಾಟಕದ ಪ್ರದರ್ಶನದ ಸತ್ಕಾರ್ಯ ನನ್ನಿಂದಾಗುವಂತಾಯಿತಲ್ಲ ಎಂಬ ಸಮಾಧಾನ ತೃಪ್ತಿ ಅವರದು.

ಈ ನಡುವೆ ಆರ್ಕೆಪಿಯವರು ನಾಟಕಗಳಲ್ಲೂ ಮುಖ್ಯಪಾತ್ರಗಳಲ್ಲಿ ನಟಿಸುತ್ತಿದ್ದರು. ಒಮ್ಮೆ ದೀಕ್ಷಿತರ ನಾಟಕವನ್ನು ಕಂಟೋನ್ಮೆಂಟಿನ "ವಡಕತ್ತೂರು ಮಠ" ದಲ್ಲಿ ಆಡಿದರು. ನಾಟಕ ಬಹಳ ಯಶಸ್ವಿಯಾಯಿತು.

ಆರ್ಕೆಪಿ, ಇನ್ನೂ ಪಾತ್ರದ ವೇಷಭೂಷಣಗಳನ್ನು ತೆಗೆದಿರಲಿಲ್ಲ. ದೀಕ್ಷಿತರ ಭಾವದಲ್ಲೇ ಇದ್ದರು. ಪಕ್ಕಾ ತಮಿಳು ಸಂಸ್ಕೃತಿಯನ್ನು ಪ್ರತಿನಿಧಿಸುವಂತೆ ಕಾಣುತ್ತಿದ್ದ ಒಬ್ಬ ಗೌರವಾನಿತ್ವ ಮಹಿಳೆ, ಆರ್ಕೆಪಿ ಅವರ ಬಳಿ ಬಂದು

"ಸಾರ್ ಉಂಗಳಕಿಟ್ಟೆ ನಾ ಕೊಂಚ ಪೇಸಣು."

ಬೇಸರವಾಗಬಾರದೆಂದು ಆರ್ಕೆಪಿ "ಪೇಸುಂಗೋ ಪರವಾಯಿಲ್ಲೆ"

"ಕೊಂಚು–ಅಪಿಡಿ ವಾಂಗೂ ಸಾರ್, ಪೇಸೂಂ"

ಅಂದಾಗ ಇವರಿಗೆ ಗಾಬರಿ.
"ನಿಂಗ್ ತಪ್ಪು ನೆನಕಾದೀಂಗ್, ನಾ ಒರು ವಾರ್ತೆ ಪೇಸರೆ. ಉಂಗ್ಯೆ ದೀಕ್ಷಿತರ್ ಆಯ್ಯ ಪಾತ್ ಎನಕು ರಂಬ ಸಂತೋಷಮಾ ಇರ್ಕ್. I am immersed in the Ocean of Joy. ಎನಕ್ ಉಂಗ್ ಮಾದರಿ ಒರು ಪುಳ್ಳ ಪೊರುಂದಾ. I am very grateful to God." ಅನ್ನುತ್ತಾ ಬಿಕ್ಕಿ ಬಿಕ್ಕಿ ಅತ್ತರು. ದೀಕ್ಷಿತರ ನಾಟಕ ಅಷ್ಟು ಪ್ರಭಾವ ಬೀರಿತ್ತು.

ಪದ್ಮನಾಭರ ಕಣ್ಣಲ್ಲೂ ನೀರು. ಜನ್ಮ ಸಾರ್ಥಕವೆನಿಸಿತು. ನಾದ ದೇವತೆಗೆ ನಮಿಸಿದರು. ಆ ತಾಯಿಯ ಇಂಗಿತಕ್ಕೆ ತಲೆ ಬಾಗಿ ಹೇಳಿದರು.

"ಪಾರಂಗ್ ನಾ ಉಂಗಳಕ್ಕಿನ್ನು ಪರಿಯವನ್ ಆನಾಲೂ ನೀಂಗಲ್ ಭಗವತೀ ಸ್ವರೂಪಿ ಪಯ್ಯನೆ."

ಆ ಮಹಿಳೆಗೆ ತುಂಬಾ ಆನಂದವಾಯಿತು, ಕಣ್ಣುಗಳನ್ನು ಸೀರೆಯ ಸೆರಗಿನಲ್ಲಿ ಒರೆಸಿಕೊಳ್ಳುತ್ತಾ ಪದ್ಮನಾಭರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. "ನಾನಾರು" ಎಂಬ ಪ್ರಶ್ನೆ ಮೂಡಿತು, ಉತ್ತರವಿರಲಿಲ್ಲ.
ಇಷ್ಟಕ್ಕೂ ಆರ್ಕೆಪಿಯವರಂತಹ ಸುಪುತ್ರರನ್ನು ಯಾವ ತಾಯಿ ಬಯಸುವುದಿಲ್ಲ!

24
ನಾದತನುಮನೀಶಂ ಶಂಕರಂ

ನಾದತನುಮನೀಶಂ ಶಂಕರಂ
ನಮಾಮಿ ಮೇ ಮನಸಾ ಶಿರಸಾ
ಮೋದಕರ ನಿಗಮೋತ್ತಮ ಸಾಮ
ವೇದಸಾರಂ ವಾರಂ ವಾರಂ

ಗುರುಗಳು ಹೇಳಿದ್ದು ಸರಿಯಾಗಿಯೇ ಕೇಳಿಸಿತ್ತು. "ಇನ್ನೂ ಹೆಚ್ಚು ತೊಡಗಿಸಿಕೊ ಸಮಾಜಮುಖಿಯಾಗು". ಸಂದೇಶ ಸ್ಪಷ್ಟವಿತ್ತು. "ಗುರುವಿತ್ತ ಸಂಗೀತ ಭಿಕ್ಷೆಯನ್ನು ತನಗಾಗಿ ಮಾತ್ರವಲ್ಲ, ಸಮಾಜಕ್ಕಾಗಿ, ಮುಂದಿನ ಜನಾಂಗಕ್ಕಾಗಿ ಕಟ್ಟಿಕೊಡು. ಪಸರಿಸು, ನೀನೊಂದು ಮಾಧ್ಯಮವಾಗು. ಶಕ್ತಿಯನ್ನು ಒಯ್ಯುವ ತರಂಗವಾಗು". ಈಗಂತೂ ಹಗಲೂ ರಾತ್ರಿ, ಸಂಗೀತವೇ. ಹೊಸ ಯೋಜನೆಗಳು ಮೊಳಕೆ. ನಿತ್ಯದ ಕಟ್ಟುಪಾಡಿನಿಂದ ಹೊರಬರುವ ತವಕ. ಮತ್ತೆ, ಅದೇ ಯೋಗಾಯೋಗ. ಬ್ಯಾಂಕು, 2001ರಲ್ಲಿ ಸ್ವಯಂ ನಿವೃತ್ತಿ ಯೋಜನೆಯನ್ನು ಘೋಷಿಸಿತು. ಪದ್ಮನಾಭರದೆ ಮೊದಲ ಅರ್ಜಿ. ಬ್ಯಾಂಕಿನಿಂದ ನಿವೃತ್ತರಾದರು.

ಇವರು ಬ್ಯಾಂಕನ್ನು ಮರೆಯಲಿಲ್ಲ. "ಭಾರತೀಯ ಸ್ಟೇಟ್ ಬ್ಯಾಂಕ್ ನನ್ನನ್ನು ಪೊರೆದ ತಾಯಿ, ಸಂಬಳ/ಪಿಂಚಣಿಯ ಬೆಂಬಲವಿಲ್ಲದಿದ್ದರೆ, ಸಂಗೀತ ಸಾಧನೆ ಸುಗಮವಾಗುತ್ತಿರಲಿಲ್ಲ. 1974ರಿಂದ 2001ರ ತನಕ ನೌಕರಿ ಮಾಡುವಾಗ ಬ್ಯಾಂಕಿನ ವ್ಯವಸ್ಥಾಪನಾ ವರ್ಗ, ಸಿಬ್ಬಂದಿ ಸಂಘಗಳು ನನಗೆ ಸಹಕರಿಸಿವೆ. ನಾನು ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಕೆಲಸ ಮಾಡದಿದ್ದರೂ ಅಧಿಕಾರಿಗಳ ಸಂಘ, ನನ್ನನ್ನು ಗೌರವಿಸಿದೆ. ಬ್ಯಾಂಕಿನ ಸಾಂಸ್ಕೃತಿಕ ಮುಖವಾದ, ಕನ್ನಡಸಂಘವು, ಸರ್ವರೀತಿಯಲ್ಲಿಯೂ ಬೆಂಬಲಿಸಿದೆ. ಹಲವಾರು ಕಾರ್ಯಕ್ರಮಗಳಿಗೆ ನನ್ನನ್ನು ಕರೆದಿದ್ದಾರೆ. ಇತ್ತೀಚಿಗೆ, ಪ್ರಧಾನ ಕಛೇರಿಯ ಕನ್ನಡ ಸಂಘವು ಕಛೇರಿಯೊಂದನ್ನು ಏರ್ಪಡಿಸಿತ್ತು. ಬ್ಯಾಂಕಿನ ರಾಜ್ಯೋತ್ಸವ ಸಮಾರಂಭದಲ್ಲಿ ನನ್ನನ್ನು ಗೌರವಿಸಲಾಯಿತು. ನನ್ನ ಉಸಿರಿರುವವರೆಗೂ ನನಗೂ ಭಾರತೀಯ ಸ್ಟೇಟ್ ಬ್ಯಾಂಕ್‌ಗೂ ಅವಿನಾಭಾವದ ಬಂಧ."

"ನಾನು ಬ್ಯಾಂಕಿನಲ್ಲಿ ಅಪಾರ ಗೆಳೆಯರನ್ನು ಗಳಿಸಿದೆ. ಸಂಬಳಕ್ಕಿಂತ ಹೆಚ್ಚಿನ ಸಂಪಾದನೆಯಿದು. ಹಲವು ಸಹೋದ್ಯೋಗಿಗಳು ಸಂಗೀತದ ಯಾತ್ರೆಯಲ್ಲಿ ಸಹಯಾತ್ರಿಗಳಾಗಿದ್ದಾರೆ. ನಾನು ಕೇಳಿದಾಗ ದೇಣಿಗೆಯನ್ನೂ ನೀಡಿದ್ದಾರೆ. ಸ್ವಯಂಸೇವೆ ಮಾಡಿದ್ದಾರೆ. ದ್ವಾದಶ ಸ್ವರಸ್ತಂಭ ಮಂಟಪದ ನಿರ್ಮಾಣಕ್ಕೆ ಸಂಗಾತಿಗಳೆಲ್ಲ ಕೂಡಿ ದೇಣಿಗೆಯನ್ನು ನೀಡಿದ್ದಾರೆ. ಕೇಂದ್ರ ಸರ್ಕಾರದ, "ಸಂಗೀತ ನಾಟಕ ಅಕಾಡೆಮಿಯು 2020ನೆಯ ವರುಷದ ಪುರಸ್ಕಾರವನ್ನು ನೀಡಿದಾಗ ಸಹೋದ್ಯೋಗಿಗಳು ಕೂಡಿ, "SBI ಗೆಳೆಯರ ಬಳಗ : RKP ಸನ್ಮಾನ"ವೆಂಬ ಗುಂಪನ್ನು ರಚಿಸಿಕೊಂಡು ಸನ್ಮಾನಿಸಿದ್ದಾರೆ (05–02–2023). ಅಂದಿನ ಘನ ಅಧ್ಯಕ್ಷತೆಯನ್ನು ನನ್ನ ಮಿತ್ರರಾದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದ ಶ್ರೀ ಮಲ್ಲೇಪುರಂ ಜಿ ವೆಂಕಟೇಶ್ ಅವರು ವಹಿಸಿದ್ದು ಅತೀವ ಸಂತೋಷವನ್ನುಂಟುಮಾಡಿದೆ. ಅಲ್ಲದೆ ಬಹಳ ವಿಶೇಷವೆನಿಸುವ "ಸನ್ಮಿತ್ರ ಸಂಗೀತ ಸುಧಾರತ್ನ"ವೆಂಬ ಬಿರುದನ್ನು ನೀಡಿದ್ದಾರೆ. ನನಗೆ ಹಲವಾರು ಬಿರುದುಗಳು ಬಂದಿದೆ. ಆದರೆ, ಸ್ನೇಹವನ್ನು ಸಂಗೀತವನ್ನು ಬೆಸೆದ ಅಪರೂಪದ ಈ ಬಿರುದು ನನ್ನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಜೊತೆಗೆ ಪ್ರಿಯ ಮಿತ್ರ ಬೆಂಶ್ರೀ ರವೀಂದ್ರ ಅವರು ರಚಿಸಿರುವ, ನನ್ನಕಥೆ, "ಪದ್ಮನಾದ"ವನ್ನೂ ಈ ಸಂದರ್ಭದಲ್ಲಿ ನಾನೇ ಬಿಡುಗಡೆ ಮಾಡಿದ್ದು ಮರೆಯಲಾದ ಘಳಿಗೆಯಾಗಿದೆ."

ಸಂಗೀತದ ಪಾಠ ಗರಿಗಟ್ಟಿತು. ಹೊಸ ಆವಿಷ್ಕಾರಗಳಾಯಿತು. ಕೆಲಸದಲ್ಲಿ ಇರುವಾಗಲೆ ಪದ್ಮನಾಭರು "ಗೋಷ್ಠಿಗಾಯನ"ವನ್ನು ಆರಂಭಿಸಿದ್ದರು. ಕೆಲಸ ಮುಗಿಸಿ ಸಂಜೆಯ ವೇಳೆಗೆ ಬಾಣಸವಾಡಿ, ರಾಜಾಜಿನಗರ, ಜಯನಗರ... ಹೀಗೆ ಕರೆದಲ್ಲಿಗೆ.. ನಗರದ ಮೂಲೆ ಮೂಲೆಗೆ ಹೋಗುತ್ತಿದ್ದರು. ಅಲ್ಲಿನ

ಸಂಗೀತಾಸಕ್ತರನ್ನು ಕೂಡಿಸಿ ಹಾಡಿಸುವುದು. ಕೆಲವರು ಗಾನಗೋಷ್ಠಿಯನ್ನು ತಮಾಶೆ ಮಾಡಿದ್ದುಂಟು. ಶಾಸ್ತ್ರೀಯ ಸಂಗೀತ ಪ್ರಸಾರದ ಕಾರ್ಯ ಆರಂಭವಾದದ್ದು 1994 ರಲ್ಲಿ. ಗಾನಪೋಷಕ ಡಾ ಎ ಎಚ್ ರಾಮರಾವ್ ಅವರನ್ನು ಸನ್ಮಾನಿಸಿದಾಗ. ಅಂದು ಮೂವತ್ತು ಜನರು ಕೂತು ಒಟ್ಟಾಗಿ ಹಾಡಿದರು. ಈಗ ಸುಮಾರು 2000ಕ್ಕೂ ಹೆಚ್ಚು"ಗಾನಗೋಷ್ಠಿ" ಸದಸ್ಯರಿದ್ದಾರೆ. ಈಗಲೂ ನಾನು ಗೋಷ್ಠಿಗಳಲ್ಲಿ ಭಾಗವಹಿಸುತ್ತೇನೆ. ಗೋಷ್ಠಿಗಾಯಕರು ನನ್ನ ಆಸ್ತಿ" ಅನ್ನುತ್ತಾರೆ ಆರ್ಕೆಪಿ.

ಗಾನಗೋಷ್ಠಿಗಳು ಪವಾಡಗಳನ್ನೆ ಮಾಡಿತು. ಅಭ್ಯಾಸವನ್ನು ಬಿಟ್ಟಿದ್ದ ಹಲವರು ಪುನಃ ತಮ್ಮ ಧ್ವನಿಗೆ ನಾದವನ್ನು ತುಂಬತೊಡಗಿದರು. ಸಾವಿರಾರು ಜನರು ಒಟ್ಟಿಗೆ ಕಲೆತು ಹಾಡುತ್ತಲಿದ್ದರೂ ಸಂಗೀತದ ಮಟ್ಟವನ್ನು ಕಾಯ್ದುಕೊಂಡಿದ್ದು ಆರ್ಕೆಪಿಯವರ ಶಾಸ್ತ್ರನಿಷ್ಠೆಯ ಹೆಗ್ಗುರುತು. ಎಷ್ಟು ಸಹಸ್ರ ಗಾನಗೋಷ್ಠಿ ಕಾರ್ಯಕ್ರಮಗಳು ವಿಜೃಂಭಿಸಿವೆಯೋ, ನಾದಶರೀರಿ ಶಂಕರನಿಗೇ ಗೊತ್ತು.

ಉಚಿತ ಸಂಗೀತ ಶಿಬಿರಗಳು, ಹಲವಾರು ಸಂಗೀತ ಕಾರ್ಯಕ್ರಮಗಳು ವಾದಿರಾಜ ಭವನದಲ್ಲಿ ನಡೆಯುತ್ತದೆ. ಪ್ರತಿವರ್ಷ

ಬಿವಿ ಜಗದೀಶ್ ಯುವ ಸಂಗೀತ ಉತ್ಸವ

ರುದ್ರಪಟ್ಟಣ ಸಂಗೀತೋತ್ಸವ, ನಾಲ್ಕು ದಿನಗಳು.

"ತ್ಯಾಗರಾಜ ಆರಾಧನೆ", ಗಾನಶ್ರಾದ್ಧ, ರುದ್ರಪಟ್ಟಣದಲ್ಲಿ

ಹಿರಿಯ ವಾಗ್ಗೇಯಕಾರರ ಆರಾಧನಾ ಮಹೋತ್ಸವಗಳು

ವಾದಿರಾಜ ಆರಾಧನಾ ಮಹೋತ್ಸವ, ಅಮೇರಿಕೆಯಲ್ಲಿ – ಹೀಗೆ ನಿರಂತರ ಕಾರ್ಯಕ್ರಮಗಳು.

ಆರ್ಕೆಪಿಯವರಿಗೆ, ನಾಲ್ಕುಗೋಡೆಗಳ ನಡುವಿನ ಪಾಠಶಾಲೆಗಿಂತ ತೆರೆದ ಪಾಠಶಾಲೆ ಮಹತ್ವದ್ದು. ಅದಕ್ಕಾಗಿಯೆ "ಗಾನಯಾತ್ರೆ"ಗಳನ್ನು ಸಂಘಟಿಸುತ್ತಾರೆ. ಶಿಷ್ಯರನ್ನು ಕರೆದುಕೊಂಡು ಕಾಶಿ, ಚಾರ್ಧಾಮ್, ಸಿಂಗಪುರ್, ಆರಗ, ದಕ್ಷಿಣ ಭಾರತದ ಪ್ರಮುಖ ಸ್ಥಳಗಳು, ವಾಗ್ಗೇಯಕಾರರ ಊರುಗಳು – ಹೀಗೆ ಹತ್ತಾರು ಊರುಗಳು. ಅಲ್ಲಿ ಸಮೂಹಗಾನ, ಮೆರವಣಿಗೆ, ಕಛೇರಿಗಳು. ಶಿಷ್ಯರಿಗೆ ಇನ್ನೇನು ಬೇಕು? ಪ್ರವಾಸ, ಕಲಿಕೆ, ಗಾಯನ, ಪುಷ್ಕಳ ಭೋಜನ, ಸಾರ್ವಜನಿಕ ಸಂವಹನ. ಸಂಗೀತದ ಜೊತೆಗೆ ವ್ಯಕ್ತಿತ್ವ ವಿಕಸನ. ಹೀಗೊಮ್ಮೆ ಕಾಶಿಗೆ ಹೋಗಿದ್ದಾಗ ಅಲ್ಲಿ "ಜಂಗಮವಾಡಿ ಮಠ"ದಲ್ಲಿ ಕಛೇರಿಯನ್ನು ನಡೆಸಿ ಪೀಠಾಧ್ಯಕ್ಷರಿಂದ ಸನ್ಮಾನಿತರಾದರು.

"ಗಾನಚಕ್ರ" ವೆಂಬ ಮತ್ತೊಂದು ಹೊಸದಾರಿ. ಊರಿಂದ ಹೊರಗೆ ಹೋಗಿ,

ದಿನವಿಡಿ ಶಿಷ್ಯವೃಂದದಿಂದ ಸರಣಿ ಕಛೇರಿಗಳು. ಸಹಪಾಠಿಗಳು ವಿಶ್ಲೇಷಣೆ, ವಿಮರ್ಶೆ ಮಾಡುತ್ತಾರೆ. ಕೊನೆಗೆ ಗುರುಗಳು ಮುಖ್ಯಾಂಶಗಳನ್ನು ಗಮನಿಸಿ ಪ್ರವಾಚಿಸುತ್ತಾರೆ. ಗಾನಚಕ್ರದ ಪ್ರಮುಖ ಅಂಶವೆಂದರೆ, ಅಂದಿನ ಕಛೇರಿಗಳು ಒಂದೇ ವಿಷಯ, ಸಂಗತಿಯನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಅಂದಿನ ಕಛೇರಿಗಳು, ವರ್ಣವೈಭವ, ವಾಗ್ಗೇಯಕಾರ ವೈಭವ, ಏಕರಾಗ – ಈ ರೀತಿ. ಪಾಠ ಮಾಡುವಾಗ ಸಂಗೀತವೇ ಪ್ರಧಾನವಾದರೂ ಆರ್ಕೆಪಿ ಮುಟ್ಟದ ವಿಷಯವಿಲ್ಲ. ಆಧುನಿಕ, ಪ್ರಾಚೀನಗಳಿಂದ ಸಮೀಚೀನವಾದುದು ಸೃಷ್ಟಿಯಾಗುತ್ತದೆ. ಬೆನ್ನು ತಟ್ಟುತ್ತಲೆ ದಾರಿತೊರುವ ಅವರ ಪದ್ಧತಿ ಶಿಷ್ಯಪ್ರಿಯವಾಗಿದೆ.

ಆರ್ಕೆಪಿ ಅವರ ಪ್ರಯೋಗಶೀಲತೆ ಉಲ್ಲೇಖಾರ್ಹ. ಪ್ರತಿನಿಮಿಷ, ಪ್ರತಿಘಳಿಗೆ ಹೊಸತನ್ನು ಅರಸುತ್ತಿರುತ್ತಾರೆ, ಹಳತಿಗೆ ಹೊಸಮೆರಗು ನೀಡುತ್ತಾರೆ. ಯಾವ ಪ್ರಯೋಗದಿಂದ ಶಿಷ್ಯರು ಆಸಕ್ತಿಯಿಂದ ಕಲಿಯುತ್ತಾರೆ, ಯಾವ ಪ್ರಯೋಗದಿಂದ ಸಂಗೀತವು ಜನರ ಮನಕ್ಕೆ ಸೇರುತ್ತದೆಯೆಂದು ಸದಾ ಚಿಂತನಶೀಲರಾಗಿರುತ್ತಾರೆ.

ನಿಮಗೆ ಗೊತ್ತು, ಸ್ವಾಮಿ ಚಿನ್ಮಯಾನಂದರು, ಭಗವದ್ಗೀತೆಯನ್ನು ಜನಪ್ರಿಯಗೊಳಿಸಲು "ಗೀತಾಜ್ಞಾನ ಯಜ್ಞ"ಗಳನ್ನು ನಡೆಸುತ್ತಿದ್ದರು. ಹತ್ತಾರು ದಿವಸಗಳ ಉಪನ್ಯಾಸ ಕಾರ್ಯಕ್ರಮವದು. ಸೀಮೆಸುಣ್ಣದಲ್ಲಿ ಕಪ್ಪುಹಲಗೆಯ ಮೇಲೆ ಬರೆದು ಪುಟಾಣಿ ಕೋಲಿನಲ್ಲಿ ಅವುಗಳನ್ನು ತೋರಿಸುತ್ತಾ ಗಹನವಾದ ಗೀತೆಯ ಆಧ್ಯಾತ್ಮಿಕ ತತ್ತ್ವಗಳನ್ನು ಸುಲಭವಾಗಿ ವಿವರಿಸುತ್ತಿದ್ದರು. ಅದರ ಸ್ಫೂರ್ತಿಯೋ ಏನೋ, ಪದ್ಮನಾಭರ ಚಿತ್ತದಲ್ಲಿ ವಿಭಿನ್ನವಾದ "ಗಾನ ಜ್ಞಾನಯಜ್ಞ" ಹೊಳವು ಮೂಡಿತು. ಚಿನ್ಮಯಾನಂದರು ಸಂತಸ ಪಡುತ್ತಿದ್ದರು. ಇಲ್ಲಿ ಗಾಯನದೊಡನೆ ವೇದವೂ ಇದೆ.

ಸಾಮವೇದದಿಂದ ಸಂಗೀತವು ಆರಂಭವಾಯಿತು. ಕಾಲಾನುಕ್ರಮದಲ್ಲಿ ಎರಡೂ ಸ್ವತಂತ್ರವಾಗಿ ಬೆಳೆದವು, ಬೆಳಗಿದವು. ಅಲ್ಲೊಬ್ಬರು ಇಲ್ಲೊಬ್ಬರು ವೇದಜ್ಞರು, ಸಂಗೀತಜ್ಞರೂ ಆಗಿರುತ್ತಿದ್ದರು. ಆದರೆ ಸಾರ್ವತ್ರಿಕವಾಗಿರಲಿಲ್ಲ. ಈ ಕಂದರವನ್ನು ಗಾನ ಜ್ಞಾನಯಜ್ಞದ ಮೂಲಕ ಮುಚ್ಚುವುದು ಆರ್ಕೆಪಿಯವರ ಯತ್ನ.

ನಾನು ಕೇಳಿದೆ "ಎಂತೆಂತಹ ಹೊಸ ಹೊಳಹುಗಳು ನಿಮಗೆ ಬರುತ್ತದೆ?"
ನಕ್ಕರು "ಗುರುಕೃಪೆಯಷ್ಟೆ".

ಗಾನ ಜ್ಞಾನಯಜ್ಞವನ್ನು ಆರಂಭಿಸುವ ಮುನ್ನ ತಾಲೀಮು ನಡೆಯಿತು. 2006ಕ್ಕಿಂತ ಮುಂಚೆ. ಋತ್ವಿಕರಾದ ಗುಡಿಬಂಡೆ ನಾಗೇಂದ್ರ ಮತ್ತು ಪ್ರಸಾದ್ ಅವರುಗಳು ಚೆನ್ನಾಗಿ, ಯಜ್ಞದಲ್ಲಿ ಸಂಬಂಧಿತ ವೇದಮಂತ್ರಗಳನ್ನು ಉಚ್ಚಾರಣೆ ಮಾಡಲು

ಸಿದ್ಧತೆ ಮಾಡಿಕೊಂಡಿದ್ದರು. ಗುಡಿಬಂಡೆಯಲ್ಲೆ ಗಾನಯಜ್ಞವಾಯಿತು. 72 ಮೇಳಕರ್ತರಾಗಗಳ ಮೂಲಕ ನಾದ ದೇವತೆಗೆ ಹವಿಸ್ಸಿನ ಅರ್ಪಣೆ.

ನಂತರ, 2006ರಲ್ಲಿ, ಜನವರಿ 7ರಿಂದ ಎಂಟು ದಿನಗಳ "ಶ್ರೀಮದ್ವಾದಿರಾಜ ಗಾನ ಜ್ಞಾನಯಜ್ಞ". ಬೆಂಗಳೂರಿನ ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದಲ್ಲಿ. ಪ್ರತಿದಿನ ಬೆಳಿಗ್ಗೆ ಪೂಜೆ, ಆ ಪೂಜೆಗೆ ಹೊಂದಿಕೊಳ್ಳುವ ಹಾಗೆ ಗಾಯನ, ಉದಾಹರಣೆಗೆ ಗಣಪತಿ ಪೂಜೆಯಾದರೆ ಗಣಪತಿಯನ್ನು ಕುರಿತ ಕೃತಿಗಳ ಹಾಡಿಕೆ ಮತ್ತು ಹೋಮ. ಕೃತಿಗಳು, ರಾಗ, ತಾಳ, ಕೃತಿ ರಚನಾಕಾರರಿಗೆ ಹೋಮ ಮಾಡುವುದು, ಕೃತಿಗಳ ರಾಗ, ಆರೋಹಣ, ಅವರೋಹಣ, ಜನ್ಯ, ಜನಕ, ವಾಗ್ಗೇಯಕಾರ. ಈ ಎಲ್ಲಾ ವಿವರಣೆಯನ್ನು ಜೊತೆಯಲ್ಲಿ ಹೇಳಿ, ನಾದದೇವತೆಗೆ "ಸ್ವಾಹಾ..ಆ.." ಎನ್ನುತ್ತಾ ಹವಿಸ್ಸನ್ನು ಅರ್ಪಿಸುವುದು. ಅಗ್ನಿಯು ಸಪ್ತವರ್ಣಗಳಲ್ಲಿ ಪ್ರಜ್ವಲಿಸಿ ಹವಿಸ್ಸನ್ನು ನಾದದೇವತೆಗೆ ತಲುಪಿಸುತ್ತಿದ್ದ ಕ್ರಿಯೆ, ಒಂದು ಅಲೌಕಿಕ ಅನುಭವವೇ ಸರಿ. ಋತ್ವೀಕರು ಬಹಳ ನಿಷ್ಠೆಯಿಂದ ಯಜ್ಞಾನುಸಂಧಾನ ಮಾಡಿದರು, ಅಂತೆಯೇ ಗಾಯಕರೂ.

ಆರ್ಕೆಪಿ ಹೇಳುತ್ತಾರೆ,
"ನಮ್ಮ ಶ್ರುತಿಗೆ ಸರಿಯಾಗಿ ವೇದಮಂತ್ರವನ್ನು ಹೇಳುತ್ತಿದ್ದುದು ಒಂದು ಅದ್ಭುತ ಅನುಭವ. ಈ ವೇದ ಮಂತ್ರದ ಜೊತೆ ಸಂಗೀತ ವಿವರಣೆಯನ್ನು ಸೇರಿಸಿ ಹೋಮ ಮಾಡುವುದನ್ನು ಕೆಲವರು ಟೀಕೆ ಮಾಡಿದ್ದುದೂ ಉಂಟು. ಈಗಲೂ ಮಾಡುತ್ತಾರೆ. ಶಾಸ್ತ್ರದ ವಿಚಾರ ನನಗೆ ಗೊತ್ತಿಲ್ಲ. ನನ್ನ ಉದ್ದೇಶ ಜನರಿಗೆ ಒಂದು ಹೊಸ ಅನುಭವವನ್ನು ಕೊಡಬೇಕು. ಹಾಗಾಗಿ ಈ ಸಾಹಸಕ್ಕೆ ಕೈ ಹಾಕಿದ್ದು ಪ್ರತಿದಿನವೂ 3000–4000 ಜನಗಳ ಸ್ತೋಮ. ಬಹಳ ಭಕ್ತಿಯಿಂದ ಭಾಗವಹಿಸುತ್ತಿದ್ದರು. ಅಂದರೆ ಜನರಿಗೆ ಹೊಸತನಬೇಕು, ಹೊಸ ಚಿಂತನೆ ಬೇಕು. ನನ್ನ ಮಟ್ಟಿಗೆ ಇದೇನೂ ಅಶಾಸ್ತ್ರೀಯವಲ್ಲ, ಅಸಂಪ್ರದಾಯವೂ ಅಲ್ಲ. ಆ ವಿಚಾರದಲ್ಲಿ ನನಗೆ ಸದೃಢವಾಡ ಸಂಕಲ್ಪವಿತ್ತು. ಇಲ್ಲಿ ವೇದಮಂತ್ರವೂ ಕಿವಿಗೆ ಬಿತ್ತು. ಕೃತಿಯ ರಾಗ ತಿಳಿಯಿತು. ರಾಗದ ಆರೋಹ, ಅವರೋಹ ತಿಳಿಯಿತು. ವಾಗ್ಗೇಯಕಾರನ ಹೆಸರು ತಿಳಿಯಿತು. ಇದರ ಮೇಲೆ ಆಜ್ಯಹೋಮವೂ ಆಯಿತು. ನಂತರ ಶಾಸ್ತ್ರೀಯವಾಗಿ ಕೃತಿ ನಿರೂಪಣೆಯೂ ಆಗುತ್ತಿತ್ತು. ಅಲ್ಲೂ ರಾಗಾಲಾಪನೆ, ಸ್ವರಪ್ರಸ್ತಾರ, ಇವೆಲ್ಲವೂ ಅಡಕವಾಗಿದ್ದುವು. ಇದೊಂದು ಹೊಸ ಚಿಂತನೆಯ ಕಾರ್ಯಕ್ರಮವಾಗಿತ್ತು, ಜ್ಞಾನಪ್ರದವಾದ, ಬೋಧಪ್ರದವಾದ ಕಾರ್ಯಕ್ರಮವಾಗಿತ್ತು. ಶೋತೃಗಳು ಬಹಳ ವಿಶ್ವಾಸದಿಂದ ಆದರಣೀಯವಾಗಿ ಸ್ವೀಕರಿಸಿದ್ದು ನನಗೆ ಬಹಳ ಆನಂದವನ್ನು ಕೊಟ್ಟಿತು.

ಪ್ರತಿದಿನವೂ ನವಾವರಣ, ನವಗ್ರಹ, ಪಂಚರತ್ನ, ಪುರಂದರ ನವರತ್ನ, ವಾದಿರಾಜ

ಕೃತಿರತ್ನ, ಶ್ಯಾಮಾಶಾಸ್ತ್ರಿಗಳ ಸ್ವರಜತಿ. ಹೀಗೆ ಕರ್ನಾಟಕ ಸಂಗೀತದ ಹೂರಣವೇ ಅಲ್ಲಿ ನಿರೂಪಣೆಯಾಯಿತು. ನಂತರ, ನಾನೇ ರಚಿಸಿದ್ದ "ವಾದಿರಾಜ ನಾಮಾವಳಿ"ಯ ಪಠನವಾಗುತ್ತಿತ್ತು. ಕೊನೆಗೆ ಎಲೆಕ್ಟ್ರಿಷಿಯನ್, ಕೆಲಸಗಾರರು, ಮೈಕ್ ಹಾಕ್ತಾ ಇದ್ದವನು, ಸೆಕ್ಯುರಿಟಿ ಸ್ಟಾಫ್, ಎಲ್ಲರೂ ಈ ನಾಮಾವಳಿ ಪಠನಕ್ಕೆ ಸೇರುತ್ತಾ ಇದ್ದದ್ದು ರೋಚಕ ಅನುಭವ. ಇಡೀ ವಾತಾವರಣ ನಾದಮಯವಾಗ್ತಾ ಇತ್ತು. ಅಲ್ಲಿ ಹೋಮಕುಂಡದಲ್ಲಿ ಅಗ್ನಿ "ಧಿಗಿ ಧಿಗಿ" ಎಂದು ಪ್ರಜ್ವಲಿಸುತ್ತಾ ಇರೋದು. ಆ ಶ್ರುತಿ, ಆ ಜನ, ಆಹಾ! ದೇವೇಂದ್ರನ ಸಭೆಯಂತೆ ರಾರಾಜಿಸುತ್ತಾ ಇತ್ತು.

ಚಂದ್ರಶೇಖರಭಾರತಿ ಕಲ್ಯಾಣ ಮಂಟಪದ ಕಾಂಪೌಂಡ್‌ನಲ್ಲಿ ಜರುಗಿದ ಈ ಕಾರ್ಯಕ್ರಮದ ಪೆಂಡಾಲೇ ಬಹಳ ವಿಶೇಷ. ಕೃತಕ ಜಲಪಾತ, ಮೂರು ದೇವಸ್ಥಾನಗಳು, ಹೊರಗಡೆ ವಿವಿಧ ರೀತಿಯ ಅಂಗಡಿಗಳು, ಉಪಾಹಾರದ ಹೋಟೆಲ್ಗಳು.. ಹೀಗೆ ಬಹಳ ವೈವಿಧ್ಯಮಯವಾದ ನಾದ ಚಪ್ಪರವಾಗಿತ್ತು.

ಪ್ರತಿದಿನ ಸಂಜೆ ಐದು ಗಂಟೆಗೆ ಅಚ್ಯುತದಾಸರ ಹರಿಕಥೆಯಿರುತ್ತಿತ್ತು. ಒಂದು ದಿವಸ ಮಾತ್ರ ನಾನೇ ಹರಿಕಥೆ ಮಾಡುವ ಸಂದರ್ಭ ಒದಗಿಬಂತು. ವಾದಿರಾಜರ ಬದುಕನ್ನು ಕುರಿತದ್ದು. ದಾಸರ ವೇಷಧಾರಿಯಾಗಿ ನಾನು ವೇದಿಕೆಗೆ ಹೋದ ತಕ್ಷಣ ಅಭಿಮಾನಿಗಳಿಂದ ಕರತಾಡನ. ಆಹಾ! ಎಂತಹ ಅನುಭವ. ಅಂತೂ ಹರಿಕಥೆ ದಾಸನೇ ಆಗಿಬಿಟ್ಟಿದ್ದೆ. ಸುಮಾರು ಒಂದೂವರೆ ಗಂಟೆಗಳ ಕಾಲ. ದೈವಶಕ್ತಿ, ಗುರು ಕಟಾಕ್ಷ, ನಮ್ಮ ಪ್ರಯತ್ನ, ಶ್ರದ್ಧೆ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿ. ಸಂಜೆ 6.30ರಿಂದ ಭರ್ಜರಿ ಸಂಗೀತ ಕಛೇರಿಗಳು, ಕದ್ರಿ, ಟಿ.ಎಂ. ಕೃಷ್ಣ, ವಿಜಯಶಿವ, ಮಂಜು ನಾಗರಾಜ್ ಹೀಗೆ ಬಹಳ ಪ್ರಬುದ್ಧವಾದ ಕಾರ್ಯಕ್ರಮಗಳಾಗುತ್ತಿದ್ದವು. ಪ್ರತಿದಿವಸವೂ ಒಂದೊಂದು ರೀತಿಯ ಅನುಭವವನ್ನು ಕೊಡುತ್ತಿತ್ತು. ಅಂತೂ ಎಂಟು ದಿವಸಗಳು ನಾನು ಆ ಪವಿತ್ರ ಪರಿಸರವನ್ನು ಬಿಟ್ಟು ಬರಲೇ ಇಲ್ಲ.

ಕೊನೆಯ ದಿವಸ ಎಲ್ಲ ಕಾರ್ಯಕ್ರಮವಾದ ಮೇಲೆ ನಮ್ಮ ಶಿಷ್ಯರೂ ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕೆಲಸಗಾರರೂ ಬಂದು ನನಗೆ ನಮಸ್ಕಾರ ಮಾಡಿ ಕಣ್ಣೀರಿಡುತ್ತಿದ್ದುದನ್ನು ನೋಡಿ ನಾನು ತುಂಬಾ ಭಾವುಕನಾದೆ. ನನಗೆ ಆ ಆನಂದದ ಅನುಭವವನ್ನು ತಡೆಯಲಾಗದೆ ನಾಳೆಯಿಂದ ಇವರೆಲ್ಲರನ್ನೂ ಬಿಟ್ಟುಹೋಗಬೇಕಲ್ಲ, ಎಂತಹ ಕರ್ಮಯೋಗಿಗಳು ಎಂದು ಆನಂದದ ಕಣ್ಣೀರಿಟ್ಟೆ.

ಜನರೇಟರ್ ಕೆಲಸ ಮಾಡುತ್ತಿದ್ದ ಜೋಸೆಫ್, ಒಂದು ಗಿಫ್ಟ್‌ಪ್ಯಾಕ್ ನನ್ನ ಕೈಗಿತ್ತು "ಸಾರ್, ಇದು ಕೃಷ್ಣನ ವಿಗ್ರಹ. ಸ್ವೀಕರಿಸಿ ಆಶೀರ್ವದಿಸಬೇಕು" ಎಂದಾಗ ನನಗಾದ ಆನಂದದ ಅನುಭವ ಅಷ್ಟಿಷ್ಟಲ್ಲ. ಇದೆಂತಹ ಬಾಂಧವ್ಯ, ಎಲ್ಲಿಯ ನಂಟು! ಇದ್ದ

ಎಂಟು ದಿವಸಗಳಲ್ಲಿ ಈ ಮುಗ್ಧಜನ ಎಂತಹ ಆದರ, ಪ್ರೀತಿ, ವಿಶ್ವಾಸ, ಗೌರವಗಳನ್ನು ತೋರಿಸುತ್ತಿದ್ದಾರೆ. ಇದು ಗುರುಗಳ ಅನುಗ್ರಹವೇ. ಇದು ಮನುಷ್ಯ ಪ್ರಯತ್ನದಿಂದ ಆಗುವುದಿಲ್ಲ ಎಂಬ ಅಭಿಪ್ರಾಯವನ್ನು ಹೊತ್ತು, ಅವರೆಲ್ಲರಿಗೂ ಅಭಿನಂದಿಸಿ ಭಾರವಾದ ಮನಸ್ಸಿನಿಂದ ಮನೆಯನ್ನು ತಲುಪಿದಾಗ ರಾತ್ರಿ 1.30. ಈ ಯಶಸ್ಸಿಗೆ ನೂರಾರು ಜನರ ಬೆಂಬಲವೇ ಕಾರಣ."

ಎರಡನೆಯ, ಗಾನ ಜ್ಞಾನಯಜ್ಞವು, ಜನವರಿ, 2011ರಲ್ಲಿ, ಅದೇ, ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದಲ್ಲಿ ನಡೆಯಿತು. ಈ ಬಾರಿಯ ವಿಶೇಷವೆಂದರೆ ಯಜ್ಞದ ಕಾಲಾವಧಿ 12 ದಿನಗಳು. ಅದರಲ್ಲಿ ಒಂದು ದಿನ, ಸತತ 24 ಗಂಟೆಯ ನಾದಯಜ್ಞ. ಬೆಳಿಗ್ಗೆ ಏಳುಗಂಟೆಗೆ ಆರಂಭ, ಮುಗಿದಿದ್ದು ಮಾರನೆಯ ಬೆಳಗು ಏಳು ಗಂಟೆಗೆ. ರಾತ್ರಿಯಿಡಿ ನಾದ ಕಿವಿಗೆ, ಕಾಫಿಯ ಪರಿಮಳ ಮೂಗಿಗೆ. ಯಥಾಪ್ರಕಾರ, ಮತ್ತೆ 3–4 ಸಾವಿರ ಜನರು.

2020ರ ಫೆಬ್ರವರಿ ಎರಡರಿಂದ ಹದಿನಾರರವರೆಗೆ "ಗಾನಕಲಾ ಪರಿಷತ್ತಿನ ಸುವರ್ಣ ಮಹೋತ್ಸವ" ನಡೆಯಿತು. ಈ ಸಂದರ್ಭದಲ್ಲಿ 15 ದಿನಗಳು ಗಾನಜ್ಞಾನಯಜ್ಞ ನಡೆಯಿತು. ಜನರು ಬಹಳ ಆದರದಿಂದ ಈ ಸಂಗೀತ ಯಜ್ಞಗಳನ್ನು ಸ್ವೀಕರಿಸಿದ್ದಾರೆ. ತನು ಮನ ಧನ ಸೇವೆಯನ್ನು ಮಾಡಿದ್ದಾರೆ. ಈ ಯಜ್ಞದ ಅಧ್ವರ್ಯುಗಳಾದ ಪದ್ಮನಾಭದಾಸರು ಆವಿಷ್ಕಾರಗಳ ಸಿಂಧುವಾಗಿದ್ದಾರೆ.

"ಕರ್ಣಾಟಭಾರತಕಥಾಮಂಜರಿ"ಯ ಸಭಾಪರ್ವದ ಏಳನೆಯ ಸಂಧಿಯ 34ನೆಯ ಪದ್ಯ ಜ್ಞಾಪಕಕ್ಕೆ ಬರುತ್ತಿದೆ. ಪಾಂಡವರ ರಾಜಸೂಯ ಯಾಗ ನಡೆಯುತ್ತಿರುತ್ತದೆ. ಕುಮಾರವ್ಯಾಸ ಹೀಗೆ ಹೇಳುತ್ತಾನೆ.

ತ್ರಿದಿವವನು ತುಡುಕಿತು ಹವಿರ್ಗಂ
ಧದ ಗಢಾವಣೆ ಧೂತ ಧೂಮನ
ತುದಿ ತಪೋಲೋಕದಲಿ ತಳಿತುದು ಸತ್ಯ ಲೋಕದಲಿ ।
ತ್ರಿದಶರುಜೆ ಬಾಯಾಡಿಸಿದರ
ಗ್ಗದ ಧ್ರುವಾದಿಗಳನ್ನು ಸುತೃಪ್ತಿಯ
ಹೊದಲಱುದೇಗಿನ ಹೊಟ್ಟೆ ನೂಕಿತು ಹರಿಹಯಾದಿಗಳ ॥

ಹವಿಸ್ಸಿನ ಸುವಾಸನೆ ಸ್ವರ್ಗವನ್ನು ಮುಟ್ಟಿತು. ಯಜ್ಞದ ಹೊಗೆಯ ತುದಿ ಸತ್ಯಲೋಕವನ್ನು ವ್ಯಾಪಿಸಿತು. ದೇವತೆಗಳು ನೈವೇದ್ಯಗಳನ್ನು ಸವಿದು ಬಾಯಿ ಚಪ್ಪರಿಸಿದರು. ಇಂದ್ರಾದಿಗಳು ತೃಪ್ತರಾಗಿ ತೇಗುತ್ತಿದ್ದರು. ಅವರ ಹೊಟ್ಟೆ ಉಬ್ಬರಿಸಿಕೊಂಡಿತು.

ಕುಮಾರವ್ಯಾಸನೇನಾದರೂ ಪದ್ಮನಾಭರ ಗಾನ ಜ್ಞಾನಯಜ್ಞದಲ್ಲಿ ಭಾಗವಹಿಸಿದ್ದರೆ ಈ ಅರ್ಥ ಬರುವ ರೀತಿಯಲ್ಲಿ ಇನ್ನೊಂದು ಭಾಮಿನಿಯನ್ನು ಒರೆಯುತ್ತಿದ್ದನೇನೋ!

"ಹವಿಸ್ಸಿನ ಸುನಾದ ಸ್ವರ್ಗವನ್ನು ತಲುಪಿ, ಯಜ್ಞಧೂಮದ ತುದಿ ಸತ್ಯಲೋಕವನ್ನು ವ್ಯಾಪಿಸುತ್ತದೆ. ದೇವತೆಗಳು ಸಂಗೀತವನ್ನು ಸವಿದು ಬಾಯಿ ಚಪ್ಪರಿಸುವರು. ಇಂದ್ರಾದಿಗಳು ತೃಪ್ತರಾಗಿ ತಲೆದೂಗುತ್ತಿರುವರು. ಅವರ ಮನಸ್ಸು ಆನಂದದಿಂದ ಉಬ್ಬಿಕೊಂಡಿತು."

"ಗಾನ ಸನ್ಮಾನ", ಪದ್ಮನಾಭರ ವಿಶಿಷ್ಟವಾದ ಕಾರ್ಯಕ್ರಮ. ಸಂಗೀತ ಸಾಧಕರನ್ನು ಸಮ್ಮಾನಿಸುವಾಗ ಅವರ ಕೃತಿಗಳನ್ನು ಹಾಡುತ್ತಾ, ಪುಷ್ಪಾರ್ಚನೆಯನ್ನು ಮಾಡುವುದು. ಹಾಡುಗಾರರು ಬಹುವಾಗಿ ಮೆಚ್ಚಿಕೊಂಡಿರುವ ಸಂಗತಿಯಾಗಿದೆ.

ಗುರು ವಾದಿರಾಜರ ಶಕ್ತಿಯ ತರಂಗಗಳು ಪದ್ಮನಾಭರನ್ನು ಆವರಿಸುತ್ತಿದ್ದಂತೆ ಹತ್ತು ಹಲವು ಕಾರ್ಯಕ್ರಮಗಳು, ಅವರ ಚಿಂತನ ಚಿಲುಮೆಯಿಂದ ಹೊಮ್ಮುತ್ತಿದೆ. ಈ ಕ್ರಿಯೆ ಚಿಂತನೆಗೆ ಸೀಮಿತವಾಗದೆ ಅವರ ಮೂಲಕ ಯೋಜನೆಗಳಾಗುತ್ತಿದೆ. ಸ್ವತಃ ಸಮರ್ಥ ಸಂಘಟಕರಾದ ಆರ್ಕೆಪಿ ಅವುಗಳ ಜಾರಿಗೆ ರೂಪಕೊಡುತ್ತಾರೆ. ಅವರ ಶಿಷ್ಯರು ಆರ್ಕೆಪಿಯವರನ್ನು ಪ್ರೀತಿಸುತ್ತಾರೆ, ಗೌರವಿಸುತ್ತಾರೆ, ಕಾರ್ಯಗಳಲ್ಲಿ ಕೈ ಜೋಡಿಸುತ್ತಾರೆ. ವಿದ್ವಜ್ಜನರ, ದಾನಿಗಳ ಸಹಕಾರವಂತೂ ಸದಾ ನೆನಪಿನಲ್ಲಿಡುವ ಸಂಗೀತ ಕಾಣಿಕೆಯಾಗಿದೆ.

2004 ರಲ್ಲಿ, "ಶ್ರೀಮದ್ವಾದಿರಾಜ ಸಂಗೀತ ನೃತ್ಯ, ನಾಟಕೋತ್ಸವ"ವನ್ನು ತಮ್ಮ ಶಿಷ್ಯರಿಗಾಗಿಯೇ ಆರ್ಕೆಪಿ ವ್ಯವಸ್ಥೆ ಮಾಡಿದರು. ಶಿಷ್ಯರ ಕಛೇರಿ, ಹಿರಿಯ ಸಂಗೀತ ವಿದ್ವಾಂಸರ ಪಕ್ಕವಾದ್ಯ. ವಿದ್ವತ್ ಗೋಷ್ಠಿ, ವಿವಿಧ ಸ್ಪರ್ಧೆಗಳು. ಅದ್ಭುತವಾದ ಪ್ರತಿಕ್ರಿಯೆಗಳು ಬಂದವು. ಗುರುವಾಗಿ ಪದ್ಮನಾಭರು ಶಿಷ್ಯರನ್ನು ಬೆಳೆಸುವಲ್ಲಿ ಯಶಸ್ವಿ. ಶಿಷ್ಯರನ್ನು ವಾದಿರಾಜ ಭವನಕ್ಕೆ ಕರೆದುಕೊಂಡು ಹೋಗಿ ಪಾಠ ಮಾಡುತ್ತಾರೆ. ಈ ಮಕ್ಕಳಿಗೆ ಅದೊಂದು ಅದ್ಭುತ ಅನುಭವ. ಗುರುಗಳ ಪದತಳದಲ್ಲಿ ಕುಳಿತು ಪಾಠ ಕಲಿಯುವ ಸೌಭಾಗ್ಯ. ಹೀಗೆ ಈ ಮಕ್ಕಳ ಜ್ಞಾನವಿಕಾಸಕ್ಕೆ ವಾದಿರಾಜ ಸಾನ್ನಿಧ್ಯ.

ಕೆಲವರು "ಗುರುವನ್ನೂ ಮೀರಿಸುವ ಸಾಮರ್ಥ್ಯ ಶಿಷ್ಯನದು" ಎಂಬ ಅಹಿತಕರವಾದ ಮಾತನಾಡುತ್ತಾರೆ. ಆರ್ಕೆಪಿ ಹೇಳುತ್ತಾರೆ.
"ಇದು ಸಲ್ಲದು. ಯಾವ ವಿದ್ಯಾರ್ಥಿಯಾದರೂ ಗುರುವನ್ನು ಮೀರಿಸುವ ಸಲುವಾಗಿ ಸಾಧನೆ ಮಾಡುವುದು ಒಳ್ಳೆಯ ದೃಷ್ಟಿಯಲ್ಲ. ಎಂದಿದ್ದರೂ ಗುರು ಗುರುವೇ. ಗುರುಸ್ಥಾನಕ್ಕೆ ಸಲ್ಲುವ ಗೌರವಗಳು ಸಲ್ಲಲೇಬೇಕು. ಆದರೆ, ಒಬ್ಬ ಗುರುವಿಗೆ

ತೃಪ್ತಿಯಾಗುವ ಹಾಗೆ, ಆನಂದ ತರುವ ಹಾಗೆ ಹಾಡುವ ಪ್ರಯತ್ನಗಳಾದರೆ ಮಾತ್ರ ಶಿಷ್ಯ ಯಶಸ್ಸನ್ನು ಕಾಣುತ್ತಾನೆ. ಶಿಷ್ಯಧರ್ಮದ ವಿಚಾರವಾಗಿ ಮಕ್ಕಳಿಗೆ ಮನವರಿಕೆ ಮಾಡುತ್ತಾ ಬಂದಿರುವೆ. ನಿಧಾನವಾಗಿ ಅಂತರಂಗದಲ್ಲಿ ಅಡಗಿರುವ ಅಹಂಕಾರದ ಪರದೆಯನ್ನು ಸರಿಸುವ ಪ್ರಕ್ರಿಯೆಗಳು ಸ್ವಾಭಾವಿಕವಾಗಿಯೇ ನಡೆಯುತ್ತದೆ. ಶಿಷ್ಯರಲ್ಲಿ ಸದ್ಭಾವನೆ ಸತ್ ಚಿಂತನೆಯ ವಾತಾವರಣ ಮೂಡುತ್ತದೆ.

ಆರ್ಕೆಪಿ, ತಾನೊಬ್ಬರೇ ಬೆಳೆಯುವ ಆಲದ ಮರವಲ್ಲ. ಆಲದ ನೆರಳಲ್ಲಿ ಇತರ ಸಸ್ಯಗಳು ಬೆಳೆಯುವುದಿಲ್ಲ. ಅವರೊಂದು, ಕಲ್ಪವೃಕ್ಷದಂತೆ, ಎತ್ತರಕ್ಕೆ ಬೆಳೆದಿದ್ದಾರೆ, ಭೂಮಿಯಲ್ಲಿ ಬೇರುಗಳನ್ನು ಪಸರಿಸಿದ್ದಾರೆ. ಶಿಷ್ಯರನ್ನು ಬೆಳೆಸಿದ್ದಾರೆ. ಶಿಷ್ಯರೆ ನಿಜವಾದ ಸಂಪತ್ತು ಎಂಬುದು ಆರ್ಕೆಪಿಯವರ ಅಚಲ ನಂಬಿಕೆ. ಅವರ ಹಲವು ಶಿಷ್ಯರು ಈಗಾಗಲೆ ಕರುನಾಡ ಮಣ್ಣಿನಲ್ಲಿ ಸುಪ್ರಸಿದ್ಧ ಗಾಯಕರೆನಿಸಿಕೊಂಡಿದ್ದಾರೆ. ಆರ್ಕೆಪಿ ಪರಂಪರೆಗೆ ಧಕ್ಕೆಯಿಲ್ಲ. ಅದು ಚಿರನೂತನವಾಗಿರುವುದು.

12–01–23ರಂದು, ಶೃಂಗೇರಿ ಮಠದಲ್ಲಿ" ಭಾರತೀ ತ್ಯಾಗರಾಜ ಸನ್ಮಾನ" ನೀಡಿದ ಸಂದರ್ಭದಲ್ಲಿ, ತುಮಕೂರಿನ ರಾಮಕೃಷ್ಣಾಶ್ರಮದ ಸ್ವಾಮಿ ವೀರೇಶಾನಂದರು,
"ಸಂಗೀತವು ವಿಜ್ಞಾನದ ತಾಯಿ; ಸಂಗೀತಗಾರ ವಿಜ್ಞಾನಿ" ಎಂದಿರುವುದು ಗಮನೀಯವಾಗಿದೆ. ಸಂಗೀತವನ್ನು ಆಗಾಗ ಪುನಶ್ಚೇತಿಸುವುದು ಸಂಗೀತಗಾರರ ಕರ್ತವ್ಯವಾಗಿದೆ.

25

ಈ ಹಾದಿ, ಅನಾದಿ, ಹೃದಯ ಸಂವಾದಿ ಸುನಾದಿ, ಸರಿಗಮ ಸನಾದಿ,
ವಿಜ್ಞಾನಬೋಧಿ ಸಂಜ್ಞಾನ–ಸಂಬೋಧಿ

ಈ ಹಾದಿ, ಅನಾದಿ, ಹೃದಯ ಸಂವಾದಿ ಸುನಾದಿ, ಸರಿಗಮ ಸನಾದಿ, ವಿಜ್ಞಾನಬೋಧಿ ಸಂಜ್ಞಾನ–ಸಂಬೋಧಿ

ಪದ್ಮನಾಭರು ಹಾಡಿದರು. ಹದಿನೈದು ನಿಮಿಷವಾಯಿತು. ಪ್ರೇಕ್ಷಕರಿಂದ ಪ್ರತಿಕ್ರಿಯೆ ಇಲ್ಲ. ಗಾಯಕರಿಗೆ ಸಭಿಕರು "ವಾ..ವ್ಹಾ.. ವಾ" ಎಂದರೆ ಅಮಿತ ಉತ್ಸಾಹ! ಏನಿದು ಅನ್ನಿಸಿತು ಪದ್ಮನಾಭರಿಗೆ.
"ಸ್ವಾಮಿಜಿ, ನಾನು ಸ್ವಲ್ಪಹೊತ್ತು ಮಾತನಾಡಲೇ" ಅಂದರು.
ಅವರು, ಸ್ವಾಮಿ ನಿರ್ಭಯಾನಂದರು, ವಿಜಯಪುರ – ಗದಗ ರಾಮಕೃಷ್ಣ ಆಶ್ರಮದ ಅಧ್ಯಕ್ಷರು. ಪದ್ಮನಾಭರು ಹಾಡುತ್ತಿದ್ದುದು, ಆಶ್ರಮವು ಮನಗೂಳಿಯಲ್ಲಿ ನಡೆಸುತ್ತಿರುವ ಅನಾಥ ಬಾಲಕರ ನಿಲಯದಲ್ಲಿ. ಸಂಗೀತ ಸಮ್ಮೇಳನದ ವ್ಯವಸ್ಥೆಗಾಗಿ

ವಿಜಯಪುರಕ್ಕೆ ಬಂದಿದ್ದರು.

ಗುರು ವಾದಿರಾಜರನ್ನು ನೆನಪಿಸಿಕೊಂಡು ಪದ್ಮನಾಭರು, ಹದಿನೈದು ನಿಮಿಷಗಳ ಕಾಲ ಬಾಲಕರಿಗೆ ಸಂಗೀತ ಶಿಕ್ಷಣದ ಅನುಕೂಲಗಳನ್ನು ವಿವರಿಸಿದರು. ನಿಮಗೆ ಗೊತ್ತೇ ಇದೆ. ಪದ್ಮನಾಭರ ಮಾತುಗಳು ತಿಳಿಹಾಸ್ಯ ಬೆರೆತ ಜ್ಞಾನ ದಾಸೋಹ. ಮಾತು ಮುಗಿಯಿತು. ಪದ್ಮನಾಭರು ಮಕ್ಕಳನ್ನು ಕೇಳಿದರು,

"ನಾನು ಹಾಡಲೆ"

"ಹಾಡಿ ಸಾರ್ ಹಾಡಿ" ಎಂಬ ಧ್ವನಿ ಮುಗಿಲು ಮುಟ್ಟಿತು.

ಪದ್ಮನಾಭರು ಹೇಳಿದರು,
"ನಾನು ಈಗ ಮೂವತ್ತು ರಾಗಗಳನ್ನು ಹಾಡುವೆ, ಗಮನವಿಡಿ"
ಪಟಪಟನೆ ಒಂದರ ನಂತರ ಒಂದು ಮೂವತ್ತು ಕರ್ನಾಟಕ ಸಂಗೀತದ ರಾಗಗಳು ಅನುರಣಿಸಿದವು.

"ಸಂಗೀತದ ಅಭ್ಯಾಸವು ನನ್ನ ನೆನಪಿನ ಶಕ್ತಿಯನ್ನು ಹೆಚ್ಚಿಸಿದೆ. ಹಾಡುವಾಗ ಮಿದುಳಿನಲ್ಲಿ ವಿದ್ಯುತ್ ಕಂಪನಗಳು ಸೃಷ್ಟಿಯಾಗುತ್ತದೆ. ನಾನು ಹಲವಾರು ಹಾಡುಗಳನ್ನು ನೆನಪಿನಲ್ಲಿಟ್ಟಿರುವೆ."

ಬಾಲಕರು, ಮಂತ್ರಮುಗ್ಧರಾದರು. ಸ್ವಾಮಿಜಿಯವರು,
"ಸಂಗೀತ ಶಿಕ್ಷಣದ ಪ್ರಯೋಗವನ್ನು ನಾವೂ ಮಾಡಬಹುದು. ಸ್ವಾಮಿ ವಿವೇಕಾನಂದರು ಬಹಳ ಒಳ್ಳೆಯ ಗಾಯಕರಾಗಿದ್ದರು. ನಮ್ಮ ಆಶ್ರಮಗಳಲ್ಲಿ ಪ್ರತಿದಿನ ಸಂಜೆ ಕೀರ್ತನೆಗಳನ್ನು ಹಾಡುತ್ತೇವೆ. ಸಂಗೀತದ ಅಭ್ಯಾಸವನ್ನೂ ಮಾಡುತ್ತೇವೆ."

"ನನಗೆ ಗೊತ್ತಿದೆ, ನಾನು ಬೆಂಗಳೂರು, ಮೈಸೂರು, ಪೊನ್ನಂಪೇಟೆಯ ರಾಮಕೃಷ್ಣ ಮಠಗಳಲ್ಲಿ ಹಾಡಿರುವೆ. ಸ್ವಾಮಿ ಪುರುಷೋತ್ತಮಾನಂದರು, ಪೊನ್ನಂಪೇಟೆಯ ಕಾರ್ಯಕ್ರಮದ ನಂತರ ಬಹಳ ಮನನೀಯವಾದ ಪತ್ರವೊಂದನ್ನು ನನಗೆ ಬರೆದಿದ್ದರು."
"ಅವರೇ ನಮಗೆ ಸ್ಫೂರ್ತಿ" ಅಂದರು ನಿರ್ಭಯಾನಂದರು. ಪದ್ಮನಾಭರಿಗೆ ವರಕವಿ ಬೇಂದ್ರೆಯವರು, ವಿವೇಕಾನಂದ ಪ್ರಗಾಥದಲ್ಲಿ ಬರೆದ ಸಾಲುಗಳು ನೆನಪಿಗೆ ಬಂದವು. ಅಂಥ ವಿವೇಕರೂ ಸಂಗೀತ ಪ್ರಿಯರೆ.

ಗೌರಿಶಂಕರ ಇತ್ತ ।
ಇತ್ತ ಕಾಂಚನಗಂಗೆ ।
ಅತ್ತತ್ತ ಪರಮಹಂಸರ ಸವಾರಿ
ಆತ್ಮಕ್ರೀಡಃ ಆತ್ಮರತಿಃ ಸಚ್ಚಿದಾತ್ಮ ವಿಹಾರಿ,
ಹೆಜ್ಜೆ ಮೂಡದ ದಾರಿ
ಅದೊ! ರೇವಿಕಾನಂದ ನೀಡಿದನು ದಾರಿ, ಉದಾರಿ ।
ಶಿಖರದಿಂ ಶಿಖರಕ್ಕೆ ಹಾರಿ
ಈ ಹಾದಿ, ಅನಾದಿ, ಹೃದಯ ಸಂವಾದಿ
ಸುನಾದಿ, ಸರಿಗಮ ಸನಾದಿ, ವಿಜ್ಞಾನಬೋಧಿ
ಸಂಜ್ಞಾನ–ಸಂಬೋಧಿ

2014ರಲ್ಲಿ, ಗಾನಕಲಾ ಪರಿಷತ್ತಿನ ವಿಜಯಪುರ ಸಮ್ಮೇಳನ ಭರ್ಜರಿಯಾಗಿ ನಡೆಯಿತು. ಏಳು ದಿನಗಳು, ಪದ್ಮನಾಭರ ವಾಸ್ತವ್ಯ ವಿಜಯಪುರದಲ್ಲೆ. ಕಾರು ಚಾಲಕ ನಜ಼ೀಮ್. ಉತ್ತಮ ಸೇವೆ. ಆರ್ಕೆಪಿ ಹೊರಟಾಗ ಅವನ ಕಣ್ಣಿನಲ್ಲಿ ನೀರು.
"ನಿಮ್ಮ ಸೇವೆ ದೇವರ ಸೇವೆಯಂತೆ."

"ನಿನ್ನನ್ನು ಯಾವತ್ತೂ ಮರೆಯಲಾರೆ ನಜ಼ೀಮ್, ಅಲ್ಲಾಹು ನಿನಗೆ ಒಳ್ಳೆಯದು ಮಾಡಲಿ."

"ಸಾಬ್, ಒಂದು ಮಾತು ನಡೆಸಿಕೊಡುತ್ತೀರಾ?"

"ಹೇಳಪ್ಪ"

"ನಮ್ಮ ಮನೆಗೆ ಬನ್ನಿ, ಮಗುವನ್ನು ಹರಸಿ", ಇವರು ಬರಲಾರರೇನೋ ಎಂಬ ಆತಂಕ.

"ನಡೆ, ಬರುತ್ತೇನೆ."

"ಸಾಬ್, ಅರ್ಧಗಂಟೆ ಟೈಮ್ ಕೊಡಿ."

"ಆಗಲಿ, ಕಾಯುತ್ತೇನೆ."

ಅರ್ಧಗಂಟೆಯ ನಂತರ ಆರ್ಕೆಪಿ, ನಜ಼ೀಮ್‌ನ ಮನೆಯಲ್ಲಿದ್ದರು. ಬಡಮುಸ್ಲಿಂ ಬಾಂಧವರು ಇರುವ ಪ್ರದೇಶ. ಅರ್ಧಗಂಟೆಯಲ್ಲಿ ಅವರೆಲ್ಲಾ ಸೇರಿ ಬೀದಿಯನ್ನೂ,

ಮನೆಯನ್ನೂ ಸ್ವಚ್ಛ ಮಾಡಿದ್ದರು. ನಜೀಮ್‌ನ ಮನೆಯಲ್ಲಿ ಕೇರಿಯವರು ಎಲ್ಲರೂ ಸೇರಿದ್ದರು. ಹೆಂಗಸರು, ಗಂಡಸರು ಮತ್ತು ಮಕ್ಕಳು. ನಜೀಮ್, ತನ್ನ ಆರುತಿಂಗಳ ಪುಟ್ಟ ಮಗುವನ್ನು ತಂದು ಪದ್ಮನಾಭರ ತೊಡೆಯ ಮೇಲೆ ಮಲಗಿಸಿದ. ಕೃಷ್ಣನ ನೆನಪು. ಮಗುವಿನ ತಲೆಸವರಿ, ಕಣ್ಮುಚ್ಚಿ ಧ್ಯಾನಿಸಿದರು. ರಾಗ ತಂತಾನೆ ಹೊರಟಿತು,

"..... ಅಖಿಲಾಂಡೇಶ್ವರಿ ರಕ್ಷಮಾಂ...ಶ್ರೀ
ಸಂಪ್ರದಾಯ ನಿಪುಣೆ ಶ್ರೀ ಅಖಿಲಾಂಡೇಶ್ವರಿ.."

ಹಾಡತೊಡಗಿದರು. ಇಡೀ ವಾತಾವರಣ ನಾದಮಯವಾಯಿತು, ಭಕ್ತಿ ತುಂಬಿತು. ಹಾಡು ಮುಗಿಯುವ ವೇಳೆಗೆ ಎಲ್ಲರೂ ಭಾವುಕರಾಗಿದ್ದರು. ಪದ್ಮನಾಭರ ಕಣ್ಣಲ್ಲೂ ಭಾವುಕ ಹನಿಗಳು. ನಜೀಮ್ ಪದ್ಮನಾಭರಿಗೆ ಕಾಲುಮುಟ್ಟಿ ನಮಸ್ಕರಿಸಿದ. ಮನೆಯವರೆಲ್ಲ ನಮಸ್ಕರಿಸಿದರು, ಬಂದಿದ್ದವರೂ ಕೂಡಿದರು. ಮಗುವಿಗೆ ಉಡುಗೊರೆ ಕೊಟ್ಟು, ಶುಭಹಾರೈಸಿ ಮರಳಿದರು ಆರ್ಕೆಪಿ. ಅವರೆಂದರು;
"ನಾದಕ್ಕೆ ಜಾತಿ, ಭಾಷೆ, ಮತಗಳು ಯಾವುದೂ ಇಲ್ಲ. ಯಾವ ಸಿದ್ಧಾಂತಗಳೂ ಇಲ್ಲ. ಸಂಗೀತವೇ ಒಂದು ಧರ್ಮ, ಒಂದು ಸಿದ್ಧಾಂತ"

"ಒಮ್ಮೆ ಮಸ್ಕಾಟ್‌ನಲ್ಲಿ ನನ್ನ ಕಛೇರಿ. ಮೈಸೂರಿನಲ್ಲಿದ್ದ ಮುಸಲ್ಮಾನ್ ಮಿತ್ರರೊಬ್ಬರು ವ್ಯವಸ್ಥೆ ಮಾಡಿದ್ದರು. ಕರ್ನಾಟಕ ಸಂಗೀತವಿರಲಿ, ಸಂಗೀತದ ಗಂಧವೇ ಅವರಿಗಿಲ್ಲ. ಪಾಕಿಸ್ತಾನಿಯರಿಗೆ ಸಂಗೀತದ ಸ್ವಾದವಿದೆ. ಅಲ್ಲಿ ಒಳ್ಳೆಯ ಹಿಂದೂಸ್ತಾನಿ ಗಾಯಕರಿದ್ದರು. ಆದರೆ ಒಮಾನ್‌ನವರಿಗೆ ಅಂತಹ ಹಿನ್ನೆಲೆ ಇಲ್ಲ. ಕಛೇರಿ ಮುಗಿಯಿತು. ಓರ್ವ ಹಿರಿಯ ಓಮಾನಿ ನನ್ನ ಬಳಿ ಬಂದರು. ಏನೋ ಹೇಳಿದರು. ಬಹುಶಃ ಶುಭಾಶಯಗಳು ಅಥವಾ ವಂದನೆಗಳಿರಬೇಕು. ಜೇಬಿಗೆ ಕೈಹಾಕಿ ಒಂದಿಷ್ಟು ರಿಯಾಲ್‌ಗಳನ್ನು ಕೊಟ್ಟರು. ಕೈಹಿಡಿದು ಕಣ್ಣಿಗೆ ಒತ್ತಿಕೊಂಡರು. ನನ್ನ ಕೈ ಒದ್ದೆಯಾಗಿತ್ತು. ಭಾಷೆ ಅರ್ಥವಾಗಲಿಲ್ಲ, ರಾಗ, ತಾಳ, ತಾನಗಳ ಅರಿವಿಲ್ಲ. ಸಂಸ್ಕೃತಿಯ ಹಿನ್ನೆಲೆಯಿಲ್ಲ, ಆದರೂ ಒಮಾನ್‌ನಲ್ಲಿ ಕರ್ನಾಟಕ ಸಂಗೀತ ಗೆದ್ದಿತು. ಆ ರಿಯಾಲ್‌ಗಳನ್ನು ಕಟ್ಟುಗಾಜು ಹಾಕಿಸಿಟ್ಟಿದ್ದೇನೆ. ಅದೂ ಬಹು ದೊಡ್ಡ ಪ್ರಶಸ್ತಿ."
"ಒಮ್ಮೆ, ಬಾಸ್ಟನ್‌ನಲ್ಲಿ ಹೀಗಾಯಿತು" ಕುತೂಹಲ ಕೆರಳಿತು.

"ಸಂಸ್ಕಾರ, ಹಿನ್ನೆಲೆ ಗೊತ್ತಿರುವವರಿಗೂ ನಾವು ಹಾಡುವಾಗಲೂ ಕೃತಿಯನ್ನೂ, ಕೃತಿಕಾರನನ್ನೂ, ಕೃತಿಯ ಹಿನ್ನೆಲೆಯನ್ನೂ ವಿವರಿಸಬೇಕು. ಆಗ, ಖಂಡಿತವಾಗಿ ಹೆಚ್ಚಿನ ಪರಿಣಾಮವಾಗುತ್ತದೆ. ಕೃತಿ ಹಾಗೂ ಕೃತಿಕಾರನ ಆಶಯವನ್ನೂ ಕೇಳುಗರಿಗೆ ತಿಳಿಸಬೇಕು.

"ಬಾಸ್ಟನ್, ಏನಾಯಿತು?"

"ಹ್ಞ.. ತಾಳ್ಮೆಯಿರಲಿ. ಅಮೇರಿಕೆಯಲ್ಲಿ ಕಛೇರಿಗಳು ಸಾಮಾನ್ಯವಾಗಿ ಒಂದು ಗಂಟೆ. ನಂತರ, ಮಾತು ಕಥೆ ಊಟ... ಇತ್ಯಾದಿಗಳಿಗೆ ಸಮಯ. ಅಂದಿನ ಕಛೇರಿಯಲ್ಲಿ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಮಾತ್ರ ಹಾಡಬೇಕೆಂದು ಮನವಿ ಬಂದಿತ್ತು. ನಿನಗೆ ಗೊತ್ತು, ದೀಕ್ಷಿತರ ಕೃತಿಗಳು ಸಂಸ್ಕೃತದಲ್ಲಿದೆ. ಮೊದಲು ನಾನು ಹಾಡಲು ತೆಗೆದುಕೊಂಡಿದ್ದು ನವಗ್ರಹ ಕೀರ್ತನೆಗಳಲ್ಲಿ ಒಂದಾದ "ಬೃಹಸ್ಪತೆ ತಾರಾಪತೆ", ಈ ಕೃತಿಯು ದೀಕ್ಷಿತರ ಸಂಗೀತ ಪ್ರಭುತ್ವದೊಂದಿಗೆ, ಖಗೋಳ ಶಾಸ್ತ್ರದ ಜ್ಞಾನವನ್ನೂ ತೋರಿಸುತ್ತದೆ. ಗುರುಗ್ರಹಕ್ಕೆ ಹದಿನಾರು ಚಂದ್ರರಿರುವುದನ್ನು ಈಗ ವಿಜ್ಞಾನಿಗಳು ತಿಳಿಸಿದ್ದಾರೆ. ಆದರೆ ದೀಕ್ಷಿತರು ಹದಿನಾರು ಚಂದ್ರರ ಬಗ್ಗೆ ಕೃತಿಯಲ್ಲಿಯೇ ಹೇಳಿದ್ದಾರೆ. ಮತ್ತೊಂದು ಮನಮಿಡಿಯುವ ಘಟನೆಯು ಈ ಕೃತಿ ರಚನೆಗೆ ಕಾರಣವಾಗಿದೆ. ತಂಬಿಯಪ್ಪನ್ ಮದ್ದಳೆ ವಾದಕ. ದೀಕ್ಷಿತರು ಅವನಿಗೂ ಸಂಗೀತ ಪಾಠ ಹೇಳಿಕೊಡುತ್ತಿರುತ್ತಾರೆ. ಒಮ್ಮೆ ಅತನಿಗೆ ಹೊಟ್ಟೆನೋವು. ಏನೇನು ಔಷಧೋಪಚಾರಗಳನ್ನು ಮಾಡಿದರೂ ಪ್ರಯೋಜನವಾಗಲಿಲ್ಲ. ಸರಿ, ದೀಕ್ಷಿತರಿಗೆ ಜ್ಯೋತಿಷ್ಯವೂ ತಿಳಿದಿತ್ತು. ಗುರುಗಳ ಬಳಿ ಬಂದ. ದೀಕ್ಷಿತರು ಹೇಳಿದರು,
"ನವಗ್ರಹ ಉಪಾಸನೆ ಮಾಡು. ನೋವು ನಿವಾರಣೆಯಾಗುತ್ತದೆ."

ತಂಬಿಯಪ್ಪನ್ ಕಣ್ಣಲ್ಲಿ ನೀರು.
"ಗುರುಗಳೇ, ನನ್ನನ್ನು ದೇವಸ್ಥಾನದ ಒಳಗೆ ಬಿಡುವುದಿಲ್ಲ."

ಹಿಂದೂ ಸಮಾಜಕ್ಕೆ ಈಗಲೂ ಬಾಧಕವಾಗಿರುವ ಜಾತಿ ಪದ್ಧತಿ, ಆ ಕಾಲದಲ್ಲಿ ಇನ್ನೂ ತೀವ್ರವಾಗಿತ್ತು. ದೀಕ್ಷಿತರು ಚಿಂತಿತರಾದರು. ಕ್ಷಣ ಮಾತ್ರದಲ್ಲಿ ಹಾಡತೊಡಗಿದರು, "ಬೃಹಸ್ಪತೆ..ತಾರಾಪತೆ." ಹೀಗೆ ಸೃಷ್ಟಿಯಾಯಿತು ನವಗ್ರಹ ಕೃತಿಗಳು. ತಂಬಿಯಪ್ಪನ್ ನೋವು ಪರಿಹಾರವಾಯಿತು.

ದೀಕ್ಷಿತರ ಮತ್ತೊರ್ವ ಶಿಷ್ಯೆ, ತಂಜಾವೂರು ಆಸ್ಥಾನ ನರ್ತಕಿಯಾಗಿದ್ದ ಕಮಲಂ. ದೀಕ್ಷಿತರ ಮನೆಯಲ್ಲೊ ಕಿತ್ತು ತಿನ್ನುವ ಬಡತನ. ಊಟಕ್ಕೆ ಹೊಂದಿಸುವುದೇ ದೀಕ್ಷಿತರ ಮಡದಿಗೆ ಕಷ್ಟವಾಗಿತ್ತು. ಇದನ್ನು ಅರಿತ ಕಮಲಂ ಒಂದು ಗೋಣಿಚೀಲದ ತುಂಬಾ ಚಿನ್ನದ ನಾಣ್ಯಗಳನ್ನು ತಂದು ದೀಕ್ಷಿತರ ಮನೆಯಲ್ಲಿ ಇರಿಸುತ್ತಾಳೆ. ದೀಕ್ಷಿತರು ಮನೆಗೆ ಬಂದರು. ತಿಳಿಯಿತು. ಕಮಲಂಳನ್ನು ಕರೆಸಿ ಕೇಳಿದರು,

"ನೀನು ನನ್ನ ಶಿಷ್ಯೆಯಲ್ಲವೇ?"

ಕಮಲಂ ಗೆ ಭಯವಾಯಿತು, "ಹೌದು ಗುರುಗಳೇ"

"ಹಾಗಿದ್ದರೆ, ಈ ಚೀಲವನ್ನು ಈಗಲೇ ತೆಗೆದುಕೊಂಡು ಹೋಗು."

ಚಿನ್ನದ ನಾಣ್ಯಗಳ ಚೀಲ ಮನೆಯಿಂದ ಹೋಯಿತು. ದೀಕ್ಷಿತರ ಹೆಂಡತಿಯ ಕಣ್ಣಲ್ಲಿ ಧಾರಾಕಾರ ನೀರು. "ಇವರಿಗೆ ಇಷ್ಟೂ ತಿಳಿಯುವುದಿಲ್ಲವೇ?"

ದೀಕ್ಷಿತರು ಹೆಂಡತಿಯನ್ನು ಸಮಾಧಾನ ಮಾಡಿದರು, ಹಾಡತೊಡಗಿದರು.

"ಹಿರಣ್ಮಯಿಂ ಲಕ್ಷ್ಮೀಂ ಸದಾ ಭಜಾಮಿ, ಹೀನ ಮಾನವಾಶ್ರಯಂ ತ್ಯಜಾಮಿ" ಆಕೆಗೆ ಅರ್ಥವಾಯಿತು. ಮುತ್ತುಸ್ವಾಮಿ ದೀಕ್ಷಿತರಿಗಿಂತ ದೊಡ್ಡ ಐಶ್ವರ್ಯ ಅವರಿಗೆ ಯಾವುದಿದೆ."

ಈ ಹಿನ್ನೆಲೆಯನ್ನು ಕೊಟ್ಟು ಹಾಡಿದೆ. ಸುಶ್ರಾವ್ಯವಾಗಿತ್ತು. ಸಂಗೀತಗಾರ ತಾನು ಹಾಡುವುದು ಮಾತ್ರವಲ್ಲ, ಕೇಳುಗರನ್ನೂ ಎತ್ತರಕ್ಕೆ ಕೊಂಡೊಯ್ಯಬೇಕು. ಆಗಲೇ ಸಂಗೀತ ಸಾರ್ಥಕವಾಗುವುದು. ಹಾಗೇ ಆಯಿತು. ಎಲ್ಲರೂ ಎದ್ದುನಿಂತು "Standing Ovation" ಕೊಟ್ಟರು. ವಂದನಾರ್ಪಣೆ ಮಾಡಲು ಬಂದವರು ಮಾತನಾಡಲಿಲ್ಲ. ವೇದಿಕೆಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟರು. ಆ ನಮಸ್ಕಾರ ನನಗೆ ಆಗಿರಲಿಲ್ಲ, ನಾದದೇವಿಗೆ ಮತ್ತು ಮುತ್ತುಸ್ವಾಮಿ ದೀಕ್ಷಿತರದಾಗಿತ್ತು"

ಪದ್ಮನಾಭರು ನೆನಪಿನ ಬುತ್ತಿ ಬಿಚ್ಚಿಕೊಂಡಿದ್ದರು. ನಾನು ಹೇಳಿದೆ, "ಈಗ ಕಾಲ ಬದಲಾಗಿದೆ, ತಂಬಿಯಪ್ಪನ್‌ಗೆ ಆದ ತಾರತಮ್ಯ ಈಗ ಆಗುವುದಿಲ್ಲವೆನಿಸುತ್ತದೆ."

"ನನ್ನ ಒಂದು ಅನುಭವ ಹೇಳುತ್ತೇನೆ" ಅನ್ನುತ್ತಾ ಮತ್ತೊಂದು ಮನಕಲಕುವ ವಿಷಯ ಹೇಳಿದರು.

"ತ್ಯಾಗರಾಜರ ಆರಾಧನೆಯನ್ನ ನಾನು ಊರಲ್ಲಿ ಮಾಡುವುದು ನಿನಗೆ ಗೊತ್ತು. ಆ ದಿನ ಗಾನಶ್ರಾದ್ಧವನ್ನು ಮಾಡುತ್ತೇನೆ. ಸಾಮಾನ್ಯವಾಗಿ, ನಮ್ಮೂರಿನ ರಾಮ ಮಂದಿರದಲ್ಲಿ. ಶ್ರಾದ್ಧವೆಂದರೇನು? ನಮ್ಮ ಉಸಿರಿಗೆ ಕಾರಣರಾದ ಹಿರಿಯರನ್ನು ನೆನಸುವುದು. ಶ್ರದ್ಧೆಯಿಂದ ನಮಿಸುವುದು. ಶ್ರಾದ್ಧದ ಆಚರಣೆಯನ್ನು ಗಾನದ ಮೂಲಕ ಮಾಡುತ್ತೇನೆ. ಅಲ್ಲೇನು ಪಿಂಡ ಪ್ರದಾನ ಇರುವುದಿಲ್ಲ. ಆ ವರ್ಷ ನದಿತೀರದಲ್ಲಿ ಈ ಶ್ರದ್ಧಾಕಾರ್ಯ ಮಾಡಿದೆ. ಎಂದಿನಂತೆ ನಮ್ಮ ಸಮಾಜದ ಕೆಲವರನ್ನೂ ಊಟಕ್ಕೆ ಕರೆದಿದ್ದೆ.

ಅಂದು, ಅದೇನೊ ನನಗೆ ಭೈರವಿ ಕೆಂಪೇಗೌಡರು ಜ್ಞಾಪಕಕ್ಕೆ ಬಂದರು. ಅವರ ಬಗ್ಗೆ ಪರಿಪೂರ್ಣ ಮಾಹಿತಿಗಳಿಲ್ಲ. ಚನ್ನಪಟ್ಟಣ ತಾಲ್ಲೂಕಿನವರು. 1857 ರಿಂದ 1937ರವರೆಗೆ ಬಾಳಿದರು ಎನ್ನಲಾಗಿದೆ. ಸ್ನೇಹಿತರೊಬ್ಬರ ಸಲಹೆಯ ಮೇರೆಗೆ ಪಟ್ಣಂ ಸುಬ್ರಮಣ್ಯ ಅಯ್ಯರ್ ಅವರ ಬಳಿ ಸಂಗೀತ ಕಲಿತರು. ಮೈಸೂರು

ವಾಸುದೇವಾಚಾರ್ಯರ ಗುರು ಬಾಂಧವರು. ವಾಸುದೇವಾಚಾರ್ಯರ "ನಾ ಕಂಡ ಕಲಾವಿದರು" ಪುಸ್ತಕದಲ್ಲಿ ಕೆಂಪೇಗೌಡರ ಬಗ್ಗೆ ಬರೆದಿದ್ದಾರೆ. ಡಿವಿಜಿ ಅವರ ಕಲೋಪಾಸಕರು (ಜ್ಞಾಪಕ ಚಿತ್ರಶಾಲೆ 2) ಯಲ್ಲಿ, ಕೆಂಪೇಗೌಡರೊಮ್ಮೆ ಭೈರವಿ ರಾಗಾಲಾಪನೆಯನ್ನು ಮಾಡಿ "ಹಿಮಾಚಲ ತನಯೆ.." ಹಾಡಿದ ಉಲ್ಲೇಖವಿದೆ.

ಕೆಂಪೇಗೌಡರಿಗೆ ಭೈರವಿ ರಾಗ ಒಲಿದಿತ್ತು. ಒಮ್ಮೆ ತಿರುವಯ್ಯಾರಿನಲ್ಲಿ, ತಮ್ಮ ಗುರುಗಳಾದ ಪಟ್ಣಂ ಸುಬ್ರಮಣ್ಯ ಅಯ್ಯರ್ ಅವರ ಸಮ್ಮುಖದಲ್ಲಿ ಭೈರವಿಯನ್ನು ಹಾಡಿದರು. ಬಹಳ ಸಂತುಷ್ಟರಾದ ಗುರುಗಳು ತಮ್ಮ ಶಾಲನ್ನೆ ಹೊದಿಸಿ, "ಇಂದಿನಿಂದ ನೀನು ಭೈರವಿ ಕೆಂಪೇಗೌಡ" ಎಂದು ಹರಸಿದರು. ಕೆಂಪೇಗೌಡರ ಜೀವನವನ್ನು ಅಧ್ಯಯನ ಮಾಡಿ, ಡಾ ಎಚ್ ಎಲ್ ನಾಗೇಗೌಡರು "ಭೂಮಿಗೆ ಬಂದ ಗಂಧರ್ವ" ಎಂಬ ಹೊತ್ತಿಗೆಯನ್ನು ರಚಿಸಿದ್ದಾರೆ. ಸರಳ, ವಿನೀತ ಕೆಂಪೇಗೌಡರು ಭಾವಜೀವಿ, ನಾದ ದೇವತೆಯ ಕೃಪೆಯನ್ನು ಪಡೆದವರು. ಮೈಸೂರು ಆಸ್ಥಾನ ವಿದ್ವಾಂಸರಾದರೂ ಒಂದೆಡೆ ನೆಲೆ ನಿಲ್ಲಲಿಲ್ಲ. ಹೆಂಡತಿ ಮಕ್ಕಳನ್ನು ಕಳೆದುಕೊಂಡರಂತೆ. ಒಂದೇ ಸಮ ಊರಿಂದೂರಿಗೆ ಹೋಗುವರು. ಮನವಿದ್ದರೆ ಗಂಟೆಗಟ್ಟಲೆ ಹಾಡುವರು, ಇಲ್ಲದಿದ್ದರೆ ಯಾರು ಎಷ್ಟು ಕೇಳಿದರೂ, ಎಷ್ಟು ಕೊಟ್ಟರೂ ಹಾಡುತ್ತಿರಲಿಲ್ಲ. ಅವರ ನಾದೋಪಾಸನೆ ಅದ್ಭುತ. ಕೆಂಪೇಗೌಡರು, ಕೆಲಕಾಲ ಸ್ವಾಮಿ ವಿವೇಕಾನಂದರೊಂದಿಗೆ ಪರಿವ್ರಾಜಕರಾಗಿದ್ದರಂತೆ. ವಿವೇಕರು ಬಳುವಳಿಯಾಗಿ ಕೊಟ್ಟ ನಿಲುವಂಗಿಯನ್ನು ಯಾವಾಗಲೂ ಭಕ್ತಿಭಾವದಿಂದ ತಮ್ಮ ಬಳಿಯೇ ಇಟ್ಟುಕೊಳ್ಳುತ್ತಿದ್ದರಂತೆ.

ಅಂದು ತ್ಯಾಗರಾಜರ ಆರಾಧನಾ ಸಮಯದಲ್ಲಿ ಅಂದು, ಭೈರವಿ ಕೆಂಪೇಗೌಡರಿಗೂ ಆರಾಧನೆ ಮಾಡಬೇಕು ಅನ್ನಿಸಿತು. ಅವರ ಜನಾಂಗಕ್ಕೆ ಸೇರಿದ ನಮ್ಮ ಊರಿನ ಹಿರಿಯ ವ್ಯಕ್ತಿಯೊಬ್ಬರನ್ನು ಊಟಕ್ಕೆ ಆಹ್ವಾನಿಸಿದೆ. ಅವರಿಗೀಗ 97 ವರ್ಷ. ಶುಚಿರ್ಭೂತರಾಗಿ ಅವರು ಬಂದರು. ಅಲ್ಲಿದ್ದ ಇತರರನ್ನು ಕೇಳಿದೆ. "ಪಂಕ್ತಿ ಭೋಜನಕ್ಕೆ ನಿಮ್ಮದೇನಾದರೂ ತಕರಾರು ಇದ್ಯಾ" ಅಂತ. "ಏನಿಲ್ಲ"ವೆಂಬ ಒಕ್ಕೊರಲ ಉತ್ತರ. ಊಟವಾಯಿತು. ದಕ್ಷಿಣೆ, ತಾಂಬೂಲಗಳಾಯ್ತು. ಕಾರ್ಯಕ್ರಮ ಮುಗಿಯಿತು.

ಆದರೆ, ಈ ಘಟನೆಯ ಬಗ್ಗೆ ನಂತರ ತಕರಾರುಗಳು ಎದ್ದವು. ನನ್ನ ಒಂದು ಕಛೇರಿಯನ್ನು ರದ್ದು ಮಾಡಿದರು. ಘಟನೆಯ ಬಗ್ಗೆ ವಿವರಣೆಯನ್ನು ಕೊಡುವಂತೆ ಮತ್ತೊಬ್ಬರು ಕೇಳಿದರು. ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ. ನನಗೆ ನಾದವೇ ದೇವರು, ಸಂಗೀತವೇ ಸಿದ್ಧಾಂತ.

ಕೈವಾರದಲ್ಲಿ ನನಗೆ ದೊರೆತ ಪ್ರಶಸ್ತಿಯನ್ನು ಮತ್ತಾವುದೂ ಸರಿಗಟ್ಟಲಾರದು. ಕೈವಾರ ತಾತಯ್ಯ ಶ್ರೀ ಯೋಗಿ ನಾರಾಯಣರ ಬಗ್ಗೆ ನೀನು ಕೇಳಿರಬಹುದು. ಬೆಂಗಳೂರಿನ ಬಳಿಯ ಈ ಕ್ಷೇತ್ರವು ಮಹತ್ವದ್ದು. ಯೋಗಿಗಳ ತಪಸ್ಸಿನಿಂದ ಪುನೀತವಾಗಿದೆ.

"ಹೌದು, ನಮ್ಮ ರಾಜಕುಮಾರರೂ ಕೈವಾರ ಮಹಾತ್ಮೆಯೆಂಬ ಚಲನಚಿತ್ರವನ್ನು ಮಾಡಿದ್ದಾರೆ."

"ಹೌದು, ಅಲ್ಲಿ ಸಂಗೀತತೋತ್ಸವನ್ನೂ ಮಾಡುತ್ತಾರೆ. ಒಮ್ಮೆ ನನ್ನ ಕಛೇರಿ ಏರ್ಪಾಟಾಗಿತ್ತು. ಚೆನ್ನಾಗಿ ನಡೆಯಿತು. ನಾನು ಪ್ರತೀ ಕಛೇರಿಯಲ್ಲೂ ಸಂಪೂರ್ಣವಾಗಿ ತೊಡಗಿಸಿಕೊಳ್ಳುವೆ. ಮನಸ್ವೀ ಹಾಡುವೆ. ನಾದಪೂಜೆ ಮಾಡುವೆ. ಅಂದೂ ಅದೇ ರೀತಿ. ಕಛೇರಿ ಮುಗಿಯಿತು. ಹೊರಡುತ್ತಲಿದ್ದೆ. ಓರ್ವ ಹಿರಿಯ ತಾಯಿ ಬಂದರು. ಎಲೆಯಡಿಕೆ, ಹಳೆಯ ಸೀರೆ. ಹಣೆಯಲ್ಲಿ ಅಗಲ ಕುಂಕುಮ. ಕೈ ತುಂಬಾ ಬಳೆ.

"ಬುದ್ಧ್ಯೋರೆ, ನಿಮ್ಮ ಕಾಲು ಕೊಡಿ"

ನಾನು ಅವಾಕ್ಕಾಗಿ ನಿಂತೆ. ಆಕೆ ಕಾಲಿನ ಬಳಿ ಕುಳಿತಳು. ಕಾಲಿನ ಒಂದೊಂದೇ ಬೆರಳನ್ನು ತೀಡಿ ತೀಡಿ ನಮಿಸಿದಳು. ಅಂತಹ ಅನುಭವ ನನ್ನ ಜೀವನದಲ್ಲಿ ಯಾವತ್ತೂ ಆಗಿರಲಿಲ್ಲ. ಗುರು ವಾದಿರಾಜರ ಕೃಪೆ. ನಾನು ಮಾಧ್ಯಮವಾಗಿದ್ದೆ. ಸಕಲ ಮರ್ಯಾದೆಗಳು, ನಮಸ್ಕಾರಗಳು ಅವರಿಗೇ ಸಲ್ಲುತ್ತದೆ. ನನ್ನ ಕಣ್ಣುಗಳು ಮತ್ತೆ ಅಶ್ರುಜಲದಿಂದ ತುಂಬಿತು. ಭಾವದಾವೇಗಕ್ಕೆ ನಾನು ಎತ್ತಲೋ ತೇಲಿ ಹೋಗುತ್ತಿದ್ದೆ. ಆಕೆ ಮತ್ತೆ ಕಾಲನ್ನು ಒತ್ತಿಹಿಡಿದು ನಮಸ್ಕರಿಸಿದಳು. ಎದ್ದವಳೇ ಸೊಂಟದ ಬಾಳೆಕಾಯಿ ಗಂಟಿನಿಂದ ಏನೋ ತೆಗೆದಳು. ಮಡಚಿ ಮಡಚಿ ತುರುಕಿದ್ದ ಹತ್ತು ರೂಪಾಯಿಯ ನೋಟು!. ನನ್ನ ಕೈಗೆ ತುರುಕಿ, "ಸ್ವಾಮೆರೇ, ನೀವು ಸರಸ್ವತಮ್ಮನ ಮಗ, ಚಂದಾಗಿರಿ" ಅನ್ನುತ್ತಾ ಕಣ್ಣೊರೆಸಿಕೊಂಡು ಹೊರಟಳು. ನಾನು ನಾನಾಗಿರಲಿಲ್ಲ. ದೇವರ ಅಪಾರ ಕರುಣೆಗೆ ಪಾತ್ರನಾಗಿದ್ದೆ. "ನನ್ನ ಬದುಕಿನ ಅತ್ಯುತ್ತಮ ಪ್ರಶಸ್ತಿಯದು". ಆ ನೋಟನ್ನೂ ಕಟ್ಟುಹಾಕಿ ಇರಿಸಿಕೊಂಡಿರುವೆ.

ಈ ನಾದ ಮಹಿಮೆಯೇ ಅಂತಹದ್ದು. ಅಷ್ಟು ಸುಲಭವಲ್ಲ ನಾದ ಉಪಾಸನೆ; ಆವಾಹನೆ. ವಿವರಿಸಲು ಸಾಧ್ಯವಿಲ್ಲ. ಮತ್ತೆ ಬೇಂದ್ರೆ ಜ್ಞಾಪಕಕ್ಕೆ ಬರುತ್ತಾರೆ.

ಬೇಂದ್ರೆಯವರ, ನಾದಗುಣ ಇರುವ ಕವಿತೆ "ತುಂಬಿ ಬಂದಿತ್ತು", ಅವರ ಅಲಿಖಿತ ನಾಟಕದ ಹಾಡು. ನಾಟಕದಲ್ಲಿ, ಮಹಾನುಭಾವ ಬಸವಣ್ಣನವರ ಸಮಾಧಿ ಕಟ್ಟುತ್ತಿದ್ದ ಜಾಗಕ್ಕೆ ಏಕತಾರಿಯನ್ನು ಹಿಡಿದ ಜಂಗಮನೊಬ್ಬ ಬರುತ್ತಾನೆ, ಹಾಡುತ್ತಾ ಹೋಗುತ್ತಾನೆ.

ಬೆಳಕಿಗಿಂತ ಬೆಳ್ಳಗೆ ಇತ್ತ
ಗಾಳಿಗಿಂತ ತೆಳ್ಳಗೆ ಇತ್ತ
ಜಡಿಯಿಂದಿಳಿದ ಗಂಗಿ ಹಾಂಗ
ಚಂಗನೆ ನೆಗೆದಿತ್ತ
ಮೈಯೊಳಗಿರುವ ಮೂಲಿ ಮೂಲಿಗೂ
ಮೂಡಿ ಬಂದಿತ್ತ.

ಏನದು? ಚೈತನ್ಯವೇ, ಬ್ರಹ್ಮಾನುಭವವೇ, ನಾದವೇ?..

26

ಓ..ಓ....ಓ.... ರಂಗಶಾಯೀ..ಎನಿ....ಪಿಲಚಿತು... ಓ ಎನುಚು ರಾ ರಾದ...

ಕುಂಭಕೋಣಂನ ಸಾರಂಗಪಾಣಿ ದೇವಾಲಯ. ನಾವು ಗರ್ಭಗುಡಿಯ ಪಕ್ಕಕ್ಕೆ ಸ್ವಲ್ಪ ಜಾಗ ಮಾಡಿಕೊಂಡು ಕುಳಿತು ಹಾಡತೊಡಗಿದೆವು.

"ಓ....ಓ....ಓ.... ರಂಗಶಾಯೀ...ಎನಿ.. ಪಿಲಚಿತು.. ಓ ಎನುಚು ರಾ ರಾದ....

ಅರ್ಚಕರು ಹೇಳಿದರು,
"ಏಳಿ ಏಳಿ ಇಲ್ಲಿ ಹಾಡುವಂತಿಲ್ಲ ಏಳಿ", ಎಬ್ಬಿಸಿಬಿಟ್ಟರು.

ಶಿಷ್ಯರಿಗೆ ಹೇಳಿದೆ,
"ನಾವು ಸಂಕೀರ್ತನೆ ಸೇವೆ ಮಾಡಲು ಬಂದವರು. ಅರ್ಚಕರೊಂದಿಗೆ ವಾದ ಬೇಡ, ನಡೆಯಿರಿ, ಹೊರಗೆ ಹಾಡೋಣ". ಹೊರಪ್ರಾಂಗಣದಲ್ಲಿ ಹಾಡತೊಡಗಿದೆವು.

ಆಶ್ಚರ್ಯ! ಸಾರಂಗಪಾಣಿಯ ಉತ್ಸವ ಮೂರ್ತಿ ಧಡ ಧಡ ಬರತೊಡಗಿತು. ಗುಜ್ಜಕೋಲು (ಪಲ್ಲಕ್ಕಿಯನ್ನು ಹೊರುವ ಕೋಲು) ಊರಿ, ನಮ್ಮ ಮುಂದೆ ನಿಂತುಬಿಟ್ಟಿತು. ನನಗೆ ಆಶ್ಚರ್ಯ. ಏನಿದು? ಒಳಗೆ ಹಾಡಲು ಬಿಡಲಿಲ್ಲ. ಆದರೆ ಭಗವಂತನು ತನ್ನ ದಿವ್ಯರೂಪವನ್ನು ಹೊತ್ತು ನಾವಿದ್ದಲ್ಲಿಗೆ ಬಂದು ಬಿಟ್ಟನಲ್ಲ !

ಆದಿದ್ದು ಇಷ್ಟು. ಶಿಷ್ಯರೊಡನೆ ಗಾನಯಾತ್ರೆಯ ಅಂಗವಾಗಿ ಕುಂಭಕೋಣಂಗೆ ಹೋಗಿದ್ದೆ. ಸಾರಂಗಪಾಣಿಯ ಮುಂದೆ ಗಾನಸೇವೆ ಮಾಡಲು ಬಯಸಿದ್ದೆವು. ಅಲ್ಲಿ ಬಿಡಲಿಲ್ಲ. ಈಗ ದೇವರೆ ಇಲ್ಲಿಗೆ ಬಂದ. ಮನದ ಪರದೆಯಲ್ಲಿ ಕನಕರು ಕಾಣಿಸಿದರು. ನಾವು ಮುಂದುವರೆಸಿದೆವು. ರಂಗಶಾಯಿ ವೈಕುಂಠವನ್ನು ಬಿಟ್ಟು ಭಕ್ತರ

ಬಳಿಗೆ ಬಂದಿದ್ದ. ಆಮೇಲೆ ತಿಳಿಯಿತು. ಉತ್ಸವಮೂರ್ತಿಯ ಪಲ್ಲಕ್ಕಿಯನ್ನು ಹೊತ್ತಿದ್ದವನಿಗೆ, ಇದ್ದಕಿದ್ದಂತೆ ಭುಜದಲ್ಲಿ ನೋವು ಕಾಣಿಸಿತು. ಹೊರಲು ಆಗಲಿಲ್ಲ. ಪಲ್ಲಕ್ಕಿ ನಮ್ಮ ಬಳಿಯೇ ನಿಂತಿತು. ಕಾಕತಾಳೀಯವಿರಬಹುದು. ಆದರೆ ಇಂತಹ ಘಟನೆಗಳನ್ನು ಹೇಗೆ ವಿವರಿಸುವುದು. ಕೆಲವು ಘಟನೆಗಳನ್ನು ನೋಡಿ.

1994 ಇರಬಹುದು, ಕಲ್ಕತ್ತಾದ ರಸಿಕ ರಂಜನಿ ಸಭಾ. ಒಂದು ಜುಗಲ್ಬಂದಿ. ಸ್ನೇಹಿತರ ತಂದೆಯೊಬ್ಬರಿಂದ ಏರ್ಪಾಡು. ವಾಸ್ತವ್ಯ ರಾಯರ ಮಠದಲ್ಲಿ. ಆರ್ಕೆಪಿ, ಕರ್ನಾಟಕ ಸಂಗೀತಕ್ಕೆ, ಗೆಳೆಯ ಪಂಡಿತ ನಾಗರಾಜ ಹವಾಲ್ದಾರ್, ಹಿಂದೂಸ್ತಾನಿಗೆ. ಕಲ್ಕತ್ತೆಗೆ ಕಾಲಿಟ್ಟೊಡನೆ ಕಾಳಿಗೆ ವಂದನೆ. ಬಂಕಿಮಚಂದ್ರ, ವಂದೇ ಮಾತರಂ, ಚೈತನ್ಯ ಪ್ರಭು, ಪರಮಹಂಸ, ಶಾರದಾ ದೇವಿ, ವಿವೇಕಾನಂದ, ಜಗದೀಶ್ ಚಂದ್ರ, ಅರವಿಂದರು, ಹಲವಾರು ಕ್ರಾಂತಿಕಾರಿಗಳು. ಆರ್ಕೆಪಿ ಮನದ ಪದರಗಳಲ್ಲಿ ನೆನಪುಗಳ ಮೆರವಣಿಗೆ. ಅಸಾಧಾರಣ ಪ್ರತಿಭಾನ್ವಿತ ಗುರುದೇವ ರವೀಂದ್ರನಾಥ ಠಾಕೂರರು, ತಮ್ಮದೇ 2200ಕ್ಕೂ ಹೆಚ್ಚು ಗೀತೆಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಪ್ರೇಮ ಮತ್ತು ಪ್ರಕೃತಿಗಳು ಹೆಚ್ಚುಕಮ್ಮಿ ಮೂಲದ್ರವ್ಯಗಳು ಹಿಂದೂಸ್ತಾನಿ, ಕರ್ನಾಟಕ, ಜಾನಪದ ಮತ್ತು ಪಾಶ್ಚಿಮಾತ್ಯ, ಸ್ಕಾಟಿಶ್ ಬ್ಯಾಲೆಗಳ ಸ್ಫೂರ್ತಿ. ಬಂಗಾಳದ ಮಣ್ಣಿನ ಗುಣವನ್ನು ಹೊಂದಿದ್ದ "ರವೀಂದ್ರ ಸಂಗೀತ" ಹೆಚ್ಚು ಯಶ ಪಡೆಯದಿದ್ದರೂ, ಆಧುನಿಕ ಕಾಲದಲ್ಲಿ ಹೊಸಹಾದಿಗೆ ನಡೆದ ಒಂದು ಗಟ್ಟಿ ಪ್ರಯತ್ನವೆನ್ನಬಹುದು.

ಆರ್ಕೆಪಿಗೆ, ಅದೃಷ್ಟ ಕೈಕೊಟ್ಟಂತೆ ಅನ್ನಿಸಿತು. ಉಬ್ಬಸ ಆರಂಭವಾಯಿತು. ಔಷಧವಾಯಿತು. ಸಮಾಧಾನ ಹೇಳಿದ್ದಾಯಿತು. ಉಬ್ಬಸ ನಿಲ್ಲಲಿಲ್ಲ. ಸರಿ, ದಾರಿಕಾಣದೆ ಬೃಂದಾವನದ ಮುಂದೆ ನಿಂತು ಬೇಡಿದರು. "ರಾಯರೇ ಕರುಣಿಸಿ". ಉಬ್ಬಸ ಕಡಿಮೆಯಾದಂತೆ ಅನ್ನಿಸಿತು. ಆರ್ಕೆಪಿ ಹೇಳುತ್ತಾರೆ,

"ಹೋಗು, ಹಾಡು" ಎಂದು ರಾಯರು ಹೇಳಿದಂತೆ ಭಾಸವಾಯಿತು. "ಸಾಂಪ್ರದಾಯಿಕ ಉಡುಗೆ ಧರಿಸಿ, ಮಂತ್ರಾಕ್ಷತೆಯನ್ನು ತಲೆಯ ಮೇಲೆ ಹಾಕಿಕೊಂಡು ವೇದಿಕೆಗೆ ಹೋದೆ. ಹವಾಲ್ದಾರರು ಅದ್ಭುತವಾಗಿ ಹಾಡಿದರು. ನನಗೆ ಯಾವ ಶಕ್ತಿ ಬಂತೋ. ಶಾರೀರ ಬಿಡ್ತು. ಚೈತನ್ಯ ತುಂಬಿತು. ಜುಗಲ್ಬಂದಿ ಯಶಸ್ವಿಯಾಯಿತು. ಹಾರ್ಮೋನಿಯಂ ನುಡಿಸಿದ ಪಂಡಿತ ಶೇಷಾದ್ರಿ ಗವಾಯಿಗಳಿಗೆ ಪರಮಾಶ್ಚರ್ಯ."

ಶಿವಮೊಗ್ಗಾದಲ್ಲಿ ಒಂದು ಕಛೇರಿ. ಅಷ್ಟು ಹೊತ್ತಿಗೆ ಪದ್ಮನಾಭರು ಬಹಳಷ್ಟು ಹೆಸರು ಮಾಡಿದ್ದರು. ಸಹಜವಾಗಿ ಸಭಿಕರಿಂದ ನಿರೀಕ್ಷೆಯಿತ್ತು. ಗಾಯನ ಆರಂಭವಾಯಿತು. ಧ್ವನಿ ಕೂತು ಬಿಟ್ಟಿದೆ. ಗಾಬರಿಯಾಯ್ತು. ಏನು ಮಾಡಲಿ, ಏನು ಮಾಡಲಿ ಎಂಬ ತಹತಹ. ತುಂಬಾ ದುಃಖ ಆವರಿಸಿತು. ನೈವೇಲಿ ನಾರಾಯಣನ್ ಮೃದಂಗ.

ಅವರಿಗೆ ಕಣ್ಣೂಲಚನೆಯನ್ನಿತ್ತು ತನಿ ಬಿಟ್ಟರು. ವೇದಿಕೆಯಿಂದ ಹೊರಬಂದು, ಗ್ರೀನ್ ರೂಂನಲ್ಲಿ ಕೂತು ಏಕಪ್ರಕಾರ ಗುರು ವಾದಿರಾಜರನ್ನು ಧ್ಯಾನಿಸಿದರು. ಮನೋಬಲದ ಮುಂದೆ ಏನಿದೆ. ಸತತ ಪರಿಶ್ರಮದಿಂದ ಕಟ್ಟಿದ್ದ ಮನೋಬಲವದು. ಚಿಗುರಿತು. ಜೊತೆಗೆ ಗುರು ಕಾರುಣ್ಯದ ಮೇಲೆ ಅಪಾರ ನಂಬಿಕೆ. ಇಪ್ಪತ್ತು ನಿಮಿಷದ ನಂತರ ಮತ್ತೆ ವೇದಿಕೆಗೆ. ಶಾರೀರ ತೆರೆದುಕೊಂಡಿತು. ಗಾನ ಸರಸ್ವತಿ ಅಲೆಅಲೆಯಾಗಿ ಹರಿದಳು. ಸ್ವರದಲ್ಲಿ ಶಾರೀರ ಕರಗಿತು. ತಾಳದ ಸಮಯಕ್ಕೆ ರಾಗ ರಂಜಿಸಿತು.

2014–15 ಇರಬಹುದು. ಅಟ್ಲಾಂಟದಲ್ಲಿ ಕಛೇರಿ ಏರ್ಪಾಡಾಗಿದೆ. ಪದ್ಮನಾಭರಿಗೆ ಕಣ್ಣು ಕೆಂಪಾಗಿದೆ. ಕಣ್ಣುಗುಡ್ಡೆಯ ಉರಿಯೂತ, conjuntivitis. ಹಿಂದಿನ ದಿವಸ ಹೂಸ್ಟನ್ನಲ್ಲಿ, ಕಣ್ಣು ಬಿಡಲಾಗದಿದ್ದರೂ (ಯಾರಿಗೂ ಹೇಳಬೇಡಿ) ಯಶಸ್ವಿ ಕಛೇರಿ ಮಾಡಿದ್ದರು. ಮುಂದೆ ಅಟ್ಲಾಂಟದಲ್ಲಿ. ಹೂಸ್ಟನ್ – ಅಟ್ಲಾಂಟ ನಡುವಿನ ವಿಮಾನ ಪಯಣ ಸುಮಾರು ನಾಲ್ಕು ಗಂಟೆ. ಇವರು, ಒಬ್ಬ ಅಮೇರಿಕೆಯ ಡಾಕ್ಟರ್ ಬಳಿ ಹೋದರು. ಆ ಮನುಷ್ಯ ಹತ್ತಿರ ಸೇರಿಸಲೇ ಇಲ್ಲ. ಇದು ಸೊಂಕು, ಅಲರ್ಜಿ. ಅಮೇರಿಕಾದ ಯಾವ ವೈದ್ಯರೂ ಔಷಧಿ ಕೊಡುವುದಿಲ್ಲ. ಒಂದು ವಾರ ಬಿಡಿ, ತಾನೆ ವಾಸಿಯಾಗುತ್ತದೆ ಅಂದುಬಿಟ್ಟರು. ಈಗೇನು ಮಾಡುವುದು. ಸಿದ್ಧತೆಯನ್ನು ಮಾಡಿಕೊಂಡಿರುವ ಸಹ ಭಾರತೀಯರಿಗೆ ಕಷ್ಟ, ನಿರಾಸೆ. ಆದರೆ ಸೊಂಕು ಇದ್ದಾಗ ವಿಮಾನ ಪ್ರಯಾಣ ನಿಶಿದ್ಧ. ಆರ್ಕೆಪಿಯವರಿಗೆ ಒತ್ತಡ. ಸೊಸೆ ಅಂದರು,

"ಮಾವ, ತಾಳಿ ನೋಡೋಣ. ಉದ್ವೇಗ ಮಾಡಬೇಡಿ. ನಾನೊಂದು ಕೊನೆಯ ಪ್ರಯತ್ನ ಮಾಡುವೆ".

ಆಕೆಗೆ ದೂರದ ಪರಿಚಯವಿದ್ದ ಕಣ್ಣಿನ ಡಾಕ್ಟ್ರ ಸಂಖ್ಯೆಯನ್ನು ಹುಡುಕಿ ಕರೆ ಮಾಡಿದರು. ಇವರ ಅದೃಷ್ಟ, ಕರೆ ತೆಗೆದುಕೊಂಡರು. ಆರ್ಕೆಪಿಯ ಹೆಸರು ಕೇಳುತ್ತಲೆ ಅತ್ತಲಿಂದ ಕನ್ನಡದಲ್ಲಿ ಧ್ವನಿ ಮೂಡಿತು.

"ಅಯ್ಯೊ! ಆರ್ಕೆಪಿ ಸಾರಾ, ಅವರು ನಮ್ಮಮ್ಮನ ಸಂಗೀತದ ಮೇಷ್ಟ್ರು. ಸರ್‌ನ ಕರಕೊಂಬನ್ನಿ."

ಪದ್ಮನಾಭರಿಗೆ ಡಾಕ್ಟರ್ ಮನೆಯಲ್ಲಿ ಉಪಚಾರವಾಯಿತು. ಭಾರತದಲ್ಲಿದ್ದ ಶಿಷ್ಯೆಯ ಜೊತೆ ಸಂವಾದವಾಯಿತು. ಫೀಸಿಲ್ಲದೆ ಪ್ರಿಸ್ಕ್ರಿಪ್ಷನ್ ಸಿಗ್ತು. ಎರಡು ದಿನ ಡ್ರಾಪ್ಸ್ ಹಾಕಿಕೊಂಡು ಸ್ವಚ್ಛ ಕಣ್ಣಲ್ಲಿ ಅಟ್ಲಾಂಟಕ್ಕೆ ಹಾರಿದರು.

ಮತ್ತೊಂದು ಬಾರಿ, ಅದೇ ಅಮೇರಿಕ. ತಲೆಸುತ್ತು ಆರಂಭವಾಯಿತು. ವೈದ್ಯರು ಕೊಟ್ಟ ಔಷಧಿ ಪರಿಣಾಮ ಬೀರಲಿಲ್ಲ. ಕಛೇರಿಯ ದಿನ. ಕೋಣೆಗೆ ಸೇರಿ, ಬಾಗಿಲು

ಹಾಕಿ, ಅರ್ಧಗಂಟೆ "ಕಣ್ಮುಚ್ಚಿ "ತಪೋವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ" ಹೇಳಿಕೊಂಡರು. ಕಛೇರಿಯನ್ನು ಯಶಗೊಳಿಸಿದರು. ಹೀಗೆ ಎರಡು ತಿಂಗಳು ತೊಂದರೆಯಾಯಿತು. ಭಾರತಕ್ಕೆ ಬಂದ ಮೇಲೆ, vertigoಗೆ ಸರಿಯಾದ ಔಷಧಿ ಸಿಕ್ಕಿತು. ಆದರೆ "ವಾದಿರಾಜರ ಕೃಪೆಯಿಂದ ಅಲ್ಲಿನ ಎಲ್ಲಾ ಕಛೇರಿಗಳು ಯಶಸ್ವಿಯಾಗಿ ನಡೆದವು. ಕನಕರ ಜನಪ್ರಿಯವಾದ ಈ ಕೃತಿ ನೆನಪಿಗೆ ಬರುತ್ತಿದೆ" ಎನ್ನುತ್ತಾ ಆರ್ಕೆಪಿ ಹಾಡತೊಡಗಿದರು.

ಯಮಸುತನ ರಾಣಿಗೆ ಅಕ್ಷಯ ವಸನವನಿತ್ತೆ
ಸಮಯದಲ್ಲಿ ಅಜಮಿಳನ ಪೊರೆದೆ।
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ಕಾಗಿನೆಲೆಯಾದಿಕೇಶವನೆ॥

"ಇಂತಹ ಘಟನೆಗಳು ಕಾಕತಾಳೀಯವಿರಬಹುದು. ಕಾರಣಗಳು ಇದ್ದರೂ ನಮಗೆ ವಿವರಿಸಲು ತಿಳಿಯದಿರಬಹುದು. ನನಗಂತೂ ನಂಬಿಕೆಯೆ ಮುಖ್ಯ. ಅದು ನಮ್ಮ ನೈತಿಕ ಮತ್ತು ಮನೋಬಲವನ್ನು ವೃದ್ಧಿಸುತ್ತದೆ."

ಆರ್ಕೆಪಿ ಅವರು ಸಾವಿರಾರು ಕಛೇರಿಗಳನ್ನು ನಡೆಸಿದ್ದಾರೆ. ಕರ್ನಾಟಕದ ಮೂಲೆ ಮೂಲೆಯೂ ಅಲ್ಲದೆ ಕಲ್ಕತ್ತ, ಪುಣೆ, ಮಂಬಾಯಿ, ಚೆನ್ನೈ, ಕೊಯಂಬತ್ತೂರು, ಮಧುರೈ, ತಿರುವಾಂಕೂರು ಹೀಗೆ ನೂರಾರು ಕಡೆ ಹಾಡಿ ರಸದೌತಣವನ್ನು ನೀಡಿದ್ದಾರೆ. ಉಡುಪಿಯ ಪರ್ಯಾಯಗಳಲ್ಲಿ, ಮೈಸೂರು ಅರಮನೆಯಲ್ಲಿ, ತಿರುವಾಂಕೂರು ಅರಮನೆಯಲ್ಲಿ, ದಸರೆಯಲ್ಲಿ, ಶೃಂಗೇರಿಯಲ್ಲಿ, ಮಂತ್ರಾಲಯದಲ್ಲಿ ರಾಜ್ಯೋತ್ಸವಗಳಲ್ಲಿ ಕಛೇರಿ ನಡೆಸಿಕೊಟ್ಟಿದ್ದಾರೆ.

ಉಡುಪಿಯ ಶ್ರೀ ವಿಶ್ವೇಶತೀರ್ಥರ, ಕಂಚಿಯ ಜಯೇಂದ್ರ ಸರಸ್ವತಿಗಳ, ಯತಿರಾಜ ಜೀಯರ್ ಸ್ವಾಮಿಗಳ, ಸತ್ಯಾತ್ಮ ತೀರ್ಥರ, ಸೋದೆಯ ವಿಶ್ವೋತ್ತಮ ತೀರ್ಥರ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಹೀಗೆ ಹಲವು ಸಂತರ ಸಾನ್ನಿಧ್ಯದಲ್ಲಿ ಸಂಗೀತ ಶಾರದೆಯನ್ನು ಪೂಜಿಸಿದ್ದಾರೆ. ಮಠ ಮಾನ್ಯಗಳಲ್ಲಿ ಹಾಡಿದ್ದಾರೆ ಸಂಮಾನಿತರಾಗಿದ್ದಾರೆ. ತ್ಯಾಗರಾಜರ ತಿರುವೈಯ್ಯಾರಿನಲ್ಲೂ ಸನ್ಮಾನಿತರಾಗಿದ್ದಾರೆ.

ಭಾರತದ ರಾಷ್ಟ್ರಪತಿಗಳಾಗಿದ್ದ ಸರ್ವಶ್ರೀ ವೆಂಕಟರಾಮನ್, ಪ್ರಣಬ್ ಕುಮಾರ್ ಮುಖರ್ಜಿ, ಅಬ್ದುಲ್ ಕಲಾಂ, ಹಲವಾರು ರಾಜ್ಯಪಾಲರು, ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಮತ್ತು ಶಿವರಾಮ ಕಾರಂತ, ಸಂತೋಷ ಹೆಗಡೆ..ಮೊದಲಾದ ಗಣ್ಯಾತಿಗಣ್ಯರ ಸಭೆಗಳಲ್ಲಿ ಹಾಡಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಕರುನಾಡ

ಜನಮನದಲ್ಲಿ ಸಂಗೀತಧಾರೆಯನ್ನು ಸುರಿಸುತ್ತಾ ಸಾರ್ಥಕರೆನಿಸಿಕೊಂಡಿದ್ದಾರೆ.
ನಾನು ಕುತೂಹಲಕ್ಕೆ ಕೇಳಿದೆ. "ಇಷ್ಟೆಲ್ಲಾ ಸಾಧನೆ ಮಾಡಿರುವಿರಿ, ನಮಗೆ ಹೆಮ್ಮೆ. ಒಬ್ಬ ಸಂಗೀತಗಾರನಿಗೆ ಮುಖ್ಯವಾಗಿ ಇರಬೇಕಾದ ಗುಣ ಯಾವುದು?"

"Purity, Patience and Perseverance", ಆತ್ಮವಿಶ್ವಾಸ, ವಿನೀತ ಭಾವ, ಗುರುಗಳಲ್ಲಿ ಅಮಿತ ವಿಶ್ವಾಸ, ಸತತ ಸಾಧನೆ.. ಮೊದಲಾದ ಸದ್ಗುಣಗಳು ಬೇಕೇಬೇಕು. ತಾಳ್ಮೆಯಂತೂ ಬಹಳ ಮುಖ್ಯ. ಒಂದೇ ದಿನಕ್ಕೆ ಅಟ್ಟಕ್ಕೆ ಏರಲು ಸಾಧ್ಯವಿಲ್ಲ. ಕಾಯಿ ಹಣ್ಣಾಗುವರೆಗೂ ಕಾಯಬೇಕು.

15 ವರ್ಷಗಳ ಹಿಂದೆ, ಪೂರ್ವಾಶ್ರಮದಲ್ಲಿದ್ದ ಶ್ರೀ ತಿರುನಾರಾಯಣ ಅಯ್ಯಂಗಾರ್ ಆಗಿದ್ದ ಇಂದಿನ ಯತಿರಾಜ ಜೀಯರ್ ಅವರು, ಮಲ್ಲೇಶ್ವರದ ಗೋಪಾಲಕೃಷ್ಣ ದೇವಸ್ಥಾನದಲ್ಲಿ –
"ಪದ್ಮನಾಭ್, ಒಂದು ಕಛೇರಿ, ಒಂದು ಕೃತಿ, ಒಂದು ರಾಗ ಎರಡು ಗಂಟೆ ಹಾಡುತ್ತೀರಾ?" ಎಂದರು.

"ಪ್ರಯತ್ನಿಸುತ್ತೇನೆ, ಸ್ವಾಮಿ"

"ಹಾಡಿದೆ, ಗುರುಗಳ ಮುಂದೆ, ರಂಗನಾಥನಿಗೆ ಸಮರ್ಪಿಸಿದೆ. ಮುತ್ತುಸ್ವಾಮಿ ದೀಕ್ಷಿತರ ಕೃತಿ "ಶ್ರೀ ಕೃಷ್ಣ ಭಜಮಾನಸ", ಎರಡೂವರೆ ಗಂಟೆ, ತೋಡಿರಾಗದಲ್ಲಿ. ಗುರು ಕೃಪೆ ಅಪಾರ. ಆ ಕಛೇರಿಯ ಮುದ್ರಿಕೆ ನನ್ನ ಬಳಿ ಇದೆ. ಯಾವಾಗ ಬೇಕಾದರೂ ಕೇಳಬಹುದು."

ಮತ್ತೊಮ್ಮೆ, ಬಹುಶ್ರುತರಾದ ಶ್ರೀ ಪಾವಗಡ ಪ್ರಕಾಶರಾಯರು, ಆರ್ಕೆಪಿಯವರನ್ನು ಮದುವೆ ಮನೆಯಲ್ಲಿ ಭೇಟಿಯಾದರು. ಅಂದು, ಆರ್ಕೆಪಿಯವರ ಕಛೇರಿಯನ್ನು ಪಕ್ಕದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ತಮ್ಮ ಎಂದಿನ ಶೈಲಿಯಲ್ಲಿ ಪ್ರಕಾಶರಾಯರು ಕೇಳಿದರು.

"ನೀವು ಇವತ್ತು ಹಾಡ್ತಿರೋ"

"ಹ್ಞ.."

"ಏನ್ ಹಾಡ್ತೀರಿ. ಎಂದುರೋ ಮಹಾನುಭಾವುಲು ಹಾಡ್ತಿರಾ ಅರ್ಧ ಗಂಟೆ"

ಆರ್ಕೆಪಿ ಹೇಳಿದ್ರು ."ಆದರೆ, ಒಂದು ಷರತ್ತು. ನೀವು ಪೂರ್ತಿ ಕೂತು ಕೇಳಬೇಕು."

ಸರಿ, ಗಾಯನ ಆರಂಭವಾಯಿತು. ತ್ಯಾಗರಾಜರ ಆ ಜನಪ್ರಿಯ ಕೃತಿಯನ್ನು ಆರ್ಕೆಪಿ 50 ನಿಮಿಷ ಹಾಡಿದರು. ಪ್ರಕಾಶರಾಯರು ಕೂತು ಕೇಳಿದರು. ಪರವಶರಾದರು. ಗಾಯನ ಮುಗಿಯುತ್ತಿದ್ದಂತೆ, ವೇದಿಕೆಯ ಮೇಲೆ ಬಂದು, ತಾವು ಹೊದ್ದಿದ್ದ ಶಾಲನ್ನು ಆರ್ಕೆಪಿಗೆ ಹೊದ್ದಿಸಿ "ಧನ್ಯನಾದೆ" ಎಂದರು.

"ಯಾವಾಗಲೂ ಇನ್ವಾಲ್ವ್ ಆಗಿ ಹಾಡಬೇಕು" ಅನ್ನುತ್ತಾರೆ ಆರ್ಕೆಪಿ.

ನಾನು ಕೇಳಿದೆ "ನೀವು ಇಂದು ಕರ್ನಾಟಕದ ಹಿರಿಯ ಸಂಗೀತಗಾರರು. ಮುಖ್ಯವಾದ ಪ್ರಶ್ನೆಯಿದೆ. ಶಾಸ್ತ್ರೀಯ ಸಂಗೀತದ ಭವಿಷ್ಯ ತೂಗುಯ್ಯಾಲೆಯಲ್ಲಿದೆಯೇ?"

"ಹಾಗೇನಿಲ್ಲ. ಯಾಕೆಂದರೆ **ಸಂಗೀತ ಹುಟ್ಟಿದ್ದು ಯಶೋದೆಯ ತೊಡೆಯ ಮೇಲೆ**"

"ಹ್ಞ.."

"ಅಲ್ಲವೆ ಮತ್ತೆ. ಮಕ್ಕಳಿಗೆ ಉಣಿಸಲು, ನಿದ್ರಿಸಲು, ಸಮಾಧಾನ ಮಾಡಲು ಅಮ್ಮಂದಿರು ಹಾಡತೊಡಗಿದಾಗ ಸಂಗೀತ ಅರಳಿತಲ್ಲವೆ. ಮುಂದೆ ಜನಪದರು ತಮ್ಮ ಸಂತೋಷ, ನೋವುಗಳನ್ನು ತೋಡಿಕೊಳ್ಳುವಾಗ, ಭಕ್ತಿಯಿಂದ ದೇವರ ಪೂಜೆ ಮಾಡುವಾಗ ಸಂಗೀತ ಬೆಳೆಯಿತು. ಜನಪದವು ಅಕ್ಷಯ ಭಂಡಾರ. ದಾಸರು, ತತ್ತ್ವಪದಕಾರರು..ಲಾವಣಿಕಾರರು.. ಎಲ್ಲರ ಕಾಣಿಕೆಯು ಸಂಗೀತದ ಬೆಳವಣಿಗೆಯಲ್ಲಿದೆ. ಈಗ ಸಂಗೀತವು ಹೆಚ್ಚು ಹೆಚ್ಚು ತಾಂತ್ರಿಕವಾಗಿ ರಸವು ಮಾಯವಾಗುತ್ತಿದೆ. ಒಂದು ಪುಟಾಣಿ ಘಟನೆಯನ್ನು ಹೇಳುವೆನು"

ಅದು ಹಾಸನ ಜಿಲ್ಲೆಯ ಹಂದ್ರಾಳು ಗ್ರಾಮ. ಭಾಸ್ಕರೇಶ್ವರ ಅಲ್ಲಿ ದೇವರು. ಒಂದು ಸಂಜೆ ಅಲ್ಲಿ ಕಛೇರಿ. ಮಳೆಯ ಹನಿಗಳ ಸಿಂಚನ. ಎಲ್ಲರ ಆತಂಕ. ವಿದ್ಯುತ್ತು ಕೈಕೊಟ್ಟಿತು. ಬದಲಿ ವ್ಯವಸ್ಥೆ ಇಲ್ಲ. ಏನು ಮಾಡುವುದು. ಬೇಸರ ಮನೆ ಮಾಡಿತು. ಆರ್ಕೆಪಿ ಹೇಳಿದರು,

"ಇವನ ಹೆಸರೇ ಭಾಸ್ಕರೇಶ್ವರ. ಬೆಳಕಿನ ಭಗವಂತ. ನಮ್ಮ ಕೈಬಿಡುವುದಿಲ್ಲ. ಎಲ್ಲರೂ ದೇವಸ್ಥಾನದ ಪ್ರಾಂಗಣಕ್ಕೆ ಬನ್ನಿ, ಲಾಂದ್ರಗಳನ್ನು ಹಚ್ಚಿ. ದೇವರ ದೀಪಗಳು ಬೆಳಗಲಿ." ಮೈಕಿನ ಸಹಾಯವಿಲ್ಲದೆ ಮೂರು ಗಂಟೆಯ ಕಛೇರಿ. ಆರ್ಕೆಪಿ ಅವರ ಶಾರೀರ ಸೌಖ್ಯಕ್ಕೆ ನಮೋನಮಃ. ಈಗಲೂ ಕಛೇರಿಯಲ್ಲಿ ಪದ್ಮಾಸನದಲ್ಲಿ ಕೂರುತ್ತಾರೆ, ಮನೆಯಲ್ಲಿ ಪಾಠ ಹೇಳುವಾಗಲೂ ಅಷ್ಟೆ. ಬೆನ್ನು ನೇರ, ನಡುಗದ ಧ್ವನಿಯಲ್ಲಿ ನೂರು ಭಾವ. ಹಸನ್ಮುಖ, ನಗೆಚಟಾಕಿ. ಶಿಷ್ಯರ ಬೆನ್ನು ಬಾಗಲು ಬಿಡುವುದಿಲ್ಲ.

ಆಗಾಗ ತಟ್ಟುತ್ತಿರುತ್ತಾರೆ!
"ರವಿ, ನಿನಗೆ ಮೈಕುದಾಸ, ಗೊತ್ತಾ!"

"ಇಲ್ಲವಲ್ಲಾ.. ಹೆಸರೇ ವಿಚಿತ್ರವಾಗಿದೆ"

ನಕ್ಕರು. "ಈಗೀಗ ಕಚೇರಿಯಲ್ಲಿ ಮೈಕಿನ ಭರಾಟೆಯೆ ಜೋರು. ಅದೇನೋ ಒಂದು ಪಾಯಿಂಟ್ ಜಾಸ್ತಿ ಮಾಡು.. ಸ್ವಲ್ಪ ಇಳಿಸು.. ಅನ್ನುತ್ತಾರೆ. ಕೈಗಳಿಂದ, ಕೆಲವೊಮ್ಮೆ ಬೆರಳುಗಳಿಂದಲೂ ಮೇಲೆ ಕೆಳಗೆ ಸೂಚಿಸುತ್ತಿರುತ್ತಾರೆ. ಕಛೇರಿ ಆರಂಭಕ್ಕೆ ಎರಡುಗಂಟೆ ಮುಂಚೆ ಬನ್ನಿ ಅನ್ನುತ್ತಾರೆ. ಒಂದೂವರೆ ಗಂಟೆ ಕಛೇರಿಯಾದರೆ ಒಂದು ಗಂಟೆ ಮೈಕು ಅಡ್ಜಸ್ಟ್‌ಮೆಂಟ್! ಮೈಕೇ ಸಂಗೀತದ ಸೌಂದರ್ಯ ಹೆಚ್ಚಿಸುವುದಾದರೆ ನಾವು ಯಾಕೆ? ಇತ್ತೀಚಿಗೆ ಕೆಲ ಹಾಡುಗಾರರು ಮೈಕುದಾಸರಾಗಿದ್ದಾರೆ!"

"ಹೊಸ ಹೊಸ ವಾದ್ಯಗಳು ಬರುತ್ತಿವೆಯಲ್ಲ! ಅವುಗಳಿಗೆ ಮೈಕ್ ಬೇಕಲ್ಲವೇ ?

"ಬೇಕಾಗಬಹುದು. ಪಾಶ್ಚಿಮಾತ್ಯ ಸಂಗೀತದ ವಾದ್ಯಗಳನ್ನು ಶಾಸ್ತ್ರೀಯ ಸಂಗೀತದಲ್ಲಿ ಏಕೆ ತೂರಿಸಬೇಕು. ಅವುಗಳ ಗುಣವೇ ಬೇರೆ. ಅವರ ಸಂಗೀತಕ್ಕೆ ಅಂತಹ ಅಬ್ಬರದ ವಾದ್ಯಗಳು ಬೇಕಿರಬಹುದು. ಇತ್ತೀಚಿಗೆ ಫ್ಯೂಷನ್ ಸಂಗೀತದ ಫ್ಯಾಷನ್ ಹೆಚ್ಚಾಗಿದೆ. ಶಾಸ್ತ್ರೀಯ ಗಾಯನದ ಶ್ರವಣಸುಖ ಮಾಯವಾಗುತ್ತದೆ. ನಾನು ಒಪ್ಪುವುದಿಲ್ಲ. ಈ ರೀತಿಯ ಪ್ರಯೋಗಗಳು ಶಾಸ್ತ್ರೀಯ ಸಂಗೀತದ ಭವಿಷ್ಯಕ್ಕೆ ಅಪಾಯಕಾರಿ". ಆರ್ಕೆಪಿ ನಿಲುವು ಸ್ಪಷ್ಟವಾಗಿದೆ. "ಚೀನಾ, ರಷ್ಯ ಮುಂತಾದ ದೇಶಗಳಲ್ಲಿ ಪಾಶ್ಚಿಮಾತ್ಯ ಪ್ರಭಾವ ಮತ್ತು ರಾಜಕೀಯ ಕಾರಣಗಳಿಗಾಗಿ ಸಾಂಪ್ರದಾಯಿಕ ಸಂಗೀತಕ್ಕೆ ತೊಂದರೆಯಾಗಿದೆ."

ನನ್ನ ಪ್ರಶ್ನೆ ಸರಳವಾಗಿತ್ತು. ಉತ್ತರ ಸರಳವಿರಲಿಲ್ಲ.

"ಹಿಂದೆ ರಾಜರು, ಆಡಳಿತಗಾರರು ಸಂಗೀತಕ್ಕೆ ಆಶ್ರಯವನ್ನಿತ್ತಿದ್ದರು. ಪ್ರಖ್ಯಾತ ಸಂಗೀತಗಾರರು ಅಶನಕ್ಕಿಂತ ಉಪಾಸನೆಗೇ ಪ್ರಾಧಾನ್ಯವನ್ನಿತ್ತಿದ್ದರು. ನಮ್ಮ ಜನರೂ ಸಂಗೀತಗಾರರನ್ನು ಗೌರವಿಸುತ್ತಿದ್ದರು. ನೆರವು ನೀಡುತ್ತಿದ್ದರು. ಆದರೂ ಈ ಸರಸ್ವತಿಯ ಮಕ್ಕಳಿಗೆ ಲಕ್ಷ್ಮಿಯ ಕಟಾಕ್ಷವಿರಲಿಲ್ಲ. ಸ್ವಾತಂತ್ರ್ಯಾನಂತರದ ದಿನಗಳಲ್ಲೂ ಸಂಕಷ್ಟವೇನೂ ಕಮ್ಮಿಯಾಗಲಿಲ್ಲ. ರಾಷ್ಟ್ರ ಮತ್ತು ರಾಜ್ಯಮಟ್ಟದ ಸಂಗೀತ ಪ್ರಾಧಿಕಾರಗಳು ಸ್ಥಾಪನೆ ಆಯಿತು. ಆದರೆ ನಿರೀಕ್ಷಿಸಿದ ಮಟ್ಟದಲ್ಲಿ ಬೆಂಬಲ ಸಿಕ್ಕಲಿಲ್ಲ. ಸಾರ್ವಜನಿಕರ ಬೆಂಬಲದಿಂದಲೇ ಸಂಗೀತ ಸಾಧಕರು ಉಳಿದಿದ್ದಾರೆ, ಸಂಗೀತವು ಬೆಳೆಯುತ್ತಿದೆ. ಹಿಂದೆ ಸಂಗೀತಗಾರರು ಉಪಾಸಕರಾಗುವುದು ಕಷ್ಟವಾಗಿತ್ತು. ಸಂಸಾರ

ರಥ ಓಡಿಸಲು ಪಾಠ ಮಾಡುತ್ತಿದ್ದರು. ಕೆಲವರು ಬೆಳಿಗ್ಗೆ ಹೋದರೆ ಬರುವುದು ರಾತ್ರಿಯೇ ಆಗುತ್ತಿತ್ತು. ಈಗ ಆ ಪರಿಸ್ಥಿತಿಯಿಲ್ಲ. ಒಳ್ಳೆಯ ಸಂಗೀತಗಾರರು ಹಣ ಕಾಣುವಂತಾಗಿದೆ. ಆದರೆ ಸಂಗೀತವನ್ನೇ ಪೂರ್ಣಪ್ರಮಾಣದ ಉದ್ಯೋಗವನ್ನಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಾನು ನನ್ನ ಶಿಷ್ಯರಿಗೆ ಹೇಳುವುದಿಷ್ಟೆ. ಸಂಗೀತದ ಉಪಾಸಕರಾಗಿ. ಸಂಸಾರಕ್ಕೆ ಬೇರೆ ಆದಾಯವನ್ನು ಅವಲಂಬಿಸಿ. ಆಗಲೇ ಸಂಗೀತ ಬೆಳೆಯಲು ಸಾಧ್ಯ."

"ಈಗ ಪೋಷಕರಿಗೆ, ಮಕ್ಕಳಿಗೆ ಸಂಗೀತವನ್ನೋ ಅಥವಾ ಇನ್ಯಾವುದಾದರೂ ಕಲೆಯನ್ನೋ, ಕ್ರೀಡೆಯನ್ನೋ ಕಲಿಸಬೇಕೆಂದಿದೆ. ಅದಕ್ಕಾಗಿ ಹಣ ಖರ್ಚು ಮಾಡಲು ಸಿದ್ಧವಿದ್ದಾರೆ. ಆದರೆ ಆಳವಾಗಿ ಅಂತರ್ಯಕ್ಕೆ ಇಳಿಸಲು ಇಷ್ಟಪಡುವುದಿಲ್ಲ. ಇದು ಸ್ಪರ್ಧಾಯುಗದ ಸವಾಲುಗಳು."

"ಸಂಗೀತಕ್ಕೆ ಇರುವ ಸವಾಲುಗಳೇನು?"

"ನಿಜ, ಸಂಗೀತಕ್ಕೆ ನಾನು ಹೇಳಿದ ಅಂಶಗಳೂ ಸೇರಿದಂತೆ ಹಲವಾರು ಸವಾಲುಗಳಿವೆ. ಪಾಶ್ಚಿಮಾತ್ಯ ಸಂಗೀತದ ಪ್ರಭಾವ. ಫ್ಯೂಷನ್‌ನ ಮೋಹ. ಸರ್ಕಾರಗಳು ಸಂಗೀತದ ಬಗ್ಗೆ ಹೆಚ್ಚು ಗಮನ ನೀಡಬೇಕು. ಹಿಂದೆ ಇದ್ದಂತೆ ಸಂಗೀತ ಶಿಕ್ಷಕರು, ಪ್ರಾಥಮಿಕ, ಮಾಧ್ಯಮಿಕ ಹಂತಗಳಲ್ಲಿ ಎಲ್ಲಾ ಶಾಲೆಗಳಲ್ಲಿ ಇರಬೇಕು. ಮೂಲತಃ ಸಂಗೀತವೂ ವಿಜ್ಞಾನವೇ. ಆದ್ದರಿಂದ ಅದರ ಬಗ್ಗೆ ಹೆಚ್ಚಿನ ಸಂಶೋಧನೆಗಳಾಗಬೇಕು. ಈಗ, ವಿಶೇಷವಾಗಿ ದೃಶ್ಯ ಮಾಧ್ಯಮಗಳ ಜವಾಬ್ದಾರಿಯೂ ಹೆಚ್ಚಾಗಿದೆ. ಮಕ್ಕಳಿಗಾಗಿ ಹಲವು ರಿಯಾಲಿಟಿ ಶೋಗಳು ಈಗ ನಡೆಯುತ್ತಿದೆ. ಶಾಸ್ತ್ರೀಯತೆಗೆ ಅವರೂ ಒತ್ತುಕೊಡಬೇಕು. ಹೆಚ್ಚು ಪ್ರಸಾರ ಮತ್ತು ಪ್ರಚಾರವಾಗಬೇಕು. ಮುಖ್ಯವಾಗಿ ನಮ್ಮ ಧೋರಣೆ ಮತ್ತು ಮಾನಸಿಕ ಸ್ಥಿತಿಯಲ್ಲಿ ಬದಲಾವಣೆಯಾಗಬೇಕು."

ಕೆಲವು ವರ್ಷಗಳ ಹಿಂದೆ, ಸರ್ಕಾರದ "ಸಪ್ತಸ್ವರ" ಎಂಬ ಸಂಗೀತ ಕಾರ್ಯಕ್ರಮ. ಯವನಿಕಾದಲ್ಲಿ. ಅತಿಥಿಯಾಗಿ ಕರೆದಿದ್ದರು. ಆಶ್ಚರ್ಯವೆಂದರೆ, ಸಪ್ತಸ್ವರಗಳಲ್ಲಿ ಕರ್ನಾಟಕ ಸಂಗೀತವಾಗಲೀ, ಹಿಂದೂಸ್ತಾನಿಯಾಗಲೀ ಹಾಡಲು ಅವಕಾಶ ಇರಲಿಲ್ಲ. ಸಿನಿಮಾ ಹಾಡುಗಳು, ಸುಗಮ ಸಂಗೀತ, ಜನಪದ, ನಾಟಕದ ಮಟ್ಟುಗಳು ಇತ್ಯಾದಿಗಳಿಗೆ ಅವಕಾಶ. ಈ ಸಂಗೀತ ಪ್ರಕಾರಗಳ ಬಗ್ಗೆ ನನಗೆ ಅಪಾರ ಅಭಿಮಾನವಿದೆ. ಹಿಂದಿನ ಸಂಗೀತಗಾರರೆಲ್ಲಾ ನಾಟಕಗಳಲ್ಲಿ ನಟಿಸುತ್ತಿದ್ದರು. ಸ್ವತಃ ಹಾಡುತ್ತಿದ್ದರು ಮೈಕಿಲ್ಲದೆ. ಅದಕ್ಕೆ ಅವರ ಶಾರೀರ ಅಷ್ಟು ಸತ್ವಯುತವಾಗಿತ್ತು. ಸಿನಿಮಾ ಕೂಡಾ ಹಾಗೆಯೇ. ಜನಪದವಂತೂ ನಮ್ಮ ಬೇರು, ಸುಗಮ ಸಂಗೀತವೊಂದು ಟಿಸಿಲು. ಆದರೆ ಸಪ್ತಸ್ವರವೆಂದ ಮೇಲೆ ಶಾಸ್ತ್ರೀಯ ಸಂಗೀತಕ್ಕೆ

ಆದ್ಯತೆಯಿಲ್ಲದಿದ್ದರೂ ಅವಕಾಶವಿರಬೇಕಿತ್ತು.
ನಾನು ವೇದಿಕೆಯಿಂದಲೇ ಎದ್ದು ನಿಂತು,
"ಹೀಗೇಕೆ ಕರ್ನಾಟಕ ಸಂಗೀತದ ಅವಗಣನೆ ಮಾಡಿರುವಿರಿ?" ಎಂದು ಪ್ರಶ್ನಿಸಿದೆ. ಉತ್ತರವಿಲ್ಲ. ಕೊನೆಗೊಬ್ಬರು ಸಭಿಕರು ಹೇಳಿದರು –

"ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಕರ್ನಾಟಕ ಮತ್ತು ಹಿಂದೂಸ್ತಾನಿ, ಎರಡೂ ಗಾಯನಕ್ಕೆ ಅವಕಾಶ ಕೊಡಿ."

"ಅವಕಾಶ ಕೊಡಲಾಯಿತು. ಸಭೆಯಲ್ಲಿದ್ದ ಹಿಂದೂಸ್ತಾನಿ ಗಾಯಕರು ಹಾಡಿದರು. ಕೊನೆಗೆ ನನ್ನ ಸರದಿ. ಹಾಡಿದೆ,

ಅನುಗಾಲವು ಚಿಂತೆ ಜೀವಕೆ ಮನವು
ಶ್ರೀರಂಗನೋಳ್ ಮೆಚ್ಚುವ ತನಕ

ಸತಿಯಿದ್ದರು ಚಿಂತೆ, ಸತಿಯಿಲ್ಲದ ಚಿಂತೆ
ಮತಿಹೀನ ಸತಿಯು ಆದರು ಚಿಂತೆ
ಪೃಥ್ವಿಯೊಳಗೆ ಸತಿ ಕಡು ಚೆಲ್ವೆಯಾದರೆ
ಮಿತಿ ಮೊದಲಿಲ್ಲದ ಮೋಹದ ಚಿಂತೆ

ಬಡವನಾದರು ಚಿಂತೆ, ಬಲ್ಲಿದನಾಗೆ ಚಿಂತೆ
ಹಿಡಿ ಹೊನ್ನು ಕೈಯೊಳು ಇದ್ದರು ಚಿಂತೆ
ಪೊಡವಿಯೊಳಗೆ ನಮ್ಮ ಪುರಂದರ
ವಿಠಲನ ಬಿಡದೆ ಧ್ಯಾನಿಸು, ಚಿಂತೆ ನಿಶ್ಚಿಂತೆ

ಸಭಾಸದರು ಎದ್ದು ನಿಂತು ಸತತ ಚಪ್ಪಾಳೆ ಹೊಡೆದರು. ಅಲ್ಲಿದ್ದವರಾರೂ ನನಗೆ ಗೊತ್ತಿರಲಿಲ್ಲ. ಚಪ್ಪಾಳೆಗಳು ನನಗಾಗಿ ಅಲ್ಲ, ಕರ್ನಾಟಕ ಸಂಗೀತಕ್ಕಾಗಿತ್ತು. ಅಧಿಕಾರಿಗಳು ಅವನತ ಮುಖಿಗಳಾಗಿದ್ದರು. ನಾನು ಅವರನ್ನು ಕೇಳಿದೆ
"ಎಷ್ಟು ನಿಮಿಷ ತೆಗೆದುಕೊಂಡೆ?"

"ಮೂರು ನಿಮಿಷ"

"ಕರ್ನಾಟಕದಲ್ಲಿ, ಕರ್ನಾಟಕ ಸಂಗೀತಕ್ಕೆ ಮೂರು ನಿಮಿಷ ನೀಡಲು ಸಾಧ್ಯವಿಲ್ಲವೇ?"
ಸಭೆ ಮೌನವಾಗಿತ್ತು.

27

ತತ್ತ್ವಜ್ಞಃ ಸರ್ವಭೂತಾನಾಂ ಯೋಗಜ್ಞಃ ಸರ್ವಕರ್ಮಾಣಾಂ

ಪ್ರಿಯ ಓದುಗ

ಕಬ್ಬು ಹೀಗಿರುತ್ತದೆ ಹಾಗಿರುತ್ತದೆ ಎಂದು ವರ್ಣಿಸುವುದಕ್ಕಿಂತ, ತೆಗೆದುಕೊಳ್ಳಿ ಕಬ್ಬು ಅಂತ ಕೊಟ್ಟುಬಿಡುವುದೇ ವಾಸಿ. ಆಗ, ಅಗಿದು..ಜಗಿದು..ಅಗಿದು ಕಬ್ಬಿನ ರಸವನ್ನು ಗಂಟಲಿಗಿಳಿಸಿಕೊಂಡು, ಸವಿಯನ್ನು ಅನುಭವಿಸಬಹುದು. ನಾನೇನು ಬರೆಯಬೇಕೆಂದಿದ್ದೆನೊ ಅದನ್ನು ಶಾರದಾ ಕಲಾಕೇಂದ್ರದ ವಿದ್ಯಾರ್ಥಿಗಳು ಸಮರ್ಥವಾಗಿ ಹೇಳಿದ್ದಾರೆ, ದಿನಾಂಕ 28–03–2020ರಿಂದ 17–05–2020ರವರೆಗೆ ಆರ್ ಕೆ ಪದ್ಮನಾಭ ಅವರು ಶಾರದಾ ಕಲಾಕೇಂದ್ರದ ವಿದ್ಯಾರ್ಥಿಗಳಿಗೆ ಪಾಠ ಮಾಡಿದ ವಿವಿಧ ವಾಗ್ಗೇಯಕಾರರ 120 ಕೃತಿಗಳು ಮತ್ತು ಪದ್ಮನಾಭದಾಸ ವಿರಚಿತ ನವರಾತ್ರಿ ಕೃತಿಗಳ ಸಂಗ್ರಹ, "ಸಮರ್ಪಣಾ 4"ರ ನಿವೇದನೆಯಲ್ಲಿ. ವಿಶೇಷವೆಂದರೆ ಈ ಕೃತಿಯು ಸಂಪೂರ್ಣವಾಗಿ ಆರ್ಕೆಪಿ ಅವರ ಕೈ ಬರಹದಲ್ಲಿದೆ. ದಿನಾಂಕ ಮತ್ತು ಸಮಯವನ್ನು ನಮೂದು ಮಾಡಿದ್ದಾರೆ. ನಿಜವಾಗಲೂ ಸಂಗೀತೋಪಾಸಕರೇ ಏಕೆ, ಇತರ ಸಾಹಿತ್ಯ ಸಾಂಸ್ಕೃತಿಕ ಪ್ರೇಮಿಗಳೂ ಸಂಗ್ರಹಿಸಬೇಕಾದ ಕೃತಿ.

2020ರ ಆರಂಭದ ದಿನಗಳು. ಇಡೀ ಜಗತ್ತಿನಲ್ಲಿ ಕೊರೋನಾ ಎಂಬ ಮಹಾಮಾರಿ ರೋಗ. ನಿನಗೂ ಗೊತ್ತು. ರೆಕ್ಕೆ ಮುರಿದ ಹಕ್ಕಿಗಳಂತೆ ನಾವೆಲ್ಲಾ ಗೂಡು ಸೇರಿದ್ದೆವು. ಜಗತ್ತಿಗೆ ಬಹಳ ಸಂಕಷ್ಟ. ಉದ್ಯೋಗಗಳು ಕಳೆದು ಊಟ, ವಸತಿಯ ಸಮಸ್ಯೆಗಳಾಗಿ ಸಮಾಜಕ್ಕೆ ವಲಸೆಯ ಕಗ್ಗಂಟು ಭೀಕರಕಾಟವಾಗಿತ್ತು. ಬಹಳಷ್ಟು ಸಂಗೀತ ಶಾಲೆಗಳು ಮುಚ್ಚಿಹೋದವು. ಆದರೆ ಶಾರದಾ ಕಲಾಕೇಂದ್ರವು, ಕೃಷ್ಣ, ಕನಕರಿಗೆ ಕಿಂಡಿಯಲ್ಲಿ ದರ್ಶನ ಕೊಟ್ಟಂತೆ, ತತ್ಕ್ಷಣ (online)ವೆಂಬ ಬೆಳಕಿಂಡಿಯಲ್ಲಿ ಸುನಾದ ಸಂಕೀರ್ತನೆಯ ಪಾಠಗಳನ್ನು ವಿದ್ಯಾರ್ಥಿಗಳಿಗೆ ನೀಡಿತು. ಅಪಾರ ಯಶಸ್ಸು ಸಿಕ್ಕಿತು. ಗುರುಗಳಿಗೆ ಅರ್ಪಿಸಿರುವ ಈ ಕೃತಿಯಲ್ಲಿ ವಿದ್ಯಾರ್ಥಿಗಳ ಮಾತು ಕೇಳಿ :–

"ನಿವೇದನೆ"

ಗಂಟೆ ಹತ್ತೂವರೆ ಆಯಿತೆಂದರೆ, 'ಶಾರದಾ ಕಲಾಕೇಂದ್ರ' ಅನ್ನುವ WhatsApp group ಒಳಹೊಕ್ಕರೆ ಅವರು ರವಾನಿಸಿದ ಮೂರು ಕೃತಿಗಳ ಮಟ್ಟು (notation) ಸಿದ್ಧ. ಅದೂ ಹೇಗೆ?... ಅಚ್ಚುಕಟ್ಟಾದ scanned copy. ಮುದ್ದಾಗಿ ಪೋಣಿಸಿದ ಅಕ್ಷರಗಳು. ಪಲ್ಲವಿಗೂ ಅನುಪಲ್ಲವಿಗೂ ಮಧ್ಯೆ, ಅನುಪಲ್ಲವಿಗೂ ಚರಣಕ್ಕೂ ಮಧ್ಯೆ

ಕೆಂಪು ಬಣ್ಣದ ಎರಡು ಸಮಾನಾಂತರ ಗೆರೆಗಳು, ಅಂಚಿಗೆ ಇನ್ನೊಂದು ಬಣ್ಣದ ಗೆರೆಗಳು. ಪಕ್ಕದಲ್ಲಿ ವಿಶೇಷ ಪದಗಳ ಅರ್ಥ, ಸಂದರ್ಭ ವಿವರಣೆ. ಕೆಳಗೆ ಕನ್ನಡದಲ್ಲಿ ಸಹಿ. ಕೃತಿಯನ್ನು ಬರೆದ ದಿನಾಂಕ, ವಾರ, ಸಮಯದೊಂದಿಗೆ ಹಬ್ಬಹರಿದಿನವೋ, ವಿಶೇಷದಿನವೋ ಆದರೆ ಜೊತೆಗೆ ಅದೂ..

ಇನ್ನು ಗಂಟೆ 11.50ಕ್ಕೆ ಸರಿಯಾಗಿ ಅವರ ಕೈಲೂ ಮೊಬೈಲೂ. ಇಪ್ಪತ್ತೈದು ವಿದ್ಯಾರ್ಥಿಗಳು ಕೂಡಿದ ಕಾನ್ಫರನ್ಸ್ ಕಾಲ್ಗೆ ಸಿದ್ಧರಾಗಿ.... ಆರಾಧ್ಯ ದೈವ ವಾದಿರಾಜರ ಮುಂದೆ ಧ್ಯಾನಸ್ಥರಾಗಿ, ಸರಿಯಾಗಿ ಗಂಟೆ ಹನ್ನೆರಡಕ್ಕೆ merge ಆಗುತ್ತಲೇ ನಮ್ಮ ಕಿವಿಗೆ ಅವರ ತುಂಬು ಘನ ಧ್ವನಿ. "ಹ್ಞಾ, ಎಲ್ರೂ ಇದೀರಾ.. ತಗೊಳ್ಳಿ ಮೊದಲನೆಯದು..." ಕಾಂಭೋಜಿಯೋ, ಹರಿಕಾಂಭೋಜಿಯೋ, ಶಂಕರಾಭರಣವೋ, ನಟಭೈರವಿಯೋ, ತೋಡಿಯೋ, ಕಲ್ಯಾಣಿಯೋ, ಭೈರವಿಯೋ, ಹಿಂದೋಳವೋ, ಮೋಹನವೋ, ಷಣ್ಮುಖಪ್ರಿಯವೋ...... ಶುರುವಿಗೆ ದಿನಕ್ಕೊಂದೊಂದು ರಾಗಪಾಯಸಾಲಾಪ, ರೇವಗುಪ್ತಿ, ದೂರ್ವಾಂಕಿ, ಭೈರವ, ನಾಮದೇಶಿ, ಮಂದಾರಿ, ನಾಗಸ್ವರಾವಳಿ, ಫರಜ್, ವೀರವಸಂತ, ಮಂಜರಿ, ಇತ್ಯಾದಿ ಅಪರೂಪ ರಾಗಗಳ ಔತಣ..., ಕೃತಿಸಹಿತ ಕರ್ನಾಟಕ ಸಂಗೀತದ ಸಮಗ್ರ ಸಂದರ್ಶನ.

ಅವರು ನಾದಾರಾಧಕ

ನಮಗೆ ಇತ್ತ ಶ್ರುತಿ ಅತ್ತ ಕೃತಿ, ಕೈಯಲ್ಲಿ ಎರಡು ಗಂಟೆ ಫೋನು ಹಿಡಿದುಕೊಂಡು ಕೇಳುವುದು, ಹಾಡುವುದೆಂದರೇನು ಸಾಮಾನ್ಯವೇ? ಅದಕ್ಕೆ ಶಕ್ತ್ಯಾನುಸಾರ ನಮ್ಮ ನಮ್ಮ ಅರೇಂಜ್ಮೆಂಟೂ, ಅಡ್ಜಸ್ಟ್ಮೆಂಟುಗಳೂ, ಫೋನಿಗೊಂದು ಸ್ಟ್ಯಾಂಡೂ, ಕಿವಿಗೆ ಸಿಕ್ಕಿಸಿದ ಇಯರ್ ಫೋನು ಅದಿಲ್ಲವೆಂದರೂ ಇದ್ದೇ ಇದೆ ಸ್ಪೀಕರ್. ಆದರೆ ಅವರದು ಹಾಗಲ್ಲ. ಎರಡುಗಂಟೆಗಳೂ ಕೈಯಲ್ಲೇ ಫೋನನ್ನು ಹಿಡಿದು ಕಿವಿಗವುಚಿಕೊಂಡು ಹಿಡಿದು ಪಾಠ ಮಾಡುವುದು. ಹಾಗೆ ಮಾಡದಿದ್ದರೆ ನಮಗೆಲ್ಲಿ ಸರಿಯಾಗಿ ಕೇಳಿಸುವುದಿಲ್ಲವೋ ಎಂಬ ಕಾಳಜಿ. ಆ ಕೈಗಳು ಎಷ್ಟು ನೊಂದವೋ, ಕಿವಿ ಎಷ್ಟು ಬಿಸಿಯಾಯಿತೋ.. ಎಂದೂ ಹೇಳಿಲ್ಲ.

ಅವರು ನಾದಋಷಿ

ಇದು ಒಂದೋ ಎರಡೋ ದಿನದ್ದೋ, ಒಂದೋ ಎರಡೋ ವಾರದ್ದೋ ಕಥೆಯಲ್ಲ. ಇದು ಬರೋಬ್ಬರಿ ಐವತ್ತೊಂದು ದಿನಗಳ ಅವರ ಸಹನೆಯ ಸಮಾಚಾರ. ಹೌದು. ಸತತ ಐವತ್ತೊಂದು ದಿನಗಳು. ಈ ಲಾಕ್ ಡೌನ್ ಸಮಯದಲ್ಲಿ ಐವತ್ತೊಂದು ದಿನಗಳಲ್ಲಿ ಅವರು ಹೇಳಿಕೊಟ್ಟ ಕೃತಿಗಳು ಒಟ್ಟು

ನೂರಇಪ್ಪತ್ತು. ಅವುಗಳಲ್ಲಿ ಕನ್ನಡ, ಸಂಸ್ಕೃತ, ತೆಲುಗು, ತಮಿಳು, ಹಿಂದಿ... ಹೀಗೆ ಎಲ್ಲ ಭಾಷೆಗಳಿಗೂ ಒತ್ತು. ಅದು ತ್ಯಾಗರಾಜರು, ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು, ಸ್ವಾತಿತಿರುನಾಳರು, ಮುತ್ತಯ್ಯ ಭಾಗವತರು, ಪಾಪನಾಶಂ ಶಿವನ್.. ಹೀಗೆ ಹತ್ತು ಹಲವು ವಾಗ್ಗೇಯಕಾರರ ನಿತ್ಯ ಆರಾಧನೆಯಾಗಿತ್ತು. ಜೊತೆಗೆ ಹೊಸದಾಗಿ ಮಾಡಿದ ಅವರದೇ ಕನ್ನಡ ಮತ್ತು ತೆಲುಗಿನ ರಚನೆಗಳು, ದಿನಕ್ಕೆ ಮೂರು ಕೃತಿಗಳನ್ನು ಬರೆಯುವುದು, ಅಷ್ಟನ್ನೂ ಹೇಳಿಕೊಡುವುದು, ತಪ್ಪನ್ನು ತಿದ್ದುವುದು, ರಾಗಭಾವ ಸೌಂದರ್ಯವನ್ನೂ, ಅವುಗಳ ಹಿನ್ನೆಲೆ, ಸಂದರ್ಭ, ಪೂರಕ ಕಥೆಗಳನ್ನು ವಿವರಿಸುವುದು, ವಿಶ್ಲೇಷಿಸುವುದು, ವಿಮರ್ಶಿಸುವುದು..... ಒಂದೇ ಎರಡೇ ಅವರ ತಪಸ್ಸಿನ ಮುಖಗಳು.

ಅವರು ನಾದತಪಸ್ವಿ

ಈ ಹಿಂದೆ ಯಾರಿಗಾದರೂ ಒಮ್ಮೆಯಾದರೂ ಆನ್ ಲೈನ್ ಪಾಠ ಮಾಡಿದ್ದನ್ನು ನಾವಾರೂ ಕಾಣೆವು. ಎದುರಿಗೆ ಕೂತು ಪಾಠ ಮಾಡುವುದರ ಸಮ ಇನ್ನೊಂದಿಲ್ಲ ಎನ್ನುತ್ತಿದ್ದರು. ಅಂಥವರು ಹೀಗೊಂದು ವ್ಯವಸ್ಥೆಗೆ ಒಗ್ಗಿದ್ದು, camscanner ಬಳಕೆ ಕಲಿತದ್ದು. ಗಂಟೆಗಟ್ಟಲೆ ಶ್ರಮ ವಹಿಸಿದ್ದು, ಎಲ್ಲವೂ ನಮಗಾಗಿ, ನಮಗಾಗಿ ಮತ್ತು ನಮಗಾಗಿ ಮಾತ್ರ ನಮ್ಮ ಸಮಯ ವ್ಯರ್ಥವಾಗಬಾರದು ಎನ್ನುವ ಸಲುವಾಗಿ ಮನೆಯಲ್ಲೇ ಇರಬೇಕು... ಅಂದರೆ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಇದು ಸಕಾಲ ಎಂದವರೇ ಮರುದಿನವೇ ಶುರುಮಾಡಿಬಿಟ್ಟರು ಈ ಐವತ್ತೊಂದು ದಿನಗಳ ಯಾಗವನ್ನು. ನಮಗಿರುವ ಪ್ರೈಮೂ, Netflix ಅವರಿಗಿಲ್ಲವೆಂದಲ್ಲ. ಆದರೆ ಅವೆಲ್ಲ ಅವರ ಪ್ರಪಂಚವಲ್ಲ.

ಅವರು ನಾದೋಪಾಸಕ

ವಯಸ್ಸು ಹೆಚ್ಚೇನಲ್ಲ. ಎಪ್ಪತ್ತು ತುಂಬಿ ಕೆಲವು ತಿಂಗಳುಗಳಷ್ಟೆ, ಒಂದು ದಿನವೂ ಲಾಕ್ ಡೌನ್ ನಿಯಮವನ್ನು ಉಲ್ಲಂಘಿಸಲಿಲ್ಲ. ಅವರು ಮಾದರಿ ಸತ್ಪ್ರಜೆ. ಅವರು ಅಸಮಾನ. ಅವರು ಅವರೇ.

ಅವರೇ ನಮ್ಮ RKP ಮೇಷ್ಟ್ರು, ಗಾನಕಲಾಭೂಷಣ ವಿದ್ವಾನ್ ಡಾ. ಆರ್.ಕೆ.ಪದ್ಮನಾಭ ಸರ್. ನಮ್ಮೆಲ್ಲರ ಗುರುವು.

ಅವರೇ ಬರೆದಿರುವಂತೆ... ಗುರುವೇ ಸರ್ವೋತ್ತಮಾ, ಗಾನಜ್ಞಾನದ ಗುಟ್ಟು ರಟ್ಟು ಮಾಡುವಂಥ ಗುರುವೇ ಸರ್ವೋತ್ತಮ. ಈ ಐವತ್ತೊಂದು ದಿನಗಳಲ್ಲಿ ಸಿಕ್ಕಿದ್ದೆಷ್ಟು, ದಕ್ಕಿದ್ದೆಷ್ಟು ಲೆಕ್ಕ ಮಾಡಲು ಸಾಧ್ಯವಿಲ್ಲ. ಆದರೆ ಒಂದಂತೂ ಪರಮಸತ್ಯ. ಇಂಥಾ

ಗುರುವನ್ನು ಪಡೆದ ನಾವು ಧನ್ಯರು. ಆ ಋಣದಿಂದ ಮುಕ್ತರಾಗುವುದೇ ಬೇಡ. ನಮ್ಮನ್ನೇ ನಾವು ಮುಂದೆ ಮರೆತರೂ ಈ ದಿನಗಳನ್ನು ಮರೆಯುವುದಿಲ್ಲ. ಈ ಪಾಠಗಳು, ನೆನಪುಗಳು, ಅವರು ಕಲಿಸುವ ಸಹನೆ, ಸಂಯಮ, ಶಿಸ್ತು ಎಲ್ಲವೂ ಅನುಭವವೇದ್ಯ. ಅಂಥಾ ಗುರುವಿಗೆ ಕೋಟಿ ಕೋಟಿ ವಂದನೆಗಳು. ಇಷ್ಟೊಂದು ಜನರ ಸಾವುನೋವಿಗೆ ಕಾರಣವಾಗದಿದ್ದರೆ ಸಿಕ್ಕ ಸಿಕ್ಕವರನ್ನು ಬಲಿತೆಗೆದುಕೊಳ್ಳದಿದ್ದರೆ ಕೊರೋನಾಗೊಂದು ಥ್ಯಾಂಕ್ಸ್ ಹೇಳುತ್ತಿದ್ದೆವೇನೋ. ಈಗ ಹೇಳೆವು.

ಸರ್, ಇವತ್ತಿಗೆ ನೂರಿಪ್ಪತ್ತು ಕೃತಿಗಳಾದವು ಅಂದೆವು. ವಾದಿರಾಜರು ಬದುಕಿದ್ದು ನೂರಿಪ್ಪತ್ತು ವರ್ಷ. ಅವರ ಬಲವೇ ಬಲವು ಅಂದರು. ನೂರಿಪ್ಪತ್ತು ಬಗೆಯ ಮೃಷ್ಟಾನ್ನ ಮುಂದಿದೆ. ಅರಗಿಸಿಕೊಳ್ಳುವ ಶಕ್ತಿಯನ್ನು ಗುರುಗಳೇ ಹಾರೈಸಬೇಕು. ಆಶೀರ್ವದಿಸಬೇಕು. ಸಾಷ್ಟಾಂಗ ವಂದನೆಗಳು ಸರ್.

ಶಾರದಾ ಕಲಾಕೇಂದ್ರ ವಿದ್ಯಾರ್ಥಿಗಳು

ಪುಸ್ತಕಗಳನ್ನು ಓದಿ, ಪದವಿ ಪದವಿಗಳನ್ನು ಪಡೆದವರನ್ನು ಪ್ರಪಂಚವು ಪಂಡಿತ ಎಂದು ಗುರುತಿಸುವುದುಂಟು. ಗಳಿಸಿದ ಅಂಕಗಳಿಂದ, ಏರಿದ ಮೆಟ್ಟಿಲುಗಳಿಂದ ಜನ, ಜನರನ್ನು ಅಳೆಯುವುದುಂಟು. ಆದರೆ ಭಗವಾನ್ ವ್ಯಾಸರು ಮಹಾಭಾರತದಲ್ಲಿ ಹೀಗೆ ಹೇಳಿದ್ದಾರೆ ;

ತತ್ತ್ವಜ್ಞಃ ಸರ್ವಭೂತಾನಾಂ ಯೋಗಜ್ಞಃ ಸರ್ವಕರ್ಮಾಣಾಂ।
ಉಪಾಯಜ್ಞೋ ಮನುಷ್ಯಾಣಾಂ ನರಃ ಪಂಡಿತ ಉಚ್ಯತೆ॥

ಸಕಲಭೂತಗಳ(ಜೀವಿಗಳ) ಸ್ವರೂಪವನ್ನು/ಸ್ವಭಾವವನ್ನು ತಿಳಿದವನು, ಎಲ್ಲಾ ಕರ್ಮಗಳ ಯುಕ್ತಿಯನ್ನು ಅರಿತವನು, ಮನುಷ್ಯಪ್ರಯತ್ನಗಳನ್ನು ತಿಳಿದ ನರನು ಪಂಡಿತನೆನಿಸಿಕೊಳ್ಳುತ್ತಾನೆ.
ವ್ಯಾಸರು ಮತ್ತೆ ಹೇಳುತ್ತಾರೆ :

ಕ್ರೋಧೋ ಹರ್ಷಶ್ಚ ದರ್ಪಶ್ಚ ಹ್ರೀಸ್ತಂಭೋ ಮಾನ್ಯಮಾನಿತಾ ।
ಯಮರ್ಥಾನ್ನಾಪಕರ್ಷಂತಿ ಸ ವೈ ಪಂಡಿತ ಉಚ್ಯತೇ ॥

ಕ್ರೋಧ, ಹರ್ಷ, ದರ್ಪ, ನಾಚಿಕೆ, ಸ್ತಬ್ಧತೆ, ಸನ್ಮಾನ ಇವುಗಳು ಯಾರನ್ನು ಕರ್ತವ್ಯದಿಂದ ವಿಮುಖನನ್ನಾಗಿಸುವುದಿಲ್ಲವೋ ಅಂತಹವನನ್ನು ಪಂಡಿತನೆನ್ನುವರು.

ಭಗವಾನ್ ವ್ಯಾಸರ ಅಳತೆಗೋಲಿನ ಪಾಂಡಿತ್ಯ, ಅಂಕ ಪಾಂಡಿತ್ಯದಷ್ಟು ಸುಲಭವಲ್ಲ.

ಜೀವನವಿಡಿ ಶ್ರಮಿಸಬೇಕಾಗುತ್ತದೆ. ಪ್ರತಿಕಾರ್ಯದಲ್ಲಿ, ಪ್ರತಿಗಳಿಗೆ ಎಚ್ಚರವಿರಬೇಕಾಗುತ್ತದೆ. ಅರೆಕ್ಷಣವೂ ತಪ್ಪುವಂತಿಲ್ಲ. ನಮ್ಮ ಪದ್ಮನಾಭರು, ಅಂಕಪಂಡಿತರಂತೂ ಅಲ್ಲ, ಅವರು ವ್ಯಾಸರ "ಪಂಡಿತ ಪದವಿ" ಷರತ್ತುಗಳನ್ನು ಇಲ್ಲಿಯವರೆಗೂ ಚಾಚೂ ತಪ್ಪದೆ ಅನುಸರಿಸುತ್ತಿದ್ದಾರೆ.

ಒಂದು ಪುಸ್ತಕ "ಸಾಮಾನ್ಯನನ್ನು ಅಸಾಮಾನ್ಯ"ನನ್ನಾಗಿ ಮಾಡಿತು ಎಂಬುದು ಆಶ್ಚರ್ಯವೆನಿಸುವುದಲ್ಲವೇ. ನಾವು ನೂರಾರು ಪುಸ್ತಕಗಳನ್ನು ಓದುತ್ತಿರುತ್ತೇವೆ, ಅವು ನಮ್ಮ ಮೇಲೆ ಪರಿಣಾಮ ಬೀರಬಹುದು. ಆದರೆ ಜೀವನದ ದಿಕ್ಕನ್ನೇ ತಿರುಗಿಸಿದ ಪುಸ್ತಕದ ಶಕ್ತಿ, ಆ ಪುಸ್ತಕದಿಂದ ತಾನಷ್ಟೇ ಅಲ್ಲ, ತನ್ನ ಪ್ರಭಾವವಲಯದಲ್ಲಿ ಬಂದವರನ್ನೆಲ್ಲ ಬದಲಿಸಬಲ್ಲ ಆಯಸ್ಕಾಂತೀಯ ಗುಣವನ್ನು ಪದ್ಮನಾಭರು ಗಳಿಸಿದ್ದು, ನಿಜವಾದ ಪಾಂಡಿತ್ಯ. ನಿಜವಾದ ಪವಾಡ.

ಆಚಾರ್ಯ ಉಪದೇಶ (ತೈತ್ತರಿಯೋಪನಿಷದ್)ದಲ್ಲಿ, ಸ್ವಸ್ಥಾನಕ್ಕೆ ಮರಳಲಿರುವ ಸ್ನಾತಕನಿಗೆ, ಗುರುವು ಈ ರೀತಿ ಹೇಳುತ್ತಾನೆ :

"ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ।..... ಸ್ವಾಧ್ಯಾಯ ಪ್ರವಚನಾಭ್ಯಾಂ ಪ್ರಮದಿತವ್ಯಂ"
ಅಂದರೆ "ಪ್ರಜಾ ಸಂತತಿಯ ತಂತು ಕಡಿಯದಿರು"; ಒಬ್ಬ ಗುರುವಿಗೆ ಸಂತತಿಯೆಂದರೆ ಭೌತಿಕ ಸಂತತಿಯಲ್ಲ, ಶಿಷ್ಯ ಪರಂಪರೆ.

"ನಿನ್ನ ಸ್ವಾಧ್ಯಾಯ ಪ್ರವಚನಗಳನ್ನು ಅಲಕ್ಷಿಸದಿರು." ಸರಳವಾಗಿ ಹೇಳುವುದಾದರೆ, ನೀನೂ ಓದು, ಇತರರನ್ನೂ ಓದಿಸು, ಶಿಷ್ಯರಿಗೆ ಪುಷ್ಟಿಯನ್ನು ಕೊಡು. ಅವರು ಪರಂಪರೆಯನ್ನು ಉಳಿಸಿ, ಬೆಳಸಬೇಕು.

1991ರ ಆರಂಭದಲ್ಲಿ ಪದ್ಮನಾಭದಾಸರು ಸೋದೆಗೆ ಹೋದವರು, ವಾದಿರಾಜರನ್ನು ಪ್ರಾರ್ಥಿಸಿ, ವಿಶ್ವೋತ್ತಮ ತೀರ್ಥರಲ್ಲಿ ವಿನಂತಿಸಿದರು, "ವಾದಿರಾಜರ ಕೃತಿಗಳ ಕ್ಯಾಸೆಟ್ ಅನ್ನು ಮತ್ತು ಪುಸ್ತಕವನ್ನೂ ಹೊರತರುವೆ". ಆ ಹೊತ್ತಿಗಾಗಲೇ ಅವರ ಶಿಷ್ಯರ ಸಂಖ್ಯೆಯೂ ಏರತೊಡಗಿತ್ತು. ಮಾರ್ಚಿ ತಿಂಗಳಲ್ಲಿ ಕ್ಯಾಸೆಟ್ ಮತ್ತು ವರ್ಣಮಟ್ಟುಗಳನ್ನು ಹಾಕಿದ ಪುಸ್ತಕ ಶಿಷ್ಯರ ಕೈಸೇರಿತು. ನಂತರ ಪ್ರತಿವರ್ಷ ವಾದಿರಾಜರ ಕೃತಿಗಳ ಕ್ಯಾಸೆಟ್ಟುಗಳು, ಪುಸ್ತಕಗಳು ಹೊರಬಂದವು. ಎಂಟು ಸಂಪುಟ, 80 ಕೃತಿ. ಕಲಿಯುವವರಿಗೆ ಕೈಹಿಡಿದು ನಡೆಸಿದರು. ಗುರುಕೃತಿಗಳ ಪ್ರಸಾರ ಮತ್ತು ಪ್ರಚಾರ. 108 "ಲಕ್ಷ್ಮಿ ಶೋಭಾನೆ"ಯಲ್ಲಿ ನಲವತ್ತು ಪದ್ಯಗಳಿಗೆ ಎಸ್ ಕೃಷ್ಣಮೂರ್ತಿ ಅವರು ರಾಗಮಾಲಿಕೆಯಲ್ಲಿ ಸಿದ್ಧಮಾಡಿದರು. ಶಿಷ್ಯರು ಹಾಡಿದರು. ಪರಿಣಾಮ, ಲಕ್ಷ್ಮಿ ಶೋಭಾನೆಯನ್ನು ಮನೆಮನೆಯಲ್ಲಿ, ಮದುವೆ ಮನೆಗಳಲ್ಲಿ ಹಾಡುತ್ತಾರೆ. ದೀಕ್ಷಿತರ ನವಗ್ರಹ ಕೃತಿಗಳಿಗೆ ಆರ್ ಕೆ ಶ್ರೀಕಂಠನ್ ವರ್ಣಮಟ್ಟುಗಳನ್ನು

ಹಾಕಿದರು. ಕ್ಯಾಸೆಟ್ ಮತ್ತು ಪುಸ್ತಕ ಬಿಡುಗಡೆಯಾಯ್ತು. ಮುಂದೆ ತ್ಯಾಗರಾಜ, ಕನಕ, ಪುರಂದರ, ಪಂಚರತ್ನ, ವಿನಾಯಕವಂದನ, ವೆಂಕಟದರ್ಶನ, ಕಮಲಾಂಬಾ ನವಾವರಣ, ವಾದಿರಾಜರ ಪ್ರಬಂಧ ಶ್ಲೋಕಗಳ ಸಂಗೀತ ಸ್ವರೂಪವಾದ ಗಾನ ಸರಿತ, ಶ್ರೀ ಶಂಕರ ನಮನ, ರಾಘವೇಂದ್ರ ಸ್ವಾಮಿಗಳ ಪರಿಮಳ ಕೃತಿಗಳು ಹೀಗೆ ಸಾಲು ಸಾಲು ಪುಸ್ತಕಗಳು ಹಾಗೂ ಕ್ಯಾಸೆಟ್ಟುಗಳು. ಮೈಸೂರು ವಾಸುದೇವಾಚಾರ್ಯರ ಕೃತಿಗಳ ಕನ್ನಡರೂಪ, ಗಾಯನ, ವರ್ಣಮಟ್ಟುಗಳು, ಕನ್ನಡಕ್ಕೆ ನೀಡಿರುವ ಅಪೂರ್ವ ಕೊಡುಗೆಯಾಗಿದೆ. ಈಗಂತೂ ಕ್ಯಾಸೆಟ್ಟುಗಳು ಬೇಡ, ಯುಟ್ಯೂಬ್ಗಳು, ಲಿಂಕ್ ಗಳು ಸಹ ಇವೆ.

ಬೇರೆ ವಾಗ್ಗೇಯಕಾರರ ಕೃತಿಗಳಿಗೆ ವರ್ಣಮಟ್ಟುಗಳನ್ನು ಹಾಕಿ, ಪುಸ್ತಕ ಮತ್ತು ಗಾಯನವನ್ನು ಬಿಡುಗಡೆ ಮಾಡುವುದರ ಜೊತೆಗೆ, ಪದ್ಮನಾಭರು ತಮ್ಮ ಸ್ವಂತ ಕೃತಿಗಳನ್ನು ರಚಿಸಿದರು. ಪುಸ್ತಕರೂಪವೂ ಬಿಡುಗಡೆಯಾಯಿತು. ನವಗ್ರಹ ನಮನ, ಗಾನಾಭಿಷೇಕ.. ಇತ್ಯಾದಿ. ಕನ್ನಡ ಸಂಗೀತ ಸಾಹಿತ್ಯಕ್ಕೆ ಇವರ ಅಪೂರ್ವ ಕೊಡುಗೆಗಳಾಗಿವೆ.

ಮೇಳಕರ್ತ ರಾಗಗಳಿಗೆ ಮರಳಿ ಶಕ್ತಿಯನ್ನು ಕೊಟ್ಟ ಕೀರ್ತಿ, ಆರ್ಕೆಪಿ ಅವರದು. ಪುರಂದರ ಮೇಳಮಾಲಾ – 72 ಮೇಳ ರಾಗಗಳಲ್ಲಿ ಪುರಂದರರ ರಚನೆಗಳನ್ನು ಹಾಡಿದರು, ಪುಸ್ತಕರೂಪದಲ್ಲಿಯೂ ತಂದರು. ಜೊತೆಗೆ ತಮ್ಮದೇ, ಮೇಳಮಾಲಾ – ೭೨ ಮೇಳಕರ್ತ ರಾಗಗಳಲ್ಲಿ, ವಿದ್ವಾನ್ ಆರ್ ಕೆ ಪದ್ಮನಾಭ ವಿರಚಿತ ಕನ್ನಡ ಕೃತಿಗಳ ಸಂಕಲನ ಬಿಡುಗಡೆಯಾಯಿತು. ಆ ಕೃತಿಯ ಬೆನ್ನುಡಿಯಲ್ಲಿ ಹೀಗೆ ಹೇಳಲಾಗಿದೆ :

"ಈ ವಾಗ್ಗೇಯ ವಿಶಾರದರು 250 ಕ್ಕೂ ಹೆಚ್ಚು ಕೃತಿಗಳನ್ನು 'ಪದ್ಮನಾಭದಾಸ' ಅಂಕಿತದಲ್ಲಿ ಕನ್ನಡ, ಸಂಸ್ಕೃತ, ಸಂಕೇತಿ ಭಾಷೆಗಳಲ್ಲಿ ರಚಿಸಿ, ಈ ಸಂಗೀತ ಸಾರಸ್ವತಲೋಕಕ್ಕೆ ಅನುಪಮವಾದ ಕೊಡುಗೆಯನ್ನು ನೀಡಿದ್ದಾರೆ. ಇವರ ರಚನೆಗಳು ಸಂಗೀತಾತ್ಮಕ ತರಂಗಗಳನ್ನು ಹೊಂದಿರುವುದೇ ಅಲ್ಲದೆ, ಸಂಗೀತದ ಪಾರಿಭಾಷಿಕ ಶಬ್ದಗಳಿಗೆ ಸೂಕ್ತ ವಿವರಗಳನ್ನು ನೀಡುವ ಮೌಲ್ಯವುಳ್ಳ ರಚನೆಗಳಾಗಿ, ಸರಳ ಸುಭಗ ಶೈಲಿ ಹೊಂದಿವೆ. ಶಾಸ್ತ್ರೀಯ ಸಂಗೀತವು ಸಾಮಾನ್ಯರನ್ನೂ ತಲುಪಬೇಕು ಎಂಬುದೇ ಇವರ ಎಲ್ಲಾ ರಚನೆಗಳ ಮೂಲ ಆಶಯ.

ಈ ನಿಟ್ಟಿನಲ್ಲಿ ವಾದಿರಾಜರ ಕೃಪೆಯಿಂದ, ಅವರ ಸ್ಮರಣೆಗಾಗಿ ಮೂಡಿಬಂದಿರುವ 72 ಮೇಳಕರ್ತ ರಾಗಗಳ ಕೃತಿಗಳು, ಕೇವಲ ಹದಿನಾರು ದಿನಗಳಲ್ಲೇ ರೂಪುಗೊಂಡು, ಎಲ್ಲರನ್ನು ಮಂತ್ರ ಮುಗ್ಧಗೊಳಿಸುವಂತಹ ಮಾತು ಧಾತುಗಳನ್ನು ಹೊಂದಿರುತ್ತವೆ. ರಸಿಕರಿಗೆ ಆನಂದದ ಬಿಂದುವಾಗಿ, ವಿದ್ಯಾರ್ಥಿಗಳಿಗೆ ಚಿಂತನಾಲಹರಿಯಾಗಿ ಮೂಡಿ

ಬಂದಿರುವ ಈ ಸಂಕಲನ, ಕನ್ನಡ ಭಾಷೆಯಲ್ಲಿ ಪ್ರಕಟಗೊಂಡಿರುವುದು ಬಹಳ ಮುದ ನೀಡುವಂತಾಗಿದೆ. ವಿಲೋಮ ಖಂಡ ಛಾಪು ವಿಶೇಷವಾಗಿ ಬಳಕೆಯಾಗಿರುವುದು ನಮ್ಮ ಶಾಸ್ತ್ರೀಯ ಸಂಗೀತದ ವೈವಿಧ್ಯವನ್ನು ವೇದ್ಯಗೊಳಿಸುವಂತಿದೆ.

'ವಿಶ್ವವೇ ವೀಣೆ, ನಾದವೇ ವಾಣೀ ನಾದ, ತರಂಗಗಳೇ ವಾಣಿಯ ವೇಣಿ' ಎಂಬ ಕಲ್ಪನೆ ಹಾಗೂ ದೃಷ್ಟಿ ಸಂಗೀತದ ಹಿರಿಮೆ ಹಾಗೂ ಮೇರುತ್ವವನ್ನು ತೋರಿಸುವಂತಿದೆ. ಇಂತಹ ಅನನ್ಯ ಹಾಗೂ ಅಪರೂಪದ ಕೃತಿಗಳ ಸಂಕಲನದ ಹೊತ್ತಿಗೆಯೇ, 'ಮೇಳ ಮಾಲಾ' ರೂಪದಲ್ಲಿ ಪ್ರಕಟವಾಗಿದೆ."

ಪದ್ಮನಾಭರ ಮತ್ತೊಂದು ಹಿರಿಮೆಯೆಂದರೆ ಶ್ರೀ ಶಂಕರರ ಸೌಂದರ್ಯ ಲಹರೀ ಕೃತಿಯ – ಶಾಸ್ತ್ರೀಯ ಸಂಗೀತ ಕೃತಿರೂಪ ದರ್ಶನವಾಗಿ ಹೊರತಂದಿರುವುದು. 100 ಶ್ಲೋಕಗಳನ್ನು 100 ರಾಗಗಳಲ್ಲಿ ಹೊರತಂದು ಶಂಕರ ಸಾಹಿತ್ಯಕ್ಕೆ ಹೊಸ ಆಯಾಮವನ್ನೆ ನೀಡಿದ್ದಾರೆ. ಪದ್ಮನಾಭದಾಸರ ಕೃತಿಗಳನ್ನು ಅವರ ಶಿಷ್ಯರು "ಸಮರ್ಪಣಾ 1, 2,3, 4,... ಎಂಬುದಾಗಿ ಹೊರತಂದಿದ್ದಾರೆ.

ಪದ್ಮನಾಭದಾಸರು ಅಪರೂಪದ ವಾಗ್ಗೇಯಕಾರ ಪರಂಪರೆಗೆ ಸೇರಿದವರು. ಕೃತಿ ರಚಿಸುತ್ತಾರೆ, ಸಂಗೀತ ಸಂಯೋಜನೆ ಮಾಡುತ್ತಾರೆ. ಹಾಡುತ್ತಾರೆ. ಈಗಿನ ಸಂದರ್ಭಕ್ಕೆ ಮಾತ್ರವಲ್ಲ, ಶತಮಾನಗಳು ಕಳೆದರೂ ಉಳಿಯುವಂತಹ ತಾಂತ್ರಿಕತೆಯ ವರ ಈಗ ನಮಗೆ ಸಿಕ್ಕಿದೆ. ಅವರ ವಾಗ್ಗೇಯತ್ವಕ್ಕೆ ಮೆರಗು ಬರುತ್ತದೆ. ಕನ್ನಡ ಮಕ್ಕಳ ಭಾಗ್ಯವಿದು.

ಓದುಗ, ಈ ಲೇಖನದಲ್ಲಿ ಪದ್ಮನಾಭರ ಎಲ್ಲಾ ಕೃತಿಗಳನ್ನು ವಿಶ್ಲೇಷಿಸಲು ಕಷ್ಟಸಾಧ್ಯ. ಬಹುಶಃ ಔಚಿತ್ಯವೂ ಆಗಲಾರದು. ಏಕೆಂದರೆ ನೀನೇ ಪ್ರಾಜ್ಞನಿರುವೆ. ಆದರೆ ಕೃತಿಗಳ ಪಟ್ಟಿಯನ್ನು ಅನುಬಂಧವಾಗಿ ಲಗತ್ತಿಸುವೆ. ಅಧ್ಯಯನ ನಡೆಯಲಿ.

ಪದ್ಮನಾಭರ "ಪುರಂದರರು ಕರ್ನಾಟಕ ಸಂಗೀತದ ಪಿತಾಮಹರೇ? ರೇ." ಪುಸ್ತಕದ ಬಗ್ಗೆ ಈಗಾಗಲೆ ಹೇಳಿರುವೆ. ಸಂಗೀತ ನಾಟಕಗಳಲ್ಲಿ ಮುತ್ತುಸ್ವಾಮಿ ದೀಕ್ಷಿತರು, ತ್ಯಾಗರಾಜರು, ಶ್ಯಾಮಾ ಶಾಸ್ತ್ರಿಗಳು. ಪುರಂದರರು, ವಾದಿರಾಜರಾಗಿ ಉತ್ತಮ ನಟನೆ ನೀಡಿದ, ಆರ್‌ಪಿ, ನಾಲ್ಕು ಸಂಗೀತ ನಾಟಕಗಳನ್ನು ರಚಿಸಿದ್ದಾರೆ. "ನೆನಪಿನಂಗಳದಲ್ಲಿ" ಆತ್ಮಚರಿತ್ರೆಯೂ ಸೇರಿದಂತೆ ಐದು ಕಾದಂಬರಿಗಳು, ಎಲ್ಲಕ್ಕೂ ಸಂಗೀತವೇ ಮೂಲದ್ರವ್ಯ, ಶಂಕರ, ಮಧ್ವ, ರಾಮಾನುಜರ ಜೀವನ ಚರಿತ್ರೆಗಳು, ಪದ್ಮನಾಭರ ಬಹುಮುಖ ಪ್ರತಿಭೆ ಮತ್ತು ಬಹುಶ್ರುತತ್ವಕ್ಕೆ ಸಾಕ್ಷಿಯಾಗಿದೆ.

ಇವರ, "ಶಾರೀರ ಸಂಸ್ಕರಣ ಮತ್ತು ರಾಗ ದರ್ಶನ", ನನಗೆ ಬಹಳ ಇಷ್ಟವಾಯಿತು. ಸಂಗೀತ ಸಾಧನೆಗೆ ಅನುಕೂಲವಾಗಲು, ಇಷ್ಟು ಪ್ರಾಯೋಗಿಕ ಕೃತಿ ಇಲ್ಲಿಯ ತನಕ ರಚನೆಯಾಗಿಲ್ಲವೆನಿಸುತ್ತದೆ. ಕಲಿಯುವವರ ಕೈಪಿಡಿ, ಈ ಪುಸ್ತಕ.

ಇವರ ಹಲವು ಪ್ರಥಮಗಳ ಪಟ್ಟಿಯನ್ನೂ ನಿಮಗೆ ಕೊಡುವೆ. ಆಗ ಅರ್ಥವಾಗುವುದು ಪದ್ಮನಾಭರ ಪ್ರತಿಭೆ, ಪಾಂಡಿತ್ಯ ಮತ್ತು ಸಾಧನೆ ಎಂತಹುದೆಂದು. ನಾನಂತೂ ಧೈರ್ಯವಾಗಿ ಹೇಳುವೆ. "ಪದ್ಮನಾಭರು ವ್ಯಾಸರನ್ನು ನಿರಾಸೆಗೊಳಿಸಿಲ್ಲ."

ಆದರೂ, ರಮೇಶ ಬಿಡುವುದಿಲ್ಲ; ಪದ್ಮನಾಭರಿಗೆ, ಸಮಾಜವು ಏನು ಗೌರವ ಸಲ್ಲಿಸಿದೆ? ಎಂಬ ಪ್ರಶ್ನೆಯನ್ನು ಹಾಕುತ್ತಿದ್ದಾನೆ.

ನಾನೆಂದೆ "ಹೇಳುತ್ತೇನೆ. ಅದಕ್ಕೂ ಮುನ್ನ ಕೆಲವು ವಿಷಯಗಳಿವೆ".

28
ಇವರು ಪದ್ಮನಾಭರಲ್ಲ, ಪದ್ಮನಾದ"

"ಇವರು ಪದ್ಮನಾಭರಲ್ಲ, ಪದ್ಮನಾದ"
ಎಂದರು ಪೇಜಾವರ ಶ್ರೀ ಶ್ರೀ ವಿಶ್ವೇಶ ತೀರ್ಥರು. ಸತತ ಕರತಾಡನ.
ಪದ್ಮನಾಭರಿಗೆ ಅನ್ನಿಸಿತು "ನಾನು ನಾನಲ್ಲ!"

ಸ್ಥಳ; ಬೆಂಗಳೂರು ಗಾಯನ ಸಮಾಜ, 2002 ಅಕ್ಟೋಬರ್ ಎರಡು, ಗಾಂಧಿ ಜಯಂತಿ. 33ನೆಯ ಸಂಗೀತ ವಿದ್ವಾಂಸರ ಸಮ್ಮೇಳನ. ಆರ್ಕೆಪಿ ಅವರಿಗೆ ಸಮ್ಮೇಳನಾಧ್ಯಕ್ಷತೆಯ ಗೌರವ. ಸಾಧನೆಗೆ ಸಮಾಜವಿತ್ತ ಗೌರವದ ಮುಕುಟ.

ಕದ್ರಿಯವರನ್ನು ಬಿಟ್ಟರೆ, ಇವರೇ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಕಿರಿಯರು. 53ರ ಪ್ರಾಯ.

ಈ ನನ್ನ ಬರಹ ಮಾಲಿಕೆ, ಪೂರ್ವಯೋಜಿತವಲ್ಲ. ತಾನಾಗಿಯೇ ಹರಿದ "ಪದ್ಮನಾದ". ಹೆಸರು ನಾನಿಟ್ಟಿದ್ದಲ್ಲ. ಪೇಜಾವರರ ಹಾರೈಕೆ "ಪದ್ಮನಾದ". ಹೆಸರಿತ್ತ ಸಂತರಿಗೆ ಶಿರಬಾಗುವೆ.

ಶಿಷ್ಯರು, ವಾದಿರಾಜ ಭವನದಲ್ಲಿ ಸಂಭ್ರಮಿಸಿದರು. ಗುರು ಪದ್ಮನಾಭರ ಕೈಗೆ ಬಂಗಾರದ ತೋಡಾ ತೊಡಿಸಿ, ನೂರಾರು ಜನರ ಸಮ್ಮುಖದಲ್ಲಿ, ಸದ್ಗುರು ವಾದಿರಾಜರ ಸಾನಿಧ್ಯದಲ್ಲಿ, ಪ್ರೀತಿ, ಅಭಿಮಾನ, ವಿಶ್ವಾಸಗಳಿಂದ ಅರ್ಥಪೂರ್ಣವಾಗಿ

ಕರೆದರು "ನಾದ ತಪಸ್ವಿ".
ಪದ್ಮನಾಭರು ಪ್ರಶಸ್ತಿ, ಬಿರುದುಗಳ ಹಿಂದೆ ಹೋಗಲಿಲ್ಲ. ಸಮಾಜದ ಗೌರವಗಳು ಅವು. ಹುಡುಕಿಕೊಂಡು ಬಂದಿದೆ. ಈ ಬಿರುದುಗಳು ಪ್ರಶಸ್ತಿಗಳು ವ್ಯಕ್ತಿಪ್ರತಿಷ್ಠೆಯ ದ್ಯೋತಕಗಳಲ್ಲ. ಸಾಮಾಜಿಕ ಸಂಸ್ಕಾರದ ಪ್ರತೀಕಗಳು. ಪ್ರಶಸ್ತಿ/ಬಿರುದುಗಳನ್ನು ನೀಡಿದವರ ಘನತೆಯನ್ನು ಹೆಚ್ಚಿಸಿ ಸಾಮಾಜಿಕ ಚೈತನ್ಯವನ್ನು ಬೆಳಗಿಸುವಂತಹವು.

ಕರ್ನಾಟಕ ರಾಜ್ಯ ಸರ್ಕಾರವು 2004ರಲ್ಲಿ, ಪದ್ಮನಾಭರು ಸಂಗೀತ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ"ಯನ್ನು ನೀಡಿ ಗೌರವಿಸಿತು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2011ರಲ್ಲಿ "ಕರ್ನಾಟಕ ಕಲಾಶ್ರೀ ಪ್ರಶಸ್ತಿ"ಯನ್ನಿತ್ತಿದೆ. ಬೆಂಗಳೂರು ಮಹಾನಗರ ಪಾಲಿಕೆಯು "ಕೆಂಪೇಗೌಡ ಪ್ರಶಸ್ತಿ"ಯನ್ನು 2014ರಲ್ಲಿ ಇತ್ತು ಸನ್ಮಾನಿಸಿತು. ಕೇಂದ್ರ ಸರ್ಕಾರದ ಕೇಂದ್ರ ಸಂಗೀತ ನಾಟಕ ಅಕಾಡಮಿಯು 2020ರ ಪುರಸ್ಕಾರವನ್ನು ಇತ್ತು ಗೌರವಿಸಿದೆ.

ರಾಜ್ಯದ ಪ್ರಮುಖ ಧಾರ್ಮಿಕ ಸಂಸ್ಥೆಗಳು ಪದ್ಮನಾಭರನ್ನು ಮೆಚ್ಚಿಕೊಂಡಿವೆ. ಸೋದೆ ವಾದಿರಾಜ ಮಠ, ಉಡುಪಿಯ ಪುತ್ತಿಗೆ ಮಠ, ಕಂಚಿ ಮಠ, ಕೃಷ್ಣಪ್ರಜ್ಞೆಯನ್ನು ಪಸರಿಸುತ್ತಿರುವ ಇಸ್ಕಾನ್, ಬೆಂಗಳೂರು ಇವುಗಳು ಪದ್ಮನಾಭರನ್ನು ಆಸ್ಥಾನ ವಿದ್ವಾನ್ ಎಂದು ಅಂಗೀಕರಿಸಿವೆ. ಆದಿಚುಂಚನಗಿರಿ ಮಠದ "ಚುಂಚಶ್ರೀ ಪ್ರಶಸ್ತಿ"ಯೂ ಇವರ ಮುಡಿಗೇರಿದೆ. ಇತ್ತೀಚಿಗೆ ಸುತ್ತೂರು ಸಂಸ್ಥಾನವು ಗೌರವಿಸಿತು. ಮಂತ್ರಾಲಯ ರಾಘವೇಂದ್ರ ಮಠವು "ಪರಿಮಳ ಪ್ರಶಸ್ತಿ"ಯನ್ನಿತ್ತಿದೆ. ಶ್ರೀವಿದ್ಯಾ ಇಂಟರ್ ನ್ಯಾಷನಲ್ ಯುನಿವರ್ಸಿಟಿ ಆಫ್ ವೇದಿಕ್ ಸೈನ್ಸಸ್, ವಿಶ್ವವಿದ್ಯಾನಿಲಯವು ಪದ್ಮನಾಭರ ಸಮಗ್ರ ಸಾಧನೆಯನ್ನೂ, ಸಾಮಾಜಿಕ ಉನ್ನತೀಕರಣಕ್ಕಾಗಿ ನೀಡಿರುವ ಕೊಡುಗೆಯನ್ನೂ ಅವಲೋಕಿಸಿ "ಗೌರವ ಡಾಕ್ಟರೇಟ್" ಪದವಿಯನ್ನು ನೀಡಿದೆ. ತಿರುಮಲೆ ತಿರುಪತಿ ದೇವಸ್ಥಾನದ ದಾಸಸಾಹಿತ್ಯ ಯೋಜನೆಯಲ್ಲಿ 2016ರಲ್ಲಿ "ಪುರಂದರಾನುಗ್ರಹ ಪ್ರಶಸ್ತಿ", "ಸ್ವರಮೂರ್ತಿ ವಿಎನ್ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ" ಹೀಗೆ ನೂರಾರು ಪ್ರಶಸ್ತಿಗಳು ಪದ್ಮನಾಭರಿಗೆ ಸಂದಿದೆ. ಅಲ್ಲದೆ, ಭಾರತೀಯ ಸ್ಟೇಟ್ ಬ್ಯಾಂಕ್ ಪ್ರಧಾನ ಕಾರ್ಯಾಲಯವು ಕನ್ನಡ ರಾಜ್ಯೋತ್ಸವ ಸನ್ಮಾನವನ್ನು ನೀಡಿ ತನ್ನ ಹೆಮ್ಮೆಯ ಉದ್ಯೋಗಿಯನ್ನು ಗೌರವಿಸಿದೆ. ಓದುಗ, ಪಟ್ಟಿ ಇನ್ನೂ ದೀರ್ಘವಿದೆ. ಇವುಗಳನ್ನು ಅನುಬಂಧದಲ್ಲಿ ನೀಡುತ್ತೇನೆ.

ಪದ್ಮನಾಭರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೇವೆಯನ್ನು ಪರಿಗಣಿಸಿ, ಬೆಂಗಳೂರು ಮಹಾನಗರ ಪಾಲಿಕೆಯು, ಚಿಕ್ಕಲಸಂದ್ರ ಪ್ರದೇಶದಲ್ಲಿ, ರಸ್ತೆಯೊಂದಕ್ಕೆ "ಡಾ ಆರ್ ಕೆ ಪದ್ಮನಾಭ ರಸ್ತೆ"ಯೆಂದು ನಾಮಕರಣ ಮಾಡಿರುವುದು ಅತ್ಯಂತ ಮಹತ್ವದ ಆದರಣೀಯ ವಿಷಯ.

ಆರ್ಕೆಪಿಯವರು ಸಂಗೀತ ಕ್ಷೇತ್ರದಲ್ಲಿ ಹಲವು ಪ್ರಥಮಗಳ ಸರದಾರ. ಉದಾಹರಣೆಗೆ ಕೆಲವನ್ನು ನೋಡಿ. ನಾನು ಉಲ್ಲೇಖಿಸದ ಪ್ರಥಮಗಳೂ ಬಹಳಷ್ಟಿದೆ.

ಗೋಷ್ಠಿಗಾಯನದ ಮೂಲಕ 2000ಕ್ಕೂ ಹೆಚ್ಚು ಶಿಷ್ಯರನ್ನು, ನವಾವರಣ, ನವಗ್ರಹ, ಚತುರ್ದಶ ರಾಗಮಾಲಿಕೆ, ಶ್ಯಾಮಾಶಾಸ್ತ್ರಿಗಳ ಸ್ವರಜತಿ, ತ್ಯಾಗರಾಜರ ಗಾನಪಂಚರತ್ನ, ಪುರಂದರ ಕನಕರ ಕೃತಿಗಳನ್ನು ಹಾಡಲು ಸಿದ್ಧಗೊಳಿಸಿದ್ದಾರೆ.

16 ರೀತಿಯ "ತಾನ"ಗಳನ್ನು ಪ್ರದರ್ಶಿಸುವುದೇ ಅಲ್ಲದೆ ಅವುಗಳನ್ನು ಜನಪ್ರಿಯಗೊಳಿಸಿದ್ದಾರೆ. "ಭೃಂಗ ಮತ್ತು ರುದ್ರ" ತಾನಗಳನ್ನು ಕಂಡುಹಿಡಿದಿದ್ದಾರೆ. ಪದ್ಮನಾಭರು, ತಿಟ್ಟೆ ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ಮೂಲಕ ತಾನಗಳನ್ನು ಅಭ್ಯಾಸ ಮಾಡಿದವರು. ತಿಟ್ಟೆಯವರು ಕಲಿತಿದ್ದು ವಾಸುದೇವಾಚಾರ್ಯರಿಂದ. ಪಟ್ಣಂ ಸುಬಹ್ಮಣ್ಯ ಅಯ್ಯರ್ ಅವರು ವಾಸುದೇವಾಚಾರ್ಯರ ಗುರುಗಳು. ಅಂದರೆ, ಪಟ್ಣಂ ಅವರ ಪರಂಪರೆಯನ್ನು ಈಗ ಪದ್ಮನಾಭರು ಮುಂದುವರೆಸುತ್ತಿದ್ದಾರೆ. ಹೀಗೆ ಪರಂಪರೆ ಮುಂದುವರೆಯಬೇಕು. ಕರ್ನಾಟಕ ಸಂಗೀತದ ವಿಶಿಷ್ಟವಾದ ರಾಗರೂಪದ ವಿನಿಕೆಯೇ ತಾನ. ಅಂತರ್ಗತವಾದ ಲಯವನ್ನುಳ್ಳದ್ದು. ವೈವಿಧ್ಯಮಯವಾದ ತಾನ ಪ್ರಸ್ತುತಿಯನ್ನು ಪ್ರಸಕ್ತ ಕರ್ನಾಟಕದಲ್ಲಿ ಪದ್ಮನಾಭರು ಮಾತ್ರಾ ಮಾಡುತ್ತಿದ್ದಾರೆ ಅನ್ನಿಸುತ್ತದೆ.

ಇಲ್ಲಿಯವರೆಗೆ 38 ಹೊಸರಾಗಗಳನ್ನು ಆರ್ಕೆಪಿ ಸೃಷ್ಟಿಸಿದ್ದಾರೆ. ಹಯಾಸ್ಯ, ಮಂಜುಪ್ರಿಯ, ಕೃಷ್ಣಪ್ರಿಯ, ಗೋಪಿಮನೋಹರ, ರಾಮಸುಧಾ, ಮಾನಸೋಲ್ಲಾಸಿನಿ, ತೇಜಸ್ವಿನಿ, ಮನೋಹರ, ವೀಣಾಮೋದಿನಿ, ಅಕ್ಷತ, ಸಾಯಿಪುಷ್ಪ, ಮೀನಾಕ್ಷಿ, ಪೂರ್ಣಚಂದ್ರ, ಮಂಜುಮಾಧುರಿ, ಸುಕೃತಿ, ರಾಮತೀರ್ಥ, ಮಂಗಳ, ಸಂಗೀತ, ಕೌಮುದಿ, ತ್ರಿಸ್ವರರೂಪಿಣಿ, ಶಾಲ್ಮಲೀ, ಸತ್ಯಶ್ರೀ, ಗಾಯತ್ರೀ, ಉನ್ನತಿ, ಪ್ರಭಾಮಣಿ, ಕಲಾಶ್ರೀ, ರೋಹಿಣಿ, ಶ್ರೀಧರ, ನಿತ್ಯಕಲ್ಯಾಣಿ, ವೇಂಕಟಪ್ರಿಯ, ರಾಮನಾಯಕಿ, ಹಂಸನಂದಿನಿ, ಹಂಸಪುಷ್ಪ, ಶಾರ್ವರಿ, ಶಾಶ್ವತೀ, ಪಾರ್ಥಸಾರಥಿ, ರುದ್ರ, ರವಿರಾವಳಿ ಈ ಪಟ್ಟಿ ಇನ್ನೂ ಮುಂದುವರೆಯಲಿ.

ಇಲ್ಲಿಯವರೆಗೆ 72 ಮೇಳಕರ್ತರಾಗಗಳ, ಎರಡು ಮೇಳಮಾಲಾ ಕೃತಿಗುಚ್ಛಗಳನ್ನು ಹಾಡಿ ಪ್ರಕಟಿಸಿದ್ದಾರೆ. ಪುರಂದರಮೇಳಮಾಲಾ ಹಾಗೂ ತಾವೇ ರಚಿಸಿ ಹಾಡಿರುವ ಮೇಳಮಾಲಾ ಕೃತಿಗುಚ್ಛಗಳು. ಈ ಸಂಗೀತ ಸಾಹಸವು ಪ್ರಥಮತಃ ಇವರಿಂದಲೇ ಆಗಿದೆ.

ಮೈಸೂರು ವಾಸುದೇವಾಚಾರ್ಯರ ಕೃತಿಗಳನ್ನು ಕನ್ನಡ ಲಿಪಿಯಲ್ಲಿ ಪ್ರಕಟಿಸಿ,

ಸಂಗೀತ ಸಂಯೋಜಿಸಿ ಮಹದುಪಕಾರ ಮಾಡಿದ್ದಾರೆ.

ಅಂಚೆ ಇಲಾಖೆಯು ಇವರ ಚಿತ್ರವಿರುವ ಅಂಚೆ ಕವರ್ ಅನ್ನು ಬಿಡುಗಡೆ ಮಾಡಿ ಗೌರವಿಸಿದೆ.

ಪದ್ಮನಾಭರು ಇಂಗ್ಲಿಷ್ ಕೃತಿಯೊಂದನ್ನು ಕರ್ನಾಟಕ ಸಂಗೀತಕ್ಕೆ ಅಳವಡಿಸಿ ಹಾಡಿದ್ದಾರೆ. "ಪಿಇಎಸ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಾಡಿದೆ. ಹುಡುಗರು ಹುಚ್ಚೆದ್ದು ಕುಣಿದರು" ಅನ್ನುತ್ತಾ ನಗುತ್ತಾರೆ ಆರ್ಕೆಪಿ. ಈ ಹಿಂದೆ ಕೆಲ ಸಂಗೀತಗಾರರು ಇಂಗ್ಲಿಷ್ ಸ್ವರಗಳನ್ನು ಹಾಡಿದ್ದುಂಟು, ಆದರೆ ಪೂರ್ತಿ ಕೃತಿಯನ್ನು ಹಾಡಿದ ಶ್ರೇಯ ಪದ್ಮನಾಭರದು.

ಪೂರ್ವಸೂರಿಗಳ, ಸಮಕಾಲೀನ ಸೂರಿಗಳ ಕೃತಿಗಳನ್ನು ಹಾಡುವುದು, ಕಲಿಸುವುದರ ಜೊತೆಗೆ ತಮ್ಮದೇ ಆದ 500ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ, ಹಾಡಿ, ಮುದ್ರಿಕೆಗಳನ್ನು ಮಾಡಿ, ನಿಜವಾದ ಅರ್ಥದಲ್ಲಿ ಶಿಷ್ಯಕೋಟಿಯನ್ನು ಸೃಷ್ಟಿಸಿ ಅಪೂರ್ವ ವಾಗ್ಗೇಯಕಾರರೆನಿಕೊಂಡಿದ್ದಾರೆ.

ರುದ್ರಪಟ್ಟಣವನ್ನು ಕರ್ನಾಟಕದ ಸಂಗೀತ ಗ್ರಾಮವನ್ನಾಗಿಸಿದ ಶ್ರಮ. ಸಪ್ತಸ್ವರ ದೇವತಾ ಧ್ಯಾನ ಮಂಟಪ, ದ್ವಾದಶ ಸ್ವರಸ್ತಂಭ ಮಂಟಪ ಮುಂತಾದ ಶಿಲ್ಪಕಲೆಯ ಕೃತಿಗಳು, ಪದ್ಮನಾಭರ ದೂರದೃಷ್ಟಿ ಮತ್ತು ಕಾಣ್ಕೆಯ ದ್ಯೋತಕಗಳಾಗಿವೆ.

ಸಂಕುಚಿತ ಜಾತಿ ಪಂಥಗಳ ಎಲ್ಲೆಯನ್ನು ಮೀರಿ ಸಂಗೀತ ಸೇವೆ, ಸಮಾಜ ಸೇವೆಗಳನ್ನು ಸತತ ಮಾಡುತ್ತಿದ್ದಾರೆ.

ಬಹುಶಃ ಒಂದು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ, ಪ್ರಥಮ ಸಂಗೀತಗಾರ ಸಾಹಿತಿ ಪದ್ಮನಾಭರೇ ಇರಬೇಕು. 2011ರ ಅರಕಲಗೂಡು ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನವದು. ಪ್ರತಿ ವರ್ಷ ಕನ್ನಡದ ಕಟ್ಟಾಳು
ಶ್ರೀ ಅನಕೃ (ಅರಕಲಗೂಡಿನವರು) ಅವರ ಹುಟ್ಟಿದ ಹಬ್ಬವನ್ನು ಸಾಹಿತ್ಯ ಹಬ್ಬವಾಗಿ, ಆರ್ಕೆಪಿಯವರು ಅರಕಲಗೂಡಿನಲ್ಲಿ ಆಚರಿಸುತ್ತಾರೆ. ನಿಮಗೆ ನೆನಪಿರಬಹುದು 1958–59ರಲ್ಲಿ ಸ್ಥಳೀಯ ಸಂಗೀತಗಾರರಿಗೆ ಅವಕಾಶವನ್ನು ಕೊಡುತ್ತಿಲ್ಲವೆಂದು, ಚಾಮರಾಜಪೇಟೆಯ ರಾಮೋತ್ಸವದಲ್ಲಿ ಅನಕೃ ಚಳುವಳಿ ಮಾಡಿದ್ದರು. ಅಲ್ಲಿಯವರೆಗೆ ಕನ್ನಡ ಕೃತಿಗಳನ್ನು ಕಛೇರಿಯಲ್ಲಿ ಹಾಡುತ್ತಲೇ ಇರಲಿಲ್ಲ. ಕನ್ನಡ ಕೃತಿಗಳನ್ನು ಹಾಡಿರೆಂದು ಕರ್ನಾಟಕ ಸಂಗೀತಗಾರರನ್ನು
ಅ ನ ಕೃಷ್ಣರಾಯರು ಒತ್ತಾಯಿಸಿದ್ದರು. ನಿಮ್ಮ ನೆನಪಿಗೆ ಮತ್ತೊಂದು ಗುದ್ದು! ವಿಶ್ವಸಂಸ್ಥೆಯ ಸಭಾಂಗಣದಲ್ಲಿ, 1966ರಲ್ಲಿ, ಎಂಎಸ್ ಸುಬ್ಬಲಕ್ಷ್ಮಿ ಅವರು ಪುರಂದರರ "ಆಡಿಸಿದಳೆಶೋದಾ.. ಜಗದೋದ್ಧಾರನಾ.." ಹಾಡಿದರು. ಆಗಲೇ

ನಮ್ಮ ಕನ್ನಡದ ಕೃಷ್ಣರಾಯ ವಿಶ್ವವೇದಿಕೆಯಲ್ಲಿ ಆಡಿದ.

ಸಂಗೀತ ನಾಟಕಗಳ ರಚನೆ ಮತ್ತು ನಟನೆಯ ಮೂಲಕ ಸಂಗೀತ ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಸಾರ ನಿರತರಾಗಿರುವುದು.

ಶಂಕರರ ಸೌಂದರ್ಯಲಹರಿಯಲ್ಲಿ ಅಡಗಿದ್ದ ಸಂಗೀತ ಸೌಂದರ್ಯವನ್ನು ಹೊರತಂದಿರುವುದು.

ವಾದಿರಾಜ ಸ್ವಾಮಿಗಳು ಸಂಗೀತಕ್ಕೆ ನೀಡಿರುವ ಮಹತ್ತರ ಕಾಣಿಕೆಯನ್ನು ಹಲವು ವಿಧವಾಗಿ, ಹಲಮಡಿಯಾಗಿ ಪ್ರಸಿದ್ಧಿಗೆ ತಂದಿರುವುದು ಪದ್ಮನಾಭರು. ಅವರ ಕನ್ನಡ ಬರವಣಿಗೆಗೆ ವಾದಿರಾಜರ ಬರಹಗಳು ಸ್ಫೂರ್ತಿಯಾಗಿರಬೇಕು. ಸ್ವತಃ ವಾದಿರಾಜರೇ ಅನೇಕ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಬೇಲೂರು ಕೇಶವದಾಸರು "ಶ್ರೀ ಕರ್ಣಾಟಕ ಭಕ್ತವಿಜಯ" ಕೃತಿಯಲ್ಲಿ ಈ ರೀತಿ ಹೇಳಿದ್ದಾರೆ.

"ವಾದಿರಾಜರು ಉಡುಪಿಯಲ್ಲಿದ್ದಾಗ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಕನ್ನಡ ವಚನಗಳನ್ನಾಗಿ ಬರೆದರಂತೆ, ಶ್ರೀಮದಾಚಾರ್ಯರ ಮೂಲಗ್ರಂಥಗಳನ್ನೂ ಕನ್ನಡ ಹಾಡುಗಳನ್ನಾಗಿ ಬರೆದರಂತೆ ! ಆದರೆ ಅವುಗಳು ಈಗ ಉಪಲಬ್ಧವಿಲ್ಲ. ವೈಕುಂಠ ವರ್ಣನೆಯೆಂಬ ಜಗತ್ಸೃಷ್ಟಿ ಸ್ಥಿತಿ ಲಯ ಮೋಕ್ಷಗಳ ವಿವರಗಳನ್ನು ತಿಳಿಸುವ ಕನ್ನಡ ಗ್ರಂಥವು ಮಾತ್ರ ಉಳಿದಿದೆ. ಅದರಲ್ಲಿ ಶ್ರೀಮದ್ಭಾಗವತ, ಪಾಂಚರಾತ್ರಾಗಮ ಮತ್ತು ಶ್ರುತಿಗಳ ಪ್ರಮಾಣಗಳನ್ನನುಸರಿಸಿ ಅವುಗಳನ್ನು ಕನ್ನಡನುಡಿಗಳನ್ನಾಗಿ ಮಾಡಿರುತ್ತಾರೆ. ಅವುಗಳಲ್ಲಿ ಅನೇಕ ನುಡಿಗಳು ಬಲು ಪ್ರಾಸಬದ್ಧವಾಗಿವೆ." ಒಂದು ಪದ್ಯದಲ್ಲಿ ವಾದಿರಾಜರು ಹೀಗೆಂದಿದ್ದಾರೆ. ವಾದಿರಾಜ ಸ್ವಾಮಿಗಳ ಕನ್ನಡ ಪ್ರೇಮವನ್ನು ಗಮನಿಸಿ :–

"ಕನ್ನಡಿಯೋಲಿಪ್ಪಂಥ ಪೂರ್ಣಪ್ರಜ್ಞರಮತ ।
ದುನ್ನತ ತತ್ತ್ವಸಾರವನು ।
ಕನ್ನಡದಿ ಬಣ್ಣಿಸಿದ ವಾದಿರಾಜ ಮುನಿಯ ।
ಬಿನ್ನಪವನ್ನೆಲ್ಲರ್ಮನ್ನಿಪುದು॥

ಸುತ್ತೂರಿನ ಬೆಳದಿಂಗಳು ಕಛೇರಿಯಲ್ಲಿ ಮಹಾನುಭಾವ ಬಸವಣ್ಣನವರ, ಅಕ್ಕನ, ಅಲ್ಲಮರ ಮತ್ತು ಇತರ ವಚನಕಾರರ ವಚನಗಳನ್ನು ಹಾಡಿ, ಪ್ರಪ್ರಥಮವಾಗಿ ಕರ್ನಾಟಕ ಸಂಗೀತಕ್ಕೆ ವಚನಗಳನ್ನು ಅಳವಡಿಸಿದ ಯಶ ಪಡೆದವರು.

"ಚಿಣ್ಣರ ಚಿಲುಮೆ" ಎಂಬ ಹೊಸ ಕಾರ್ಯಕ್ರಮದ ಮೂಲಕ ಪುಟಾಣಿಗಳನ್ನು

ಸಂಗೀತ ಪ್ರಪಂಚಕ್ಕೆ ಸ್ವಾಗತಿಸುವ ಸಂಭ್ರಮ ಈಗ ಆರಂಭವಾಗಿದೆ.

ಆಕಾಶವಾಣಿಯ ಎ ದರ್ಜೆ ಕಲಾವಿದರಾದ ಆರ್ಕೆಪಿಯವರ ಬಗ್ಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯು ಸಾಕ್ಷ್ಯಚಿತ್ರವನ್ನು ನಿರ್ಮಿಸಿದೆ.

ನಮ್ಮಲ್ಲಿ ಸುಭಾಷಿತಗಳಿಗೆ ಕೊರತೆಯಿಲ್ಲ. ಅದನ್ನು ಅರ್ಥೈಸಿ ಅಳವಡಿಸಿಕೊಳ್ಳುವುದು ಮುಖ್ಯ. ಒಂದು ಸುಭಾಷಿತ ಹೀಗೆ ಹೇಳುತ್ತದೆ.

ಅಮಂತ್ರಮಕ್ಷರಂ ನಾಸ್ತಿ
ನಾಸ್ತಿ ಮೂಲಮನೌಷಧಂ।
ಅಯೋಗ್ಯಃ ಪುರುಷೋ ನಾಸ್ತಿ
ಯೋಜಕಸ್ತತ್ರ ದುರ್ಲಭಃ ॥

ಅರ್ಥವಿಷ್ಟೆ, ಮಂತ್ರವಾಗದ ಅಕ್ಷರಗಳಿಲ್ಲ; ಔಷಧವಾಗದ ಬೇರುಗಳಿಲ್ಲ; ಕೆಲಸಕ್ಕೆಬಾರದ ಪುರುಷರಿಲ್ಲ(ಸ್ತ್ರೀಯರೂ ಎಂದೂ ಓದಿಕೊಳ್ಳಿ). ಆದರೆ, ಇವೆಲ್ಲವನ್ನೂ ಉಪಯೋಗಿಸಿಕೊಂಡು, ಒಂದು ಕಟ್ಟಿನಲ್ಲಿ ಕಟ್ಟಿ ಸಮಾಜೋದ್ಧಾರ ಮಾಡುವ ಯೋಜಕರು ದುರ್ಲಭ. ನಮ್ಮ ಪದ್ಮನಾಭರು ಅಂತಹ ಸುಯೋಜಕರು. ಕಲೆ, ಸಂಗೀತ, ಸಾಹಿತ್ಯ ಸಂಸ್ಕೃತಿಯನ್ನು ತಾವೂ ಅಳವಡಿಸಿಕೊಂಡರು. ಭವಸಾಮರ್ಥ್ಯವಿರುವ ಜನರನ್ನು ಗುರುತಿಸಿ ಸಮಾಜಕ್ಕೆ ಹೆಚ್ಚು ಉಪಯೋಗವಾಗುವಂತೆ ಮಾಡುತ್ತಿದ್ದಾರೆ.

ಈ ಕಾರಣವೇ, 2004ರಲ್ಲಿ, ಅವರನ್ನು ಗಾನಕಲಾ ಪರಿಷತ್ತು, ಅಧ್ಯಕ್ಷರನ್ನಾಗಿ ಆರಿಸಿತು. ಈ ಮುನ್ನ ಪರಿಷತ್ತು ಹೆಚ್ಚಾಗಿ ಬೆಂಗಳೂರಿಗೆ ಸೀಮಿತವಾಗಿತ್ತು. ಅಲ್ಲಿಯವರೆಗೆ ನಡೆದ 34 ಸಮ್ಮೇಳನಗಳಲ್ಲಿ ಒಂಭತ್ತು, ಬೆಂಗಳೂರು ಸುತ್ತಮುತ್ತವೇ ಆಗಿತ್ತು. ಆರ್ಕೆಪಿಯವರು ಅಧ್ಯಕ್ಷರಾದ ಮೇಲೆ, ಇಲ್ಲಿಯವರೆಗೆ ಸುವರ್ಣಮಹೋತ್ಸವವೂ ಸೇರಿದಂತೆ 16 ಸಮ್ಮೇಳನಗಳನ್ನು ಆಯೋಜಿಸಿದ್ದಾರೆ. ಅದರಲ್ಲಿ ಒಂಭತ್ತು ಬೆಂಗಳೂರಿನಿಂದ ಹೊರಗೆ. ವಿಶೇಷವೆಂದರೆ, "ಹಿಂದೂಸ್ತಾನಿ ಸಂಗೀತಕ್ಕೆ ಆದ್ಯತೆ ನೀಡುತ್ತಾರೆ" ಎಂದು ಭಾವಿಸಲಾದ ಗದಗ, ಬಿಜಾಪುರಗಳಲ್ಲಿ ಅತ್ಯಂತ ಯಶಸ್ವಿ ಸಮ್ಮೇಳನಗಳು ಜರುಗಿವೆ. ಅಲ್ಲಿನ ನಾಗರಿಕರು ಕಿಕ್ಕಿರಿದು ಭಾಗವಹಿಸಿದ್ದಾರೆ. ಕರ್ನಾಟಕ ಸಂಗೀತದ ಆಲಾಪಗಳು ಕೃಷ್ಣೆಯನ್ನೂ ಮುದಗೊಳಿಸಿದೆ.

ಮತ್ತೊಂದು ಮಹತ್ವದ ವಿಚಾರವೆಂದರೆ, ಸಮ್ಮೇಳನಗಳು ಬೆಂಗಳೂರು ಮತ್ತು ಇತರ ಜಿಲ್ಲಾ ಕೇಂದ್ರಗಳಿಂದ ಮುಂದೆಸಾಗಿ ತಾಲ್ಲೂಕು ಕೇಂದ್ರಗಳಲ್ಲೂ

ನಡೆಯಿತು. ನಮ್ಮ ಸಂಸ್ಕೃತಿಯನ್ನು ಕಾಪಾಡಿರುವವರು ನಮ್ಮ ಗ್ರಾಮೀಣರೇ. ರಾಮನಾಥಪುರ, ನಂಜನಗೂಡು, ಹೊಳೆನರಸೀಪುರ, ಸಿದ್ದಾಪುರ, ಬೇಲೂರುಗಳಲ್ಲಿ ನಡೆದ ಸಮ್ಮೇಳನಗಳು ನಗಾರಿಯನ್ನೇ ಬಾರಿಸಿವೆ. ಕಛೇರಿಗಳಿರಲಿ, ವಿದ್ವತ್ ಸಭೆಗಳಲ್ಲೂ ತುಳುಕುವ ಜನಸಂದಣಿ. ಮೈಸೂರು ಹಾಗೂ ತುಮಕೂರಿನಲ್ಲಿ ನಡೆದ ಸಮ್ಮೇಳನಗಳು ತಮ್ಮ ಸೌರಭವನ್ನು ಪಸರಿಸಿವೆ.

ಸಂಗೀತ ಸಮ್ಮೇಳನದ ಅವಧಿಯನ್ನು ಆರ್ಕೆಪಿಯವರ ನೇತೃತ್ವದಲ್ಲಿ ಗಾನಕಲಾಪರಿಷತ್ತು ಹೆಚ್ಚಿಸಿತು. ಐದು ದಿನಗಳು. ಯುವ ಕಲಾವಿದರಿಗೆ ಆದ್ಯತೆ. ಪ್ರತಿದಿನವೂ ವಿದ್ವತ್ ಗೋಷ್ಠಿ. ವಿಧವಿಧ ವಿಷಯಗಳ ಬಗ್ಗೆ ಚರ್ಚೆ. ಊಟ ಉಪಚಾರವಂತೂ ಅದ್ಭುತ. ಅನ್ನಪೂರ್ಣೆಯು ಪದ್ಮನಾಭರ ತಾಯಿಯಂತೆ. ಪ್ರತಿಯೊಬ್ಬರಿಗೂ ಪುಷ್ಕಳ ಭೋಜನ, ವ್ಯವಸ್ಥೆ ಸುಗಮ. ಮನದ ತುಂಬೆಲ್ಲ ಸಂಗೀತದ ಸರಿಗಮ.

ದಿನಾಂಕ 01–02–2020ರಿಂದ 16–02–2020ರವರೆಗೆ ಬೆಂಗಳೂರು ನರಸಿಂಹರಾಜಾ ಕಾಲೋನಿಯ ರಾಮಮಂದಿರದ ಪತ್ತಿ ಸಭಾಂಗಣದಲ್ಲಿ ನಡೆದ ಸುವರ್ಣಮಹೋತ್ಸವ ಸಮ್ಮೇಳನವು ಚರಿತ್ರಾರ್ಹವಾಗಿದೆ. "ನ ಭೂತೋ" ಎಂಬುದೇನೋ ನಿಜ, ಆದರೆ "ನ ಭವಿಷ್ಯತಿ" ಎಂದು ನಾನು ಹೇಳುವುದಿಲ್ಲ" ಎಂದರು ಆರ್ಕೆಪಿ.

ಫೆಬ್ರವರಿ ಒಂದರಂದು ಬೆಳಿಗ್ಗೆ 10.30ಕ್ಕೆ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಗದ್ಗುರುಗಳು ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಕ್ಷೇತ್ರ ಇವರಿಂದ ಉದ್ಘಾಟನೆಯಾಗಿ, ಫೆಬ್ರವರಿ 16ರಂದು ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಸಾನ್ನಿಧ್ಯದಲ್ಲಿ ಸಂಪನ್ನವಾಯಿತು. ಒಟ್ಟು ಹದಿನಾರು ದಿನಗಳು.

ವಿಶೇಷವೆಂದರೆ ಇಬ್ಬರು ಹಿರಿಯ ಸಮ್ಮೇಳನಾಧ್ಯಕ್ಷರು ವಿ॥ ಮೈಸೂರು ನಾಗರಾಜ್ ಮತ್ತು ವಿ॥ ಡಾ॥ ಮೈಸೂರು ಮಂಜುನಾಥ್ ಹಾಗೂ ಇಬ್ಬರು ಕಿರಿಯ ಸಮ್ಮೇಳನಾಧ್ಯಕ್ಷರು ವಿ॥ ಗುರುಪ್ರಸನ್ನ ಮತ್ತು ವಿ॥ ಗಿರಿಧರ ಉಡುಪ. ಕ್ರಮವಾಗಿ ಗಾನಕಲಾಭೂಷಣ ಹಾಗೂ ಗಾನಕಲಾಶ್ರೀ ಪ್ರಶಸ್ತಿಗಳನ್ನು ನೀಡಲಾಯಿತು.

ಪ್ರತಿದಿನ ಬೆಳಿಗ್ಗೆ ಗಾನಯಜ್ಞ, ದಿನಕ್ಕೊಬ್ಬರು ಸಂಗೀತ ದೇವತೆಗಳು, ಒಟ್ಟು ಹದಿಮೂರು. ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳು, ಮೈಸೂರು ವಾಸುದೇವಾಚಾರ್ಯರು, ಮುತ್ತಯ್ಯ ಭಾಗವತರು, ಜಯಚಾಮರಾಜ ಒಡೆಯರು, ಪುರಂದರರು, ವಾದಿರಾಜರು, ಕನಕದಾಸರು, ಸ್ವಾತಿ ತಿರುನಾಳರು, ಅಣ್ಣಮಾಚಾರ್ಯರು, ಸದಾಶಿವ ಬ್ರಹ್ಮೇಂದ್ರರು ಮತ್ತು ಶ್ರೀ ಶಂಕರ ಭಗವತ್ಪಾದರ

ಸೌಂದರ್ಯ ಲಹರೀ ಕೃತಿಗಳು. ಪ್ರತಿದಿನವೂ ಏಳು ವಿದ್ವತ್ ಸದಸ್ ಸನ್ಮಾನಿತರಾದ ಸಪ್ತಸ್ವರ ವಿದ್ವಾಂಸರ ಗಾಯನದ ಮೂಲಕ ಗಾನ, ಯಜ್ಞ. ಒಟ್ಟು 59 ಕಛೇರಿಗಳು.

ಒಟ್ಟು ಹದಿನಾರು ವಿದ್ವತ್ ಗೋಷ್ಠಿಗಳು. ಅವುಗಳ ವೈವಿಧ್ಯತೆ ಮತ್ತು ವೈಶಿಷ್ಟ್ಯವನ್ನು ಗಮನಿಸಿ. ಸಂಗೀತ ಕೇವಲ ಹಾಡುಗಾರಿಕೆಯಲ್ಲ, ಶಾಸ್ತ್ರ. ಮೊದಲಿನ ಎರಡು ಗೋಷ್ಠಿಗಳಲ್ಲಿ ವಿದೇಶಿ ವಿದ್ವಾಂಸರು ಭಾಗವಹಿಸಿದ್ದರು.

\# Creativity in Group Collaboration
\# Speed in Music, Brain and Body
\# ವಚನಗಳಲ್ಲಿ ಅಧ್ಯಾತ್ಮ
\# ಖಂಜರಿ ವೈಶಿಷ್ಟ್ಯ
\# ಘಟವಾದ್ಯದ ಇತಿಹಾಸ ಮತ್ತು ಬೆಳವಣಿಗೆ
\# ದೇವ ಮಂದಿರಗಳಲ್ಲಿ ನಾಗಸ್ವರ ಸಂಪ್ರದಾಯ
\# ಹರಿದಾಸರ ಸುಳಾದಿಗಳು
\# ವೈಯೋಲಿನ್ ವಾದ್ಯ ವೈಭವ
\# ಗಾಯನ ಮತ್ತು ವಾದ್ಯಸಂಗೀತದಲ್ಲಿ ಪೂರಕ ವಿಷಯಗಳು
\# ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳಲ್ಲಿ ಸಂಗೀತ ಶ್ರೀಮಂತಿಕೆ
\# ಕರ್ನಾಟಕ ಶಾಸ್ತ್ರೀಯ ಸಂಗೀತಾಭ್ಯಾಸಕ್ಕೆ ಪರಿಣಾಮಕಾರಿ ತಂತ್ರಜ್ಞಾನದ ಸದ್ಬಳಕೆ
\# ಕರ್ನಾಟಕ – ಹಿಂದೂಸ್ತಾನಿ ರಾಗಸಂವಾದ
\# ಪಂಚನಾದ, ಸ್ವರ, ರಾಗ, ರಂಗವೈಭವ – ಪರಿಕಲ್ಪನೆ ನಿರ್ದೇಶನ
\# ವೀಣೆ, ಒಂದು ಸಂಪೂರ್ಣ ವಾದ್ಯ
\# ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಗೇಯ ರಚನೆಗಳು
\# ವರ್ತಮಾನದಲ್ಲಿ ಕರ್ನಾಟಕ ಸಂಗೀತದ ಉಳಿವು ಮತ್ತು ಬೆಳವಣಿಗೆ.

ಈ ಸಂದರ್ಭದಲ್ಲಿ ಮೂರು ಮುಖ್ಯವಾದ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

1970ರಿಂದ 2020ರವರೆಗೆ ನಡೆದ ಐವತ್ತು ಸಮ್ಮೇಳನಗಳಲ್ಲಿ "ಗಾನಕಲಾಭೂಷಣ" ಪ್ರಶಸ್ತಿಗಳನ್ನು ಪಡೆದವರ ಛಾಯಾಚಿತ್ರದೊಂದಿಗೆ ಕಿರುಪರಿಚಯವನ್ನು ನೀಡಿ, 170 ಜಿ.ಎಸ್.ಎಮ್ ಆರ್ಟ್ ಪೇಪರ್ನಲ್ಲಿ, 1/4 ಕ್ರೌನ್ ಅಳತೆಯಲ್ಲಿ ಪ್ರಕಾಶಿಸಲಾಗಿದೆ. ಬಹಳ ಸುಂದರವಾಗಿ ಮೂಡಿಬಂದಿದೆ.

ವಿದುಷಿ ವೀಣಾಮೋಹನ್ ಅವರ "ಜ್ಞಾನ ಪ್ರಬೋಧ" ಎಂಬ ಮಾಹಿತಿಪೂರ್ಣ,

ಅಧ್ಯಯನ ಯೋಗ್ಯ ಕೃತಿ. ಇಂಗ್ಲಿಷ್‌ನಲ್ಲಿರುವ ಈ ಕೃತಿಯು ಸಂಗೀತದ ಹುಟ್ಟು, ನಾದ, ಶ್ರುತಿ, ಸ್ವರ, ರಾಗ, ರಾಗಗಳ ವೈಜ್ಞಾನಿಕ ವರ್ಗೀಕರಣ, ಜನ್ಯರಾಗಗಳು, ಗ್ರಹಭೇದ, ತಾಳ, ಸಂಗೀತ ವಾದ್ಯಗಳು, ಧ್ವನಿ ಮತ್ತು ಶ್ರವಣದ ಬಗ್ಗೆ ಲೇಖನಗಳನ್ನೂ, ರೇಖಾಚಿತ್ರಗಳನ್ನೂ ಒಳಗೊಂಡಿದೆ.

ಅತಿಮುಖ್ಯವಾದ ಮತ್ತೊಂದು ಕೃತಿಯೆಂದರೆ, "ಶ್ರೀ ರಾಜ ತುಳಜೇಂದ್ರ ವಿರಚಿತ ಸಂಗೀತ ಸಾರಾಮೃತಮ್"ನ ವಿವರಣೆಗಳನ್ನುಳ್ಳ ಕನ್ನಡ ಅವತರಣಿಕೆ. ಡಾ॥ಆರ್ ಎನ್ ಲೀಲಾ, ಪ್ರೋ ಕೆ ಎಲ್ ಪ್ರಸನ್ನಾಕ್ಷಿ ಮತ್ತು ಎಂ ವಿ ರಮಾದೇವಿ ಅವರುಗಳು ಈ ಸ್ತುತ್ಯಾರ್ಹ ಕಾರ್ಯವನ್ನು ಮಾಡಿದ್ದಾರೆ. ಸಂಗೀತವನ್ನು ಪೋಷಿಸಿದ ತಂಜಾವೂರಿನ ರಾಜ ಶ್ರೀ ತುಳಜೇಂದ್ರರ ಕೃತಿಯು ಮೊದಲಬಾರಿಗೆ ಕನ್ನಡದಲ್ಲಿ ಬಂದಿರುವುದು ಮಹತ್ವದ್ದಾಗಿದೆ. ಸಂಶೋಧಕರು, ಶಿಕ್ಷಕರು ಮತ್ತು ಆಸಕ್ತರಿಗೆ ಈ ಗ್ರಂಥವು ಉತ್ತಮ ಕೈಪಿಡಿಯಾಗಿದೆ.

ಸಮೇಳನಾಧ್ಯಕ್ಷರ ಮೆರವಣಿಗೆ, ಪ್ರತಿದಿನ ಸಾವಿರಾರು ಜನರಿಗೆ ಊಟದ ವ್ಯವಸ್ಥೆ, ಸತತ ಕಾರ್ಯಕ್ರಮಗಳು, ಇವುಗಳನ್ನೆಲ್ಲಾ ತಾರ್ಕಿಕವಾಗಿ ಹೊಂದಿಸಿ, ಸಮಯದ ಗೆರೆ ದಾಟದಂತೆ ನಡೆಸುವುದು. ನೂರಾರು ಕಾರ್ಯಕರ್ತರು. ಅವರನ್ನು ಪ್ರೋತ್ಸಾಹಿಸಿ, ಸಂಭಾಳಿಸುವುದು. ಖರ್ಚು ಸುಮಾರು ಎರಡು ಕೋಟಿ. ಪೋಷಕರಿಂದ, ದಾನ ದತ್ತಿಗಳ ಮೂಲಕ ಹಣ ಸಂಗ್ರಹಿಸುವುದು. ಸರ್ಕಾರಗಳು ಇಂತಹ ಕೆಲಸ ಮಾಡಬಹುದು. ಆದರೆ, ಗಾನಕಲಾ ಪರಿಷತ್ತಿನಂತಹ ಸಂಗೀತ ಸಾಧಕರ ಸಂಘವು ಮಾಡುವುದು, ಕಷ್ಟಸಾಧ್ಯ. ಇಂತಹ ಚಮತ್ಕಾರವಾದದ್ದು ಅಧ್ವರ್ಯು ಗಾನಕಲಾಭೂಷಣ ವಿದ್ವಾನ್ ಡಾ॥ ಆರ್ ಕೆ ಪದ್ಮನಾಭ ಅವರಂತಹ ದುರ್ಲಭರಾದ ಅತ್ಯಂತ ಸಮರ್ಥ ಯೋಜಕರಿಂದ. ಇಂತಹ ಮಹತ್ಕಾರ್ಯಗಳು ನಮ್ಮ ಪದ್ಮನಾಭದಾಸರಿಂದ ಪುನಃ ಪುನಃ ನಡೆಯಲಿ. ನಾವೆಲ್ಲರೂ ಕೂಡಿ ನಡೆಯೋಣ.

ಪ್ರಿಯ ಓದುಗರೇ, ಪದ್ಮನಾಭರ ಮಹತ್ಸಾಧನೆಗಳಲ್ಲಿ, ಅವರ ಕುಟುಂಬದವರ ಪಾತ್ರ ದೊಡ್ಡದು. ಸಂಗೀತ ಪ್ರಪಂಚಕ್ಕೆ ಪದ್ಮನಾಭರನ್ನು ದತ್ತಿಯಾಗಿ ಅವರು ಕೊಟ್ಟುಬಿಟ್ಟಿದ್ದಾರೆ! ಹಾಗಂತ ಪದ್ಮನಾಭರೇನು ಸಂಸಾರದ ಜವಾಬ್ದಾರಿಗಳನ್ನು ನಿರ್ವಹಿಸಲಿಲ್ಲವೆನ್ನಬೇಡಿ! ಅವರೊಬ್ಬ ಉತ್ತಮ ಸಂಗಾತಿ, ಉತ್ತಮ ತಂದೆ, ಮಾವ ಮತ್ತು ತಾತ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ ಬಂದಿರುವ ಈ ಸಂದರ್ಭದಲ್ಲಿ ಸಾಧಕನ ಕೈಹಿಡಿದು ನಡೆಸಿದ ಶ್ರೀಮತಿ ಆರ್ ಎಸ್ ವಿಜಯಲಕ್ಷ್ಮಿ ಪದ್ಮನಾಭ್, ಮಗಳು ವರ್ಧಿನಿ ದೀಕ್ಷಿತ್, ಅಳಿಯ ಶರದ್ ದೀಕ್ಷಿತ್, ಮಗ ಪ್ರಮೋದ್ ರುದ್ರಪಟ್ಟಣ, ಸೊಸೆ ಶೀಲಾ ನಾಗರಾಜ್ ದೀಕ್ಷಿತ್, ಮೊಮ್ಮಕ್ಕಳಾದ ಆದಿತ್ಯ, ಆರ್ಣವ್, ಅಹನ ಮತ್ತು ಅನನ್ಯ ಅವರಿಗೆಲ್ಲಾ ಅಭಿನಂದನೆಗಳು.

ಪದ್ಮನಾಭರ ಸಾಧನೆಯ ಕೀರ್ತಿಯು ಅವರಿಗೆಲ್ಲಾ ಸೇರುತ್ತದೆ.

ಪದ್ಮನಾಭರು ತಮ್ಮ ಸಾಧನೆಯನ್ನು ಗುರು ವಾದಿರಾಜರ ಪದತಲಕ್ಕೆ ಅರ್ಪಿಸುತ್ತಾರೆ. ತಮಗೆ ಸಂಗೀತವನ್ನು ಧಾರೆಯೆರೆದ ಎಲ್ಲ ಗುರುಗಳನ್ನು ಭಕ್ತಿಯಿಂದ ನೆನೆಯುತ್ತಾರೆ. ಪ್ರೋತ್ಸಾಹವನ್ನಿತ್ತ ಅಸಂಖ್ಯ ಸಂಗೀತಾಭಿಮಾನಿಗಳು, ಗೆಳೆಯರು ಯಾವಾಗಲೂ ಅವರ ಮನಸ್ಸಿನಲ್ಲಿದ್ದಾರೆ. ಅವರಿಂದ ಪಾಠ ಕಲಿತು ಸಾಧನೆಯ ಅಂಗಳದಲ್ಲಿ ಶ್ರಮಿಸುತ್ತಿರುವ, ನಾದ ದೇವತೆಯ ಪೂಜೆ ಮಾಡುತ್ತಿರುವ ಶಿಷ್ಯರು ಪದ್ಮನಾಭ ಪರಂಪರೆಗೆ ಭಾಜನರಾಗಿದ್ದಾರೆ.

ಓದುಗ ಮಿತ್ರರೆ, ನಾನಿನ್ನು ವಿರಮಿಸುತ್ತೇನೆ. ಕಥೆ ಇನ್ನೂ ಇದೆ. ಮತ್ತೊಮ್ಮೆ ಅವಕಾಶ ಸಿಕ್ಕಾಗ ಮುಂದುವರೆಸುತ್ತೇನೆ. 1974–75ರ ಆಸುಪಾಸಿನಲ್ಲಿ ಬೆಂಗಳೂರಿನ ಭೈರಸಂದ್ರ ಕೆರೆಯ ಮೈದಾನದಲ್ಲಿ ನೀವು ಕಂಡ ಹುಡುಗ ಈಗ ಹೀಗೆ ಹೇಳುತ್ತಿದ್ದಾನೆ : –

"ಕರ್ನಾಟಕ ಜನತೆ ನನ್ನನ್ನು ಪೋಷಿಸಿದ್ದಾರೆ, ಬೆಳೆಸಿದ್ದಾರೆ, ಗೌರವಿಸಿದ್ದಾರೆ. ನನ್ನ ಸಂಗೀತದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ನಾನು ನಿಜವಾಗಲೂ ಪುಣ್ಯವಂತನೇ. ನನ್ನ ಸೃಜನಾತ್ಮಕ ಚಿಂತನೆಗಳಿಗೆ ಜನ ಸ್ಪಂದಿಸಿದ್ದಾರೆ, ಬೆಂಬಲಿಸಿದ್ದಾರೆ. ಕರ್ನಾಟಕದ ಎಲ್ಲ ಸಂಗೀತಾಭಿಮಾನಿಗಳಿಗೂ ವಂದಿಸುವೆ. ಗೆಳೆಯ ರವೀಂದ್ರರು ರಚಿಸಿರುವ ನನ್ನ ಕಥೆ "ಪದ್ಮನಾದ" ಕಲಾರಸಿಕರಾದ ನಿಮ್ಮ ಕೈನಲ್ಲಿದೆ. ನಾನು ಧನ್ಯ. ಕರ್ನಾಟಕ ಸಂಗೀತ, ಕನ್ನಡ ಪರಂಪರೆ, ಕನ್ನಡ ಭಾಷೆ ಮನೆ ಮಾತಾಗಲಿ. ಕನ್ನಡ ತಾಯಿ ಮತ್ತಷ್ಟು ಶ್ರೀಮಂತಿಕೆ, ವೈಭವವನ್ನು ಕಾಣಲಿ ಎಂದು ಆಶಿಸುತ್ತಾ, ಸದ್ಗುರು ವಾದಿರಾಜ ಗುರುಗಳ ಪಾದಾರವಿಂದಕ್ಕೆ ನಮಿಸುತ್ತೇನೆ. ಸಮಸ್ತ ಅಭಿಮಾನಿಗಳಿಗೂ ಶಿರಬಾಗಿ ವಂದಿಸುತ್ತೇನೆ".

"ಭಾವಾಲಯದ ಕದವ ತೆರೆಸಿ
ತೋರೋ ನಾದಾತ್ಮನ ಗುರುವೇ
ಭಾವನೆ ಬಂದರು ಭಾವವಿಲ್ಲ
ಭಾವಗೀತ ಬಂದರು ಲಯಲಾಲಿತ್ಯಗಳಿಲ್ಲ
ಭಾನುಕೋಟಿ ತೇಜ ಭಾವಲಯ.........."

******

....ಅನುಬಂಧ 01

ವಿದ್ವಾನ್ ಡಾ॥ ಶ್ರೀ ಆರ್.ಕೆ. ಪದ್ಮನಾಭ ಅವರ ಪ್ರಕಟಣೆಗಳು

01– 21 ವಾಸುದೇವ ಕೀರ್ತನ ಮಂಜರಿ...21 ಸಂಪುಟಗಳು
22– 28ವಾದಿರಾಜ ಕೃತಿ ಮಾಲ – 7 ಸಂಪುಟಗಳು
29– ನವಗ್ರಹ ಕೃತಿಗಳು – ಮುತ್ತುಸ್ವಾಮಿ ದೀಕ್ಷಿತರ ರಚನೆಗಳು
30– ಕಮಲಾಂಬ ನವಾರ್ಣವ ಕೃತಿಗಳು
31– ಶ್ರೀ ತ್ಯಾಗರಾಜ ಸಂಕೀರ್ತನ ಮಾಲ
32– ಶ್ರೀ ತ್ಯಾಗರಾಜ ದರ್ಶನ
33– ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳು
34– ಗುರುಗುಹ ವಂದನ
35– ವಿನಾಯಕ ವಂದನ
36– ಕನಕ ಸಂಕೀರ್ತನ ಮಾಲ
37– ಪುರಂದರ ಕೃತಿ ಮಾಲ
38– ಪುರಂದರ ನವರತ್ನ ಕೃತಿಗಳು
39–40– ಪರಿಮಳ – 2 ಸಂಪುಟಗಳು
41–42– ಪರಿಮಳ ಎ – 2 ಸಂಪುಟಗಳು
43– ಸಮರ್ಪಣ – 1
44– ಸಮರ್ಪಣ 2
45– ಸಮರ್ಪಣ 3
46– ಸಮರ್ಪಣ 4
47– ಶ್ರೀವಾದಿರಾಜರ ಲಕ್ಷ್ಮಿ ಶೋಭಾನೆ
48– ಶ್ರೀ ವೆಂಕಟೇಶ ದರ್ಶನ – ಶ್ರೀ ಅಣ್ಣಮಾಚಾರ್ಯರ ರಚನೆಗಳು
49– ಮೇಳಮಾಲ 72 ಮೇಳ ರಾಗಗಳಲ್ಲಿ ಆರ್.ಕೆ.ಪಿ.ಯವರ ರಚನೆಗಳು
50– ನವಗ್ರಹ ನಮನ – ಪದ್ಮನಾಭದಾಸ ವಿರಚಿತ ಕನ್ನಡ ನವಗ್ರಹ ಕೃತಿಗಳು
51– ನವರಾತ್ರಿ ಕೃತಿಗಳು – ಪದ್ಮನಾಭದಾಸ ವಿರಚಿತ ಕನ್ನಡ ನವರಾತ್ರಿ ಕೃತಿಗಳು
52– ಶಿವಾರ್ಚನ – ಪದ್ಮನಾಭದಾಸ ವಿರಚಿತ ಶಿವನ ಕುರಿತಾದ ರಾಗಗಳ ರಚನೆಗಳು
53– ಪುರಂದರ ಮೇಳಮಾಲ ರಚನೆಗಳು – 72 ಮೇಳ ರಾಗಗಳಲ್ಲಿ ಪುರಂದರದಾಸರ
54– ಗಾನಸರಿತ – ಶ್ರೀ ವಾದಿರಾಜ ವಿರಚಿತ ತೀರ್ಥ ಪ್ರಬಂಧ, ಶ್ಲೋಕಗಳ ಶಾಸ್ತ್ರೀಯ ಸಂಗೀತದ ಸ್ವರೂಪ (ಆರ್.ಕೆ.ಪಿ.ಯವರ ರಾಗ ಸಂಯೋಜನೆ)

55– ಶ್ರೀ ಶಂಕರ ನಮನ – ಶ್ರೀ ಶಂಕರಾಚಾರ ವಿರಚಿತ ಶ್ಲೋಕಗಳ ಶಾಸ್ತ್ರೀಯ ಸಂಗೀತದ ಸ್ವರೂಪ

56– ಸೌಂದರ್ಯ ಲಹರಿ – ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರಿಯ ಶ್ಲೋಕಗಳ ಶಾಸ್ತ್ರೀಯ ಸಂಗೀತದ ಸ್ವರೂಪ

57– ಶ್ರೀವಾದಿರಾಜ ನಾಮಾವಳಿ (ಆರ್.ಕೆ.ಪಿ. ವಿರಚಿತ)

58– ಗಾನಾಭಿಷೇಕ ಕೃತಿಮಾಲ

ಕವಿತೆಗಳು

59– ಪದ್ಮಕವಿತೆ

ಇತರ ಗ್ರಂಥಗಳು

60– ನೆನಪಿನಂಗಳದಲ್ಲಿ – ಆರ್.ಕೆ. ಪದ್ಮನಾಭರ ಆತ್ಮಚರಿತ್ರೆ

61– ಶಾರೀರ ಸಂಸ್ಕರಣ ಮತ್ತು ರಾಗ ದರ್ಶನ

62– ಪುರಂದರರು ಸಂಗೀತ ಪಿತಾಮಹರೇ??? ರೇ...!!!... ಸಂಶೋಧನಾ ಕೃತಿ

63– ವಾದಿರಾಜರ ಪವಾಡಗಳು

ಕಾದಂಬರಿಗಳು

64– ಅನಂತನಾದ

65– Ananthanaada – ಇಂಗ್ಲಿಷ್ ಅವತರಣಿಕೆ

66– ವಿಪ್ರ ವಿಕ್ರಮ

67– ನಾದ ಬಿಂದು

68– ಸುವರ್ಣ ಗಾನ (ಅಚ್ಚಿನಲ್ಲಿ)

69– ಬೇವು ಬೆಲ್ಲ (ಅಚ್ಚಿನಲ್ಲಿ)

ಜೀವನ ಚರಿತ್ರೆಗಳು (ಅಚ್ಚಿನಲ್ಲಿ)

70– ಶ್ರೀ ಶಂಕರಾಚಾರ್ಯರು

71– ಶ್ರೀ ಮಧ್ವಾಚಾರ್ಯರು

72– ಶ್ರೀ ರಾಮಾನುಜಾಚಾರ್ಯರು

ನಾಟಕಗಳು (ಅಚ್ಚಿನಲ್ಲಿ)

73– ನಾದಯೋಗಿ ತ್ಯಾಗಯ್ಯ

74– ವಾದಿರಾಜ ದರ್ಶನ

75– ನಾದ

76– ಪುರಂದರ ಮಹಿಮ

ಒಟ್ಟು **76 ಪ್ರಕಟಣೆಗಳು**
ಇವುಗಳಲ್ಲದೆ ಕ್ಯಾಸೆಟ್ಟುಗಳು, ಸಿಡಿಗಳು ಮತ್ತು ಯೂಟ್ಯೂಬ್ ಪ್ರಸ್ತುತಿಗಳು.

ಅನುಬಂಧ – 2
ಬಿರುದುಗಳ ಪಟ್ಟಿ

1. ಗಾನಕಲಾ ಭೂಷಣ
2. ನಾದ ತಪಸ್ವಿ
3. ಗುಣ ನಿಧಿ
4. ವಾದಿರಾಜ ಕ್ರಿತಿ ಗಾನ ರತ್ನ ವಿಶಾರದ
5. ಸಂಗೀತ ಭೂಷಣ
6. ತಾನ ಸಾರ್ವಭೌಮ
7. ಗೀತ– ಗಂಧರ್ವ
8. ಸಂಗೀತ ಸಾರ್ವಭೌಮ
9. ಮಹಾಕಲಾ ತಪಸ್ವಿ
10. ಸಂಗೀತ ಗಾನ ಚಕ್ರವರ್ತಿ
11. ಶಾಸ್ತ್ರೀಯ ಗಾನಕಲಾ ಚಕ್ರವರ್ತಿ
12. ಗಾನಶ್ರೀ
13. ಗೋಷ್ಠಿ ಗಾನಕಲಾ ಚೇತನ
14. ಸಂಗೀತ ಕಲಾ ಸೇವಾಮಣಿ
15. ಭಕ್ತಿ ಗಾನ ಸುಧಾಕರ
16. ಸಂಗೀತ ಕಲಾ ಭೂಷಣ
17. ಸಮೂಹ ಗಾಯನ ಚತುರ
18. ಭವಿ ಸಮೀರ ಗುಣಸೇವ ದುರಂಧರ
19. ರಂಗಕಲಾ ರತ್ನ
20. ರಾಜ ಸಂಗೀತ ಶೇಖರ
21. ಗಾನ ತಾನ ಕಲಾ ಸಂಕೇತ
22. ಗಾನ ಕಲಾ ಕೇಸರಿ
23. ಗಾನ ಗಂಧರ್ವ
24. ಗಾನ ವಾರಿಧಿ
25. ಸಂಗೀತ ಕಲಾ ತಪಸ್ವಿ
26. ಕಲಾ ಭೂಷಣ

27. ರಾಮ ಕೀರ್ತನ ಕೇಸರಿ
28. ತಾನ ಕಲಾ ಕೌಸ್ತುಭ
29. ರಾಗ ಪ್ರಯೋಗ ಚಕ್ರವರ್ತಿ
30. ಸಂಗೀತ ಕಲಾ ಸೌರಭ
31. ರಾಷ್ಟ್ರೀಯ ಸಂಗೀತ ರತ್ನ
32. ಗಾನ ಜ್ಞಾನ ನಿಧಿ
33. ಸುರ ಸಂಗೀತ ವಿಶಾರದ
34. ಸಂಗೀತ ಸಾಮ್ರಾಟ
35. ಸಪ್ತಸ್ವರ ಸಮೀರ
36. ಹರಿದಾಸ ಸಾಹಿತ್ಯ ಸಂಗೀತ ಸಾಮ್ರಾಜ್ಯ ಮುಕುಟಮಣಿ
37. ನಳಂದ ರತ್ನ
38. ವಾಗ್ಗೇಯಕಾರ ಗೋಷ್ಠಿ ಗಾಯನ ಗಿರಿ
39. ಗಾನ ಕಲಾ ಗಾರುಡಿಗ
40. ಸಂಗೀತ ಸರಸ್ವತಿ
41. ವಾಗ್ಗೇಯ ಗಾನಕಲಾ ತಪಸ್ವಿ
42. ಕರ್ನಾಟಕ ಕಲಾ ಶ್ರೀ – 2011
43. ವಾಸುದೇವ ಸಂಗೀತ ಸಾಮ್ರಾಟ – 2011
44. ಕರ್ನಾಟಕ ಸಂಗೀತ ರತ್ನ – 2011
45. ನಾದ ಬ್ರಹ್ಮ
46. ಗಾನ ಶಿರೋಮಣಿ
47. ಸಂಗೀತ ಧ್ರುವತಾರೆ – 2011
48. ಪರಿಪೂರ್ಣ ಮಹನೀಯ – 2011
49. ಸ್ವರ ಕಲಾನಿಧಿ – 2011
50. ಗಾನ ನಿಧಿ – 2001
51. ಗಾನ ಗಂಗೇಯ – 2012
52. ಅಭಿನವ ಕಲಾ ವಾರಿಧಿ – 2012
53. ಭಾರತ ಪರಂಪರಾ ಪ್ರದೀಪನಾಚಾರ್ಯ – 2013
54. ಪುರಂದರ ಸಂಗೀತ ರತ್ನ – 2013
55. ರಾಜ್ಯ ವಿವೇಕ ಸಂಗೀತ ರತ್ನ – 2013
56. ಸಾಧನಾಚಾರ್ಯ – 2013
57. ವಿದ್ಯಾಪೀಠ ಗುರುವರ – 2013
58. ಸಂಗೀತ ವಿಚಕ್ಷಣ – 2013
59. ಸಪ್ತಸ್ವರ ಗಾನಯೋಗಿ - 2013
60. ಶ್ರೀ ಕೃಷ್ಣ ಚೈತನ್ಯ ಗಾನಕಲಾ ಸಿಂಧು

61. ಗಾನ ಗಂಧರ್ವ – [28.1.2014]
62. ನಾದೋಪಾಸನಾಚಾರ್ಯ – [02.02.2014]
63. ಕರ್ನಾಟಕ ರಾಜ್ಯೋತ್ಸವ ಭೂಷಣ
64. ಶ್ರೀವರ ಕಲಾರತ್ನ
65. ಗಾನಕಲಾ ಗುರು ಪಾದ ಪದ್ಮ
66. ಸಂಕೇತಿ ರತ್ನ
67. ಮೇಳ ಗಾನ ಪ್ರವೀಣ
68. ಗಾನಕಲಾ ವಿಪ್ರ ವಸಿಷ್ಠ
69. ವಿಜಯ ಸಂಗೀತ ಶ್ರೀ
70. ಸಮಾಜ ಸೇವಾ ಸಂಗೀತ ಸವ್ಯಸಾಚಿ
71. ಶ್ರೀ ನರಸಿಂಹ ಕೋವಿದ
72. ನಾದ ನಿಧಿ
73. ಕಲಾ ಸರಸ್ವತಿ
74. ಓಂಕಾರಶ್ರೀ
75. ಪುರಂದರ ಮೇಳ ಗಾನ ಚಕ್ರವರ್ತಿ
76. ಅವಿಳಂಬ ವಾಗ್ಗೇಯ ಸರಸ್ವತಿ
77. ಕಲಾ ದೀಪ್ತಿ
78. ಆಚಾರ್ಯ ರತ್ನಾಕರ
79. ಗಾನಕಲಾ ದೊರೆ
80. ವಿವೇಕ ರತ್ನ
81. ಕರ್ನಾಟಕ ಸಂಗೀತ ಚಕ್ರವರ್ತಿ
82. ಸಂಗೀತ ಕಲಾರವಿಂದ
83. ಗಾನ ಕಲಾಮೃತ ಪ್ರಪೂರ್ಣ
84. ನಾದ ಕಲಾ ಸಿಂಧೂರ
85. ಅಭಿನವ ಮಹಾಮಹೋಪಾಧ್ಯಾಯ
86. ಶ್ರುತಿ ಲಯ ಭಾರತಿ
87. ನಾದ ಕಲಾ ಜ್ಯೋತಿ
88. ರುದ್ರಪಟ್ಟಣ ನಾದಪಯೋನಿಧಿ
89. ಗಾನಕಲಾಂಬುಜ
90. ಲಲಿತ ಕಲಾಶ್ರಯ
91. ನಾದ ಬ್ರಹ್ಮ
92. ತ್ಯಾಗರಾಜ ಗಾನ ಗಂಧರ್ವ
93. ನಾದವಿದ್ಯಾ ವಿಶಾರದ
94. ನಾಟ್ಯ ರಂಜನಿ ಸಂಗೀತ ಸಾರ್ವಭೌಮ

95. ರಾಜ್ಯೋತ್ಸವ ರಾಜ್ಯರತ್ನ
96. ವಿದ್ಯಾ ದಾನ ಕರ್ಣ
97. ಗಂಧರ್ವ ವಿದ್ಯಾಧರ – 2020
98. ರೇವ ಸಂಗೀತ ರತ್ನ ಉರಸ್ಕಾರ – 2020
99. ದ್ವಿ ಸಪ್ತತಿ ಸರದಾರ
100. ಶ್ರೀ ಸತ್ಯಸಾಯಿ ಸಂಗೀತ ಶಿರೋಮಣಿ – 2021
101. ಶ್ರೀ ರಾಮ ಕಾರುಣ್ಯ – 2022
102. ಕುಮಾರ ಗಾನಕಲಾ ಸಂಕಾಶ (31–7–22)
103. ವಾದಿರಾಜ ಕೃಪಾನುಗ್ರಹಭೂಷಿತ ಪದ್ಮನಾಭದಾಸ (9.4.22)
104. ನಾದ ಸೂರ್ಯ (4.12.22)
105. ಮಧ್ವ, ಪುರಂದರ ಸಂಗೀತ ಭಕ್ತಿ ಸುಧಾಕರ (20.1.23)
106. ಸಂಗೀತ ಸನ್ಮಿತ್ರ ಸುಧಾರತ್ನ

ಅನುಬಂಧ – 3
ಪ್ರಶಸ್ತಿಗಳ ಪಟ್ಟಿ

1. ಆರ್ಯಭಟ ಪ್ರಶಸ್ತಿ
2. ಪರಿಮಳ ಪ್ರಶಸ್ತಿ
3. ಸಮನ್ವಯ ಪ್ರಶಸ್ತಿ
4. ಸಂತೃಪ್ತಿ ಪ್ರಶಸ್ತಿ
5. ಶ್ರೀಕೃಷ್ಣ ಪ್ರಶಸ್ತಿ
6. ಪುರಂದರ ಪ್ರಶಸ್ತಿ
7. ಶ್ರೀ ಕೃಷ್ಣಾನುಗ್ರಹ ಪ್ರಶಸ್ತಿ
8. ಸಮಾಜ ಸೇವಾ ರತ್ನ ಪ್ರಶಸ್ತಿ
9. ಸಂಗೀತ ಸೇವಾ ಪ್ರಶಸ್ತಿ
10. ಸಾಗರ ಪ್ರಶಸ್ತಿ
11. ರಾಜ್ಯೋತ್ಸವ ಪ್ರಶಸ್ತಿ
12. ಕರ್ನಾಟಕ ಪದ್ಮಶ್ರೀ ಪ್ರಶಸ್ತಿ
13. ಬೆಸ್ಟ್ ಮ್ಯೂಸೀಷಿಯನ್ ಪ್ರಶಸ್ತಿ
14. ಆಸ್ಥಾನ ವಿದ್ವಾನ್ (ಶ್ರೀ ಪುತ್ತಿಗೆ ಮಠ, ಉಡುಪಿ) ಪ್ರಶಸ್ತಿ
15. ಸ್ವರಮೂರ್ತಿ ವಿ.ಎನ್.ರಾವ್ ಮೆಮೋರಿಯಲ್ (ನ್ಯಾಷನಲ್ ಪ್ರಶಸ್ತಿ)
16. ನಾಡಪ್ರಭು ಪ್ರಶಸ್ತಿ – 2010
17. ಆಸ್ಥಾನ ವಿದ್ವಾನ್ – ISCON – 2011 (ಬೆಂಗಳೂರು)

18. ಸಂಗೀತ ನೃತ್ಯ ಅಕಾಡಮಿ – 2011
19. ಆಸ್ಥಾನ ವಿದ್ವಾನ್ – ಸೊಂದೆ ವಾದಿರಾಜ ಮಠ – 2011
20. ಸಂಗೀತ ಸುಧಾ – 2012
21. ಪ್ರಹ್ಲಾದ ಪ್ರಶಸ್ತಿ – 2013
22. 100 ವಾಯ್ಸಸ್ ಆಫ್ ಪುರಂದರ ಪ್ರಶಸ್ತಿ – 2013
23. ಅರಕಲಗೂಡು ತಾಲ್ಲೂಕ್, ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಪದವಿ – 2011 (**)
24. ಸಂಭ್ರಮ ಪುರಸ್ಕಾರ್ ಪ್ರಶಸ್ತಿ (23–1–2014)
25. ಪುರಂದರ ಪುರಸ್ಕಾರ (1–3–2014)
26. ಕೆಂಪೇಗೌಡ ಪ್ರಶಸ್ತಿ (BBMP) (*)
27. ಕಲಾ ಜ್ಯೋತಿ
28. ಆಳ್ವಾಸ್ ನುಡಿ ಸಿರಿ (29–11–15)
29. ಶ್ರೀಮತಿ ಬೆಳಗೆರೆ ಮಹಾಲಕ್ಷಮ್ಮ ಮೆಮೋರಿಯಲ್ ಅವಾರ್ಡ್ (9–2–16)
30. ಬೇಲೂರು ವೈಕುಂಠ ದಾಸ ಪ್ರಶಸ್ತಿ
31. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಾಹಿತ್ಯ ಪ್ರಶಸ್ತಿ
32. ನಿವೇದಿತ ಪ್ರಶಸ್ತಿ
33. ಗಾಯತ್ರೀ ಪುರಸ್ಕಾರ
34. ಪುಟ್ಟರಾಜು ಗವಾಯಿ ಪ್ರಶಸ್ತಿ – 2018
35. ಗೋಲ್ಡನ್ ಇಂಟರ್ನ್ಯಾಷನಲ್ ಪ್ರಶಸ್ತಿ ಫಾರ್ ಲೈಫ್ ಟೈಮ್ ಅಚೀವಮೆಂಟ್ ಇನ್ ಮ್ಯೂಸಿಕ್ – 2018
36. ನಾಟ್ಯಶ್ರೀ ಪ್ರಶಸ್ತಿ
37. ಚುಂಚಶ್ರೀ ಪ್ರಶಸ್ತಿ – 2018
38. ಅನನ್ಯ ಪುರಸ್ಕಾರ
39. ಕನ್ನಡ ಕಂಪು – 2017
40. ಅರಕಲಗೂಡ್ ದಾಸರ ಪ್ರಶಸ್ತಿ – 2018
41. ಪುರಂದರಾನುಗ್ರಹ ಪ್ರಶಸ್ತಿ (ಟಿಟಿಡಿ ದಾಸ ಸಾಹಿತ್ಯ ಪ್ರಾಜೆಕ್ಟ್) – 8–2–2016
42. ಕನ್ನಡ ಸಾಹಿತ್ಯ ಸಮ್ಮೇಳನ – ಧಾರವಾಡ
43. ಆನರರಿ ಡಾಕ್ಟರೇಟ್ – ಶ್ರೀವಿದ್ಯಾ ಇಂಟರ್ ನ್ಯಾಷನಲ್ ಯೂನಿವರ್ಸಿಟಿ ಫಾರ್ ವೇದಿಕ್ ಸೈನ್ಸ್
44. ಗಾನಶ್ರೀ – 2019
45. ಕರ್ನಾಟಕ ನವ ಚೇತನ
46. ನಾಟ್ಯ ರಂಜನಿ ಇಂಟರ್ ನ್ಯಾಷನಲ್ ಲೈಫ್ ಟೈಮ್ ಅಚೀವ್‌ಮೆಂಟ್

ಪ್ರಶಸ್ತಿ
47. ಹಾರ್ಮೋನಿಯಮ್ ಅರುಣಾಚಲಪ್ಪ ಪ್ರಶಸ್ತಿ
48. ವಿಪ್ರಶ್ರೀ
49. ಶ್ರೀ ಮಧ್ವ, ಪುರಂದರ ಪ್ರಶಸ್ತಿ (20.1.23)
50. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (23.2.23)
51. ಭಾರತಿ ತ್ಯಾಗರಾಜ ಸಮ್ಮಾನ್ (12.1.23)
52. ಸಂಗೀತ ಸನ್ಮಿತ್ರ ಸುಧಾರತ್ನ (5.2.23)

* BBMPಯಿಂದ ಚಿಕ್ಕಲಸಂದ್ರ ವಾರ್ಡ್‌ನಲ್ಲಿನ ಒಂದು ರಸ್ತೆಗೆ ನಾಮಕರಣಮಾಡುವುದರ ಮೂಲಕ ಪದ್ಮನಾಭರನ್ನು ಗೌರವಿಸಲಾಗಿದೆ
** ಅರಕಲಗೂಡು ತಾಲ್ಲೂಕ್ ಕನ್ನಡ ಸಾಹಿತ್ಯ ಸಮ್ಮೇಳನ – 2012ರ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ

ಪದ್ಮನಾದ – ಸ್ಪಂದನೆಗಳು

ಸಂಗೀತ ದೀವಟಿಗೆಯ ಸಂತ
....ಎಸ್ ಧೀರೇಂದ್ರ

ಗಾನಕಲಾಭೂಷಣ, ವಿದ್ವಾನ್ ಡಾ॥ ಆರ್ ಕೆ ಪದ್ಮನಾಭ ಮತ್ತು ಅವರ ನಾದೋಪಾಸನೆ ಇವೆರಡರ ಎಳ್ಳು ಬೆಲ್ಲದಂತಹ ಅಥವಾ ಹಾಲು ಜೇನಿನಂತಹ ಮಧುರ ಮಿಶ್ರಣವೇ ಈ "ಪದ್ಮನಾದ"!

ಲೇಖಕ ಬೆಂ ಶ್ರೀ ರವೀಂದ್ರ ನಿವೃತ್ತ ಬ್ಯಾಂಕರ್, ಕವಿ, ಸಾಹಿತಿ, ವಾಗ್ಮಿ, ಬ್ಯಾಂಕ್ ಕಾರ್ಮಿಕ ಮತ್ತು ಅಧಿಕಾರಿ ಸಂಘಟನೆಗಳ ನಾಯಕ, ಅತ್ಯುತ್ತಮ ಸಂಘಟಕ, ಕನ್ನಡಪರ ಹೋರಾಟಗಾರ, ಜೊತೆಗೆ ನನ್ನ ಒಳ್ಳೆಯ ಗೆಳೆಯ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ನಾನು, ರವೀಂದ್ರ ಅವರ ಸಂಪರ್ಕಕ್ಕೆ ಬಂದಿದ್ದು 1975ರಲ್ಲಿ, ಅವರು ಬೆಂಗಳೂರು ನಗರ ಶಾಖೆಯಲ್ಲಿದ್ದಾಗ, ಆದರೂ, ನಾನು ಮೊಟ್ಟಮೊದಲಿಗೆ ಅವರನ್ನು ಭೇಟಿ ಮಾಡಿದ್ದು ಅಂತರ ಕಾಲೇಜು ಚರ್ಚಾಸ್ಪರ್ಧೆಯಲ್ಲಿ, ಸ್ಪರ್ಧಿಗಳಾಗಿ!

ವಿಜಯಾ ಕಾಲೇಜಿನ ವಿದ್ಯಾರ್ಥಿ, ಬಿ ಎಸ್ಸಿ ಪದವೀಧರ. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉದ್ಯೋಗ, ಕನ್ನಡ ಸಂಘ, ಸಮನ್ವಯ ಸಮಿತಿಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ. ಸಿಬ್ಬಂದಿ ವರ್ಗದ ನಾಯಕತ್ವ, ಅಧಿಕಾರಿಯಾಗಿ ಪದೋನ್ನತಿ ಹೊಂದಿದ ಮೇಲೆ ಅಧಿಕಾರಿ ವರ್ಗದ ನಾಯಕತ್ವ! ಜನಾನುರಾಗಿ ನೇತಾರ!

ಪ್ರಾಚಾರ್ಯ ಎಚ್ಚೆಸ್ಕೆ ಅವರ ಪ್ರಿಯ ಶಿಷ್ಯ, ಬ್ಯಾಂಕಿಂಗ್ ಕಮ್ಮಟಗಳ ಸಂಘಟಕ, ಭಾಗಿ, ಹಲವಾರು ಯೋಜನೆಗಳನ್ನು ಸಮನ್ವಯ ಸಮಿತಿಯ ಮೂಲಕ ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಿದ ಕ್ರಿಯಾಶೀಲ ಕನಸುಗಾರ! ಬೆಂಬಲಕ್ಕೆ ಉತ್ಸಾಹಿ ಕಾರ್ಯಪಡೆ ಕಟ್ಟಿ, ಬೆನ್ನು ತಟ್ಟಿ ಹುರಿದುಂಬಿಸುವ, ಬೆಳೆಸುವ ವ್ಯಕ್ತಿ! "ಸಮನ್ವಯ ಸಮಿತಿ ಕನ್ನಡವೇ ಸತ್ಯ" ವಾಟ್ಸಪ್ ವೇದಿಕೆಯ ಪ್ರಧಾನ ಸಂಚಾಲಕ. ಕೊರೋನಾ ಸಮಯದಲ್ಲಿ "ನೋಡಿಯೋ ಸಾಹಿತ್ಯ ದಾಸೋಹ" ವೇದಿಕೆ ಹುಟ್ಟು ಹಾಕಿ ಕನ್ನಡ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರೆಸಿದ್ದು ಈಗ ಆ ವೇದಿಕೆ ಬೃಹತ್ತಾಗಿ ಬೆಳೆದು ನಿಂತಿದೆ!

ಇಂಥ ಕ್ರಿಯಾಶೀಲ ರವೀಂದ್ರ, ಈ ಪದ್ಮನಾದದಲ್ಲಿ ಸಹೋದ್ಯೋಗಿ, ಸನ್ಮಿತ್ರ ವಿದ್ವಾನ್ ಆರ್ ಕೆ ಪದ್ಮನಾಭರ ಜೀವನ, ಸಾಧನೆ, ನಾದೋಪಾಸನೆಗಳ ಪರಿಚಯಕ್ಕೆ ಸೀಮಿತವಾಗದೇ, ಸಂಗೀತ ಕ್ಷೇತ್ರದ ಮಹಾನ್ ಸಾಧಕರ ಬಗ್ಗೆಯೂ ಪ್ರಾಸಂಗಿಕವಾಗಿ, ಆದರೆ ಬಹಳ ಸುಂದರವಾಗಿ ಬರೆದಿದ್ದಾರೆ. ರವೀಂದ್ರರ ಬರವಣಿಗೆಯ ಶೈಲಿ, ಪದಲಾಲಿತ್ಯ, ಬಳಸಿದ ಭಾಷೆ, ಪ್ರಸ್ತಾಪಿಸಿರುವ ಅಪರೂಪದ ಪ್ರಸಂಗಗಳು ಓದುಗರ ಮನಸೆಳೆಯುತ್ತವೆ! ಅವರನ್ನು ಹಿಡಿದಿಟ್ಟುಕೊಳ್ಳುತ್ತವೆ. ಪದ್ಮನಾಭ ದಾಸರ ಸಂಗೀತ ಸಾಧನೆ, ನಾದೋಪಾಸನೆಗಳ ಜೊತೆಗೇ ಅವರ ಕಾರ್ಯಚಟುವಟಿಕೆಗಳನ್ನು, ಅವರ ಕನಸುಗಳನ್ನು, ಸಮಾಜಕ್ಕೆ, ಸಂಗೀತ ಕ್ಷೇತ್ರಕ್ಕೆ ಅವರು ನೀಡುತ್ತಿರುವ ಕೊಡುಗೆಗಳನ್ನೂ, ಗೋಷ್ಠಿ ಗಾಯನ, ಗಾನ ಚಕ್ರ, ಗಾನ ಜ್ಞಾನ ಯಜ್ಞ ಮುಂತಾದ ಅಪೂರ್ವ ಕಾರ್ಯಕ್ರಮಗಳನ್ನೂ ರವೀಂದ್ರ ಸೊಗಸಾಗಿ ಸುಲಲಿತವಾಗಿ ವರ್ಣಿಸಿದ್ದಾರೆ.

"ಸಂಗೀತ ದೀವಟಿಗೆಯ ಸಂತ", "ನಾದೋಪಾಸನೆಯಲ್ಲಿ ತೇಲಿ .... ತೇಲಿ ..... ಸಾಗಿದೆ ಹಾಯಿ ದೋಣಿ", "ಷಡ್ಜಾಂಬೆಯ ಮಗ್ಗುಲಗಳಲ್ಲಿ", "ಸತ್ಯ ಸುನಾದದ ಕದವನು ತೆರೆದು.....", "ಸಾವರಿಸು, ಓದುಗ. ನಿನಗೆ ಹಿತವಾಗುವಂತೆ ಕಥೆ ಹೇಳುವೆ", "ನಾದ ಸಮುದ್ರದ ಅಲೆಗಳು ಮೃದುವಾಗಿ ನಮ್ಮನ್ನು ಸ್ಪರ್ಶಿಸುತ್ತಿದ್ದವು", "ಭ್ರಮರದ ಝೇಂಕಾರ, ಮುನಿಗಳ ಓಂಕಾರ", "ದಾರಿ ದೀರ್ಘವಿತ್ತು. ಗುರಿ ದೂರವಿತ್ತು. ಆದರೆ ಹೆಳವನ ಹೆಗಲ ಮೇಲೆ ಕುರುಡ ಕೂತಿರಲಿಲ್ಲ", "ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು", "ಪಾಠ ಹೇಳುವುದು ಒಂದು ಮಧುರ ಶೈಕ್ಷಣಿಕ ಅನುಭವ. ಕಲಿಸಿದ್ದಕ್ಕಿಂತ ಕಲಿಯುವುದೇ ಹೆಚ್ಚು".
"ನಾದತನುಮನಿಶಂ ಶಂಕರಂ", "ಈ ಹಾದಿ ಅನಾದಿ, ಹೃದಯ ಸಂವಾದಿ, ಸುನಾದಿ, ಸರಿಗಮ ಸಂವಾದಿ, ವಿಜ್ಞಾನ ಬೋಧಿ, ಸಂಜ್ಞಾನ ಸಂಬೋಧಿ", ಮುಂತಾದ ಸುಂದರ, ಸೊಗಸಿನಿಂದ ಕೂಡಿದ ಅರ್ಥವತ್ತಾದ ನುಡಿಗಟ್ಟುಗಳು ಓದುಗರ ಮನ ಸೆಳೆದು, ಕುತೂಹಲ ಹುಟ್ಟಿಸುತ್ತವೆ.

ಒಂದಷ್ಟು ಮಾಹಿತಿಯನ್ನು ಪದ್ಮನಾಭರ "ನೆನಪಿನಂಗಳದಿಂದ" ಪುಸ್ತಕದಿಂದ ಉದ್ಧರಿಸಿದ್ದರೂ, ಪದ್ಮನಾಭರೊಡನೆ ಆತ್ಮೀಯ ಮಾತಿಗಿಳಿದು, ಅದರಿಂದ ಹೆಕ್ಕಿ ತೆಗೆದು ಅಪೂರ್ವ ಸಂಗತಿಗಳನ್ನು ತಮ್ಮ ಲೇಖನಿಯ ಮೂಲಕ ನುಡಿರೂಪಕ್ಕಿಳಿಸುವಲ್ಲಿ ರವೀಂದ್ರರ ಶ್ರಮ ಅನನ್ಯ, ಅಮೋಘ. ಓದುಗರಿಗೆ ಒಂದು ರಸದೌತಣವೇ ಸೈ!

ಪದ್ಮನಾದ ಲೇಖನ ಸರಣಿಯ ಈ ಪುಸ್ತಕ ತನ್ನ ಅನನ್ಯತೆಯಿಂದಾಗಿ ವಿಶಿಷ್ಟವಾಗಿದ್ದು, "ಸನ್ಮಿತ್ರ ಸಂಗೀತ ಸುಧಾರತ್ನ" ಆರ್ ಕೆ ಪದ್ಮನಾಭರ ಪರಿಚಯಕ್ಕೆ, ರುದ್ರಪಟ್ಟಣದ ಗರಿಮೆಗೆ, ಸಂಗೀತ ಸಾಹಿತ್ಯ ಸಾರಸ್ವತಕ್ಕೆ ಅಮೂಲ್ಯ ಕೊಡುಗೆಯಾಗಿದೆ. ಪದ್ಮನಾಭದಾಸರಿಗೆ ಶಾರದಾಂಬೆಯ ಮತ್ತು ವಾದಿರಾಜ ಸ್ವಾಮಿಗಳ ಅನುಗ್ರಹವಾದಂತೆಯೇ, ಲೇಖಕ ಬೆಂ ಶ್ರೀ ರವೀಂದ್ರ ಅವರಿಗೂ ಪದ್ಮನಾಭರ ಮುಖಾಂತರ ಅವರ ಕೃಪಾಕಟಾಕ್ಷ ದೊರಕಿರುವುದರಿಂದಲೇ ಇಂತಹ ಸೊಗಸಾದ ಅಮೂಲ್ಯ ಕೃತಿ ರಚನೆಯಾಗಿ, ಈಗ ಪುಸ್ತಕ ರೂಪದಲ್ಲಿ ಬಂದಿರುವುದು! ಪದ್ಮನಾಭ ದಾಸರ ಬಹುಮುಖ ಪ್ರತಿಭೆ, ಬಹುಶ್ರುತತ್ವ "ಪದ್ಮನಾದ"ದಲ್ಲಿ ಬಹಳ ಸುಂದರವಾಗಿ, ಸೊಗಸಾಗಿ ಅನಾವರಣವಾಗಿದೆ!

ನಾದೋಪಾಸಕ ಪದ್ಮನಾಭರು ಮತ್ತು ಬೆಂ ಶ್ರೀ ರವೀಂದ್ರ ಅವರ ಅಸಂಖ್ಯಾತ ಗೆಳೆಯರಲ್ಲಿ ನಾನೂ ಒಬ್ಬ ಎಂದು ಹೇಳಲು ಹೆಮ್ಮೆಯಾಗುತ್ತಿದೆ. ಇಬ್ಬರಿಗೂ ಹೃತ್ಪೂರ್ವಕ ಅಭಿನಂದನೆಗಳು.

ಆರ್ ಕೆ ಪಿ ಎಂಬ ಗಾನ ಗಾರುಡಿಗ
....ಜಯಂತಿ ಮನೋಹರ್

ಮೊದಲಿಗೆ, 28 ಭಾಗಗಳಲ್ಲಿ ಸುಲಲಿತವಾಗಿ ಹರಿದ ಆರ್ ಕೆ ಪಿ ಎಂಬ ಗಾನಗಾರುಡಿಗನ ಪರಿಚಯ ಮಾಡಿರುವ ರವೀಂದ್ರರಿಗೆ ವಂದನೆಗಳು. ಇದು ಕೇವಲ ಪರಿಚಯವಲ್ಲ. ಪದ್ಮನಾಭರ ವಿಸ್ತಾರವಾದ ಸಾಧನೆ ಹಾಗೂ ಅವರು ಪಡೆದ ಸಿದ್ಧಿಯನ್ನು ಪ್ರೀತಿಯಿಂದ ಆಪ್ಯಾಯಮಾನವಾಗಿ ತೆರೆದಿಟ್ಟಿರುವ ಪರಿ ಅನನ್ಯ. ರವೀಂದ್ರರ ಬರಹಗಳನ್ನು ನೋಡುತ್ತಾ ಬಂದಿರುವ ನನಗೆ ಇದು ಅವರ ಅತ್ಯಂತ ಮಹತ್ವದ ಕೃತಿ ಎಂದು ಹರ್ಷ ತರುತ್ತಿದೆ.

ಮೂರುವರೆ ದಶಕಗಳಿಂದಲೂ ಪದ್ಮನಾಭರನ್ನು ಬಲ್ಲೆ ಎಂದುಕೊಂಡಿದ್ದ ನನಗೆ ತಿಳಿಯದ ಅನೇಕ ಸಂಗತಿಗಳು ಇಲ್ಲಿ ರವೀಂದ್ರರ ಮಾತಿನಲ್ಲಿ ಹಾಗೂ ಪದ್ಮನಾಭರ ಮಾತಿನಲ್ಲಿ ಸಮರಸವಾಗಿ ಬರೆತು ಅವರ ಗಾನ ಜೀವನದ ಪಥವನ್ನು ನಮ್ಮ ಮುಂದೆ ತೆರೆದಿಟ್ಟಿದೆ.

ಬ್ಯಾಂಕಿನಲ್ಲಿ ಸಹೋದ್ಯೋಗಿಯಾಗಿ ಮೊದಲು ಒಬ್ಬ ಗಾಯಕರಾಗಿ ಪರಿಚಯವಿದ್ದ ಆರ್ ಕೆ ಪಿಯನ್ನು ರಂಗದ ಮೇಲೆ ಕಂಡಾಗ, ಅವರೇ ರಚಿಸಿದ ಗೀತೆಗಳನ್ನು ಕೇಳಿದಾಗ ಬೆರಗು ಮೂಡಿಸಿತು. ಅಂದು ಎಲ್ಲೆಡೆ ಹರಡಿದ್ದ ಆಡಿಯೋ ಕ್ಯಾಸೆಟ್ಟುಗಳಲ್ಲಿ ಅವರ ಗಾಯನವನ್ನು ಕೇಳಿ ಆನಂದಿಸಿದ್ದೇನೆ.

"ಗೋಷ್ಠಿ ಗಾಯನ" ಎಂಬ ಅಪರೂಪದ ಪರಿಕಲ್ಪನೆಯನ್ನು ಅವರು ಸಾಕಾರಗೊಳಿಸಿದ್ದು ಒಂದು ಅದ್ಭುತ. ಸಂಗೀತದಲ್ಲಿ ಪರಿಣತರಾದ ಹಾಗೂ ಸಾಮಾನ್ಯ ಜ್ಞಾನ ಹೊಂದಿದ ಅನೇಕರು ಕೂಡಿ ಹಾಡುವ ಈ "ಗೋಷ್ಠಿ ಗಾಯನ" ಬಹುವಾಗಿ ಮೆಚ್ಚುಗೆ ಪಡೆಯಿತು.

ಗಾನ ಸಮಾರಾಧನೆಯೊಂದಿಗೆ ಶಿಷ್ಯರೊಂದಿಗೆ ಅವರು ಮಾಡಿರುವ ಪ್ರವಾಸಗಳು ಮತ್ತೊಂದು ಮಹತ್ಕಾರ್ಯ. ನಾವು ಮಾಡಿದ್ದ ಕಾಂಬೋಡಿಯಾ ಪ್ರವಾಸವನ್ನು ತಿಳಿದು ಅಲ್ಲಿಗೆ ಶಿಷ್ಯರೊಂದಿಗೆ ಹೋಗುವ ಅವರ ಯೋಜನೆ ಕೊರೋನಾದ ಕರಿನೆರಳಿನಿಂದ ಸಾಧ್ಯವಾಗಿಲ್ಲ.

ಸರ್ಕಾರದ ವಾರ್ತಾ ಇಲಾಖೆಗಾಗಿ ನಾವು ನಿರ್ಮಿಸಿದ ಆರ್.ಕೆ. ಸೂರ್ಯನಾರಾಯಣರ ಸಾಕ್ಷ್ಯಚಿತ್ರದಲ್ಲಿ ಪದ್ಮನಾಭರ ಮಾತುಗಳನ್ನು ಚಿತ್ರಿಸಲು 2011 ರಲ್ಲಿ ನಾನು ಮತ್ತು ಮನೋಹರ್ ಅವರ ಮನೆಗೆ ಹೋಗಿದ್ದು ಒಂದು ಅಪೂರ್ವ ಅನುಭವ. ಸುತ್ತಲೂ ವ್ಯವಸ್ಥಿತವಾಗಿ ಜೋಡಿಸಿದ್ದ ನೂರಾರು ಪ್ರಶಸ್ತಿಗಳ ಮಧ್ಯೆ ಅವರ ಅಪಾರವಾದ ವಿದ್ವತ್ತಿನಿಂದ ಕೂಡಿದ ಮಾತು ಮತ್ತು ಕಂಚಿನ ಕಂಠದಿಂದ ಹೊರಹೊಮ್ಮಿದ "ಎಂದರೋ ಮಹಾನುಭಾವುಲು"ವಿನ ನಾದ ಲಹರಿ ಇಂದೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ.

ಅಂತರಂಗದಲ್ಲಿ ಹರಿಯುತ್ತಿರುವ ಅನುಭಾವೀ ತರಂಗದೊಂದಿಗೆ ಪದ್ಮನಾಭರ ಕಂಠದಿಂದ ಹೊರಹೊಮ್ಮುವ ಸೌಂದರ್ಯಲಹರಿಯ ಗಾಯನವಂತೂ ಹೃದಯಕ್ಕೆ ನೇರವಾಗಿ ತಟ್ಟುತ್ತಾ ಸಂಗೀತದ ಪರಮ ಧ್ಯೇಯವನ್ನು ಸಾಧಿಸುತ್ತದೆ.

ಉಪನಿಷತ್ತಿನಲ್ಲಿ ಹೇಳುವ "ನಾಯಮಾತ್ಮಾ ಬಲಹೀನೇನ ಲಭ್ಯಃ" ಎನ್ನುವುದು ಸಂಗೀತ ಸಾಧನೆಗೂ ಅನ್ವಯಿಸುತ್ತದೆ. ದೈವದತ್ತವಾದ ಕಂಚಿನ ಕಂಠ ಹೊಂದಿರುವ ನಮ್ಮ ಆರ್ ಕೆ ಪಿ ಸಾಧಿಸಿರುವ ಸಿದ್ಧಿಗೆ ಕಾರಣವಾಗಿರುವುದು ಅವರ ಅಚಲ ಸಂಕಲ್ಪ ಮತ್ತು ಅವಿರತ ಶ್ರಮ. ಇಂತಹ ಮಹಾ ಸಾಧಕರು ನಮ್ಮ ಸ್ನೇಹಿತರು ಎನ್ನುವುದು ಹೆಮ್ಮೆಯ ವಿಚಾರ. ಅವರ ದೀರ್ಘ ಸಾಧನಾ ಪಥವನ್ನು ಸಮರ್ಪಕವಾಗಿ ತೆರೆದಿಟ್ಟಿರುವ ಬಿ.ಎಸ್.ರವೀಂದ್ರರಿಗೆ ನಮ್ಮ ಮೆಚ್ಚುಗೆ ಸಲ್ಲುತ್ತದೆ.

ಪ್ರತಿಪರ್ವ ರಸೋದಯಃ
....ಆರ್ ಎಸ್ ಗುರುಪ್ರಸಾದ್

ನಮಗೆ, RKP ಅವರು ನಮ್ಮ ನಾಡಿನ ಒಬ್ಬ ಬಹುಶ್ರುತ ಸಂಗೀತಜ್ಞರಾಗಷ್ಟೇ ಪರಿಚಯವಿತ್ತು. ಅದಕ್ಕೂ ಮೀರಿ ಅವರ ಬಹುಮುಖ ಪ್ರತಿಭೆ ಹಾಗೂ ಅವರ ವೈವಿಧ್ಯಮಯ ಸಾರಸ್ವತ ಕೈಂಕರ್ಯಗಳ ಬಗೆಗಿನ ಚಿತ್ರಣ ಈ ಕೃತಿಯಲ್ಲಿ ಬಹಳ ಸೊಗಸಾಗಿ ಮೂಡಿಬಂದಿದೆ. ಅಲ್ಲದೇ ಅವರ ಯಶೋಗಾಥೆಯ ಹಿಂದಿರುವ ನಿಷ್ಠೆ – ಸಾಧನೆಯ ಪರಿಚಯವು, ಇಂದಿನ ಯುವ ಪ್ರತಿಭೆಗಳಿಗೆ ಪ್ರೇರಣೆಯಾಗುವಂತೆಯೂ ಯುಕ್ತವಾಗಿ ಚಿತ್ರಿತವಾಗಿದೆ. ಇದಲ್ಲದೇ ಕರ್ನಾಟಕ ಸಂಗೀತ ಪರಂಪರೆಯಲ್ಲಿನ ಮಹಾಮಹಿಮರ ಸಂಕ್ಷಿಪ್ತ ವ್ಯಕ್ತಿ ಚಿತ್ರಣಗಳೂ – ತಥಾ ಸಂಬಂಧಿತ ಕೆಲವು ಅಲೌಕಿಕ ಸಂಗತಿಗಳ ಕಥೆಗಳೂ ರೋಚಕವಾಗಿ ಮೂಡಿಬಂದಿದೆ.

RKP ಅವರು ಸಂಗೀತಜ್ಞರಾಗಷ್ಟೇ ಅಲ್ಲದೇ, 500ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ, ಹಾಗೆಯೇ ಸುಮಾರು 38 ಹೊಸ ರಾಗಗಳನ್ನೂ ಸೃಷ್ಟಿಸಿದ್ದಾರೆ ಎಂಬುದು ತಿಳಿದು, ಅಭಿಮಾನ ಇಮ್ಮಡಿಯಾಯಿತು. "ನಾನೃಷಿ ಕುರುತೇ ಕಾವ್ಯಂ" ಎಂಬ ಮಾತಿನಂತೆ RKP ಅವರು ಋಷಿ ಸದೃಶರಾಗಿ, ನಮ್ಮ SBI ಬಳಗದವರು ಎಂಬುದೇ ನಮಗೆಲ್ಲಾ ಹೆಮ್ಮೆ.

ಶ್ರೀಯುತ ರವೀಂದ್ರರ ಒಂದೊಂದೂ ಸಂಚಿಕೆಗಳೂ, "ಪ್ರತಿಪರ್ವ ರಸೋದಯಃ" ಎಂಬಂತೆ ರಸಭರಿತ. ಅಲ್ಲದೇ ಶ್ರೀಯುತ ರವೀಂದ್ರ ಅವರನ್ನು ಹೆಚ್ಚಾಗಿ ಕವಿಯಾಗಷ್ಟೇ ಕಂಡವರಿಗೆ, ಈ ಕೃತಿಯಿಂದಾಗಿ ಅವರ ಕಥಾ ನಿರೂಪಣಾ ಶೈಲಿ– ರಸಜ್ಞತೆ – ಕರ್ತೃತ್ವ ಶಕ್ತಿಯ ಅನುಭಾವ ನಮಗೆ ಲಭಿಸುತ್ತದೆ. ಮತ್ತೇ ಪ್ರತಿಯೊಂದು ಸಂಚಿಕೆಗಳಿಗೆ ಹೊರಬಂದ ಅಷ್ಟೇ ರಸಪೂರಿತ ಸಾತ್ವಿಕ ಪ್ರತಿಕ್ರಿಯೆಗಳು ಮನಸ್ಸಿಗೆ ಮುದವನ್ನು ನೀಡಿತು. ಈ ಒಂದು ಮಹತ್ಕಾರ್ಯದಲ್ಲಿ ಭಾಗಿಯಾಗುವುದಕ್ಕೆ ಅವಕಾಶ ಮಾಡಿಕೊಟ್ಟ ಸಂಚಾಲನಾ ಸಮಿತಿಯವರಿಗೆ ಧನ್ಯವಾದಗಳು.

ಪ್ರಪಂಚದ ಭಾಷೆ
....ಜಿ ಎಂ ದಕ್ಷಿಣಾಮೂರ್ತಿ

ಸಪ್ತಸ್ವರಗಳು ಸಪ್ತಸಾಗರಗಳಂತೆ ಅಗಾಧ, ವಿಶಾಲವಾದ ಎಲ್ಲ ಖಂಡಗಳನ್ನು ವ್ಯಾಪಿಸಿರುವ ಶಬ್ದವೊಂದೇ ನಾದವೊಂದೇ ಭಾಷೆ. ಅದೇ ಸಂಗೀತ, ಪ್ರಪಂಚದ ಭಾಷೆ.

ಲೇಖನಿಯಲ್ಲಿ ನಾದ
....ಎಂ ಆರ್ ಶ್ರೀರಂಗರಾಜನ್

ಬರೀ ಏಳು ಸ್ವರಗಳಲ್ಲಿ ಅಡಗಿರುವ ಸಂಗೀತವು ಮಹಾ ಸಾಗರದಂತೆ ಆಳ, ವಿಸ್ಮಯ! ಸಾಗರದ ಆ ವಿಶಾಲತೆ, ನೀಲಿ ಬಣ್ಣ ಮನಕ್ಕೆ ಹೇಗೆ ಶಾಂತಿ ನೀಡುತ್ತದೆಯೋ ಹಾಗೆ ಸಂಗೀತದ ರಾಗ ಮಾಧುರ್ಯ ಮನಸ್ಸಿಗೆ ನೆಮ್ಮದಿ ಕೊಡುತ್ತದೆ. ಸಂಗೀತ ಅಲೌಕಿಕವಾದದ್ದು. ಎಲ್ಲಾ ಜಾತಿ, ವರ್ಣಗಳನ್ನು ಮೀರಿರುವುದು. ಒಂದೊಂದು ರಾಗಕ್ಕೆ ಅದರದೇ ಆದ ಶಕ್ತಿಯಿದೆ, ಭಾವವಿದೆ ಮತ್ತು ಅದರದೇ ಆದ ರಸವಿದೆ.

ಆಭರಣ ಮಾಡುವವನಿಗೆ ರತ್ನವನ್ನು ಬಂಗಾರದ ನಡುವೆಯಿಟ್ಟು ಬಂಗಾರವನ್ನು ಎಷ್ಟು ಕುಟ್ಟಬೇಕು, ಬೆಂಕಿಯಲ್ಲಿ ಎಷ್ಟು ಕಾಯಿಸಬೇಕು ಎನ್ನುವುದು ಗೊತ್ತಿರುವಂತೆ, ಹೂಗಳ ತೋಮಾಲೆ ಕಟ್ಟುವವನಿಗೆ ಸೇವಂತಿಗೆ ಎಷ್ಟುಬೇಕು, ರೋಜಾ ಎಷ್ಟು ಬೇಕು, ಮರುಗ-ದವನ ಎಷ್ಟು ಬೇಕು, ಸುಗಂಧರಾಜ ಎಷ್ಟು ಬೇಕು ಹೇಗೆ ಕಟ್ಟಬೇಕು ಎಂದು ಅರಿತಿರುವಂತೆ, ಬೆಂ.ಶ್ರೀ ರವೀಂದ್ರರವರು ಅಧಿಕಾರಿಗಳ ಸಂಘದ ಪದಾಧಿಕಾರಿಗಳಾಗಿದ್ದವರು. ಸದಸ್ಯರ ಜೊತೆ, ಮ್ಯಾನೇಜ್ಮೆಂಟ್ ಜೊತೆ ಮಾತನಾಡಿದವರು, ಸಂಧಾನವನ್ನು ನಡೆಸಿದವರು. ಎದುರಿಗಿರುವವರ ನಾಡಿಬಡಿತ ಗೋಚರಿಸುವ ಕಲೆ ಅವರಿಗೆ ಸಿದ್ಧಿಸಿದೆ. ಅವರು ನಾಯಕರೂ ಹೌದು, ಲೇಖಕರೂ ಹೌದು, ಕವಿಗಳೂ ಹೌದು. ಎಷ್ಟು ಬೇಕು, ಹೇಗೆ ಹೇಳಬೇಕು, ಎಲ್ಲಿ ನಿಲ್ಲಿಸಬೇಕು, ಎಲ್ಲಿ ಉತ್ಪ್ರೇಕ್ಷೆಯಿರಬೇಕು ಎಂದು ಬಲ್ಲ ಬಲ್ಲಿದರು!

ನವರತ್ನ ಖಚಿತ ಬಂಗಾರದ ಹಾರ ಸಿದ್ಧವಿದೆ, ಪನ್ನೀರು ಗುಲಾಬಿ, ತುಳಸಿ, ಮರುಗದ ತೋಮಾಲೆ ತಯಾರಿದೆ. ಕೊಳ್ಳಿರಿ, ಧರಿಸಿ ಆನಂದಿಸಿರಿ. ಬೆಂ.ಶ್ರೀ. ರವೀಂದ್ರರವರ ಈ ವಿಶಿಷ್ಠ ಪುಸ್ತಕದಲ್ಲಿ ಡಾ॥ ಆರ್.ಕೆ. ಪದ್ಮನಾಭರ ಜೀವನ, ಸಂಗೀತ ಪಯಣ, ಅವರ ಸಂಗೀತ ಯಾನದಲ್ಲಿ ನಡೆದ ಅದ್ಭುತ ಘಟನೆಗಳು, ಸಂಗೀತ ಲೋಕದ ಮಾಣಿಕ್ಯಗಳು, ಕರ್ನಾಟಕ ಸಂಗೀತ ಪಿತಾಮಹರು, ದಾಸರುಗಳು, ವಿವಿಧ ಕೀರ್ತನೆಗಳು ಹೀಗೆ ಅನೇಕ ವಿಷಯಗಳನ್ನು ನೀಡಿದ್ದಾರೆ. ಸಂಗೀತವನ್ನು, ಸಂಗೀತ ಕಲಾವಿದರನ್ನು, ಸಂಗೀತ ದಿಗ್ಗಜರನ್ನು, ಸಂಗೀತವರೇಣ್ಯರನ್ನು ಶ್ರೀ. ಆರ್.ಕೆ.ಪಿಯವರ ವ್ಯಕ್ತಿಚಿತ್ರಣದ ಮೂಲಕ ನಮಗೆ ಪರಿಚಯ ಮಾಡಿಕೊಟ್ಟಿದ್ದಾರೆ ಶ್ರೀ. ಬೆಂ ಶ್ರೀ. ರವೀಂದ್ರರವರು. ಲೇಖನಗಳನ್ನು ಓದುತ್ತಾ ಹೋದರೆ, ಸಾಲಾರ್ಜಂಗ್ ಮ್ಯೂಸಿಯಂನ ಒಂದೊಂದೇ ಕೋಣೆಯೊಳಗೆ ನಡೆದರೆ, ವಿಸ್ಮಯಗಳು ತೆರೆದುಕೊಳ್ಳುತ್ತಾ, ನಾವು ಅವಾಕ್ಕಾಗಿ ನೋಡುತ್ತಾ, ಮಂತ್ರಮುಗ್ಧರಾಗಿ ಮಾತಾಡಲು ತೋರದೆ, ನಿಂತಂತೆ ಭಾಸವಾಗುತ್ತದೆ.

ಬರೀ ವ್ಯಕ್ತಿ ಪರಿಚಯವಾಗಿದ್ದರೆ ಅದು ಪಠ್ಯ ಪುಸ್ತಕದ ಒಂದು ಪಾಠವಾಗುತ್ತಿತ್ತೇನೋ. ರವೀಂದ್ರರು ಸಂಭಾಷಣೆ, ಸಂದರ್ಶನದ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿರುವುದು ಅವರ ನೈಪುಣ್ಯವನ್ನು ತೋರುತ್ತದೆ. ಲೇಖಕನ ಕೌಶಲ್ಯವನ್ನು ನಿರೂಪಿಸುತ್ತದೆ. ಓದುಗರು ನಿಜಕ್ಕೂ ಭಾಗ್ಯವಂತರು! ಹಸಿದ ಮನಸ್ಸಿಗೆ ಮೃಷ್ಠಾನ ಭೋಜನ ಸಿದ್ಧವಿದೆ. ಸ್ವೀಕರಿಸಿ, ಆನಂದಿಸಿ.

ಭೂರಿಭೋಜನ
....ರವಿ ಕುಸಬಿ

ಒಂದು ಅತ್ಯದ್ಭುತ ಕೃತಿಯನ್ನ ಸಾರಸ್ವತ ಲೋಕಕ್ಕೆ ನೀಡಿದ ಧನ್ಯತೆ ನಿಮ್ಮದು. ಅದಿನ್ನೂ ಉದಯವಾಗುತ್ತಿರುವಾಗಲೇ ಆಸ್ವಾದಿಸಿ ಸವಿದು ಸುಖಿಸಿದ ಭಾಗ್ಯ ನಮ್ಮದು. ಆರ್ಕೆಪಿ ಎಂಬ ಸಂಗೀತ ನದಿಯ ಮಾಧುರ್ಯವನ್ನ ನಮ್ಮೆಲ್ಲರ ಎದೆಯಲ್ಲಿ ಎರಕ ಹೊಯ್ದಿದ್ದೀರಿ. ನಿಮ್ಮ ಪ್ರಯತ್ನದಲ್ಲಿ ತಾಯಿ ಸರಸ್ವತಿಯ ಕೃಪೆ ನಿಚ್ಚಳವಾಗಿ ಕಾಣಸಿಗುತ್ತೆ. ಕಥೆಯನ್ನ ಬರೆದ ರೀತಿ, ಅದು ಮೂಡಿ ಬಂದ ಲಯ, ತಾನ, ಒಂದಕ್ಕಿಂತ ಒಂದು ಸೊಗಸಾಗಿದೆ. ಆರ್ಕೆಪಿ ಸನ್ಮಾನಕ್ಕೆ ಸೇರಿದ ಎಲ್ಲರಿಗೂ ಕಾರ್ಯಕ್ರಮದ ಮೊದಲೇ ಅಕ್ಷರದ ಭೂರಿ ಭೋಜನ ನೀಡಿದಿರಿ. ಬರೆದು ನೀವು ಪುನೀತರಾದಿರಿ. ಓದಿ ನಾವು ಧನ್ಯರಾದವು.

ನೈಪುಣ್ಯ
....ಎಚ್ ಬಿ ವೈದ್ಯ

ಕಥಾ ನಾಯಕರೂ ಮತ್ತು ಕಥನಕಾರರ ನೈಪುಣ್ಯವನ್ನು ಎಷ್ಟು ಬಣ್ಣಿಸಿದರು ಕಡಿಮೆ.

ಅಮೋಘ
....ಕೆ ವೆಂಕಟಸುಬ್ಬಯ್ಯ

ಶ್ರೀ ಪದ್ಮನಾಭ ಅವರ ದೈವಭಕ್ತಿ, ಅನನ್ಯ ಗುರುಭಕ್ತಿ, ಹಾಗೂ ತಮ್ಮನ್ನ ತಾವೇ ಸಂಗೀತ ಸರಸ್ವತಿಯ ಸೇವೆಗೆ ವಿನೀತರಾಗಿ ಸಮರ್ಪಿಸಿಕೊಂಡಿರುವ ರೀತಿ ಬಹಳ ಸುಂದರವಾಗಿ ನಿರೂಪಿಸಿರುವ ರವೀಂದ್ರರಿಗೆ ಧನ್ಯವಾದಗಳು. ಅತ್ಯಂತ ವಿಶಿಷ್ಟವಾದ ಸಂಗೀತ ವಿದ್ವಾನ್ ಶ್ರೀ ಪದ್ಮನಾಭರ ಜೀವನ ಚರಿತ್ರೆ ಅಮೋಘವಾಗಿದೆ. ಅವರ ಬಗ್ಗೆ ನಮ್ಮ ಗೌರವ ಹೆಚ್ಚಿಸುತ್ತದೆ.

ಸತ್ಯನಿಷ್ಠ ಪ್ರಸ್ತುತಿ
....ವಿಎಸ್ ಇಜೇರಿ

ಈ ಮಾಲಿಕೆ ಅದ್ಭುತವಾಗಿ ಮೂಡಿ ಬಂತು. ಜೀವಮಾನದ ಸಾಧನೆ. ಅದನ್ನು ಹದವಾಗಿ ಅರಿತು ವಿವರವಾಗಿ ಹಗುರಾದ ಭಾಷೆಯಲ್ಲಿ, ಸಂಗೀತದ ಶಾಸ್ತ್ರ ಅಭ್ಯಾಸಿಯಂತೆ ಸತ್ಯನಿಷ್ಟ ಪ್ರಸ್ತುತಿ.

ಜನ್ಮದ ಸಾರ್ಥಕತೆ
....ರಂಗೋಪಂತ್ ನರಸಿಂಗರಾವ್

ಸಂಗೀತ ಸರಸ್ವತಿ ಒಲಿಯಬೇಕೆಂದರೆ ಮೂರು ಜನ್ಮಗಳ ಪುಣ್ಯವಿರಬೇಕೆಂದು ಬಲ್ಲವರು ಹೇಳುವರು. ನಿಜವಿರಬೇಕು. ಮೂರು ಜನ್ಮಕ್ಕಾಗುವಷ್ಟು ಸಾಧನೆ ಶ್ರೀ ಪದ್ಮನಾಭರು ಮಾಡಿದ್ದಾರೆ. ಸಂಗೀತವು ಜೀವನವನ್ನೇ ಬದಲಾಯಿಸುವುದು. ಅವರ ಸಾಧನೆಗಳು ಅವರ ಜನ್ಮದ ಸಾರ್ಥಕತೆಗೆ ಸಾಕ್ಷಿ. ಶ್ರೀ ರವೀಂದ್ರ ಅವರು ಶ್ರೀ ಪದ್ಮನಾಭರ ಚರಿತ್ರೆಯನ್ನು ಕಣ್ಣ ಮುಂದೆ ನಡೆಯುವಂತೆ ಚಿತ್ರಿಸಿದ್ದಾರೆ.

ಅಚ್ಚುಕಟ್ಟು
....ಡಿ ಮುಕುಂದ

ಪದ್ಮನಾದ ಸರಣಿಯಲ್ಲಿ ಶ್ರೀಯುತ ಪದ್ಮನಾಭರ ಬಹುಮುಖ ಪ್ರತಿಭೆ, ಕಾರ್ಯಗಳು, ಮುಂತಾದವುಗಳನ್ನು ಶ್ರೀ ರವೀಂದ್ರರು ಅಚ್ಚುಕಟ್ಟಾಗಿ ನಮ್ಮ ಮುಂದೆ ಜೋಡಿಸಿ ಇಟ್ಟಿದ್ದಾರೆ. ಸರ್ವಶ್ರೀ ಪದ್ಮನಾಭರಿಗೆ, ರವೀಂದ್ರರಿಗೆ, ಹಾಗೂ ಲೇಖನಗಳನ್ನು ಚನ್ನಾಗಿ ವಿಶ್ಲೇಷಿಸಿ ಅರ್ಥಗರ್ಭಿತವಾಗಿ ನಮ್ಮ ಮುಂದೆ ಪ್ರಸ್ತುತಪಡಿಸಿದ ಶ್ರೀ ಧೀರೇಂದ್ರ, ಮುಂತಾದ ಮಹನೀಯರುಗಳಿಗೂ ನನ್ನ ಅನಂತಾನಂತ ವಂದನೆಗಳು.

ರಸಸ್ವಾದನೆಯ ಮುದ
....ಎಸ್ ಮಂಜುನಾಥ

ಇಷ್ಟು ದಿನ ನಮ್ಮನ್ನು ಸಂಗೀತಸಾಗರದಲ್ಲಿ ತೇಲಿಸಿ ರಸಾಸ್ವಾದನೆಯ ಮುದ ದಯಪಾಲಿಸಿದ ರವೀಂದ್ರ ಅವರಿಗೆ ಅನಂತಾನಂತ ವಂದನೆಗಳು.

38 ದಿನಗಳಲ್ಲಿ 28 ಅಧ್ಯಾಯಗಳು
....ಘನಶ್ಯಾಮ ನೇತ್ರೇಕರ್

ರವೀಂದ್ರರು 38 ದಿನಗಳಲ್ಲಿ 28 ಅಧ್ಯಾಯಗಳನ್ನು ಬರೆದು ತಮ್ಮ ಕನ್ನಡದ ಅಭಿಮಾನವನ್ನು ತೋರಿಸಿ ಪದ್ಮನಾದ ಪುಸ್ತಕದ ಮೂಲಕ ನಮ್ಮೆಲ್ಲರ ಮನಕದ್ದು ಗೆದ್ದಿದ್ದಾರೆ. 328 ಭಾರತೀಯ ಸ್ಟೇಟ್ ಬ್ಯಾಂಕಿನ ಗೆಳೆಯರಿಗೆ ಅವರ ಕನ್ನಡ ಅಭಿಮಾನವನ್ನೂ ಬೀರಿ, ಪದ್ಮನಾಭರಲ್ಲದೆ ಧೀರೇಂದ್ರರಂತೆ ಇನ್ನೂ ಅನೇಕ ಕನ್ನಡ ಪ್ರತಿಭೆಯ ಗೆಳೆಯರನ್ನು ನಮ್ಮೆಲ್ಲರಿಗೂ ಪರಿಚಯಿಸಿದ್ದಾರೆ.

ಇದುವರೆಗೆ ರವೀಂದ್ರರು ಕನ್ನಡವಾಗ್ಮಿ ಮಾತ್ರವೇ ಎಂದುಕೊಂಡಿದ್ದೆ. ಅಧಿಕಾರಿ ಸಂಘದ ಒಕ್ಕೂಟದ ನಾಯಕ ಮಾತ್ರ ಎಂದುಕೊಂಡಿದ್ದೆ. ಅವರ ಉತ್ತಮ ಬರಹಗಾರ. ಹೀಗೆಯೇ ಮುಂದುವರಿದರೆ ಕನ್ನಡ ಜನತೆ ಅವರನ್ನು ಖಂಡಿತ ಗುರುತಿಸುತ್ತಾರೆ. ರವೀಂದ್ರ ನಿಮಗೆ ಶುಭವಾಗಲಿ. ವಂದನೆ. ಜನ ಹಾಗೂ ಘನ ಸರಕಾರ ನಿಮ್ಮ ಪ್ರತಿಭೆಯನ್ನು ಗುರುತಿಸಲಿ. ನಿಮ್ಮ ಪ್ರತಿಭೆಗೆ ಹೆಚ್ಚಿನ ಮಟ್ಟದ ಗೌರವ ಸಲ್ಲಲಿ. ಕಸ್ತೂರಿ ಸಿರಿಗನ್ನಡ ಬಾಳಲಿ.

ಸ್ವರಗಳ ಅವಾಹನೆ
....ಮೋಹನ ದೇಸಾಯಿ

ಶೇಕಡಾ ತೊಂಬತ್ತೈದರಷ್ಟು ಜನ ಸಂಗೀತವೆಂದರೆ ಸುಗಮ, ಸಿನೇಮಾ ಸಂಗೀತವೆಂದಷ್ಟೆ ತಿಳಿದು ಉತ್ತಮ ಕಂಠದ ಹಾಡುಗಳನ್ನು ಕೇಳಿ ಆನಂದಿಸುವವರೇ ಆಗಿದ್ದಾರೆ. ಇದರಲ್ಲಿ ಕೆಲವೊಂದಷ್ಟು ಜನ ಆ ಹಾಡುಗಳ ಸಾಹಿತ್ಯದ ಬಗ್ಗೆ ಆಸಕ್ತಿ ಉಳ್ಳವರಾಗಿರುತ್ತಾರೆ. ಇನ್ನು ಕೆಲವರು ಹಾಡಿನ ಸಂಗಡ ಇರುವ ವಾದ್ಯಗಳಿಗೆ ಮನಸೋತಿರುತ್ತಾರೆ. ಆದರೇ ಸ್ವರಗಳನ್ನೇ ಆವಾಹಿಸಿಕೊಂಡು, ಭಕ್ತಿ ಇರಲಿ, ಪ್ರೀತಿ ಪ್ರೇಮವಿರಲಿ, ವಿರಹವಿರಲಿ, ಎಲ್ಲೋ ಗುಡ್ಡಗಾಡಿನ ಸ್ವಚ್ಛಂದ ಧ್ವನಿಗಳಿರಲಿ ಈ ಎಲ್ಲವನ್ನೂ ತಿಳಿದು, ಎಳೆ ಎಳೆಯಾಗಿ ಹಿಂಜಿ ನಿರ್ದಿಷ್ಟ ರಾಗಗಳನ್ನೇ ಕೊಟ್ಟು ಹೊಸೆಯುವ, ಹೊಸೆದು ಶಿಷ್ಯವೃಂದವ ಕಟ್ಟಿ, ಬೆಳೆಸಿ ಆ ಸಂಗೀತವನ್ನು ಮನಮೋಹಕವಾಗಿಸಿ ಗಳಿಸಿ, ಉಳಿಸಿ ಮುಂದಿನ ಜನಾಂಗಕ್ಕೆ ದಾರಿ ತೋರುವ, ಕೆಲವೇ ಕೆಲವು ದಾರ್ಶನಿಕರು ನಮ್ಮ ಪದ್ಮನಾಭರಂತೆ ಬೆಳಗುತ್ತಿರುತ್ತಾರೆ.

28 ಕಂತುಗಳಲ್ಲಿ ಮನುಷ್ಯಪ್ರಜ್ಞೆ, ದೈವೀಕಟಾಕ್ಷ, ಗುರುಸಲಹೆ, ಒಬ್ಬ ಮನುಷ್ಯನ ಕರ್ತೃತ್ವಶಕ್ತಿಯ ಪರಾಕಾಷ್ಠೆ, ಜನ, ವಿದ್ವಾಂಸರ ಪಾರಿತೋಷಕಗಳ ಮೂಲಕ ಹೊಮ್ಮಿದ ಸಂತಸ ಇತ್ಯಾದಿಗಳನ್ನು ತುಸು ತುಸುವಾಗಿ, ರಂಜಕವಾಗಿ ಸಂಗೀತ

ಸರೋವರದಲ್ಲಿ ದೂಡಿ , ಈಜು ಕಲೆಯುವಂತೆ ಮಾಡಿ, ಆನಂದ ಸಾಗರದಲ್ಲಿ ಸಂಭ್ರಮಿಸುವಂತೆ ನಮಗೆ ಈ ಲೇಖನ ಒದಗಿಸಿದ್ದಾರೆ ನಮ್ಮ ರವೀಂದ್ರರು. ಪಕ್ಕವಾದ್ಯಗಳಂತೆ ತಮ್ಮದೇ ತರಹದ ವಿಶ್ಲೇಷಣೆಗಳಿಂದ ಉತ್ತಮ ಜೊತೆಗೂಡಿದ ಶ್ರೀ ಧೀರೇಂದ್ರ, ರಾಜನ್, ಇಜೇರಿ, ಚಂದ್ರಶೇಖರ, ಹೆಗಡೆ ಮುಂತಾದವರು ತಮ್ಮ ತಮ್ಮ ಕಾಣಿಕೆ ಸಲ್ಲಿಸಿ ಓದನ್ನು ನೆನಪಿಡುವಂತೆ ಮಾಡಿದ್ದಾರೆ.
ರುದ್ರಪಟ್ಟಣ ಸಂಗೀತ ದೇವಾಲಯ, ಅಲ್ಲಿರುವ ಸಂಗೀತ ದೇವರುಗಳು ಹಾಗು ಗುರುಗಳನ್ನು ನೋಡಲೇಬೆಕೆಂದು ಒತ್ತಾಯಿಸುವ ಈ ಲೇಖನಮಾಲೆ ನಿಜವಾಗಿಯೂ ಉತ್ತಮವಾಗಿತ್ತು. ಈ ಎಲ್ಲದಕ್ಕೂ ಕಾರಣಕರ್ತರಾದ ಶ್ರೀ ಪದ್ಮನಾಭರಿಗೆ ಅಭಿನಂದನೆಗಳು ಹಾಗೂ ಶತ ಶತ ನಮನಗಳು.

ಬಹುಮುಖ ಪ್ರತಿಭೆ
....ಟಿ ಕೆ ರಂಗನಾಥ

ಡಾ. ರುದ್ರಪಟ್ಣ ಕೃಷ್ಣದೀಕ್ಷಿತ್ ಪದ್ಮನಾಭರ ಬಹುಮುಖ ಪ್ರತಿಭೆ, ಸಂಗೀತ, ನಟನೆ, ಕೀರ್ತನೆಗಳ ರಚನೆ, ಹೊಸರಾಗಗಳ ಸೃಷ್ಟಿ, ಸಮಾಜ ಸೇವೆ, ಸಂಘಟನಾಶಕ್ತಿಯ ವಿರಾಟ್ ಸ್ವರೂಪವನ್ನು ಪರಿಚಯಿಸುವಲ್ಲಿ 28 ಅಧ್ಯಾಯಗಳ ಬಿ.ಎಸ್. ರವೀಂದ್ರರ ಕೃತಿ "ಪದ್ಮನಾದ" ಯಶಸ್ವಿಯಾಗಿದೆ. ಕರ್ನಾಟಕ ಸಾಂಸ್ಕೃತಿಕ ಲೋಕಕ್ಕೆ ಡಾ. ಆರ್ ಕೆ ಪದ್ಮನಾಭರ ಅಪಾರ, ಅನನ್ಯ ಹಾಗೂ ಅನುಕರಣೀಯ ಕೊಡುಗೆಯನ್ನು ತಿಳಿದುಕೊಳ್ಳಲು ಈ ಕೃತಿ ಅನುವು ಮಾಡಿಕೊಡುವುದರ ಬಗ್ಗೆ ಅನುಮಾನವಿಲ್ಲ.

ಶ್ರೇಷ್ಠ ಕೃತಿ
....ಎಂಜಿ ವೆಂಕಟೇಶ ಮೂರ್ತಿ

ಕವನಗಳನ್ನೇ ಹೆಚ್ಚಾಗಿ ಬರೆಯುವ ಆತ್ಮೀಯ ಗೆಳೆಯ ಬೆಂ.ಶ್ರೀ. ರವೀಂದ್ರ ಅವರ ಪದ್ಮನಾದ ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದಲ್ಲಿ ಶ್ರೇಷ್ಠವಾದ ಕೃತಿ.

ತುಂಬುಮನದ ನಗೆಗಾರ
....ಎ ಮಂಜುನಾಥ್

ಸುಮಾರು 50 ವರ್ಷಕ್ಕೂ ಹೆಚ್ಚು ಹಿಂದಿನ ಗೆಳೆತನವಿರುವ ಒಬ್ಬ ಸ್ನೇಹಿತ ಇಂದು ಇಷ್ಟು ಎತ್ತರಕ್ಕೆ ಬೆಳೆದಂತಹ ಸಂದರ್ಭದಲ್ಲಿ ಅವರ ಬಗ್ಗೆ ಒಂದು ಮಹಾನ್ ಕೃತಿಯನ್ನು ಇಷ್ಟು ಕಡಿಮೆ ಅವಧಿಯಲ್ಲಿ ಲೋಕಾರ್ಪಣೆ ಮಾಡುತ್ತಿರುವ ಶ್ರೀಯುತ ಬಿ ಎಸ್ ರವೀಂದ್ರರ ಸಾಧನೆ ನಿಜವಾಗಲೂ ಆಶ್ಚರ್ಯಕರ ಮತ್ತು ಪ್ರತಿಯೊಬ್ಬರು ಮೆಚ್ಚುವಂತಹ ಅತ್ಯಂತ ಕಷ್ಟಕರವಾದ ಸಾಧನೆಯೇ ಸರಿ.

"ಪದ್ಮನಾದ", ಡಾ. ಆರ್. ಕೆ. ಪದ್ಮನಾಭರವರು ಸಂಗೀತ ನಾಟಕ ಅಕಾಡೆಮಿ 2020 ಪುರಸ್ಕೃತರಾದ ಸುಸಂದರ್ಭದಲ್ಲಿ ಉದಯಿಸಿರುವ ಒಂದು ಅದ್ಭುತ ಕೃತಿ. ಈ ಕೃತಿಯಲ್ಲಿ ರವೀಂದ್ರರು ಆರ್ ಕೆ ಪಿ ಅವರ ಜೀವನದ ಏರಿಳಿತ, ಹಾಗೂ ಅವರ ಸಂಗೀತ ಸಾಧನೆಯ ಯಶಸ್ಸಿನ ಬಗ್ಗೆ ಬಹಳ ವಿಶದವಾಗಿ ಎಲ್ಲರೂ ಸುಲಿತವಾಗಿ ಓದುವ ಹಾಗೆ ಬಹಳ ಸುಂದರವಾಗಿ ರಚಿಸಿದ್ದಾರೆ.

ಪುಸ್ತಕದಲ್ಲಿ ಸಂಗೀತಕ್ಕೆ ಮಾತ್ರ ಹೆಚ್ಚು ಪ್ರಾಶಸ್ತ್ಯ ಕೊಡದೆ ಅವರ ಎಲ್ಲಾ ಕ್ಷೇತ್ರಗಳಲ್ಲಿ ಪದ್ಮನಾಭರ ಸಾಧನೆ ಬಗ್ಗೆ ವಿವರಿಸಿದ್ದಾರೆ. ಆರ್ ಕೆ ಪಿ ಯವರ ವಿಶಾಲ ಮನೋಭಾವದ ಸ್ನೇಹಗುಣ, ಯಾರನ್ನೇ ಆಗಲಿ ತುಂಬು ಹೃದಯದಿಂದ ನಗುನಗುತ್ತಾ ಮಾತನಾಡಿಸುವುದು ವ್ಯಕ್ತಿತ್ವದ ಮುಖ್ಯ ಆಕರ್ಷಣೆ. ಆದ್ದರಿಂದಲೇ ಅವರು ಅಷ್ಟೊಂದು ಅಪಾರ ಸ್ನೇಹಿತರನ್ನು ಮತ್ತು ವಿದ್ಯಾರ್ಥಿಗಳನ್ನು ಗಳಿಸಿದ್ದಾರೆ. ಶ್ರೀ ಪದ್ಮನಾಭ ಮತ್ತು ಅವರ ಬಗ್ಗೆ ಒಂದು ಉತ್ತಮ ಪುಸ್ತಕವನ್ನು ಲೋಕಾರ್ಪಣೆ ಮಾಡುತ್ತಿರುವ ರವೀಂದ್ರ ಅವರಿಗೆ ಹಾರ್ದಿಕ ಅಭಿನಂದನೆಗಳು.

ಛಲಬಿಡದ ತ್ರಿವಿಕ್ರಮ
....ಸಂಜೀವಮೂರ್ತಿ

ಛಲ ಮತ್ತು ಶ್ರಮ ಇದ್ದರೆ ಮನುಷ್ಯನ ಸಾಧನೆಗೆ ಮಿತಿ ಇಲ್ಲ ಎಂಬುದು ಶ್ರೀ ರವೀಂದ್ರರ ಲೇಖನಿಯಿಂದ ಹೊರಹೊಮ್ಮಿ ಬಂದಿರುವ ಶ್ರೀ ಆರ್.ಕೆ.ಪದ್ಮನಾಭರ ಜೀವನ ಚರಿತ್ರೆಯೇ ಸಾಕ್ಷಿ.

ಪದ್ಮನಾಭರಲ್ಲಿ ಬಾಲ್ಯದ ದಿನಗಳಿಂದಲೂ ಸಂಗೀತದಲ್ಲಿದ್ದ ಶ್ರದ್ಧೆ ಮತ್ತು ತುಡಿತ, ಭೈರಸಂದ್ರದ ಕೆರೆಯಂಗಳದಲ್ಲಿ ಹಾದಿಗರ ಪರಿವೆಯೇ ಇಲ್ಲದೆ ಒಂಟಿಗರಾಗಿ ಶ್ರದ್ಧೆಯಿಂದ ಮಾಡುತ್ತಿದ್ದ ರಾಗಾಲಾಪನೆ, ಮದುವೆಯಾಗಿ, ಬ್ಯಾಂಕಿನ ಉದ್ಯೋಗಿಯಾಗಿ, ಹತ್ತು ಹಲವು ಜವಾಬ್ದಾರಿಗಳ ನಡುವೆ ಛಲ ಬಿಡದ ತ್ರಿವಿಕ್ರಮನಂತೆ ಮುಂಜಾನೆ ಮೂರು ಘಂಟೆಯಿಂದ ನಿರಂತರ ಸಂಗೀತ ಅಭ್ಯಾಸ ಮಾಡಿದ್ದು, ಪಾಂಡಿತ್ಯ ಪಡೆದು ಪ್ರೌಢರಾದ ಮೇಲೆ ಸ್ವಂತ ರಾಗಗಳನ್ನು ರಚಿಸಿದ್ದು, ... ಹೀಗೆ ಸಂಗೀತ ಸಾಧನೆಯಲ್ಲಿ ಪಯಣಿಸಿ ಉತ್ತುಂಗಕ್ಕೇರಿದ ಘಟನೆಗಳ ಚಿತ್ರಣ ಓದುಗರಲ್ಲಿ ರೋಮಾಂಚನ ಮೂಡಿಸುತ್ತದೆ. ಪದ್ಮನಾಭರು ಪದ್ಮದಾಸರಾದದ್ದು "ಪದ್ಮನಾದ" ಕೃತಿಯಲ್ಲಿ ಮೂಡಿಬಂದಿರುವ ರೀತಿ ಓದುತ್ತಾ ಸಾಗಿದಂತೆ ಮೈ ನವಿರೇಳಿಸುವುದು ಓದುಗರ ಅನುಭವ ಆಗುವುದರಲ್ಲಿ ಸಂಶಯವಿಲ್ಲ.
"ಪದ್ಮನಾದ" ಕೃತಿ ಕನ್ನಡ ಸಾಹಿತ್ಯದ ಒಂದು ಅನರ್ಘ್ಯ ರತ್ನ. ಸಂಗೀತ ಸಾಧಿಸಿ,

ಹತ್ತಾರು ರಾಗಗಳನ್ನು ಸೃಷ್ಟಿಸಿ, ಕರ್ಣಾಟಕ ಗೋಷ್ಠಿ ಗಾಯನದ ದಾಖಲೆ ನಿರ್ಮಿಸಿ, ನೂರಾರು ಬಿರಿದುಬಾವಲಿ ಗಳನ್ನು, ಪ್ರಶಸ್ತಿಗಳನ್ನೂ ಗೌರವಗಳನ್ನೂ ಗಳಿಸಿ, ಸಹಸ್ರಾರು ಶಿಷ್ಯರನ್ನು, ಗೆಳೆಯರನ್ನ ಪಡೆದ ಪದ್ಮನಾಭ ದಾಸರಿಗೆ ನಮೋನಮಃ. ಕೃತಿ ರಚಿಸಿರುವ ರವೀಂದ್ರರಿಗೆ ನಮೋನಮಃ

ಅರಸಿಕನಿಗೂ ಶಾಸ್ತ್ರೀಯ ಸಂಗೀತದ ರುಚಿ
....ಎಚ್ ಸಿ ಅನಂತರಾಂ

1989 ರಿಂದ 1992, ಮೂರು ವರ್ಷ ನಮ್ಮ ಶಿರಸಿ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿದ್ದ ಸಂದರ್ಭದಲ್ಲಿ ಶ್ರೀಯುತ ಪದ್ಮನಾಭರು ತಮ್ಮ ಒಂದು ಧ್ವನಿ ಸುರುಳಿಯನ್ನು ಬಿಡುಗಡೆ ಮಾಡುವ ಮುನ್ನ, ಶ್ರೀ ಸೋಂದೆ ಮಠದಲ್ಲಿ ವಾದಿರಾಜ ಗುರುಗಳ ಪದತಲದಲ್ಲಿ, ಸಮರ್ಪಣೆ ಮಾಡುವ ಘನ ಉದ್ದೇಶದಿಂದ, ಶಿರಸಿಗೆ ಬಂದಿದ್ದು, ಆವತ್ತು ನಮ್ಮ ಮನೆಗೂ ಬಂದಿದ್ದರು. (1990 ಫೆಬ್ರವರಿ ಇರಬಹುದು). ಮುಂದೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳಗುವ ಹಿಮಾಲಯ ಸದೃಶ ಪ್ರತಿಭೆಯುಳ್ಳ ಪದ್ಮನಾಭದಾಸರಾಗಿ ಬೆಳೆಯುವ ಬೆಳೆ ಇದೇ ಎಂದು ಅಂದು ನನ್ನ ಕಲ್ಪನೆಗೆ ಮೀರಿದ್ದ ವಿಚಾರವಾಗಿತ್ತು.

ನಂತರ, ನನ್ನ ಅದೃಷ್ಟವೋ ಎಂಬಂತೆ, 1996 ರಿಂದ 1998 ರ ವರೆಗೆ ನಮ್ಮ ವಿಲ್ಸನ್ ಗಾರ್ಡನ್ ಶಾಖೆಯಲ್ಲಿ ನಾನು ಇದ್ದಾಗ, ಶ್ರೀಯುತ ಪದ್ಮನಾಭರು, ಅದೇ ಶಾಖೆಗೆ ವರ್ಗವಾಗಿ ಬಂದಿದ್ದರಿಂದ ಅವರೊಡನೆ ಸುಮಾರು ಒಂದು ವರ್ಷಕ್ಕೂ ಹೆಚ್ಚು ಕಾಲ, ಒಟ್ಟಿಗೆ ಇರುವ ಸದವಕಾಶ ದೊರಕಿತ್ತು.

ಇದೇ ಸಂದರ್ಭದಲ್ಲೇ, ಶ್ರೀಯುತರು, ಇಂಗ್ಲೆಂಡ್ಗೆ, ತಮ್ಮ ಮೊದಲನೇ ಅಂತಾರಾಷ್ಟ್ರೀಯ (ಒಂದು ತಿಂಗಳ ಸುದೀರ್ಘ) ಪ್ರವಾಸ ಕೈಗೊಂಡು, ಆ ಪ್ರವಾಸದ ಸಫಲತೆಯ ಫಲಿತವಾಗಿ, ಹುಳಿಮಾವುನಲ್ಲಿ, ಅವರ ಅಂದಿನ ಸಂಕಲ್ಪದ ಕೂಸಾದ, ಭವ್ಯವಾದ, ಶಾಸ್ತ್ರೀಯ ಸಂಗೀತಕ್ಕೆ ಮುಡಿಪಾದ ವಾದಿರಾಜ ಮಂಟಪವು, ಬೆಂಗಳೂರಿನ ದಕ್ಷಿಣ ಭಾಗದಲ್ಲಿ ತಲೆ ಎತ್ತಿ ನಿಂತಿದೆ. ನಗರದ ಈ ಭಾಗಕ್ಕೆ ಅದು ಒಂದು ದಿವ್ಯವಾದ ಹಾಗೂ ಶಾಶ್ವತವಾದ ಕೊಡುಗೆಯಾಗಿದೆ.
ಒಟ್ಟಾರೆ, ಪದ್ಮನಾಭದಾಸರಂತಹ ಮಹಾಮಹಿಮರ ಸಂಘದಲ್ಲಿ, ನನ್ನ ವೃತ್ತಿ ಜೀವನದಲ್ಲಿ ಕೆಲಕಾಲ ಸನಿಹದಲ್ಲಿ ಇರುವಂತಹ ಸದವಕಾಶ ದೊರಕಿದ್ದು, ನನ್ನ ಸುಕೃತ.

ಇನ್ನು, ಬಹುಮುಖ ಪ್ರತಿಭಾನ್ವಿತರಾದ ಇಂದ್ರದ್ವಯರ ಲೇಖನಿಗಳಲ್ಲಿ/ ಬೆರಳಂಚಿನಲ್ಲಿ ಮೂಡಿ ಬಂದ ಮಹಾತಪಸ್ವಿ ಹಾಗೂ ಸಾಧಕ ಪದ್ಮನಾಭ ದಾಸರ

ವ್ಯಕ್ತಿ ಪರಿಚಯ ಅತ್ಯಂತ ಮನೋಜ್ಞವಾಗಿ ಮೂಡಿಬಂದಿದೆ. ನಮ್ಮ ಕಥಾನಾಯಕ ಬೆಳೆದು ಬಂದ ದಾರಿ, ಮತ್ತು ಅವರು ಕೈಗೊಂಡ ದೀರ್ಘ ಕಾಲದ ಕಠಿಣ ತಪಸ್ಸಿನ ಮೂಲಕ ಪಡೆದ ತಾಯಿ ಶಾರದೆಯ ಸಂಪೂರ್ಣ ಅನುಗ್ರಹ ಮತ್ತು ಶ್ರೀಯುತರ ಮಾನಸಿಕ ಪೂಜ್ಯ ಗುರುಗಳಾದ ವಾದಿರಾಜರ ಕೃಪಾಕಟಾಕ್ಷ ಮತ್ತು ಅನುಸಂಧಾನ; ತನ್ಮೂಲಕ ಶ್ರೀಯುತರು ಮಾಡಿದ ಹಾಗೂ ಇಂದಿಗೂ ಮುಂದುವರೆಸಿಕೊಂಡು ಬಂದಿರುವ ಅನೇಕಾನೇಕ ಸಾಧನೆಗಳನ್ನು ಪದರ ಪದರವಾಗಿ, ಎಳೆಎಳೆಯಾಗಿ ಚಿತ್ರಿಸಿದ್ದಾರೆ. ಅಲ್ಲದೆ, ಎಲ್ಲಕ್ಕಿಂತ ಮಿಗಿಲಾಗಿ, ಎಂತಹ ಅರಸಿಕನಿಗೂ ಶಾಸ್ತ್ರೀಯ ಸಂಗೀತ ಸ್ವರಗಳ ರುಚಿ, ಮಾಧುರ್ಯಗಳನ್ನು ಆಸ್ವಾದಿಸುವಂತೆ ಮಾಡಿದ್ದಾರೆ.

ಸರಣಿ ಲೇಖನಗಳಲ್ಲಿ, ತಮ್ಮ ಪ್ರತಿಕ್ರಿಯೆಗಳ ಮೂಲಕ, ರುಚಿಕರವಾದ ವ್ಯಂಜನಗಳ ಸಹಿತ ರಸದೌತಣ ನೀಡಿದ ಎಲ್ಲ ಸಹೃದಯ ಮಿತ್ರರಿಗೆ ತುಂಬು ಹೃದಯದ ಧನ್ಯವಾದಗಳು, ಅಭಿನಂದನೆಗಳು.

ಪದುಮನಾದ ಮನೆಮನೆಯ ಗ್ರಂಥಾಲಯದಲ್ಲಿ ಇರಲಿ
....ಅರುಣ ಪ್ರಕಾಶ್

ಗಂಗೆಯಂತೆ ಹರಿಯಿತು ಪದುಮನಾದ ಕೃತಿ ಇಪ್ಪತ್ತೆಂಟು ಕಂತುಗಳಲ್ಲಿ. ಕವಿ ರವೀಂದ್ರರ ಲೇಖನಿಯಿಂದ ಹೊರಹೊಮ್ಮಿದ ಸಾಹಿತ್ಯ ಕೃತಿ ಒಂದು ಕಾದಂಬರಿಯಾಯಿತು.

ಆರ್ ಕೆ ಪಿ ನಮ್ಮ ಸಹೋದ್ಯೋಗಿ, ಸಂಗೀತಗಾರರು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ ಅವರ ಸಂಗೀತ ಸಾಧನೆಯ ಹಾದಿಯಲ್ಲಿ ನುಸುಳಿದ ಅಡೆತಡೆಗಳು, ತಾಯಿ ಶಾರದೆಯ ಕೃಪಾಕಟಾಕ್ಷ, ಅವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೇಲೆ ಮಾಸದೇ ಇರುವ ಅಭಿಮಾನ, ಪ್ರೀತಿ, ಇವೆಲ್ಲ ಬಹುತೇಕ ಸಂಗೀತ ಅಭಿಮಾನಿಗಳಿಗೆ ತಿಳಿದಿರಲಿಲ್ಲ.. ಎಲ್ಲ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿ ಪದರ ಪದರವಾಗಿ ಬಿಡಿಸಿ ನಮಗೆಲ್ಲ ಉಣಬಡಿಸಿದ ರವೀಂದ್ರರವರು ನಿಜಕ್ಕೂ ಪ್ರಶಂಸೆಗೆ ಅರ್ಹರು. ನಮ್ಮನ್ನೆಲ್ಲಾ ಸಂಗೀತ ಸಾರಸ್ವತ ಲೋಕಕ್ಕೆ ಕೊಂಡೊಯ್ದ ಮಹಾನ್ ಬರೆಹಗಾರರು.

ಸಾಧಕರ ಜೀವನ ಚರಿತ್ರೆ ಓದಿದ ಮೇಲೆ ನನ್ನ ಅನಿಸಿಕೆ ಏನೆಂದರೆ, ಈ ಕೃತಿ ಕಂತುಗಳಲ್ಲಿ ಓದುವ ಬದಲು, ಒಂದು ಕಾದಂಬರಿಯಾಗಿ ಮನೆ ಮನೆಯ ಗ್ರಂಥಾಲಯದಲ್ಲಿ ಇಟ್ಟರೆ ಶೋಭೆ ಬರುತ್ತದೆ.
ಧನ್ಯೋಸ್ಮಿ ಶ್ರೀ ರವೀಂದ್ರ ಕತೆಗಾರರಿಗೆ

ಪದ್ಮನಾದವ ಆಲಿಸಿ
....ಕೆ ಎನ್ ಮಹಾಬಲ

ಗಾನಸಾಮ್ರಾಜ್ಯದ ನಿರಂತರ ಅನ್ವೇಷಕ,ವಾಗ್ಗೇಯಕಾರ
ಜತೆಗೆ ಕ್ರೀಡಾಪಟು, ವಿಶಿಷ್ಟ ಸಾಹಿತಿ ರಂಗಕಲಾವಿದ
ಸಂಗೀತ ಲೋಕದಲಿ ಏರಿದರೂ ಇವರು ಮೇರುಶಿಖರ
ಬಯಸಲಿಲ್ಲ ಎಂದೂ ಅಹಮಿಕೆಯ ದಂತಗೋಪುರ.

ನಾದತಪಸ್ವಿ ಕ್ರಮಿಸಿದ ಏಳು ಬೀಳುಗಳ ವಿವರ
ಹೆಜ್ಜೆಹೆಜ್ಜೆಗೂ ಸಿಕ್ಕ ವಿಧವಿಧ ತೊಡರುಗಳ ಪ್ರವರ
ಗಾನಲೋಕದ ನಿತ್ಯಸ್ಮರಣೀಯರೆಲ್ಲರ ಸವಿನೆನಪು ,
ಈ "ಪದ್ಮನಾದ"ಕೆ ಕಾರಣರು ಲಿಪಿಕಾರ ರವೀಂದ್ರರು.

ಕೆರೆಯ ನೀರು ಕೆರೆಗೆ ಎಂಬ ದಾಸವಾಣಿಯನು ನೆನೆದು
ಸಮಾಜಕೆ ಮರುಸಲ್ಲಿಸುವ ಕಾಯಕದಲೂ ಮುಂದು
ಕಲಿಸುತ್ತಲೇ ಕಲಿಯಬೇಕೆನ್ನುವ ವಿನೀತಭಾವ
ಎಲ್ಲರೂ ಅನುಕರಿಸಬೇಕಾದ ಆದರ್ಶಮಾರ್ಗ

ಎಷ್ಟೊಂದು ಮಾಹಿತಿಗಳ ವಿಶ್ವರೂಪ ಈ ಕೃತಿ "ಪದ್ಮನಾದ"!
"ಗಾನ ಸುಧಾರತ್ನ ನಮ್ಮ ಸನ್ಮಿತ್ರ" ಎಂಬುದೇ ಮಹದಾನಂದ

ಲಡ್ಡುವಿನ ಸ್ವಾದ
....ಆರ್ ಕೆ ಚಂದ್ರಶೇಖರ

ಕಾಶ್ಮೀರ ಪುರವಾಸಿನಿ ಶ್ರೀ ಮಹಾ ಸರಸ್ವತಿಯ ಕೃಪಾಕಟಾಕ್ಷದಿಂದ ಶ್ರೀ ಬೆಂ. ಶ್ರೀ. ರವೀಂದ್ರ ಅವರು "ಪದ್ಮನಾದ" ಲೇಖನ ಸರಣಿಯನ್ನು 28 ಕಂತುಗಳಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಬರೆದ ಲೇಖನವು ಗಂಗೆಯಂತೆ ಹರಿದು ಬಂದಿದೆ. ಅತಿ ಸುಂದರವಾಗಿ ಪದ್ಮನಾದ ಮೂಡಿ ಬಂದಿರುವುದಕ್ಕೆ ನಿಮ್ಮ ಪರಿಶ್ರಮವೇ ಕಾರಣ. ಶ್ರೀ ಪದ್ಮನಾಭ ಅವರ ನೇತೃತ್ವದಲ್ಲಿ ಬರೆದ ಲೇಖನಗಳು ತೈಲ ಧಾರೆಯಂತೆ, ಪಂಚಾಮೃತ ಸವಿದಂತೆ, ತಿರುಪತಿ ಲಡ್ಡುವಿನ ಸ್ವಾದ, ರಾಯರ ಪರಿಮಳ ಪ್ರಸಾದದ ರುಚಿ ಎಲ್ಲವನ್ನೂ ಉಣಬಡಿಸಿದ್ದೀರಿ ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.

ನಿಮ್ಮ ಪ್ರಯತ್ನದಲ್ಲಿ ಸಹಕರಿಸಿದ ಮಿತ್ರರೆಲ್ಲರಿಗೂ ಧನ್ಯವಾದಗಳು. ನೀವೇ

ಹೇಳಿದಂತೆ ಇದು ಪದ್ಮನಾಭ "The Rise." Picture ಆಭಿಬಾಕಿ ಹೈ. ದೇವರು ಪದ್ಮನಾಭರಿಗೆ ಎಲ್ಲ ರೀತಿಯ ಯಶಸ್ಸು ಕರುಣಿಸಲಿ, ಆಯಸ್ಸು, ಆರೋಗ್ಯ, ಸುಖ ಸಂಪತ್ತು ಕೊಡಲೆಂದು ರಂಗವಿಠ್ಠಲನಲ್ಲಿ ಶಿರಬಾಗಿ ಪ್ರಾರ್ಥಿಸುತ್ತೇನೆ.

ದಿಗ್ಗಜರ ದರ್ಶನ
....ಎಚ್ ವಿ ಶ್ರೀಪ್ರಕಾಶ್

ಪದ್ಮನಾದ ಶ್ರೀ ಪದ್ಮನಾಭರ ಬದುಕು ಮತ್ತು ಯಶೋಗಾಥೆಯನ್ನು ಪರಿಚಯಿಸುವುದರ ಜೊತೆಗೆ ಸಂಗೀತ ಲೋಕಕ್ಕೇ ನಮ್ಮನ್ನುಒಯ್ದು ನಾದಲೋಕದ ಹಲವಾರು ದಿಗ್ಗಜರ ದರ್ಶನವನ್ನೂ ಮಾಡಿಸಿತು.
ಅತ್ಯುತ್ತಮಲೇಖನ ಸರಣಿ ನೀಡಿದ ಶ್ರೀ ಬೆಂ ಶ್ರೀ ರವೀಂದ್ರರವರಿಗೆ ಹೃತ್ಪೂರ್ವಕ ನಮನಗಳು.



ಕೆ.ಎಸ್. ಆರ್. ಟಿ.ಸಿ. ಲೇಔಟ್



ಶ್ರೀ ರಾಮ ಮಂದಿರ
SRIMADVADIRAJA ARADHANA TRUST (R)
ಶ್ರೀಮದ್ವಾದಿರಾಜ ಕಲಾಮಹೋತ್ಸವ



शीर्षक 100 Titles
विद्वान डॉ. आर के पद्मनाभ
Vidwan Dr. RK Padmanabha
बेगूर 560 114 BEGUR
28-11-2021
भारत INDIA
28-11-2021
Special Cover
100
ಬಿರುದುಗಳು
शीर्षक TITLES
ವಿದ್ವಾನ್ ಡಾ॥ ಆರ್.ಕೆ. ಪದ್ಮನಾಭ
विद्वान डॉ. आर के पद्मनाभ
Vidwan Dr. RK Padmanabha
आज़ादी का अमृत महोत्सव



With the Indian President, Karnataka Governor & Karnataka Chief Minisiter at Rajbhavan



ವಾದಿರಾಜರ ಪಾತ್ರದಲ್ಲಿ



ಶ್ರೀ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರಿಂದ ಸನ್ಮಾನ



ತಾಯಿ ಶಾರದಮ್ಮ; ತಂದೆ ಕೃಷ್ಣ ದೀಕ್ಷಿತ್



ಗೌರವ ಡಾಕ್ಟರೇಟ್ ಪ್ರದಾನ



ಮತ್ತೂರು ಕೃಷ್ಣಮೂರ್ತಿ ಮತ್ತು ಅರ್.ಕೆ.ಶ್ರೀಕಂಠನ್ ಅವರಿಂದ ಸನ್ಮಾನ

ಗಾನಗೋಷ್ಠಿ






SBI ಗೆಳೆಯರ ಬಳಗ
ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ ಪುರಸ್ಕೃತ
ಗಾನಕಲಾ ಭೂಷಣ ವಿದ್ವಾನ್
ಡಾ|| ಆರ್. ಕೆ. ಪದ್ಮನಾಭರವರಿಗೆ ಸನ್ಮಾನ
ಹಾಗೂ
'ಸನ್ಮಿತ್ರ ಸಂಗೀತ ಸುಧಾರತ್ನ' ಎಂಬ ಬಿರುದು ಸಮರ್ಪಣೆ
ಹಾಗೂ
ಬೆಂ. ಶ್ರೀ ರವೀಂದ್ರ ವಿರಚಿತ
'ಪದ್ಮನಾದ' ಪುಸ್ತಕದ ಬಿಡುಗಡೆ
05-02-2023







ಉಡುಪಿಯಲ್ಲಿ




ಶ್ರೀ ಎಚ್.ವಿ.ಕೃಷ್ಣಮೂರ್ತಿ – ವಿಜಯಾ ಕಾಲೇಜ್ ಆಫ್
ಮ್ಯೂಸಿಕ್ ಅವರಿಂದ ಸನ್ಮಾನ
Vijaya College of Music



ಕಾಶಿಯ ಜಂಗಮವಾಡಿ ಮಠದಲ್ಲಿ ಸನ್ಮಾನ


ಪುರಂದರರ ಪಾತ್ರದಲ್ಲಿ



SBI ಗೆಳೆಯರ ಬಳಗ ; RKP ಸನ್ಮಾನ ಸಮಿತಿ



ಕುಳಿತಿರುವವರು : - ಸರ್ವಶ್ರೀ ಜಿ.ಮುತ್ತುಸ್ವಾಮಿ, ಪಿ.ವಿ.ಚಂದ್ರಶೇಖರ, ಆರ್.ಕೆ.ಪದ್ಮನಾಭ, ವೈ.ವಿ.ಪ್ರಭಾಕರ್, ಬೆಂಶ್ರೀ ರವೀಂದ್ರ
ನಿಂತಿರುವವರು : - ಸರ್ವಶ್ರೀ ವಿ.ವೆಂಕಟಸುಬ್ಬು, ಗುರುಪ್ರಸಾದ್ ಹಾಲ್ಕುರಿಕೆ, ಬಿ.ಇ. ರಮೇಶ, ಎಮ್.ಎಲ್.ಎಸ್, ಸುದರ್ಶನ್ , ರವಿ ಕುಸಬಿ, ಆರ್.ಕೆ.ಚಂದ್ರಶೇಖರ್, ಎಚ್.ಆರ್.ಗುರುರಾಜ್ ಮತ್ತು ಪಿ.ಎ.ಮಂಜುನಾಥ (ಚಿತ್ರದಲಿಲ್ಲ)



ಅಚ್ಚರಿಯ ಪರಕಾಯಪ್ರವೇಶ

ಸಂಗೀತದ ನಾದವು ವಿಶ್ವದ ಎಲ್ಲ ಸಂಸ್ಕೃತಿಗಳಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ತನ್ನ ವಿಶಿಷ್ಟ ಛಾಪನ್ನು ಮೂಡಿಸಿದೆ. ಮಾಧುರ್ಯವೇ ಪ್ರಧಾನವಾದ ಸಂಗೀತವು ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮವನ್ನು ಉಂಟುಮಾಡುತ್ತದೆ. ಸಂಗೀತ ನಮ್ಮೊಳಗೆ ಜೀವಾಮೃತವಾಗಬಲ್ಲ ಚೈತನ್ಯ.
ಇಂಥ ಸಂಗೀತವನ್ನೇ ನರನಾಡಿಗಳಲ್ಲಿ ತುಂಬಿಕೊಂಡು, ಉಸಿರಾಡುತ್ತಿರುವ ಬಹುಮುಖ ಪ್ರತಿಭೆ, ಸುಶ್ರಾವ್ಯ ಶಾರೀರದ ವಾಗ್ಗೇಯಕಾರ ವಿದ್ವಾನ್ ಶ್ರೀ.ಆರ್.ಕೆ.ಪದ್ಮನಾಭ ಅವರು. ಇತ್ತೀಚೆಗೆ ಇವರಿಗೆ 2020ರ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ ಸಂದ ಸಂದರ್ಭದಲ್ಲಿ ಇವರ ಗೆಳೆಯರಾದ ಶ್ರೀ.ಬೆಂ.ಶ್ರೀ ರವೀಂದ್ರ ಅವರು ರಚಿಸಿರುವ 'ಪದ್ಮನಾದ' ಎಂಬ ಪದ್ಮನಾಭರ ಜೀವನ ಸಂಕಥನವು ಸಂಗೀತಕ್ಕೂ ಮತ್ತು ಅವರಿಗೂ ಸಲ್ಲಿಸಿದ ಗೌರವವೇ.

ಶ್ರೀ ಬೆಂ.ಶ್ರೀ.ರವೀಂದ್ರ ಅವರು ಬ್ಯಾಂಕಿಂಗ್ ಕ್ಷೇತ್ರದ ಚಿರಪರಿಚಿತ ವ್ಯಕ್ತಿ. ಎಲ್ಲರನ್ನೂ ಹಿಡಿದಿಡುವ ವ್ಯಕ್ತಿತ್ವ. ನಾಯಕರಾಗಿ ಕಾರ್ಮಿಕ ಸಂಘಟನೆಯಲ್ಲಿ ಎಷ್ಟು ಗಟ್ಟಿಯೋ ಕನ್ನಡ ಸಂಘಗಳನ್ನು ಕಟ್ಟಿ ಬೆಳೆಸುವುದರಲ್ಲಿಯೂ ಅಷ್ಟೇ ನಿಷ್ಠತೆ. ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಪ್ ಗುಂಪಿನ ಸಂಚಾಲಕ ರವೀಂದ್ರ ಅವರು ಶಿಸ್ತುಪಾಲಕರು ಹಾಗು ಸಮಯಪರಿಪಾಲಕರೂ. ಸಾಹಿತಿಯಾಗಿಯೂ ತಮ್ಮ ಹೆಜ್ಜೆಗುರುತನ್ನು ಮೂಡಿಸಿದವರು.

'ಪದ್ಮನಾದ' ಕೃತಿ ಕೇವಲ ವಿದ್ವಾನ್ ಆರ್.ಕೆ.ಪದ್ಮನಾಭ ಅವರನ್ನು ಕುರಿತಾಗಿ ಮಾತ್ರ ಸೀಮಿತವಾಗದೆ ಅವರ ಸಾಧನೆಯ ಬೆನ್ನ ಹಿಂದಿನ ಸಂಗೀತಲೋಕ, ವಾಗ್ಗೇಯಕಾರರ ವಿಶ್ವ, ಸಂಗೀತ ವಿದ್ವಾಂಸರ ಕಲಾಜಗತ್ತನ್ನೂ ಕಾಣಿಸುವ ಪ್ರಯತ್ನವಿದೆ. ಸಂಗೀತದ ಹಿನ್ನೆಲೆಯಿರದ ರವೀಂದ್ರ ಅವರು ಸಂಗೀತದ ಬಗೆಗೆ, ಸಂಗೀತಗಾರನ ಬಗೆಗೆ ಬರೆಯುವುದು ಸುಲಭವೇನಲ್ಲ. ಆದರೆ ಸಾಹಿತಿಯ ಶಕ್ತಿಯದು. ರವೀಂದ್ರರ ಪರಕಾಯ ಪ್ರವೇಶ ಅಚ್ಚರಿ ಮೂಡಿಸುತ್ತದೆ. ಇದು ಒಬ್ಬ ಸಂಗೀತಗಾರನಿಗೆ ಸಲ್ಲಿಸಬಹುದಾದ ಶ್ರೇಷ್ಠ ಗೌರವದ ಜೊತೆಗೇ ರವೀಂದ್ರ ಅವರ ಸಾಹಿತ್ಯಪ್ರಜ್ಞೆಯನ್ನೂ ತೋರುತ್ತದೆ. ಕೃತಿಕಾರ ಶ್ರೀ ರವೀಂದ್ರ ಅವರಿಗೂ, ಸಂಗೀತವಿದ್ವಾಂಸರಾದ ಆರ್.ಕೆ.ಪದ್ಮನಾಭ ಅವರಿಗೂ ಶುಭವಾಗಲಿ.

–ಡಾ.ಶುಭಶ್ರೀಪ್ರಸಾದ್
ಸಾಹಿತಿಗಳು ಮಂಡ್ಯ